ಮಂಗಳವಾರ, ಡಿಸೆಂಬರ್ 3, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 334 | ಪುಟ 16
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಹೃದ್ರೋಗದ ಮುನ್ಸೂಚನೆಗಳಿಗೆ ಎಚ್ಚೆತ್ತುಕೊಂಡರೆ ಅಪಾಯವನ್ನು ತಪ್ಪಿಸಬಹುದು

ಆಳ-ಅಗಲ
ಹುಸಿ ಬಾಂಬ್ ಕರೆ; ಸರ್ಕಾರ, ಸಂಸ್ಥೆಗೆ ಹೊರೆ

ತಯಾರಿಕಾ ವಲಯ ಪ್ರಗತಿ ಇಳಿಕೆ 10

ಅರಣ್ಯಕ್ಕೆ ₹426 ಕೋಟಿ: ಮಂಡಳಿ ತಡೆ 5

ಸೆನ್ಸೆಕ್ಸ್	ನಿಫ್ಟಿ	₹/$
80,248	24,276	84.72

ALSO HIRING
COMPUTER OPERATOR X100
SYSTEM ADMIN X5
TELECALLER X20
OFFICE ASSISTANT X10
OFFICE KEEPER X5

SRI GURU BIG MART PVT. LTD
SRI GURU MARKETING.
[COMING SOON....]
SRI GURU GANGA HEALTH CARE PVT. LTD.
SRI GURU GANGA HOUSING PVT. LTD.
GNK CABS PVT.LTD.
SRI GURU MULTI COOPERATIVE URBAN BANK LTD.
SRI GURU BROADCASTING PVT. LTD.
MEDIA : SURYODAYA,KARNUNADA SANJE,SRI GURU SPORTS & SRI GURU BAKTI

ಶ್ರೀ ಗುರು ಸಮೂಹ ಸಂಸ್ಥೆಗಳು..
ಬೃಹತ್ ಉದ್ಯೋಗಾವಕಾಶ ....
ರಾಜ್ಯದ ಎಲ್ಲಾ ತಾಲ್ಲೂಕುಗಳು, ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ನಗರಸಭೆ ವ್ಯಾಪ್ತಿಗಳಲ್ಲಿನ ಪ್ರತಿ ವಾರ್ಡ್ ಗಳಲ್ಲಿ ತಲಾ 10 ಮಂದಿಗೆ ಸ್ಥಳೀಯ ಉದ್ಯೋಗಾವಕಾಶ. ಆಕರ್ಷಕ ವೇತನ ಹಾಗೂ INCENTIVE ಸೌಲಭ್ಯ. ಆರಂಭಿಕ ವೇತನ ಕನಿಷ್ಠ 30000ರೂ, (MONTHLY,WEEKLY & DAILY FIELD ALLOWANCE)ಮಾರುಕಟ್ಟೆ ವಿಭಾಗದಲ್ಲಿ ಅನುಭವ ಇರುವವರಿಗೆ ಪ್ರಥಮ ಆದ್ಯತೆ. ಆಸಕ್ತರು ONLINE ಮೂಲಕ ಅರ್ಜಿ ಸಲ್ಲಿಸಬಹುದು.....
ಸ್ವಂತ ದ್ವಿಚಕ್ರವಾಹನ ಹಾಗೂ ಮೊಬೈಲ್ ಹೊಂದಿರಬೇಕು.
REGISTER HERE : https://www.idhub.in/SriGuru/Staff_Registration/ (OR) SCAN ME
OLD NO. 2525, NEW NO. 87, 3RD FLOOR, SRI VENKATESHWARA ARCADE, 8TH CROSS, MALLESHWARAM, BANGALORE - 560003.

ಬಿಜೆಪಿಯೊಳಗೆ ಬಣ ಜಗಳ ಉಲ್ಬಣ • ವರಿಷ್ಠರಿಗೆ ಸಡ್ಡು ಹೊಡೆದ ವಿಜಯೇಂದ್ರ ವಿರುದ್ಧದ ಗುಂಪು

ನೋಟಿಸ್: ಬಂಡೆದ್ದ ಯತ್ನಾಳ ಬಣ

ನವದೆಹಲಿ/ಬೆಂಗಳೂರು: ಬಿಜೆಪಿ ರಾಜ್ಯ ನಾಯಕತ್ವದ ವಿರುದ್ಧ ಬಂಡೆದ್ದಿರುವ ಬಣದ ಮುಂದಾಳು ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಶಿಸ್ತು ಸಮಿತಿಯಿಂದ ನೋಟಿಸ್ ಕೊಡಿಸುವ ಮೂಲಕ, ಬಿ.ವೈ. ವಿಜಯೇಂದ್ರ ಬಣ ಒಂದು ಹಂತದ ಮೇಲುಗೈ ಸಾಧಿಸಿದೆ; ನೋಟಿಸ್‌ಗೆ ಕಿಮ್ಮತ್ತೇ ನೀಡದ ಯತ್ನಾಳ ಬಣ, ಯಡಿಯೂರಪ್ಪ ಕುಟುಂಬದ ವಿರುದ್ಧ ವಾಗ್ದಾಳಿ ಮುಂದುವರಿಸಿದೆ. ಎರಡೂ ಬಣಗಳ ಕಚ್ಚಾಟ ತೀವ್ರಗೊಂಡ ಬೆನ್ನಲ್ಲೇ, ಮೌನ ಮುರಿದಿರುವ ಬಿಜೆಪಿ ವರಿಷ್ಠರು, ಕೊನೆಗೂ ನೋಟಿಸ್ ನೀಡಿದ್ದಾರೆ. ಈ ಬೆನ್ನಲ್ಲೇ, ಭಿನ್ನರ ಬಣದ ಮುಂಚೂಣಿಯಲ್ಲಿರುವ ರಮೇಶ ಜಾರಕಿಹೊಳಿ, ಕುಮಾರ್ ಬಂಗಾರಪ್ಪ ಅವರು ಯತ್ನಾಳ ಅವರ ಬೆಂಬಲಕ್ಕೆ ನಿಂತಿದ್ದಾರೆ. ತಮ್ಮ ಬಲ ಪ್ರದರ್ಶನಕ್ಕೆ ಮುಂದಾಗಿರುವ ವಿಜಯೇಂದ್ರ ಅವರು, ಹೊಸ ತಂತ್ರ ಹೆಣೆದಿದ್ದಾರೆ.

ಸೋಮವಾರ ಸಭೆ ನಡೆಸಿದ ಬಿಜೆಪಿಯ 21 ಜಿಲ್ಲಾ ಘಟಕಗಳ ಅಧ್ಯಕ್ಷರು, ಯತ್ನಾಳ ಉಚ್ಚಾಟನೆಗೆ ಆಗ್ರಹಿಸಿದ್ದಾರೆ.

‘ಶಿಸ್ತು ಕ್ರಮ ಕೈಗೊಳ್ಳಬಾರದೇಕೆ’

‘ಪಕ್ಷದ ರಾಜ್ಯ ನಾಯಕರ ಬಗ್ಗೆ ಅನಗತ್ಯವಾಗಿ ಟೀಕಾ ಪ್ರಹಾರ ನಡೆಸುವ ಮೂಲಕ ಪಕ್ಷಕ್ಕೆ ಮುಜುಗರ ಉಂಟು ಮಾಡುತ್ತಿದ್ದೀರಿ. ಆದ್ದರಿಂದ ನಿಮ್ಮ ವಿರುದ್ಧ ಏಕೆ ಶಿಸ್ತು ಕ್ರಮ ತೆಗೆದು-ಕೊಳ್ಳಬಾರದು’ ಎಂದು ಬಸನಗೌಡ ಪಾಟೀಲ ಯತ್ನಾಳ ಅವರಿಗೆ ನೀಡಿದ ನೋಟಿಸ್‌ನಲ್ಲಿ ವಿವರಣೆ ಕೇಳಲಾಗಿದೆ.

ಶೋಕಾಸ್ ನೋಟಿಸ್ ನೀಡಿರುವ ಬಿಜೆಪಿಯ ಕೇಂದ್ರೀಯ ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್, 10 ದಿನಗಳಲ್ಲಿ ಉತ್ತರ ನೀಡಬೇಕು ಎಂದು ಸೂಚಿಸಿದ್ದಾರೆ.

‘ನೀವು (ಯತ್ನಾಳ) ಪದೇ ಪದೇ ಪಕ್ಷದ ಶಿಸ್ತು ಉಲ್ಲಂಘನೆ ಮಾಡುತ್ತಿದ್ದೀರಿ. ಈ ಹಿಂದೆಯೂ ಹಲವಾರು ಸಲ ನೋಟಿಸ್‌ಗಳನ್ನು ನೀಡಲಾಗಿತ್ತು. ನಡವಳಿಕೆಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತೀರಿ ಎಂದು ಭರವಸೆ ನೀಡಿದ್ದೀರಿ. ನೀವು ಪಕ್ಷದ ಹಿರಿಯ ನಾಯಕರು ಹಾಗೂ ಹಲವು ವರ್ಷಗಳಿಂದ ಪಕ್ಷದಲ್ಲಿದ್ದೀರಿ. ಹೀಗಾಗಿ, ಈ ಹಿಂದೆ ನೀವು ನೀಡಿದ್ದ ವಿವರಣೆಗಳನ್ನು ಕೇಂದ್ರೀಯ ಶಿಸ್ತು ಸಮಿತಿ ಪರಿಗಣಿಸಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ’ ಎಂದವರು ಹೇಳಿದ್ದಾರೆ.

ನಕಲಿ ನೋಟಿಸ್: ಯತ್ನಾಳ ಶಂಕೆ

‘ವಿಜಯೇಂದ್ರ ಬಹಳ ಚಾಲೂ ಇದ್ದಾನೆ. ಮುಖ್ಯಮಂತ್ರಿಯಾ-ಗಿದ್ದ ಯಡಿಯೂರಪ್ಪ ಸಹಿಯನ್ನೇ ನಕಲಿ ಮಾಡಿ ಸಾವಿರಾರು ಕಡತಗಳನ್ನು ವಿಲೇವಾರಿ ಮಾಡಿದ್ದಾನೆ ಎಂದು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಆರೋಪಿಸಿದ್ದರು. ಈಗಲೂ ಹಾಗೆ ಆಗಿರಬಹುದು’ ಎಂದು ಯತ್ನಾಳ ಅನುಮಾನ ವ್ಯಕ್ತಪಡಿಸಿದರು.



ನೋಟಿಸ್ ಕುರಿತು ಪ್ರತಿಕ್ರಿಯಿಸಿದ ಅವರು, ‘ನನಗೆ ಈ ಹಿಂದೆ ಮೂರು ಸಲ ನೋಟಿಸ್ ಕೊಟ್ಟಿದ್ದರು. ಎರಡು ಸಲ ಉತ್ತರ ಕೊಟ್ಟೆ. ಮೂರನೇ ಸಲ ನೋಟಿಸ್ ನಕಲಿ ಅನಿಸಿತು. ಆಗ ಉತ್ತರ ಕೊಡಲಿಲ್ಲ. ಆಗಲೂ 10 ದಿನಗಳ ಕಾಲಾವಧಿ ಕೊಟ್ಟಿದ್ದರು. ಇದು ವಿಜಯೇಂದ್ರ ಮಾಡಿಸಿದ್ದು ಇರಬಹುದು ಎಂಬ ಅನುಮಾನ ಇದೆ’ ಎಂದರು.

ನಕಲಿ ನೋಟಿಸ್ ಎಂಬ ಹೇಳಿಕೆ ಕುರಿತು ಪದೇ ಪದೇ ಮಾತನಾಡುವುದಿಲ್ಲ. ನೋಟಿಸ್ ಅಸಲಿಯೇ ಅಥವಾ ನಕಲಿಯೇ ಎಂಬುದು ಬರುವ ದಿನಗಳಲ್ಲಿ ಗೊತ್ತಾಗಲಿದೆ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಶೋಕಾಸ್ ನೋಟಿಸ್ ನನಗಿನ್ನೂ ಸಿಕ್ಕಿಲ್ಲ. ಸಿಕ್ಕ ಬಳಿಕ ಸರಿಯಾದ ಉತ್ತರ ನೀಡುತ್ತೇನೆ. ಇ-ಮೇಲ್ ಅಥವಾ ಸ್ಪೀಡ್ ಪೋಸ್ಟ್ ಮೂಲಕ ನೋಟಿಸ್ ಬಂದರೆ ಅದನ್ನು ನಂಬುತ್ತೇನೆ
ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

ಯತ್ನಾಳ ಉಚ್ಚಾಟನೆಗೆ ಜಿಲ್ಲಾಧ್ಯಕ್ಷರ ಸಭೆ ಒತ್ತಾಯ

‘ಭಿನ್ನಮತವನ್ನು ಪಕ್ಷ ಯಾವುದೇ ಕಾರಣಕ್ಕೂ ಸಹಿಸಬಾರದು. ಆದ್ದರಿಂದ, ಬಸನಗೌಡ ಪಾಟೀಲ ಯತ್ನಾಳ ಅವರನ್ನು ಉಚ್ಚಾಟಿಸಬೇಕು’ ಎಂದು ಬಿಜೆಪಿಯ ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರು ಒಕ್ಕೊರಲಿನಿಂದ ಒತ್ತಾಯಿಸಿದರು.

ಬಿಎಸ್‌ವೈಗೆ ಸ್ವರ್ಗ ಪ್ರವೇಶವಿಲ್ಲ: ಯತ್ನಾಳ

‘ಯಡಿಯೂರಪ್ಪ ಅವರಿಗೆ ಮನೆಯಲ್ಲಿರುವ ಚಿಳ್ಳೆ ಮಿಳ್ಳೆಗಳಿಗೆ ಒಂದೊಂದು ಹುದ್ದೆ ಕೊಡಬೇಕು ಎಂಬ ಆಸೆ ಇದೆ. ಆಗ ಮಾತ್ರ ಅವರು ಮೇಲಕ್ಕೆ ಹೋಗುತ್ತಾರೆ, ಅಲ್ಲಲ್ಲ ಕೆಳಗೆ ಹೋಗುತ್ತಾರೆ. ಅವರಿಗೆ ಸ್ವರ್ಗದಲ್ಲಿ ಪ್ರವೇಶ ಇರುವುದಿಲ್ಲ’ ಎಂದು ಬಸನಗೌಡ ಪಾಟೀಲ ಯತ್ನಾಳ ವಾಗ್ದಾಳಿ ನಡೆಸಿದರು.

ನವದೆಹಲಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅಖಂಡ ಬಿಜೆಪಿ ನನ್ನ ಜತೆಗೆ ಇದೆ. ಅಪ್ಪ ಮಕ್ಕಳು ಇನ್ನೊಂದು ಕಡೆ ಇದ್ದಾರೆ. ವಿಜಯೇಂದ್ರ ಅಪ್ಪನಂತೆ ಸರ್ವಾಧಿಕಾರಿ. ಯಡಿಯೂರಪ್ಪ ಅವರಿಗೆ ಕುಟುಂಬ ವ್ಯಾಮೋಹ ವಿಪರೀತವಾಗಿದೆ. ದೊಡ್ಡ ಮಗ ಕೇಂದ್ರ ಮಂತ್ರಿ ಆಗಬೇಕು, ಸಣ್ಣ ಮಗ ಅಧ್ಯಕ್ಷನಾಗಿ ಮುಂದೆ ಮುಖ್ಯಮಂತ್ರಿ ಅಭ್ಯರ್ಥಿಯಾಗಬೇಕು ಎಂಬ ಆಸೆ ಇದೆ’ ಎಂದರು.

5ನೇ ಪುಟ ನೋಡಿ

ದಿನವಿಡೀ ಮಳೆ, ಹೆಚ್ಚಿದ ಥಂಡಿ

ಹಲವೆಡೆ ಇಂದು ಭಾರಿ ಮಳೆ ಸಾಧ್ಯತೆ • ಕೃಷಿಕರಲ್ಲಿ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹುಬ್ಬಳ್ಳಿ/ಮೈಸೂರು: ‘ಫೆಂಜಲ್’ ಚಂಡಮಾರುತದ ಪರಿಣಾಮ ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಚಿಕ್ಕಮಗಳೂರು ಸೇರಿದಂತೆ ರಾಜ್ಯದ ಹಲವೆಡೆ ಸೋಮವಾರ ದಿನವಿಡೀ ಮಳೆಯಾಗಿದೆ. ಹಗಲು ಹೊತ್ತಿನಲ್ಲೇ ತಾಪಮಾನ ಕುಸಿದಿದ್ದರಿಂದ ರಾಜಧಾನಿ ಥಂಡಿಯಿಂದ ನಡುಗಿತು.

ಕೆಲವೆಡೆ ಭತ್ತ ಕಟಾವು ಹಂತಕ್ಕೆ ಬಂದಿದ್ದರೆ ಹಲವು ಕಡೆ ಕಟಾವು ಮುಗಿದು ಭತ್ತವನ್ನು ಒಣಗಿಸುವ ಕೆಲಸ ಸಾಗಿದೆ. ಈ ಹಂತದಲ್ಲಿ ಮಳೆಯಾಗಿರುವುದು ಕೃಷಿಕರಲ್ಲಿ ಆತಂಕ ಮೂಡಿಸಿದೆ.

ಡಿ.3ರಂದು ಭಾರಿ ಮಳೆಯಾಗಲಿದೆ ಎಂಬ ಮುನ್ಸೂಚನೆ ಕಾರಣ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಎಲ್ಲ ಅಂಗನವಾಡಿ, ಪ್ರಾಥಮಿಕ, ಪ್ರೌಢ ಹಾಗೂ ಪಿಯು ಕಾಲೇಜುಗಳಿಗೆ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಂಗನ ವಾಡಿ, ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

ಮೈಸೂರು, ಮಂಡ್ಯ, ಕೊಡಗು, ಹಾಸನ, ಚಾಮರಾಜನಗರ ಜಿಲ್ಲೆಗಳ ವಿವಿಧೆಡೆಯೂ ಜೋರು ಮಳೆ ಯಾಗಿದೆ. ಮುಂಜಾಗ್ರತಾ ಕ್ರಮವಾಗಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ದಲ್ಲಿ ಆಯಾ ಜಿಲ್ಲಾಡ ಳಿತಗಳಿಂದ ಅಂಗನವಾಡಿ ಕೇಂದ್ರಗಳು, ಶಾಲೆ- ಪಿಯು ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಮಂಗಳವಾರವೂ (ಡಿ.3) ರಜೆ ಘೋಷಿಸಲಾಗಿದೆ.

ತಮಿಳುನಾಡಿನಲ್ಲಿ ಫೆಂಜಲ್ ಆರ್ಭಟ

ವಿಲ್ಲುಪುರಂ (ಪಿಟಿಐ): ಫೆಂಜಲ್ ಚಂಡಮಾರುತದ ಪರಿಣಾಮ, ಉತ್ತರ ತಮಿಳುನಾಡಿನ ವಿಲ್ಲುಪುರಂನಲ್ಲಿ ಸೋಮವಾರ ನಿರಂತರವಾಗಿ ಮಳೆ ಸುರಿದಿದ್ದರಿಂದ ಪ್ರವಾಹ ಪರಿಸ್ಥಿತಿ ಉಂಟಾಗಿದೆ.

ಸೇತುವೆಗಳು ಮತ್ತು ರಸ್ತೆಗಳು ಜಲಾವೃತವಾಗಿದ್ದು ಹಲವು ಗ್ರಾಮಗಳು ಮತ್ತು ಕಾಲೊನಿಗಳು ಸಂಪರ್ಕ ಕಳೆದುಕೊಂಡಿವೆ. ನೂರಾರು ಎಕರೆ ಕೃಷಿ ಭೂಮಿ ನೀರಿನಲ್ಲಿ ಮುಳುಗಿ, ಅಪಾರ ಪ್ರಮಾಣದ ಬೆಳೆ ಹಾನಿಗೊಳಗಾಗಿದೆ.

ಪಶ್ಚಿಮ ತಮಿಳುನಾಡಿನ ಕೃಷ್ಣಗಿರಿ ಮತ್ತು ಧರ್ಮಪುರಿ ಜಿಲ್ಲೆಗಳಲ್ಲೂ ಕಳೆದ ಎರಡು ದಶಕಗಳಲ್ಲಿ ಕಂಡುಕೇಳರಿಯದ ಮಳೆ ಸುರಿದಿದೆ. 24 ತಾಸುಗಳಲ್ಲಿ ಕೃಷ್ಣಗಿರಿಯ ಉತಂಗರೈನಲ್ಲಿ 50 ಸೆಂಟಿ ಮೀಟರ್‌ನಷ್ಟು ಮಳೆಯಾಗಿದೆ. ವಿಲ್ಲುಪುರಂನಲ್ಲಿ 42 ಸೆಂ.ಮೀ, ಧರ್ಮಪುರಿಯ ಹರೂರಿನಲ್ಲಿ 33 ಸೆಂ.ಮೀ, ಕಡಲೂರು ಮತ್ತು ತಿರುವಣ್ಣಾಮಲೈನಲ್ಲಿ 16 ಸೆಂ.ಮೀ ಮಳೆಯಾಗಿದೆ.

ಉತಂಗರೈನಲ್ಲಿ ರಸ್ತೆ ಬದಿ ನಿಲ್ಲಿಸಿದ್ದ ಕಾರು ಮತ್ತು ವ್ಯಾನ್‌ಗಳು ಸೇರಿದಂತೆ ಹಲವು ವಾಹನಗಳು ನೀರಿನ ರಭಸಕ್ಕೆ ತಗ್ಗು ಪ್ರದೇಶದತ್ತ ತೇಲಿಹೋಗಿವೆ.

ಕೇರಳದಲ್ಲಿ ಇನ್ನೂ 5 ದಿನ ಮಳೆ(ತಿರುವನಂತಪುರ ವರದಿ): ಕೇರಳದಲ್ಲಿ ಮಂಗಳವಾರ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ. ಸೋಮವಾರ ಕೇರಳದ ಹಲವೆಡೆ ಸಾಧಾರಣ ಮಳೆಯಾಗಿದೆ. ಉತ್ತರ ಮತ್ತು ಕೇಂದ್ರದ ಹಲವು ಪ್ರದೇಶಗಳಲ್ಲಿ ಮಂಗಳವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಮುಂದಿನ ಐದು ದಿನ ಈ ಭಾಗದಲ್ಲಿ ಗುಡುಗು ಸಹಿತ ಸಾಧರಣ ಮಳೆ ಮುಂದುವರಿಯಲಿದೆ ಎಂದು ತಿಳಿಸಿದೆ. ಕೇರಳದ ಐದು ಜಿಲ್ಲೆಗಳಲ್ಲಿ ರೆಡ್ ಅಲರ್ಟ್, ನಾಲ್ಕು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಿದೆ.

ಮಾ.1ರಿಂದ ಪಿಯು, 20ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ತಾತ್ಕಾಲಿಕ ವೇಳಾಪಟ್ಟಿ ಪ್ರಕಟವಾಗಿದ್ದು, ಮಾರ್ಚ್ 1ರಿಂದ ಪಿಯು, ಮಾರ್ಚ್ 20ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಲಿವೆ.

ದ್ವಿತೀಯ ಪಿಯು ಪರೀಕ್ಷೆ ಮಾರ್ಚ್ 19ಕ್ಕೆ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಏಪ್ರಿಲ್ 2ಕ್ಕೆ ಮುಕ್ತಾಯ ವಾಗಲಿವೆ. ತಾತ್ಕಾಲಿಕ ವೇಳಾಪಟ್ಟಿಗೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಆಕ್ಷೇಪ ಸಲ್ಲಿಸಲು ಡಿ.16ರವರೆಗೆ ಅವಕಾಶ ಕಲ್ಪಿಸಲಾಗಿದೆ. ಆಕ್ಷೇಪಣೆ ಗಳನ್ನು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಇಮೇಲ್ chairpersonkseab@gmail.comಗೆ ಸಲ್ಲಿಸಬಹುದು.

ದ್ವಿತೀಯ ಪಿಯು ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 1-ಕನ್ನಡ, ಅರೇಬಿಕ್, 3-ಗಣಿತ, ಶಿಕ್ಷಣಶಾಸ್ತ್ರ, ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, 4-ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲೆಯಾಳ, 5-ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, 7-ಇತಿಹಾಸ, ಭೌತಶಾಸ್ತ್ರ, 8-ಹಿಂದಿ, 10-ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭ ಶಾಸ್ತ್ರ, ಗೃಹ ವಿಜ್ಞಾನ, 12-ಮನಃಶಾಸ್ತ್ರ, ರಸಾಯನವಿಜ್ಞಾನ, ಮೂಲಗಣಿತ, 13-ಅರ್ಥಶಾಸ್ತ್ರ, 15-ಇಂಗ್ಲಿಷ್, 17-ಭೂಗೋಳ ಶಾಸ್ತ್ರ, ಜೀವಶಾಸ್ತ್ರ, 18-ಸಮಾಜ ಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, 19-ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್.

5ನೇ ಪುಟ ನೋಡಿ

ಭಾವಪೂರ್ಣ ಶ್ರದ್ಧಾಂಜಲಿ

ಡಾ. ಎಚ್. ಆರ್. ದೊಡ್ಡಯ್ಯ MBBS, MD
ದಿ: 02.12.2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ
ಇವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಬೆಂಗಳೂರಿನ ಸ್ವಗೃಹದಲ್ಲಿ ಇರಿಸಲಾಗಿದೆ
ಅಂತ್ಯಕ್ರಿಯೆನ್ನು ದಿ. 03.12.2024 ರಂದು ಮಧ್ಯಾಹ್ನ 02.00 ಗಂಟೆಗೆ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿ ಆಲ್ಕೆರೆಹೊಸಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.
---------: ದುಃಖತಪ್ತರು :---------
ಧರ್ಮಪತ್ನಿ ಲಕ್ಷ್ಮಮ್ಮ ದೊಡ್ಡಯ್ಯ,
ಮಕ್ಕಳು ಡಾ. ರಾಮಚಂದ್ರಪ್ರಭು, ಎಚ್.ಡಿ. ಶ್ರೀನಿವಾಸ್
ಡಾ. ರಂಗನಾಥ್, ಶಾಸಕರು, ಕುಣಿಗಲ್,
ಕುಟುಂಬದವರು ಮತ್ತು ಬಂಧುಮಿತ್ರರು

ಒಳಪುಟಗಳಲ್ಲಿ

‘ದೆಹಲಿ ಚಲೊ’: ಗಡಿಯಲ್ಲಿ ರೈತರಿಗೆ ತಡೆ 11
ಕರ್ನಾಟಕ ಬಯಲಾಟ ಅಕಾಡೆಮಿ ಪ್ರಶಸ್ತಿ ಪ್ರಕಟ 7

ಮಹಾರಾಷ್ಟ್ರ: ನಾಳೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

ಮುಂಬೈ: ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಬುಧವಾರ (ಡಿ.4) ನಡೆಯಲಿದ್ದು ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಕುತೂಹಲಕ್ಕೆ ತೆರೆಬೀಳಲಿದೆ. ಶಾಸಕಾಂಗ ಪಕ್ಷದ ಸಭೆಗೆ ಕೇಂದ್ರ ವೀಕ್ಷಕರ ನೇಮಕವೂ ಆಗಿದೆ. 11

ಸಂವಿಧಾನ: ಚರ್ಚೆಗೆ ಸರ್ಕಾರ ಸಮ್ಮತಿ

ನವದೆಹಲಿ: ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸಂವಿಧಾನದ ಕುರಿತು ಎರಡು ದಿನಗಳ ಚರ್ಚೆ ನಡೆಸಬೇಕು ಮತ್ತು ಬಾಂಗ್ಲಾದೇಶದ ಪರಿಸ್ಥಿತಿ, ಸಂಭಲ್ ಹಿಂಸಾಚಾರದಂತಹ ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕು ಎಂಬ ಪ್ರತಿಪಕ್ಷಗಳ ಬೇಡಿಕೆಗೆ ಸರ್ಕಾರ ಸೋಮವಾರ ಸಮ್ಮತಿಸಿದೆ. ಇದರೊಂದಿಗೆ, ಸಂಸತ್ ಕಲಾಪಕ್ಕೆ ಸಂಬಂಧಿಸಿದಂತೆ ಎದ್ದಿದ್ದ ‘ಅನಿಶ್ಚಿತತೆ’ಗೆ ತೆರೆ ಬಿದ್ದಿದೆ. 11

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೈಲಾಸ ಜೀವನ
ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್

| ಕೈ ಕಾಲು ಮತ್ತು ಕಣ್ಣುಗಳ ಉರಿತ |
| ಪಾದಗಳ ಬಿರಿತ | ಮೊಡವೆಗಳು |
| ಸುಡುವಿಕೆ | ಫಿಶರ್ಸ್ |
ಕೊಯ್ತು ಮೊದಲದವಕ್ಕೆ ಗುಣಕಾರಿ
Available in: 12g, 20g Tube, 30g, 60g, 120g, 230g Bottle
Manufacturer: ASUM, Pune. 020-24486865 | Customer Care: Prashant: 91300 26070 | asumkj@gmail.com | www.asum.com
Also available on amazon netmeds.com

ಕೆಂಪೇಗೌಡ ಬಡಾವಣೆ: ಭೂ ಮಾಲೀಕರಿಗೆ ನೋಟಿಸ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ (ಎನ್‌ಪಿಕೆಎಲ್) ನಿರ್ಮಾಣಕ್ಕೆ ಬಾಕಿ ಇರುವ 600 ಎಕರೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಭೂ ಮಾಲೀಕರಿಗೆ ನೋಟಿಸ್ ನೀಡಲು ಆರಂಭಿಸಿದೆ.

ಭೂ ಸ್ವಾಧೀನ ಪ್ರಶ್ನಿಸಿ ಭೂಮಾಲೀ ಕರು ಮತ್ತು ರೈತರು ನ್ಯಾಯಾಲಯದ ಮೊರೆ ಹೋಗಿದ್ದರು. ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

ಬಡಾವಣೆಗಾಗಿ 4,040 ಎಕರೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಬಿಡಿಎ ಈ ಹಿಂದೆ ಅಂತಿಮ ಅಧಿಸೂಚನೆ ಹೊರಡಿಸಿತ್ತು. ಈವರೆಗೆ 2,682 ಎಕರೆ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಎಂಜಿನಿಯರಿಂಗ್ ಇಲಾಖೆಗೆ ಹಸ್ತಾಂತರಿಸಲಾಗಿದೆ. ಈ ಪೈಕಿ 2,200 ಎಕರೆಯಲ್ಲಿ ಬಡಾವಣೆ ಅಭಿವೃದ್ಧಿಪಡಿಸಿ, ಐದು ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಉಳಿದ 482 ಎಕರೆಯನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಅಲ್ಲದೇ 1,300 ಎಕರೆಗಿಂತ ಹೆಚ್ಚು ಜಮೀನು ಇನ್ನೂ ಸ್ವಾಧೀನಕ್ಕೆ ಬಾಕಿ ಇದೆ.

‘ಭೂ ಮಾಲೀಕರಿಗೆ ನೋಟಿಸ್ ನೀಡಲು ಪ್ರಾರಂಭಿಸಿದ್ದು, ಶೀಘ್ರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು. ಈ ಜಾಗ ಅಭಿವೃದ್ಧಿ ಪಡಿಸಿದ ಬಳಿಕ ನಿವೇಶನ ಹಂಚಿಕೆಯ ಬಗ್ಗೆ ಆಡಳಿತ ಮಂಡಳಿ ನಿರ್ಧಾರ ಕೈಗೊಳ್ಳಲಿದೆ’ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

ಮೆಟ್ರೊ: ಅಕ್ಟೋಬರ್‌ನಲ್ಲಿ 2.38 ಕೋಟಿ ಮಂದಿ ಸಂಚಾರ

ಬೆಂಗಳೂರು: ‘ನಮ್ಮ ಮೆಟ್ರೊ’ದಲ್ಲಿ ಅಕ್ಟೋಬರ್‌ನಲ್ಲಿ 2.38 ಕೋಟಿ ಜನರು ಸಂಚರಿಸಿದ್ದು, ₹ 61.38 ಕೋಟಿ ವರಮಾನ ಗಳಿಸಿದೆ.

ಅ.14ರಂದು ಒಂದೇ ದಿನ 8.79 ಲಕ್ಷ ಜನರು ಪ್ರಯಾಣಿಸಿರುವುದು ತಿಂಗಳ ಗರಿಷ್ಠ ಪ್ರಮಾಣವಾಗಿದೆ. ಅಂದು ಒಂದೇ ದಿನ ₹ 2.49 ಕೋಟಿ ಟಿಕೆಟ್ ಮೊತ್ತ ಸಂಗ್ರಹವಾಗಿದೆ.

ಒಂದು ತಿಂಗಳಲ್ಲಿ ಮೆಟ್ರೊದಲ್ಲಿ ಪ್ರಯಾಣಿಸಿದವರಲ್ಲಿ ಶೇ 46.95 ಜನರು ಸ್ಮಾರ್ಟ್‌ಕಾರ್ಡ್ ಬಳಕೆ ಮಾಡಿದ್ದಾರೆ. ಶೇ 29.37 ಜನರು ಟೋಕನ್ ಮೂಲಕ ಸಂಚಾರ ಮಾಡಿದ್ದಾರೆ. ಶೇ 23.68 ಪ್ರಯಾಣಿಕರು ಕ್ಯೂಆರ್ ಕೋಡ್ ಆಧಾರಿತ ಟಿಕೆಟ್ ಬಳಕೆ ಮಾಡಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಶಬರಿಮಲೆ ಯಾತ್ರಿಗಳಿಗಾಗಿ ಕೆಎಸ್‌ಆರ್‌ಟಿಸಿ ವೋಲ್ವೊ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಬರಿಮಲೆ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ವತಿಯಿಂದ ಬೆಂಗಳೂರು ಮತ್ತು ಕೇರಳದ ಪಂಪಾ ನಡುವೆ ಐರಾವತ್ ವೋಲ್ವೊ ಬಸ್ ಸೇವೆ ಆರಂಭಿಸಿದೆ.

ಶನಿವಾರ ಈ ಮಾರ್ಗದ ಬಸ್ ಸಂಚಾರ ಆರಂಭವಾಗಿದ್ದು, ಶಾಂತಿನಗರ ಬಸ್ ನಿಲ್ದಾಣದಿಂದ ಮಧ್ಯಾಹ್ನ 1.50ಕ್ಕೆ ವೋಲ್ವೊ ಬಸ್ ಹೊರಡಲಿದೆ. ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣದಿಂದ 2.20ಕ್ಕೆ ಹೊರಟು ಸಂಜೆ 5.10ಕ್ಕೆ ಮೈಸೂರು ತಲುಪಲಿದೆ. ಮರುದಿನ ಬೆಳಿಗ್ಗೆ 6.45ಕ್ಕೆ ನಿಲಕ್ಕಲ್ ಬಸ್ ನಿಲ್ದಾಣವನ್ನು ತಲುಪಲಿದೆ. ಹೋಗುವಾಗ ಪಂಪಾದಲ್ಲಿ ಇಳಿಯುವ ಅವಕಾಶ ನೀಡಲಾಗಿದೆ. ವಾಪಸ್ ಬರುವಾಗ ನಿಲಕ್ಕಲ್ ಬಸ್ ನಿಲ್ದಾಣಕ್ಕೆ ಬರಬೇಕಾಗುತ್ತದೆ. ಪ್ರತಿದಿನ ಸಂಜೆ 6ಕ್ಕೆ ನಿಲಕ್ಕಲ್‌ನಿಂದ ವೋಲ್ವೊ ಬಸ್ ಹೊರಡಲಿದ್ದು, ಮರುದಿನ ಬೆಳಿಗ್ಗೆ 10ಕ್ಕೆ ಮೆಜೆಸ್ಟಿಕ್ ತಲುಪಲಿದೆ.

ಟಿಕೆಟ್ ದರ ₹ 1,750 ನಿಗದಿ ಪಡಿಸಲಾಗಿದೆ. ನೆರೆಯ ರಾಜ್ಯಗಳಲ್ಲಿನ ಖಾಸಗಿ ಬುಕಿಂಗ್ ಕೌಂಟರ್‌ಗಳಲ್ಲದೆ, ಬೆಂಗಳೂರು ಮತ್ತು ಕರ್ನಾಟಕದ ವಿವಿಧ ಬುಕಿಂಗ್ ಕೌಂಟರ್‌ಗಳಲ್ಲಿ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು. ವೆಬ್‌ಸೈಟ್: www.ksrtc.in ಮೂಲಕವೂ ಕಾಯ್ದಿರಿಸಬಹುದು ಎಂದು ಕೆಎಸ್ ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಯಶವಂತಪುರದ ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿಶ್ವ ಏಡ್ಸ್ ನಿಯಂತ್ರಣ ದಿನ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ಕಾರ್ಯಕರ್ತೆ ಪಾರ್ವತಮ್ಮ ‘ಜಾಗೃತಿ’ ಪೋಸ್ಟರ್ ಬಿಡುಗಡೆ ಮಾಡಿದರು — ಪ್ರಜಾವಾಣಿ ಚಿತ್ರ

‘ಸೋಂಕಿತರ ಹೊರಗಿಟ್ಟರೆ ಸಮಾಜಕ್ಕೆ ಗಂಡಾಂತರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೋಂಕಿತರನ್ನು ನಾವು ರಕ್ಷಿಸಬೇಕು. ಅವರಿಗೆ ಗೌರವ, ಮಾನ್ಯತೆ ನೀಡಬೇಕು. ಅವರನ್ನು ಹೊರಗಿಟ್ಟರೆ ಸಮಾಜಕ್ಕೆ ಗಂಡಾಂತರ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ಸೋಮವಾರ ಹಮ್ಮಿಕೊಂಡಿದ್ದ ವಿಶ್ವ ಏಡ್ಸ್ ನಿಯಂತ್ರಣ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಲ್ಜಿಯಂನಲ್ಲಿ ಲೈಂಗಿಕ ಕಾರ್ಯಕರ್ತರಿಗೆ ಕಾನೂನಿನ ರಕ್ಷಣೆ ನೀಡಲಾಗಿದೆ. ಅದನ್ನು ಅಧಿಕೃತ ಕೆಲಸ ಎಂದು ಗುರುತಿಸಿ ಕಾನೂನಿನ ಮಾನ್ಯತೆ ನೀಡುವುದರ ಜೊತೆಗೆ ಹಕ್ಕುಗಳನ್ನು ಕೂಡ ನೀಡಲಾಗಿದೆ ಎಂದು ತಿಳಿಸಿದರು.

ನೈತಿಕತೆಗಿಂತ ಮಾನವೀಯತೆ ಮುಖ್ಯವಾಗಬೇಕು. ಪ್ರತಿ ಜೀವವನ್ನು ಕಾಪಾಡಬೇಕು. ಸೋಂಕಿತರನ್ನು ಮುಖ್ಯವಾಹಿನಿಯಲ್ಲಿ ಸೇರಿಸಿಕೊಳ್ಳದೇ ಇದ್ದರೆ ಸಮಾಜಕ್ಕೆ ತೊಂದರೆಯಾಗುತ್ತದೆ. ಅದಕ್ಕಾಗಿ ಎಲ್ಲರೂ ವಿಶಾಲ ಚಿಂತನೆಯನ್ನು ಮೈಗೂಡಿಸಿಕೊಳ್ಳಬೇಕು. ಕಾನೂನು ಮತ್ತು ಅರಿವು ಮೂಡಿಸುವ ಮೂಲಕ ಇದು ಸಾಧ್ಯ ಎಂದರು.

‘ನಮ್ಮಲ್ಲಿ ಸೋಂಕಿತರ ಸಂಖ್ಯೆ ಇಳಿಮುಖವಾಗುತ್ತಿದೆ. 2021ರಲ್ಲಿ ಶೇ 0.05 ಇದ್ದಿದ್ದು, ಈಗ ಶೇ 0.03ಕ್ಕೆ ಇಳಿದಿದೆ. 2024ರ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 23.15 ಲಕ್ಷ ಜನರನ್ನು ಪರೀಕ್ಷೆಗೆ ಒಳಪಡಿಸಿದ್ದು, 7,720 ಜನರಲ್ಲಿ ಸೋಂಕು ಕಂಡು ಬಂದಿದೆ. ಇದೇ ಸಮಯದಲ್ಲಿ 7.11 ಲಕ್ಷ ಗರ್ಭಿಣಿಯರನ್ನು ತಪಾಸಣೆ ಮಾಡಲಾಗಿದ್ದು, 247 ಜನರಲ್ಲಿ ಸೋಂಕು ಪತ್ತೆಯಾಗಿದೆ. ಇದು ಸೊನ್ನೆಗೆ ಬರಬೇಕು’ ಎಂದು ಆಶಿಸಿದರು.

ರಾಜ್ಯದಲ್ಲಿ 433 ಆಪ್ತ ಸಮಾಲೋಚನಾ ಮತ್ತು ಪರೀಕ್ಷಾ ಕೇಂದ್ರಗಳಿವೆ. 2592 ಸೌಲಭ್ಯಾಧಾರಿತ ಸಮಗ್ರ ಆಪ್ತ ಸಮಾಲೋಚನಾ ಮತ್ತು ಪರೀಕ್ಷಾ ಕೇಂದ್ರಗಳಿವೆ. ಅಲ್ಲಿ ನೀಡುತ್ತಿರುವ ಚಿಕಿತ್ಸೆ, ಥೆರಪಿಗಳಿಂದಾಗಿ ಇಳಿಕೆಯಾಗಿದೆ. ಇಷ್ಟಕ್ಕೆ ಸುಮ್ಮನಾಗದೇ ಎಚ್‌ಐವಿ/ಏಡ್ಸ್ ಪತ್ತೆಯೇ ಇಲ್ಲ ಎಂದು ಆಗುವವರೆಗೆ ಕೆಲಸ ಮಾಡಬೇಕು ಎಂದರು.

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್, ಆಡಳಿತಾಧಿಕಾರಿ ವಿ. ಪಾತರಾಜು, ನಿರ್ದೇಶಕ ಚನ್ನಾರೆಡ್ಡಿ, ಏಡ್ಸ್ ನಿಯಂತ್ರಣ ಸೊಸೈಟಿ ಯೋಜನಾ ನಿರ್ದೇಶಕ ನಾಗರಾಜ ಎನ್.ಎಂ., ಹೆಚ್ಚುವರಿ ಯೋಜನಾ ನಿರ್ದೇಶಕಿ ಉಮಾ ಬುಗ್ಗಿ, ಉಪ ನಿರ್ದೇಶಕ ಅನಿಲ್, ಜಂಟಿ ನಿರ್ದೇಶಕ ವೀರನಗೌಡ ಪಾಟೀಲ, ಜಿಲ್ಲಾ ಆರೋಗ್ಯ, ಕುಟುಂಬ ಕಲ್ಯಾಣಾಧಿಕಾರಿ ರವೀಂದ್ರ ಭಾಗವಹಿಸಿದ್ದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–1, ಕೆ.ಐ.ಎ.ಡಿ.ಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೆಲಮಂಗಲ ನಂ.14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು ದೂರವಾಣಿ: 080–22236840, ಇ–ಮೇಲ್:slao1bmicp@kiadb.in

ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ಬೆಂ.ಗ್ರಾ.ನೆ/954/2024–25 — ದಿನಾಂಕ: 30.11.2024

ಸಾರ್ವಜನಿಕ ನೋಟೀಸ್

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(1)ರ ಅನ್ವಯ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಅನಂತಪುರ ಗ್ರಾಮ ಮತ್ತು ತ್ಯಾಮಗೊಂಡ್ಲು ಹೋಬಳಿ, ಲಕ್ಕೇನಹಳ್ಳಿ ಗ್ರಾಮಗಳಲ್ಲಿ ಈ ಕೆಳಕಂಡ ಸರ್ವೆ ನಂಬರ್ ಜಮೀನುಗಳನ್ನು ಕೈಗಾರಿಕಾ ಸ್ಥಾಪನೆಗಾಗಿ ಕೆಐಎಡಿ ಕಾಯ್ದೆ ಕಲಂ 28(1)ರಡಿ ಸರ್ಕಾರದ ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಸಿಐ 137 ಎಸ್ಪಿಕ್ಯೂ 2024 ದಿ:03.10.2024ರ ಪ್ರಕಾರ ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆ ದಿನಾಂಕ: 19.10.2024 ರಂದು ಹೊರಡಿಸಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28(1)ರ ಪ್ರಕಾರ ಈ ಕೆಳಗೆ ವಿವರಿಸಿರುವ ಸ್ವತ್ತುಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಋಣಭಾರಗಳಿಂದ ವಿಮುಕ್ತಗೊಂಡು ಸರ್ಕಾರಕ್ಕೆ ನಿಹಿತಗೊಂಡಿರುತ್ತದೆ.

ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರ್ ವಿವರಗಳು

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಐನ್ ಎ–ಗು	ಖರಾಬು ಎ–ಗು	ಉಳಿಕೆ ಎ–ಗು
1	2	3	4	5	6	7
ಗ್ರಾಮ: ಅನಂತಪುರ, ತಾಲ್ಲೂಕು: ನೆಲಮಂಗಲ				ಹೋಬಳಿ: ಸೋಂಪುರ, ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1.	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	1/1	1–25	0–01	1–24
2.	ಎಂ.ಜಿ. ದತ್ತಾತ್ರೇಯ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	ಎಂ.ಜಿ. ದತ್ತಾತ್ರೇಯ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	1/2	1–01	–	1–01
3.	ಎಂ.ಜಿ. ದತ್ತಾತ್ರೇಯ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	ಎಂ.ಜಿ. ದತ್ತಾತ್ರೇಯ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	1/3	0–33	–	0–33
4.	ಎಂ.ಜಿ. ರಮೇಶ್ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	ಎಂ.ಜಿ. ರಮೇಶ್ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	2/1	4–01	0–01	4–00
5.	ಎಂ.ಜಿ. ದತ್ತಾತ್ರೇಯ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	ಎಂ.ಜಿ. ದತ್ತಾತ್ರೇಯ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	2/2	0–29	–	0–29
6.	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	3/1	3–01	–	3–01
7.	ಎಂ.ಜಿ. ದತ್ತಾತ್ರೇಯ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	ಎಂ.ಜಿ. ದತ್ತಾತ್ರೇಯ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	3/2	0–19	–	0–19
8.	ಎಂ.ಜಿ. ರಮೇಶ್ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	ಎಂ.ಜಿ. ರಮೇಶ್ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	3/3	1–09	–	1–09
9.	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	4	6–29	0–06	6–23
10.	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	5	4–36	0–10	4–26
11.	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	ಎಂ.ಎನ್.ರಮೋಲ ಕೋಂ ಲೇಟ್ ಎಂ.ಜಿ.ನಾಗೇಂದ್ರ	6/1	4–26	–	4–26
12.	ಎಂ.ಜಿ. ರಮೇಶ್ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	ಎಂ.ಜಿ. ರಮೇಶ್ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ	6/2	0–17	–	0–17
13.	ಮುದ್ದಮಾರೇ ಗೌಡ ಬಿನ್ ತಿಮ್ಮಯ್ಯ ಎಂ.ಜಿ. ರಮೇಶ್ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ ಸುನೀಲ್ ನಾಗೇಂದ್ರ ಮೈಸೂರು ಬಿನ್ ಲೇಟ್ ಎಂ.ಜಿ.ನಾಗೇಂದ್ರ	ಮುದ್ದಮಾರೇ ಗೌಡ ಬಿನ್ ತಿಮ್ಮಯ್ಯ ಎಂ.ಜಿ. ರಮೇಶ್ ಬಿನ್ ಲೇಟ್ ಎಂ.ಎಲ್. ಗೋಪಾಲಶೆಟ್ಟಿ ಸುನೀಲ್ ನಾಗೇಂದ್ರ ಮೈಸೂರು ಬಿನ್ ಲೇಟ್ ಎಂ.ಜಿ.ನಾಗೇಂದ್ರ	7	26–00	–	26–00
14.	ಮಂಜುಳ ಕೋಂ ಸುರೇಶ್ ಸಿ.ಹೆಚ್.	ಮಂಜುಳ ಕೋಂ ಸುರೇಶ್ ಸಿ.ಹೆಚ್.	8	3–35	–	3–35
15.	ಆರ್.ಎಚ್. ಮುಕುಂದ ಬಿನ್ ಹರಪನಹಳ್ಳಿ	ಆರ್.ಎಚ್. ಮುಕುಂದ ಬಿನ್ ಹರಪನಹಳ್ಳಿ	9	5–16	–	5–16
16.	ಆರ್.ಎಚ್. ಮುಕುಂದ ಬಿನ್ ಹರಪನಹಳ್ಳಿ	ಆರ್.ಎಚ್. ಮುಕುಂದ ಬಿನ್ ಹರಪನಹಳ್ಳಿ	10 ರ ಪೈಕಿ	4–31	0–01	4–30
		ಒಟ್ಟು		**69–28**	**0–19**	**69–09**

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಐನ್ ಎ–ಗು	ಖರಾಬು ಎ–ಗು	ಉಳಿಕೆ ಎ–ಗು
1	2	3	4	5	6	7
ಗ್ರಾಮ: ಲಕ್ಕೇನಹಳ್ಳಿ, ತಾಲ್ಲೂಕು: ನೆಲಮಂಗಲ				ಹೋಬಳಿ: ತ್ಯಾಮಗೊಂಡ್ಲು–2, ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1	ಸುನೀಲ್ ನಾಗೇಂದ್ರ ಮೈಸೂರು ಬಿನ್ ಎಂ ಜಿ ನಾಗೇಂದ್ರ	ಸುನೀಲ್ ನಾಗೇಂದ್ರ ಮೈಸೂರು ಬಿನ್ ಎಂ ಜಿ ನಾಗೇಂದ್ರ	61/3 ರ ಪೈಕಿ	1–16.08	0–06	1–10.08
2	ಸುನೀಲ್ ನಾಗೇಂದ್ರ ಮೈಸೂರು ಬಿನ್ ಎಂ ಜಿ ನಾಗೇಂದ್ರ	ಸುನೀಲ್ ನಾಗೇಂದ್ರ ಮೈಸೂರು ಬಿನ್ ಎಂ ಜಿ ನಾಗೇಂದ್ರ	62/1	0–32	0–03	0–29
3	ಸುನೀಲ್ ನಾಗೇಂದ್ರ ಮೈಸೂರು ಬಿನ್ ಎಂ ಜಿ ನಾಗೇಂದ್ರ	ಸುನೀಲ್ ನಾಗೇಂದ್ರ ಮೈಸೂರು ಬಿನ್ ಎಂ ಜಿ ನಾಗೇಂದ್ರ	62/2	1–02	0–01	1–01
4	ಎಂ.ಜಿ ರಮೇಶ ಬಿನ್ ಲೇಟ್ ಎಂ ಎಲ್ ಗೋಪಾಲಶೆಟ್ಟಿ	ಎಂ.ಜಿ ರಮೇಶ ಬಿನ್ ಲೇಟ್ ಎಂ ಎಲ್ ಗೋಪಾಲಶೆಟ್ಟಿ	62/4	0–01	–	0–01
		ಒಟ್ಟು		**3–11.08**	**0–10**	**3–01.08**

ಘೋಷ್ವಾರೆ

ಕ್ರ.ಸಂ.	ಗ್ರಾಮದ ಹೆಸರು	ವಿಸ್ತೀರ್ಣ ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
1	ಅನಂತಪುರ	69–28	0–19	69–09
2	ಲಕ್ಕೇನಹಳ್ಳಿ	3–11.08	0–10	3–01.08
	ಒಟ್ಟು	72–39.08	0–29	72–10.08

ಈ ಮೇಲ್ಕಂಡ ಜಮೀನಿನ ಖಾತೆದಾರರು/ಅನುಭವದಾರರು ಹಾಗೂ ಹಿತಾಸಕ್ತಿದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಾಯಿತಿ ಅಂಚೆ ಮೂಲಕ ರವಾನಿಸಲಾಗಿದೆ. ಮೇಲ್ಕಂಡ ಜಮೀನಿನ ಖಾತೆದಾರರು/ಹಕ್ಕುದಾರರು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ ವಿಧಿ 28(2)ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.

ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು/ಹಿತಾಸಕ್ತಿ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ರಾಜ್ಯಪತ್ರದಲ್ಲಿ ಈ ಪ್ರಕಟಣೆಗೊಂಡ 30 ದಿನಗಳೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅವರ ಪರವಾಗಿ ಅಧಿಕಾರ ಪಡೆದವರು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕ ಗಮನಕ್ಕೆ ತರಲಾಗಿದೆ. ಮೇಲ್ಕಂಡ **ಗ್ರಾಮಗಳ ಜಮೀನುಗಳ ವಿಚಾರಣೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–1 (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ, ಕೆಐಎಡಿಬಿ, ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001 ಇಲ್ಲಿ ನಿಗಧಿಪಡಿಸಲಾಗಿದೆ.** ಸದರಿ ದಿನಾಂದಂದು ದಾಖಲಾತಿಗಳೊಂದಿಗೆ ಲಿಖಿತವಾಗಿ ಅಥವಾ ಖುದ್ದಾಗಿ ಹಾಜರಾಗಿ ಸಲ್ಲಿಸಲು ಸೂಚಿಸಿದೆ.

ಕ್ರ.ಸಂ.	ಗ್ರಾಮದ ಹೆಸರು	ಗೆಜೆಟ್ ಕ್ರನಂ ಇಂದ	ಗೆಜೆಟ್ ಕ್ರನಂ ವರೆಗೆ	ಸ.ನಂ ಇಂದ	ಸ.ನಂ ವರೆಗೆ	ವಿಚಾರಣಾ ದಿನಾಂಕ ಸಮಯ
1	ಅನಂತಪುರ	1	16	1/1	10	06.01.2025 ಬೆಳಗ್ಗೆ 11.00 ಗಂಟೆಗೆ
2	ಲಕ್ಕೇನಹಳ್ಳಿ	1	4	61/3	62/4	

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿಗಳು–1,
ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂ.ಗ್ರಾಂ, ನೆಲಮಂಗಲ ತಾಲ್ಲೂಕು, ಬೆಂಗಳೂರು

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರಗಳು ಕಳೆದಿದೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ನಕಲಿ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.10)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ಷೇರುಗಳ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	ಷೇರುದಾರರ ಹೆಸರು
J001079	25	13650	1893101 - 1893125	ಜಯಸಿಂಹ ಕೆ
	20	38573	2828949 - 2828968	
	5	38574	2828969 - 2828973	

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರಂತೆ ದೃಢಿಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 02/12/2024

ಮಾನಸ. ಆರ್
ಕಂಪನಿ ಸೆಕ್ರಟರಿ

ಭಾರತ ಸರ್ಕಾರ

ಗೃಹ ವ್ಯವಹಾರಗಳ ಸಚಿವಾಲಯ

ಮಹಾನಿರ್ದೇಶನಾಲಯ, ಗಡಿ ಭದ್ರತಾ ಪಡೆ

ಗಡಿ ಭದ್ರತಾ ಪಡೆಯಲ್ಲಿ ಕ್ರೀಡಾ ಕೋಟಾ–2024ರ ಅಡಿಯಲ್ಲಿ ಕಾನ್‌ಸ್ಟೇಬಲ್ (ಜನರಲ್ ಡ್ಯೂಟಿ) ಹುದ್ದೆಗೆ ಪ್ರತಿಭಾವಂತ ಕ್ರೀಡಾ ಪಟುಗಳ ನೇಮಕಾತಿ ಕುರಿತಾದ ಜಾಹೀರಾತು

ಕೆಳಗಿನ ಕೋಷ್ಟಕದಲ್ಲಿನ ಪ್ಯಾರಾ 2 ರಲ್ಲಿರುವಂತೆ ಕ್ರೀಡಾ ಕೋಟಾ ಪ್ರತಿಯಾಗಿ ಗಡಿ ಭದ್ರತಾ ಪಡೆಯಲ್ಲಿ ತಾತ್ಕಾಲಿಕವಾಗಿ ಬಹುತೇಕ ಶಾಶ್ವತ ಆಧಾರದಲ್ಲಿ ಗ್ರೂಪ್ “ಸಿ” ಅಡಿಯಲ್ಲಿ ಕಾನ್‌ಸ್ಟೇಬಲ್ (ಜನರಲ್ ಡ್ಯೂಟಿ) ಎಂಬ ನಾನ್ ಗೆಜೆಟೆಡ್ ಮತ್ತು ನಾನ್ ಮಿನಿಸ್ಟೀರಿಯಲ್ ವೃಂದದ 275 ಖಾಲಿಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಹ ಭಾರತೀಯ ನಾಗರಿಕರಿಂದ (ಪುರುಷ ಮತ್ತು ಮಹಿಳೆ) ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳ ಅರ್ಜಿಗಳನ್ನು ಆನ್‌ಲೈನ್ ವಿಧಾನದಲ್ಲಿ ಮಾತ್ರ ಸ್ವೀಕರಿಸಲಾಗುತ್ತದೆ. ಇನ್ಯಾವುದೇ ವಿಧಾನದಲ್ಲಿ ಸಲ್ಲಿಸಲಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಆನ್‌ಲೈನ್ ಅರ್ಜಿ ಸಲ್ಲಿಕೆಯು 01/12/2024 ರಂದು ರಾತ್ರಿ 00:01 ರಿಂದ ಆರಂಭವಾಗುತ್ತದೆ ಮತ್ತು 30/12/2024 ರಂದು ರಾತ್ರಿ 11:59 ಗಂಟೆಗೆ ಕೊನೆಗೊಳ್ಳುತ್ತದೆ.

2. ಖಾಲಿಹುದ್ದೆಗಳು:
ಕೆಳಕಂಡ ಕ್ರೀಡಾ/ಆಟೋಟ ಶಿಸ್ತುಗಳ ಅಡಿಯಲ್ಲಿ 275 ಖಾಲಿಹುದ್ದೆಗಳಿವೆ:–

ಕ್ರ.ಸಂ.	ವಿಭಾಗ	ಖಾಲಿಹುದ್ದೆ ಪುರುಷ	ಖಾಲಿಹುದ್ದೆ ಮಹಿಳೆ	ಕ್ರ.ಸಂ.	ವಿಭಾಗ	ಖಾಲಿಹುದ್ದೆ ಪುರುಷ	ಖಾಲಿಹುದ್ದೆ ಮಹಿಳೆ
1	ಆರ್ಚರಿ	3	3	15	ಹ್ಯಾಕಿ	4	7
2	ಅಥ್ಲೆಟಿಕ್ಸ್	13	16	16	ಐಸ್–ಸ್ಕೀಯಿಂಗ್	6	0
3	ಬ್ಯಾಡ್ಮಿಂಟನ್	4	4	17	ಜುಡೋ	2	4
4	ಸ್ವಿಮ್ಮಿಂಗ್	17	17	18	ಕರಾಟೆ	3	4
5	ಡೈವಿಂಗ್	3	3	19	ವಾಲಿಬಾಲ್	4	10
6	ವಾಟರ್ ಪೋಲೊ	1	1	20	ವೈಟ್ ಲಿಫ್ಟಿಂಗ್	5	3
7	ಬಾಸ್ಕೆಟ್‌ಬಾಲ್	4	10	21	ವಾಟರ್ ಸ್ಪೋರ್ಟ್ಸ್	6	6
8	ಬಾಕ್ಸಿಂಗ್	7	5	22	ರೆಸ್ಲಿಂಗ್ (ಜಿ/ಆರ್)	4	0
9	ಸೈಕ್ಲಿಂಗ್	4	4	23	ರೆಸ್ಲಿಂಗ್ (ಎಫ್/ಎಸ್)	5	5
10	ಕ್ರಾಸ್ ಕಂಟ್ರಿ	1	1	24	ಶೂಟಿಂಗ್	5	3
11	ಇಕ್ವೆಸ್ಟ್ರಿಯನ್	5	5	25	ಟೇಕ್ವಾಂಡೊ	5	6
12	ಫುಟ್‌ಬಾಲ್	4	0	26	ವುಶು	4	7
13	ಜಿಮ್ನಾಸ್ಟಿಕ್ಸ್	6	6	27	ಫೆನ್ಸಿಂಗ್	0	6
14	ಹ್ಯಾಂಡ್ ಬಾಲ್	2	12				
ಒಟ್ಟು –275 (ಪುರುಷ–127 ಮತ್ತು ಮಹಿಳೆ–148)							

ವೇತನ ಶ್ರೇಣಿ ಮತ್ತು ಇನ್ನಿತರ ಭತ್ಯೆ:–ಕಾಲಕಾಲಕ್ಕೆ ತಿದ್ದುಪಡಿಗೆ ಒಳಗಾಗಿರುವ ಮತ್ತು ನಿಯಮದ ಪ್ರಕಾರ ಕೇಂದ್ರ ಸರ್ಕಾರಿ ಉದ್ಯೋಗಿಗಳಿಗೆ ಅನ್ವಯವಾಗುವ 7ನೇ ಸಿಪಿಸಿ ಮೇರೆಗಿನ ಹಂತ–3 ರಲ್ಲಿನ ರೂ. 21,700–69,100/– ಮತ್ತು ಇನ್ನಿತರ ಅನ್ವಯಿಕ ಭತ್ಯೆಗಳು.

3. ಸದರಿ ಹುದ್ದೆಯ ಅರ್ಹತೆಯು ಕೆಳಗಿನಂತಿರುತ್ತದೆ:–

ಎ) **ಪ್ರಾಯ–** 1ನೇ ಜನವರಿ 2025 ರಂತೆಗೆ 18 ರಿಂದ 23 ವರ್ಷ **(ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳನ್ವಯ ಸಡಿಲಿಕೆ).**

ಬಿ) **ಶೈಕ್ಷಣಿಕ ವಿದ್ಯಾರ್ಹತೆ–**ಅಂಗೀಕೃತ ಮಂಡಳಿಯಿಂದ ಮೆಟ್ರಿಕ್ಯುಲೇಶನ್ ಅಥವಾ ತತ್ಸಮಾನ ಪಡೆದಿರಬೇಕು (30–12–2024 ರಂತೆಗೆ)

ಸಿ) **ಕ್ರೀಡಾ ಅರ್ಹತೆಗಳು–** ಈ ಜಾಹೀರಾತಿನ ಕೊನೆಯ ದಿನಾಂಕದಿಂದ ಕಳೆದ ಎರಡು **ವರ್ಷಗಳ ಅವಧಿಯಲ್ಲಿ, ಜಾಹೀರಾತಿನ ಪ್ಯಾರಾ 4(ಬಿ) ಯಲ್ಲಿ (https://rectt.bsf.gov.in ನಲ್ಲಿ ಪ್ರಕಟಿಸಲಾಗಿರುವ) ಉಲ್ಲೇಖಿಸಲಾಗಿರುವ ವಿವಿಧ ಸ್ಪರ್ಧಾ ಹಂತಗಳಲ್ಲಿ ಭಾಗವಹಿಸಿರುವ ಅಥವಾ ಪದಕಗಳನ್ನು ಗೆದ್ದಿರುವ ಆಟಗಾರರನ್ನು ಮಾತ್ರ ಪರಿಗಣಿಸಲಾಗುತ್ತದೆ.**

ಡಿ) **ದೈಹಿಕ ಮಾನದಂಡ–**

i. **ಎತ್ತರ: ಪುರುಷ=170 ಸೆಂ.ಮೀ. ಮತ್ತು ಮಹಿಳೆ=157 ಸೆಂ.ಮೀ.**

ii. **ಎದೆಯ ಸುತ್ತಳತೆ: (ಪುರುಷರಿಗೆ ಮಾತ್ರ) 80 ಸೆಂ.ಮೀ. (ಸಹಜವಾಗಿ). ಕನಿಷ್ಠ ವಿಸ್ತರಣೆ–**05 ಸೆಂ.ಮೀ.

iii. **ತೂಕ: ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಇರುವ ವೈದ್ಯಕೀಯ ಮಾನದಂಡಗಳ ಪ್ರಕಾರ ಎತ್ತರ ಮತ್ತು ಪ್ರಾಯದ ಅನುಪಾತದಲ್ಲಿರಬೇಕು.**

ಸೂಚನೆ:– ಸರ್ಕಾರದ ಆದೇಶಗಳ ಪ್ರಕಾರ ದೈಹಿಕ ಮಾನದಂಡಗಳಲ್ಲಿ ಸಡಿಲಿಕೆ.

ಇ) **ವೈದ್ಯಕೀಯ ಮಾನದಂಡಗಳು–** ಕಾಲಕಾಲಕ್ಕೆ ಎಂಎಚ್‌ಎ ಇವರಿಂದ ಹೊರಡಿಸಲಾಗಿರುವ ಪರಿಷ್ಕೃತ **ವೈದ್ಯಕೀಯ ಮಾರ್ಗಸೂಚಿಗಳ ಪ್ರಕಾರ.**

4. **ಅರ್ಜಿ ಸಲ್ಲಿಸುವ ವಿಧಾನ–** ಗಡಿ ಭದ್ರತಾ ಪಡೆಯ https://rectt.bsf.gov.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಅರ್ಜಿ ಸ್ವೀಕಾರ ವಿಧಾನವು 01/12/2024 ರಂದು ರಾತ್ರಿ 00:01 ಗಂಟೆಯಿಂದ ಆರಂಭವಾಗುತ್ತದೆ ಮತ್ತು 30/12/2024 ರಂದು ರಾತ್ರಿ 11:59 ಗಂಟೆಗೆ ಕೊನೆಗೊಳ್ಳುತ್ತದೆ. ಅರ್ಹ ಮತ್ತು ಆಸಕ್ತಿಯುಳ್ಳ ಅಭ್ಯರ್ಥಿಗಳು ಕಡ್ಡಾಯವಾಗಿ ಸದರಿ ಬಿಎಸ್‌ಎಫ್ ನೇಮಕಾತಿ ವೆಬ್‌ಸೈಟ್ ಮೂಲಕವಷ್ಟೆ **ಅರ್ಜಿ ಸಲ್ಲಿಸತಕ್ಕದ್ದು.**

5. **ಆಯ್ಕೆ ಪ್ರಕ್ರಿಯೆ:**

i. **ದಾಖಲಾತಿಗಳು/ಪ್ರಮಾಣಪತ್ರಗಳ ಪರಿಶೀಲನೆ**

ii. **ದೈಹಿಕ ಮಾನದಂಡಗಳ ಮಾಪನ (ಪಿಎಸ್‌ಟಿ)**

iii. **ವಿವರವಾದ ವೈದ್ಯಕೀಯ ತಪಾಸಣೆ (ಡಿಎಂಇ)**

ಸೂಚನೆ:– ಗಡಿ ಭದ್ರತಾ ಪಡೆಯ https://rectt.bsf.gov.in ವೆಬ್‌ಸೈಟ್‌ನಲ್ಲಿ ಇವೆಂಟ್‌ವಾರು/ತೂಕದ ಪ್ರವರ್ಗವಾರು ಖಾಲಿಹುದ್ದೆಗಳ ವಿವರವಾದ ಮಾರ್ಗಸೂಚಿಗಳು ಲಭ್ಯವಿರುತ್ತವೆ. ಅದಾಗ್ಯೂ, ಈ ಖಾಲಿಹುದ್ದೆಗಳು ಬದಲಾವಣೆಯ ನಿಬಂಧನೆಗೆ ಒಳಪಟ್ಟಿರುತ್ತವೆ (ಹೆಚ್ಚು ಅಥವಾ ಕಡಿಮೆ ಆಗಬಹುದಾಗಿರುತ್ತದೆ). ಈ ಜಾಹೀರಾತು ಪ್ರಕಟಗೊಂಡ ಬಳಿಕ, ಯಾವುದೇ ಕಾರಣ ನೀಡದೆಯೇ ನೇಮಕಾತಿ ಪ್ರಕ್ರಿಯೆಯ ಅನುಕ್ರಮವನ್ನು ಬದಲಾಯಿಸುವ ಮತ್ತು ಸದರಿ ನೇಮಕಾತಿಯನ್ನು ಯಾವುದೇ ಹಂತದಲ್ಲಾದರೂ ಸರಿ, ರದ್ದುಪಡಿಸುವ ಅಥವಾ ಮುಂದೂಡುವ ಹಕ್ಕನ್ನು ಗಡಿ ಭದ್ರತಾ ಪಡೆ ಕಾಯ್ದಿರಿಸಿಕೊಂಡಿರುತ್ತದೆ.

(ಪ್ರಮೇಂದ್ರ ಕುಮಾರ)
ಕಮಾಂಡಂಟ್ (ತರಬೇತಿ/ಕ್ರೀಡಗಳು)
ಹೆಚ್‌ಕ್ಯೂ ಡಿಜಿ ಬಿಎಸ್‌ಎಫ್ ನವದೆಹಲಿ

CBC 19110/11/0076/2425

ಅಂತರರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರಗಳ ಪ್ರಾಧಿಕಾರ

2ನೇ ಮತ್ತು 3ನೇ ಮಹಡಿ, ಪ್ರಜ್ಞಾ ಟವರ್, ಜಿಐಎಫ್‌ಟಿ ಸಿಟಿ, ಗಾಂಧಿನಗರ, ಗುಜರಾತ್
ಕಡತ ಸಂ. 73/ಐಎಫ್‌ಎಸ್‌ಸಿಎ/ಕನ್ಸಲ್ಟಂಟ್ಸ್/2020–21 — ನವಂಬರ್ 06, 2024

ಖಾಲಿಹುದ್ದೆ ಭರ್ತಿ ಅಧಿಸೂಚನೆ

ಐಎಫ್‌ಎಸ್‌ಸಿಎ ಆಕ್ಟ್, 2019ರ ಅಡಿಯಲ್ಲಿ ಸ್ಥಾಪನೆಗೊಂಡಿರುವ ಏಕೀಕೃತ ನಿಯಂತ್ರಣ ಅಂಗವಾಗಿರುವ ಅಂತರರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರಗಳ ಪ್ರಾಧಿಕಾರ (ಐಎಫ್‌ಎಸ್‌ಸಿಎ) ಇವರು, **ಒಂದು (1)** ಕನ್ಸಲ್ಟಂಟ್ ಗ್ರೇಡ್ – 2 ಹುದ್ದೆ ಭರ್ತಿ ಮಾಡಿಕೊಳ್ಳಲು, ಪ್ರಿನ್ಸಿಪಾಲ್ ಸ್ಟಾಫ್ ಆಫೀಸರ್ (ಪಿಎಸ್‌ಒ) ಅಥವಾ ತತ್ಸಮಾನ ಹಂತದಲ್ಲಿ ನಿವೃತ್ತರಾಗಿರುವ, ಅರ್ಹ ಕೇಂದ್ರ ಸರ್ಕಾರಿ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಉದ್ಯೋಗಕ್ಕೆ ನಿಯೋಜಿಸಲಾಗುವ ಸ್ಥಳ ಜಿಐಎಫ್‌ಟಿ ಸಿಟಿ, ಗಾಂಧಿನಗರ, ಗುಜರಾತ್.
ಈ ಹುದ್ದೆಗೆ ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳವರು, ವಿವರವಾದ ಖಾಲಿಹುದ್ದೆಯ ಅಧಿಸೂಚನೆಗಾಗಿ www.ifsca.gov.in/career ಪರಿಶೀಲಿಸಬೇಕೆಂದು ಕೋರಲಾಗಿದೆ. ಅಗತ್ಯ ದಾಖಲಾತಿಗಳ ಸಮೇತ ಸಂಪೂರ್ಣ ಭರ್ತಿ ಮಾಡಿದ ಅರ್ಜಿಯನ್ನು ಅಂಚೆ ಮೂಲಕ ಸ್ವೀಕರಿಸಲಾಗುವ ಕೊನೆಯ ದಿನಾಂಕ 17.12.2024 ರಂದು ಸಂಜೆ 6.00 ಗಂಟೆ.

ಜನರಲ್ ಮ್ಯಾನೇಜರ್
ಸಾಮಾನ್ಯ ಆಡಳಿತ ಇಲಾಖೆ

CBC 15228/12/0008/2425

ಬೆಂಗಳೂರು ವಿಶ್ವವಿದ್ಯಾಲಯ

ಕುಲಸಚಿವರ ಕಛೇರಿ, ಜ್ಞಾನಭಾರತಿ, ಬೆಂಗಳೂರು – 560056.

ಸಂ. ಬಿಯು/ಇ–ಆಡಳಿತ/ಟೆಂಡರ್–ಜಾಹಿರಾತು–26/2024–25 ದಿನಾಂಕ: 02–12–2024

ಇ–ಟೆಂಡರ್‌ಗಳಿಗಾಗಿ ಆಹ್ವಾನ ಪ್ರಕಟಣೆ

ಬೆಂಗಳೂರು ವಿಶ್ವವಿದ್ಯಾಲಯದಿಂದ ಈ ಕೆಳಕಂಡ ಟೆಂಡರ್‌ಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದೊರಕುತ್ತವೆ. ಬಿಡ್ ದಾಖಲೆಗಳನ್ನು https://kppp.karnataka.gov.in ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕು. ಟೆಂಡರ್ ನಲ್ಲಿ ಸೂಚಿಸಲಾದ ಸಮಯ ವೇಳಾಪಟ್ಟಿಗೆ ಬದ್ಧರಾಗಿರಲು ಬಿಡ್‌ದಾರರಲ್ಲಿ ವಿನಂತಿಸಲಾಗಿದೆ.

ಕ್ರ.ಸಂ	ಟೆಂಡರ್‌ಗಳ ವಿವರ :
1	ಆಡಳಿತಾತ್ಮಕ ಕಛೇರಿಯಲ್ಲಿನ, ಮೊದಲ ಮಹಡಿಯಲ್ಲಿರುವ ಸಿಂಡಿಕೇಟ್ ಸಭಾಂಗಣಕ್ಕೆ ಡಿಜಿಟಲ್ ಕಾನ್ಫರೆನ್ಸ್ ಸಿಸ್ಟಮ್‌ನ ಪೂರೈಕೆ ಮತ್ತು ಅಳವಡಿಕೆ.
2	ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಔಷಧಗಳ ಪೂರೈಕೆ (ಕಾಲ್–2).
3	ಸೂಕ್ಷ್ಮ ಜೀವವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಣಿ ಸಂಸ್ಕರಣಾ ಕೊಠಡಿಯಲ್ಲಿ ಹಾನಿಗೊಳಗಾದ ಬಾಗಿಲುಗಳ ಬದಲಾವಣೆ, ಪೇಂಟಿಂಗ್ ಮತ್ತು ಮೊದಲ ಮಹಡಿಯಲ್ಲಿ ಎಲೆಕ್ಟ್ರಿಕಲ್ ರಿಪೇರಿ ಕೆಲಸಗಳನ್ನು ಒದಗಿಸುವ ಬಗ್ಗೆ.
4	ಜ್ಞಾನ ಭಾರತಿ ಆವರಣದಲ್ಲಿರುವ ಡೇ ಕೇರ್ ಸೆಂಟರ್‌ಗೆ ವಾಟರ್ ಪ್ರೂಫಿಂಗ್ ಮತ್ತು ಇತರ ದುರಸ್ತಿ ಕಾರ್ಯಗಳನ್ನು ಒದಗಿಸುವುದು.
5	ಬೆಂಗಳೂರು ವಿಶ್ವವಿದ್ಯಾಲಯದ ಕ್ಯಾಂಪಸ್ ವೈಡ್ ನೆಟ್‌ವರ್ಕಿಂಗ್ (CWN)ನ ವಾರ್ಷಿಕ ನಿರ್ವಹಣೆ.

DIPR/CP/3567/Zen/2024-25 — ಸಹಿ/– ಕುಲಸಚಿವರು

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222 ಇ–ಮೇಲ್: sitodirector@gmail.com

ಸಂಖ್ಯೆ: SGITO/e-Auction/FD/17/2024-25 — ದಿನಾಂಕ: 02.12.2024

ಇ–ಆಕ್ಷನ್ ಪ್ರಕಟಣೆ

ವಿಷಯ: ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ವಿವಿಧ ಬಾಬ್ತಿನ ಮೊತ್ತವನ್ನು ಒಂದು ವರ್ಷದ ಅವಧಿಗೆ ಇ–ಆಕ್ಷನ್ ಮೂಲಕ ನಿಶ್ಚಿತ ಠೇವಣಿ / **Non- Callable** ನಲ್ಲಿ ತೊಡಗಿಸಲು ಇ–ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ವಿವಿಧ ಬಾಬ್ತಿನ ಮೊತ್ತಗಳಿಗೆ ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ ಕೆಪಿಪಿಪಿ ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ. ಮುಖ್ಯ ಕಚೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಆಹ್ವಾನಿಸಲಾಗಿದೆ. ಮೊತ್ತಗಳ ವಿವರ ಕೆಳಕಂಡಂತಿದೆ.

1) **ರೂ.18,75,75,329–00** (ರೂಪಾಯಿ ಹದಿನೆಂಟು ಕೋಟಿ ಎಪ್ಪತ್ತೈದು ಲಕ್ಷದ ಎಪ್ಪತ್ತೈದು ಸಾವಿರದ ಮುನ್ನೂರ ಇಪ್ಪತ್ತೊಂಭತ್ತು ಮಾತ್ರ) **(Non-callable)**
2) **ರೂ.1,07,33,924–00** (ರೂಪಾಯಿ ಒಂದು ಕೋಟಿ ಏಳು ಲಕ್ಷದ ಮೂವತ್ಮೂರು ಸಾವಿರದ ಒಂಭೈನೂರ ಇಪ್ಪತ್ನಾಲ್ಕು ಮಾತ್ರ) **(Non-callable)**

ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://kppp.karnataka.gov.in/)** ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **17.12.2024** ಸಂಜೆ 4:00 ರೊಳಗಾಗಿ. ಹೆಚ್ಚಿನ ವಿವರಗಳಿಗಾಗಿ ಮುಖ್ಯ ಆಡಳಿತಾಧಿಕಾರಿಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು,
ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ

ಡಿ.ಐ.ಪಿ.ಆರ್/ಎಸ್‌ಐ/3564/2024–25

₹4,250 ಕೋಟಿ ತೆರಿಗೆ ಸಂಗ್ರಹ, ಆರ್ಥಿಕ ವರ್ಷದಲ್ಲಿ ₹5,210 ಕೋಟಿ ಗುರಿ: ತುಷಾರ್

ಆಸ್ತಿ ತೆರಿಗೆ ಬಾಕಿ: ಹರಾಜಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆ ಮುಕ್ತಾಯವಾಗಿದ್ದು, ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಆಸ್ತಿ ತೆರಿಗೆ ಪಾವತಿ ಮಾಡದಿದ್ದವರಿಗೆ ಮೊದಲು ನೋಟಿಸ್ ಜಾರಿ ಮಾಡಲಾಗುತ್ತದೆ. ಆ ಅವಧಿಯಲ್ಲೂ ಪಾವತಿ ಮಾಡದಿದ್ದರೆ, ಬೀಗಮುದ್ರೆ ಹಾಕಿ ಮತ್ತೊಮ್ಮೆ ಗಡುವು ನೀಡಲಾಗುತ್ತದೆ. ಅದನ್ನೂ ಮೀರಿದರೆ ಆಸ್ತಿ ಮುಟ್ಟುಗೋಲು, ಹರಾಜು ಹಾಕಲು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಸುದ್ದಿಗಾರರಿಗೆ ಸೋಮವಾರ ಮಾಹಿತಿ ನೀಡಿದರು.

ಬಿಬಿಎಂಪಿ ಸುದ್ದಿ

ಒಟಿಎಸ್ ಯೋಜನೆಯ ಕೊನೆಯ ವಾರದಲ್ಲಿ ಸುಮಾರು ₹400 ಕೋಟಿ ತೆರಿಗೆ ಸಂಗ್ರಹವಾಗಿದೆ. ಮುಂದಿನ ತಿಂಗಳಲ್ಲಿ ಆರ್ಥಿಕ ವರ್ಷದ ಗುರಿ ₹5,210 ಕೋಟಿಯನ್ನು ಸಾಧಿಸಲು ಪ್ರಯತ್ನಿಸಲಾಗುತ್ತದೆ ಎಂದರು.

ಫೆಂಜಲ್ ಚಂಡಮಾರುತದ ಪರಿಣಾಮ ನಗರದಲ್ಲಿ ಮಳೆಯಾಗುತ್ತಿದ್ದು, ರಸ್ತೆ ಗುಂಡಿಗಳನ್ನು ಮುಚ್ಚಲು ಸಮಸ್ಯೆಯಾಗುತ್ತಿದೆ. ಮಳೆ ನಿಂತ ಕೂಡಲೆ, ‘ಹಾಟ್ ಮಿಕ್ಸ್ ಪ್ಲಾಂಟ್’ನಿಂದ ಹೆಚ್ಚು ಡಾಂಬರನ್ನು ಪಡೆದು ಶೀಘ್ರಗತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು. ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಡಾ. ಕೆ. ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ವಿನೋತ್ ಪ್ರಿಯಾ, ಸತೀಶ್, ಅರ್ಚನಾ, ರಮೇಶ್, ಗಿರೀಶ್, ಕರೀಗೌಡ, ರಮ್ಯಾ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

ಇ-ಖಾತಾಗೆ ಹೆಚ್ಚುವರಿ ಎಆರ್‌ಒ

ಬಿಬಿಎಂಪಿ ವ್ಯಾಪ್ತಿಯ ಎಲ್ಲ ಆಸ್ತಿಗಳಿಗೆ ಒಂದು ವಾರದಲ್ಲಿ ಇ-ಖಾತಾಗಳನ್ನು ವಿತರಿಸುವ ಉದ್ದೇಶದಿಂದ ಹೆಚ್ಚು ಸಹಾಯಕ ಕಂದಾಯ ಅಧಿಕಾರಿಗಳನ್ನು (ಎಆರ್‌ಒ) ನಿಯೋಜಿಸಿಕೊಳ್ಳಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ವಲಯ ಆಯುಕ್ತರಿಗೆ ಸೂಚಿಸಿದ್ದಾರೆ.

ಸೋಮವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ಎಆರ್‌ಒಗಳ ಲಾಗಿನ್‌ನಲ್ಲಿ ಬಾಕಿಯಿರುವ ಇ-ಖಾತಾ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ವಲಯವಾರು ಹೆಚ್ಚುವರಿ ಎಆರ್‌ಒಗಳನ್ನು ನಿಯೋಜಿಸಿಕೊಳ್ಳಬೇಕು’ ಎಂದರು.

ಇ-ಖಾತಾ ವೆಬ್‌ಸೈಟ್‌ಗೆ 72.96 ಲಕ್ಷ ಹಿಟ್‌ಗಳು ಬಂದಿದ್ದು, 6 ಲಕ್ಷ ಕರಡು ಇ-ಖಾತಾ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಇದುವರೆಗೆ 21,369 ಅಂತಿಮ ಇ-ಖಾತಾ ನೀಡಲಾಗಿದ್ದು, ಎಆರ್‌ಒಗಳ ಲಾಗಿನ್‌ನಲ್ಲಿ ಸುಮಾರು 14 ಸಾವಿರ ಅರ್ಜಿಗಳು ಬಾಕಿ ಇವೆ. ಅವುಗಳನ್ನು ಶೀಘ್ರ ವಿಲೇವಾರಿ ಮಾಡಬೇಕು ಎಂದು ಸೂಚಿಸಿದರು.

ತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ

ಬೆಂಗಳೂರು: ನಗರದಲ್ಲಿ ತ್ಯಾಜ್ಯ ಸಾಗಣೆ ಮಾಡುವ ವಾಹನಗಳ ಚಾಲಕರು ಹಾಗೂ ವಾಹನಗಳಿಗೆ ಕಸ ತುಂಬುವ ಸಿಬ್ಬಂದಿಯ ಮುಷ್ಕರದಿಂದ ಕೆಲವು ಭಾಗಗಳಲ್ಲಿ ತ್ಯಾಜ್ಯ ವಿಲೇವಾರಿಗೆ ಸಮಸ್ಯೆಯಾಗಿದೆ.

ನೇರ ಪಾವತಿ ವ್ಯವಸ್ಥೆಯಡಿ (ಡಿಪಿಎಸ್) ತಮಗೆ ವೇತನ ಪಾವತಿ ಮಾಡಬೇಕು ಎಂದು ಆಗ್ರಹಿಸಿ ಚಾಲಕರು ಹಾಗೂ ತ್ಯಾಜ್ಯ ತುಂಬುವ ಸಿಬ್ಬಂದಿ ಸೋಮವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದರು.

ಪೂರ್ವ ವಲಯದಲ್ಲಿ ಅತಿಹೆಚ್ಚು ಜನರು ಪ್ರತಿಭಟನೆಯಲ್ಲಿ ತೊಡಗಿದ್ದರಿಂದ ತ್ಯಾಜ್ಯ ಸಾಗಣೆಗೆ ಸ್ಥಗಿತಗೊಂಡಿತ್ತು. ದಕ್ಷಿಣ ಹಾಗೂ ಪೂರ್ವ ವಲಯದ ಕೆಲವು ವಾರ್ಡ್‌ಗಳಲ್ಲೂ ಕಸದ ವಾಹನಗಳು ಸಂಚರಿಸಲಿಲ್ಲ.

‘ಚಾಲಕರು ಹಾಗೂ ತ್ಯಾಜ್ಯ ತುಂಬುವ ಸಿಬ್ಬಂದಿಯ ಬೇಡಿಕೆ ಕಾನೂನಡಿ ಬರಲಿದ್ದು, ಅದಕ್ಕಾಗಿ ನೀತಿ ರಚಿಸಬೇಕಾಗುತ್ತದೆ. ಆದರೆ, ಅವರಿಗೆ ಸರಿಯಾದ ಸಮಯಕ್ಕೆ ವೇತನ ಪಾವತಿಸುವಂತೆ ಗುತ್ತಿಗೆದಾರರಿಗೆ ಪಾಲಿಕೆ ತಾಕೀತು ಮಾಡಬಹುದು. ಎಲ್ಲ ರೀತಿಯ ರಕ್ಷಣಾ ಉಪಕರಣಗಳು, ಭತ್ಯೆ, ವಿಮೆಯನ್ನು ಏಜೆನ್ಸಿಗಳಿಂದ ಕೊಡಿಸಬಹುದು’ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಮಾಹಿತಿ ನೀಡಿದರು.

ಕಾನೂನು ವಿಷಯ: ‘ನಗರದಲ್ಲಿ ಗುತ್ತಿಗೆದಾರರು ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದಾರೆ. ಬಿಬಿಎಂಪಿ ವತಿಯಿಂದ ಚಾಲಕರು ಸೇರಿದಂತೆ ಇತರೆ ಸಿಬ್ಬಂದಿಯನ್ನು ಪಡೆದುಕೊಂಡಿರುವುದಿಲ್ಲ. ಇದು ಕಾನೂನಾತ್ಮಕ ವಿಷಯವಾಗಿದ್ದು, ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯಕ್ತ ತುಷಾರ್ ಗಿರಿನಾಥ್ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಸಮಗ್ರ ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆಯನ್ನು ನಗರದಲ್ಲಿ ಜಾರಿಗೆ ತರಲಾಗುತ್ತಿದ್ದು, ಅದು ಜಾರಿಯಾದರೆ ಹಲವು ರೀತಿಯ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ’ ಎಂದು ಹೇಳಿದರು.

‘ಅಪಾರ್ಟ್‌ಮೆಂಟ್ ನಿವಾಸಿಗಳು ಅಲ್ಲಿನ ಘನತ್ಯಾಜ್ಯವನ್ನು ಖಾಸಗಿಯವರ ಮೂಲಕ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಿದರೆ ಯಾವುದೇ ಸಮಸ್ಯೆ ಇಲ್ಲ. ಅವರು ಕಸವನ್ನು ನಮ್ಮ ಆಟೋಗಳಿಗೆ ನೀಡುವುದರಿಂದರೆ ಶುಲ್ಕ-ದಂಡ ವಿಧಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಷಡ್ಯಂತ್ರ ನಡೆಸಿದ್ದಕ್ಕೆ ದಾಖಲೆಗಳಿವೆ: ನಾರಾಯಣ ಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ನನ್ನ ವಿರುದ್ಧ ಷಡ್ಯಂತ್ರ ನಡೆಸಿದ್ದರು. ಅವರು ಷಡ್ಯಂತ್ರ ನಡೆಸಿರುವುದನ್ನು ಸಾಬೀತುಪಡಿಸುವ ದಾಖಲೆಗಳಿವೆ’ ಎಂದು ಮಾಜಿ ಕಾರ್ಪೊರೇಟರ್ ಮಂಜುಳಾ ಅವರ ಪತಿ ಲಗ್ಗೆರೆ ನಾರಾಯಣ ಸ್ವಾಮಿ ಹೇಳಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ನನ್ನ ಮೇಲೆ ಅಶ್ಲೀಲ ವೀಡಿಯೊ ಚಿತ್ರೀಕರಣಕ್ಕೂ ಶಾಸಕರು ಮುಂದಾಗಿದ್ದರು’ ಎಂದು ಆರೋಪಿಸಿದರು.

‘ಬಿಜೆಪಿ ಶಾಸಕರೊಬ್ಬರ ವಿಡಿಯೊ ಹೊರಬಂದ ಸಮಯದಲ್ಲೇ ನನ್ನನ್ನೂ ಅಂತಹದ್ದೇ ಪ್ರಕರಣದಲ್ಲಿ ಸಿಲುಕಿಸಲು ಯತ್ನಿಸಿದ್ದರು. ಕೊನೆಯಲ್ಲಿ ಎಲ್ಲ ಮರೆತು ಚುನಾವಣೆ ವೇಳೆ ಅವರ ಪರವಾಗಿ ಕೆಲಸ ಮಾಡಿದ್ದೆ’ ಎಂದರು.

‘ಶಾಸಕರಾಗಿ ‘ಹನಿ ಟ್ರ್ಯಾಪ್’ ಮಾಡುವ ಕೆಲಸ ಮಾಡಿದ್ದರು. ಮುಖ್ಯಮಂತ್ರಿ ಆಗಿದ್ದ ಒಬ್ಬರಿಗೆ ‘ಹನಿ ಟ್ರ್ಯಾಪ್’ ಮಾಡಿದ ಮಾಹಿತಿಯಿದೆ’ ಎಂದು ನಾರಾಯಣ ಸ್ವಾಮಿ ಹೇಳಿದರು.

‘ಮುನಿರತ್ನ ಅವರ ಮಾತು ಕೇಳದವರ ವಿರುದ್ಧ ಕೊಲೆ ಪ್ರಕರಣ ದಾಖಲು ಮಾಡಲಾಗುತ್ತಿತ್ತು. ನನ್ನ ವಿರುದ್ಧವೂ ಕೊಲೆ ಯತ್ನ ಪ್ರಕರಣ ದಾಖಲಿಸಲು ಸಂಚು ರೂಪಿಸಲಾಗಿತ್ತು’ ಎಂದು ದೂರಿದರು. ಈ ಆರೋಪಕ್ಕೆ ಸಂಬಂಧಿಸಿದಂತೆ ನಂದಿನಿ ಲೇಔಟ್ ಠಾಣೆಗೆ ಮುನಿರತ್ನ ಅವರ ವಿರುದ್ಧ ಲಗ್ಗೆರೆ ನಾರಾಯಣಸ್ವಾಮಿ ದೂರು ನೀಡಿದ್ದು ಎಫ್‌ಐಆರ್ ದಾಖಲಾಗಿದೆ.

ಎಂಜಿನಿಯರಿಂಗ್ ಕಾಮಗಾರಿ: ರೈಲು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಬೆಳ್ಳಂದೂರು ಯಾರ್ಡ್ ಪುನರ್‌ನಿರ್ಮಾಣಕ್ಕಾಗಿ ಎಂಜಿನಿಯರಿಂಗ್ ಕಾಮಗಾರಿ ನಡೆಸಲು ಡಿ.5ರಂದು ಎರಡು ರೈಲುಗಳ ಸಂಚಾರ ರದ್ದುಗೊಳ್ಳಲಿದೆ.

ಯಶವಂತಪುರ-ಹೊಸೂರು ಮೆಮು ರೈಲು ಮತ್ತು ಹೊಸೂರು-ಯಶವಂತಪುರ ಮೆಮು ವಿಶೇಷ ರೈಲುಗಳ ಸಂಚಾರ ಅಂದು ಇರುವುದಿಲ್ಲ.

ಕೊಯಮತ್ತೂರು-ಲೋಕಮಾನ್ಯ ತಿಲಕ್ ಟರ್ಮಿನಸ್ ಎಕ್ಸ್ ಪ್ರೆಸ್ ರೈಲು ಮಾರ್ಗ ಮಧ್ಯದಲ್ಲಿ 90 ನಿಮಿಷ, ಯಶವಂತಪುರ-ಹೊಸೂರು ಮೆಮು ವಿಶೇಷ ರೈಲು ಮಾರ್ಗ ಮಧ್ಯದಲ್ಲಿ 60 ನಿಮಿಷ ಮತ್ತು ಯಶವಂತಪುರ-ಸೇಲಂ ಎಕ್ಸ್‌ಪ್ರೆಸ್ ರೈಲು ಮಾರ್ಗ ಮಧ್ಯದಲ್ಲಿ 10 ನಿಮಿಷಗಳ ನಿಯಂತ್ರಣಗೊಳ್ಳಲಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ನೆಲಮಂಗಲ ನಗರಸಭೆಯ ಅಧ್ಯಕ್ಷೆ ಪೂರ್ಣಿಮಾ ಸುಗ್ಗರಾಜು, ಸದಸ್ಯ ಎನ್.ಗಣೇಶ್, ಮುಖಂಡ ಕಪಾಲಿ ವೆಂಕಟೇಶ್, ಸದಸ್ಯ ಶಾರದಾ ಉಮೇಶ್, ಭಾರತಿ ಬಾಯಿ ನಾರಾಯಣರಾವ್ ಅವರು ಶಾಸಕ ಎನ್.ಶ್ರೀನಿವಾಸ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಸೇರಿದರು

ಕಾಂಗ್ರೆಸ್‌ಗೆ ಬಿಜೆಪಿ, ಜೆಡಿಎಸ್ ಸದಸ್ಯರು

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಗರಸಭೆ ಅಧ್ಯಕ್ಷೆ ಬಿಜೆಪಿಯ ಪೂರ್ಣಿಮಾ ಸುಗ್ಗರಾಜು ಸೇರಿದಂತೆ ನಗರ ಸಭೆಯ ನಾಲ್ವರು ಸದಸ್ಯರು ಶಾಸಕ ಎನ್. ಶ್ರೀನಿವಾಸ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದರು.

ಬಿಜೆಪಿಯ ಎನ್ ಗಣೇಶ್, ಜೆಡಿಎಸ್ ಪಕ್ಷದ ಶಾರದಾ ಉಮೇಶ್, ಭಾರತಿ ಬಾಯಿ ನಾರಾಯಣರಾವ್ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡವರು. ಶಾಸಕ ಎನ್. ಶ್ರೀನಿವಾಸ್, ಎಲ್ಲರಿಗೂ ಪಕ್ಷದ ಬಾವುಟ ನೀಡಿ, ಸ್ವಾಗತಿಸಿದರು. ನಂತರ ಮಾತನಾಡಿದ ಅವರು, ‘ನೆಲಮಂಗಲದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಎಲ್ಲರೂ ಕಾಂಗ್ರೆಸ್ ಸೇರುತ್ತಿದ್ದಾರೆ. ಇದು ಸಂತಸ ತಂದಿದೆ. ಇನ್ನಷ್ಟು ಕೆಲಸ ಮಾಡಲು ಹೆಚ್ಚಿನ ಶಕ್ತಿ ಬಂದಂತಾಗಿದೆ’ ಎಂದರು.

ಇದೇ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಕಪಾಲಿ ವೆಂಕಟೇಶ್, ಕೋಳ ಉಮೇಶ್, ಟಿ.ಬೇಗೂರು ಗ್ರಾಮ ಪಂಚಾಯಿತಿ ಸದಸ್ಯರಾದ ಗಣೇಶಪ್ಪ, ಜಯರಾಮಯ್ಯ, ಬೂದಿಹಾಳ್ ಪಂಚಾಯತಿ ಸದಸ್ಯ ವೈ.ಟಿ. ಆಂಜಿನಪ್ಪ ಅವರೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ನಿಗಮ, ಮಂಡಳಿಗಳಿಗಿಲ್ಲ ಬಹುಮಹಡಿ ಕಟ್ಟಡ: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗಮ, ಮಂಡಳಿ, ಪ್ರಾಧಿಕಾರಗಳಿಗೆ ಬಹುಮಹಡಿ ಕಟ್ಟಡದಲ್ಲಿ ಕೊಠಡಿ ನೀಡಬಾರದು. ಈಗಾಗಲೇ ನೀಡಿರುವ ಕೊಠಡಿಗಳನ್ನು ತೆರವುಗೊಳಿಸಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಬಹುಮಹಡಿ ಕಟ್ಟಡದಲ್ಲಿದ್ದ ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸೇರಿದ ಮೂರು ಕೊಠಡಿಗಳನ್ನು ನಿಗಮ, ಮಂಡಳಿಗಳ ಅಧ್ಯಕ್ಷರು, ಪದಾಧಿಕಾರಿಗಳ ಕಚೇರಿಗೆ ನೀಡಲಾಗಿದೆ. ಅನುಮತಿ ಪಡೆಯದೆ ಆ ಕಟ್ಟಡಗಳ ದುರಸ್ತಿ, ನವೀಕರಣ ಕಾರ್ಯ ಕೈಗೊಳ್ಳಲಾಗಿದೆ. ಅವುಗಳನ್ನು ತೆರವುಗೊಳಿಸಬೇಕು ಎಂದು ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರ ಸಚಿವಾಲಯ ವ್ಯಾಪ್ತಿಯ ಕಟ್ಟಡಗಳಾದ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡ ವ್ಯಾಪ್ತಿಯಲ್ಲಿ ಸಚಿವಾಲಯದ ಕಚೇರಿಗಳನ್ನು ಹೊರತುಪಡಿಸಿ ಇತರೆ ಇಲಾಖೆ, ನಿಗಮ ಮಂಡಳಿಗಳ ಕಚೇರಿಗಳಿಗೆ ಸ್ಥಳಾವಕಾಶ ಕಲ್ಪಿಸಬಾರದು ಎಂದು ಮನವಿಯಲಿ ಹೇಳಿದ್ದರು.

ಮನವಿಯನ್ನು ಪರಿಗಣಿಸಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಅನುಮತಿ ಪಡೆಯದೇ ನಿಗಮ, ಮಂಡಳಿಗಳಿಗೆ ಸ್ಥಳಾವಕಾಶ ಕಲ್ಪಿಸಿದ, ನವೀಕರಣ ಕಾಮಗಾರಿಗಳನ್ನು ಕೈಗೊಂಡ ಅಧಿಕಾರಿಗಳ ಕ್ರಮವನ್ನು ನಿಯಮಬಾಹಿರ ಎಂದಿದ್ದು, ತಕ್ಷಣ ತೆರವುಗೊಳಿಸಲು ಆದೇಶಿಸಿದೆ. ಇನ್ನು ಮುಂದೆ ನಿಗಮ, ಮಂಡಳಿ, ಆಯೋಗ, ಪ್ರಾಧಿಕಾರ, ಇತರೆ ಸಂಸ್ಥೆಗಳ ಕಚೇರಿಗಳಿಗೆ ಉಪಯೋಗಿಸಬಾರದು ಎಂದು ಕಾರ್ಯದರ್ಶಿ ಜಿ.ಸತ್ಯವತಿ ಸೂಚಿಸಿದ್ದಾರೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ

ವಿಶ್ವ ವಿಕಲಚೇತನರ ದಿನಾಚರಣೆ - 2024

ದಿನಾಂಕ : 03.12.2024ನೇ ಮಂಗಳವಾರ, ಸಮಯ : ಬೆಳಿಗ್ಗೆ 10:00 ಗಂಟೆಗೆ
ಸ್ಥಳ : ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣ, ಸಂಪಂಗಿ ರಾಮನಗರ, ಕಸ್ತೂರಬಾ ರಸ್ತೆ, ಬೆಂಗಳೂರು
2024ರ ಘೋಷವಾಕ್ಯ : ಸಮಗ್ರ ಮತ್ತು ಸುಸ್ಥಿರ ಭವಿಷ್ಯಕ್ಕಾಗಿ ವಿಕಲಚೇತನ ವ್ಯಕ್ತಿಗಳಲ್ಲಿ ನಾಯಕತ್ವಕ್ಕೆ ಉತ್ತೇಜನ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ರಾಜ್ಯ ಸರ್ಕಾರದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

ರಾಜ್ಯ ಸರ್ಕಾರದ ವತಿಯಿಂದ ನಡೆಯುತ್ತಿರುವ ವಿಶೇಷ ಶಾಲೆಗಳು ಹಾಗೂ ಸಂಸ್ಥೆಗಳು
- ಬೌದ್ಧಿಕ ವಿಕಲಚೇತನರಿಗಾಗಿ ಅನುಪಾಲನಾ ಗೃಹ
- ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳು
- ಮಾನಸ ಕೇಂದ್ರಗಳು
- ಅಂಗವಿಕಲ ನೌಕರರ ಹಾಗೂ ತರಬೇತಾರ್ಥಿಗಳ ವಸತಿ ನಿಲಯಗಳು
- ಸರ್ಕಾರಿ ಬ್ರೈಲ್ ಮುದ್ರಣಾಲಯ
- ದೃಷ್ಟಿದೋಷವುಳ್ಳ ಮತ್ತು ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರ
- ಅಂಧ ಮತ್ತು ಶ್ರವಣದೋಷವುಳ್ಳ ಮಕ್ಕಳಿಗಾಗಿ ಸರ್ಕಾರಿ ವಸತಿ ಶಾಲೆಗಳು

ಎಲ್ಲಾ ವಿಧದ ವಿಕಲಚೇತನರಿಗೆ ಇರುವ ಯೋಜನೆಗಳು
- ವಿದ್ಯಾರ್ಥಿವೇತನ ಯೋಜನೆ
- ಪ್ರೋತ್ಸಾಹಧನ ಯೋಜನೆ
- ಶುಲ್ಕ ಮರುಪಾವತಿ ಯೋಜನೆ
- ಸಾಧನ ಸಲಕರಣೆ ಯೋಜನೆ
- ಬ್ಯಾಟರಿ ಚಾಲಿತ ಗಾಲಿ ಕುರ್ಚಿಗಳು
- ವೈದ್ಯಕೀಯ ಪರಿಹಾರ ನಿಧಿ ಯೋಜನೆ
- ಆಧಾರ ಸಾಲ ಯೋಜನೆ
- ನಿರುದ್ಯೋಗ ಭತ್ಯೆ ಯೋಜನೆ
- ವಿವಾಹ ಪ್ರೋತ್ಸಾಹಧನ ಯೋಜನೆ
- ಗ್ರಾಮೀಣ / ನಗರ ಪುನರ್ವಸತಿ ಯೋಜನೆ
- ಮರಣ ಪರಿಹಾರ ಧನ ಯೋಜನೆ
- ಸಾಧನೆ ಯೋಜನೆ
- ಪ್ರತಿಭೆ ಯೋಜನೆ

2011ರ ಜನಗಣತಿಯಂತೆ ರಾಜ್ಯದಲ್ಲಿ ಒಟ್ಟು 13,24,205 ವಿಕಲಚೇತನರಿರುತ್ತಾರೆ.

ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಇಲಾಖೆಯಿಂದ ಒಟ್ಟು 9,73,388 ವಿಕಲಚೇತನರಿಗೆ ಮಾಸಾಶನ ನೀಡಲಾಗುತ್ತಿದೆ.

ಈ ವರೆಗೆ ಅರ್ಹ ವಿಕಲಚೇತನರಿಗೆ 8,04,074 ವಿಶಿಷ್ಟ ಗುರುತಿನ ಚೀಟಿ (ಯುಡಿಐಡಿ) ನೀಡಲಾಗಿದೆ.

ನುಡಿದಂತೆ ನಡೆದಿದ್ದೇವೆ...
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಅನ್ನಭಾಗ್ಯ 10 kg | ಗೃಹಲಕ್ಷ್ಮಿ ₹2000 | ಗೃಹಜ್ಯೋತಿ ಪ್ರತಿ ಮನೆಗೆ 200 | ಯುವನಿಧಿ ₹3000 ₹1500

ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳಕರ್
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು ವಿಕಲಚೇತನರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭ.

ದೃಷ್ಟಿದೋಷ ಇರುವವರಿಗೆ ಯೋಜನೆಗಳು
- ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ
- ಬ್ರೈಲ್‌ಕಿಟ್ ಯೋಜನೆ
- ಶಿಶುಪಾಲನಾ ಭತ್ಯೆ ಯೋಜನೆ
- ಡಿಜಿಟಲ್ ಬುಕ್ ಬ್ಯಾಂಕ್ ಯೋಜನೆ

ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ (ರೆಟ್ರೋಫಿಟ್ಮೆಂಟ್ ಸಹಿತ) ಯೋಜನೆ

ಬೌದ್ಧಿಕ ವಿಕಲಚೇತನರಿಗೆ ಇರುವ ಯೋಜನೆಗಳು
- ವಿಕಲಚೇತನರ ಪೋಷಕರ ಜೀವ ವಿಮಾ ಯೋಜನೆ
- ನಿರಾಮಯ ವೈದ್ಯಕೀಯ ವಿಮಾ ಯೋಜನೆ
- ಅನುಪಾಲನಾ ಗೃಹಗಳು

ಆರೈಕೆದಾರರ ಭತ್ಯೆ
- ಮೆದುಳು ಪಾರ್ಶ್ವವಾಯು (Cerebral Palsy), ಮಸ್ಕುಲರ್ ಡಿಸ್ಟ್ರೋಫಿ (Muscular Distrophy), ಪಾರ್ಕಿನ್‌ಸನ್ ಖಾಯಿಲೆ (Parkinsons's Disease) ಮತ್ತು ಮಲ್ಟಿಪಲ್ ಸ್ಕ್ಲೆರೋಸಿಸ್ (Multiple Sclerosis) ಖಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳ ಆರೈಕೆ ಮಾಡುತ್ತಿರುವವರಿಗೆ 2024-25ನೇ ಸಾಲಿನಿಂದ ಪ್ರತಿ ಮಾಹೆ ರೂ.1,000/-ಗಳನ್ನು ಪ್ರೋತ್ಸಾಹ ಧನವನ್ನಾಗಿ ನೀಡಲಾಗುತ್ತಿದೆ.

ಶ್ರವಣದೋಷವುಳ್ಳವರಿಗೆ ಹೊಲಿಗೆ ಯಂತ್ರ ನೀಡುವ ಯೋಜನೆ

ರಾಜ್ಯ ಅನುದಾನದಲ್ಲಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು
- ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ
- ಆಟಿಸಂ ಮಕ್ಕಳ ಹಗಲು ಯೋಗ ಕ್ಷೇಮ ಕೇಂದ್ರಗಳು
- ಉದ್ಯೋಗಸ್ಥ ಅಂಗವಿಕಲ ಮಹಿಳೆಯರ/ವಿದ್ಯಾರ್ಥಿನಿಯರ ಮತ್ತು ತರಬೇತಾರ್ಥಿಗಳ ವಸತಿ ನಿಲಯಗಳು
- 0-4 ವರ್ಷದ ಶ್ರವಣದೋಷವುಳ್ಳ ಮಕ್ಕಳಿಗೆ ತಾಯಂದಿರ ಸಮೇತ ವಾಕ್ ತರಬೇತಿ ಯೋಜನೆ.
- 1982ರ ರಾಜ್ಯ ಅನುದಾನ ಸಂಹಿತೆಯಡಿ ವಿಶೇಷ ಶಾಲೆಗಳು
- ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳು

ಲೈವ್ ವೀಡಿಯೋಗಾಗಿ ಸ್ಕ್ಯಾನ್ ಮಾಡಿ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಡಾ. ಶಮ್ಲಾ ಇಕ್ಬಾಲ್ ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಶ್ರೀ ಟಿ. ರಾಘವೇಂದ್ರ, ಕ.ಆ.ಸೇ (ಸೂಪರ್ ಟೈಂ ಸ್ಕೇಲ್)
ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ
6ನೇ ಮಹಡಿ, ಮುಖ್ಯ ಗೋಪುರ ಹಾಗೂ ನೆಲಮಹಡಿ, ಪೋಡಿಯಂ ಬ್ಲಾಕ್ ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು - 560001

ಕ್ಷೇಮ ಕುಶಲ

ಹೃದ್ರೋಗದ ಮೊದಲ 'ಬಡಿತ'ಗಳು

ಡಾ. ಕಿರಣ್ ವಿ. ಎಸ್.

ಬಹುತೇಕ ಜನರಿಗೆ ಹೃದಯದ ಸಮಸ್ಯೆ ಎಂದಾಗ ಆಗುವಷ್ಟು ಆತಂಕ ಬೇರೆ ಅಂಗಗಳ ನೋವು ಮೂಡಿಸುವುದಿಲ್ಲ. ಇದಕ್ಕೆ ಪ್ರಮುಖ ಕಾರಣ ಹೃದ್ರೋಗಗಳ ವ್ಯಾಪ್ತಿ ಮತ್ತು ಸಮಾಜದಲ್ಲಿ ಅದರ ಕುರಿತಾಗಿ ಹರಡಿರುವ ಮಾಹಿತಿ ಹಾಗೂ ಮಿಥ್ಯೆಗಳು. ಅನಾರೋಗ್ಯದ ಪ್ರತಿಯೊಂದು ಚಿಹ್ನೆಗೂ ಹಲವು ಕಾರಣಗಳು ಇರುತ್ತವೆ. ಉದಾಹರಣೆಗೆ, ಹೃದಯದ ಬೇನೆಯ ವೇಳೆ ದವಡೆಯಲ್ಲೂ ನೋವು ಬರಬಹುದು ಎನ್ನುವುದು ಸತ್ಯ. ಆದರೆ ಅದು ಕೇವಲ ಹೃದಯ ಸಮಸ್ಯೆಯನ್ನು ಮಾತ್ರ ಸೂಚಿಸುತ್ತದೆ ಎಂದಲ್ಲ. ಅದಕ್ಕೆ ಕಾರಣ ಹುಳುಕುಹಲ್ಲುಗಳು, ವಸಡಿನ ಊತ, ದವಡೆಯ ಕೀಲಿನ ಸಮಸ್ಯೆಗಳು ಕೂಡ ಇರಬಹುದು. ಅಂತಹ ವೇಳೆಯಲ್ಲಿ ಇತರ ರೋಗಲಕ್ಷಣಗಳನ್ನು ಗಮನಿಸಿ, ಆದ್ಯತೆಗೆ ಅನುಸಾರವಾಗಿ ಅವುಗಳಿಗೆ ಪ್ರಾಮುಖ್ಯ ನೀಡುವುದು ವೈದ್ಯಕೀಯ ತರಬೇತಿಯ ಮಹತ್ವದ ಭಾಗ. ರೋಗಲಕ್ಷಣಗಳ ಬಗ್ಗೆ ಜನಸಾಮಾನ್ಯರಿಗೆ ಜಾಗೃತಿ ಇರಬೇಕು. ಆದರೆ ಅದನ್ನು ಆಧರಿಸಿ ಯಾರೂ ಸ್ವಯಂ ಚಿಕಿತ್ಸೆ ಮಾಡಿಕೊಳ್ಳಬಾರದು.

ಹೃದ್ರೋಗಗಳ ಪ್ರಮುಖ ಮುನ್ಸೂಚನೆ ಎದೆನೋವು. ಎದೆಯಲ್ಲಿ ಹೃದಯದ ಜೊತೆಗೆ ಶ್ವಾಸಕೋಶಗಳು, ಶ್ವಾಸನಾಳಗಳು, ರಕ್ತನಾಳಗಳು, ನರಗಳು, ಎದೆಗೂಡಿನ ಮಾಂಸಖಂಡಗಳು, ಎಲುಬುಗಳು, ಸ್ತನದ ಭಾಗ, ಚರ್ಮ ಎಲ್ಲವೂ ಇರುತ್ತವೆ. ಇವುಗಳ ಪೈಕಿ ಯಾವುದಕ್ಕೆ ಸಮಸ್ಯೆಯಾದರೂ ಎದೆನೋವು ಕಾಣಬಹುದು. ಹೀಗಾಗಿ ಎಲ್ಲ ಎದೆನೋವುಗಳೂ ಹೃದ್ರೋಗಗಳಲ್ಲ. ಹೃದ್ರೋಗದಿಂದ ಸಂಭವಿಸುವ ಎದೆಯ ಸಮಸ್ಯೆ ನೋವಿಗಿಂತ ಹೆಚ್ಚಾಗಿ ಭಾರದ ಅನುಭವ ಅಥವಾ ಎದೆಯನ್ನು ಯಾರೋ ಒತ್ತಿದಂತೆ ಭಾಸವಾಗುತ್ತದೆ. 'ಎದೆಯ ಮೇಲೆ ಆನೆ ನಿಂತಂತಾಯಿತು' ಎಂದು ಕೆಲವರು ಇದನ್ನು ಬಣ್ಣಿಸುತ್ತಾರೆ. ಇಂತಹ ಭಾರದ ಭಾವನೆ ಕೆಲವು ನಿಮಿಷಗಳ ವಿಶ್ರಾಮದ ನಂತರವೂ ಹಾಗೆಯೇ ಉಳಿದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ಕೆಲ ನಿಮಿಷಗಳಲ್ಲಿ ಸಂಕಟ ತಾನೇ ತಾನಾಗಿ ತಗ್ಗಿದರೆ ವೈದ್ಯರನ್ನು ಕಂಡು ವಿವರವಾಗಿ ತಪಾಸಣೆ ಮಾಡಿಸಬೇಕು. ಕಾರಣ ಯಾವುದೇ ಇದ್ದರೂ ಎದೆನೋವನ್ನು ನಿರ್ಲಕ್ಷಿಸಬಾರದು. ಈ ಪಟ್ಟಿಗೆ ಎದೆಯುರಿ, ಎಡಭುಜದ ನೋವು, ಎಡದವಡೆ ನೋವು, ಕತ್ತಿನ ಎಡಭಾಗದ ನೋವು, ಎಡಬದಿಯ ಬೆನ್ನಿನನೋವು – ಈ ಎಲ್ಲವೂ ಸೇರುತ್ತವೆ.

ತಲೆಸುತ್ತುವಿಕೆ, ಇಲ್ಲವೇ ಪ್ರಜ್ಞೆ ತಪ್ಪುವುದು ಹೃದ್ರೋಗದ ಮತ್ತೊಂದು ಮುನ್ಸೂಚನೆ. ಯಾವುದಾದರೂ ಕಾರಣಕ್ಕೆ ಹೃದಯ ದುರ್ಬಲವಾದಾಗ, ರಕ್ತವನ್ನು ಒತ್ತುವ ಅದರ ಸಾಮರ್ಥ್ಯ ನಶಿಸುತ್ತದೆ. ಆಗ ರಕ್ತದ ಒತ್ತಡ ಇಳಿದು, ಮಿದುಳಿಗೆ ತಲುಪುವ ರಕ್ತದ ಪ್ರಮಾಣ ಕಡಿಮೆಯಾಗುತ್ತದೆ. ಇದರಿಂದ ತಲೆಸುತ್ತು ಬರುತ್ತದೆ. ಹೀಗೆ ಮಿದುಳಿಗೆ ತಲುಪಬೇಕಾದ ರಕ್ತದ ಪ್ರಮಾಣ ತೀವ್ರವಾಗಿ ಇಳಿಮುಖವಾದಾಗ ಪ್ರಜ್ಞೆ ತಪ್ಪಬಹುದು. ಮಿದುಳಿನ ಕೆಲವು ಸಮಸ್ಯೆಗಳಲ್ಲೂ ಈ ಲಕ್ಷಣ ಕಾಣಬಹುದು.

ಸುಸ್ತು ಮತ್ತು ಆಯಾಸ ಎನುವುದು ಬಹಳ ಮಂದಿಯಲ್ಲಿ ಕಾಣುವ ಸಮಸ್ಯೆ. ಈ ಮುನ್ನ ಯಾವ ಕೆಲಸವನ್ನು ಸರಾಗವಾಗಿ ಮಾಡಲಾಗುತ್ತಿತ್ತೋ, ಅದನ್ನು ಮಾಡುವಾಗ ಸುಸ್ತು ಕಂಡು ಬರುವುದು ಹೃದಯ ಅಥವಾ ಶ್ವಾಸಕೋಶಗಳ ಸಮಸ್ಯೆಯ ಮುಖ್ಯ ಮುನ್ಸೂಚನೆ. ಉದಾಹರಣೆಗೆ, ಈ ಮುನ್ನ ನಾಲ್ಕು ಮಹಡಿಗಳ ಮೆಟ್ಟಿಲನ್ನು ಸರಾಗವಾಗಿ ಹತ್ತುತ್ತಿದ್ದ ವ್ಯಕ್ತಿಗೆ ಈಗ ಎರಡು ಮಹಡಿ ಹತ್ತುವಷ್ಟರಲ್ಲೇ ಏದುಸಿರು ಬಂದು ಆಯಾಸದ ಅನುಭವ ಆಗುವುದನ್ನು ನಿರ್ಲಕ್ಷ್ಯ ಮಾಡುವಂತಿಲ್ಲ.



ಕಾರಣವಿಲ್ಲದೆ ಅತಿಯಾಗಿ ಬೆವರುವುದು ಹೃದ್ರೋಗದ ಮತ್ತೊಂದು ಮುನ್ಸೂಚನೆ. ಹೃದಯ ದುರ್ಬಲವಾದಾಗ ಅದು ನರವ್ಯೂಹವನ್ನು ಪ್ರಚೋದಿಸುತ್ತದೆ. ಅಂತಹ ವೇಳೆ ಹೀಗೆ ಅತಿಯಾದ ಬೆವರುವಿಕೆ ಆಗುತ್ತದೆ. ಅಕಾರಣವಾಗಿ ಆಗುವ ಇಂತಹ ಬೆವರುವಿಕೆ ಕೆಲವೊಮ್ಮೆ ಹಾರ್ಮೋನುಗಳ ಏರುಪೇರಿನಿಂದಲೂ ಆಗಬಹುದಾದರೂ, ವಿನಾ ಕಾರಣ ಆಗುವ ಬೆವರುವಿಕೆಯನ್ನು ತಪಾಸಣೆ ಮಾಡುವುದು ಸರಿಯಾದ ದಾರಿ.

ಪಾದಗಳ ಊತ ಹೃದಯಸಮಸ್ಯೆಯ ಮತ್ತೊಂದು ಮುನ್ಸೂಚನೆ. ಒಂದೇ ಸಮನೆ 'ಪಂಪ್' ಮಾದರಿಯಲ್ಲಿ ಕೆಲಸ ಮಾಡುವ ಹೃದಯ ಒಂದು ವೇಳೆ ದುರ್ಬಲವಾದರೆ ಪಂಪ್‌ನ ಸಾಮರ್ಥ್ಯ ಕ್ಷೀಣಿಸುತ್ತದೆ. ಆಗ ರಕ್ತನಾಳಗಳಲ್ಲಿ ರಕ್ತ ಹಾಗೆಯೇ ಉಳಿದುಬಿಡುತ್ತದೆ. ನಿಂತಿರುವ ವೇಳೆ ಕಾಲುಗಳಲ್ಲಿ ಜಮಾವಣೆಯಾದ ರಕ್ತವು ಪಾದಗಳನ್ನು ಊದಿಸುತ್ತದೆ. ಅಂತೆಯೇ, ಮಲಗಿರುವ ವ್ಯಕ್ತಿಯಲ್ಲಿ ಇಂತಹ ಊತ ಬೆನ್ನಿನಲ್ಲಿ ಕಾಣಬಹುದು. ಮೂತ್ರಪಿಂಡಗಳ, ರಕ್ತನಾಳಗಳ ಸಮಸ್ಯೆಯಲ್ಲೂ ಪಾದಗಳ ಊತ ಕಾಣುತ್ತದೆ. ಹೀಗಾಗಿ, ಪಾದಗಳ ಊತ ಕಂಡಾಗ ವೈದ್ಯರನ್ನು ಸಂಪರ್ಕಿಸುವುದು ಸೂಕ್ತ.

ನಾವು ಹೆಚ್ಚು ಶ್ರಮದ ಕೆಲಸ ಮಾಡಿದಾಗ, ಗಾಬರಿಯಾದಾಗ ಹೃದಯದ ಬಡಿತದ ಅನುಭವ ಆಗುವುದು ಸಹಜ. ಆದರೆ ಇಂತಹ ಸಂದರ್ಭಗಳಿಲ್ಲದೆ ಸುಮ್ಮನೆ ಕುಳಿತಿರುವ, ವಿಶ್ರಾಂತಿ ಪಡೆಯುತ್ತಿರುವ ವ್ಯಕ್ತಿಯಲ್ಲಿ ಏಕಾಏಕಿ ಹೃದಯದ ಬಡಿತದ ಅನುಭವವಾಗುವುದು ಅಸಹಜ. ಕೆಲವರಲ್ಲಿ ಈ ಬಡಿತದ ಜೊತೆಗೆ ತಲೆಸುತ್ತು, ಗಾಬರಿ, ಪ್ರಜ್ಞೆತಪ್ಪುವಿಕೆ ಕೂಡ ಆಗಬಹುದು. ಇದು ಹೃದಯಸಮಸ್ಯೆಯ ಬಹು ಮುಖ್ಯ ಮುನ್ಸೂಚನೆ. ಸಾಧ್ಯವಾದಷ್ಟು ಬೇಗ ಇದಕ್ಕೆ ಚಿಕಿತ್ಸೆ ಪಡೆಯಬೇಕು.

ಆರೋಗ್ಯದ ಲಯ ತಪ್ಪಿದ ಶರೀರ ಅನೇಕ ಸೂಚನೆಗಳನ್ನು ನೀಡುತ್ತದೆ. ಇಂತಹ ಮುನ್ಸೂಚನೆಗಳನ್ನು ಅರಿಯುವುದು ಆರೋಗ್ಯದ ದೃಷ್ಟಿಯಿಂದ ಶ್ರೇಯಸ್ಕರ. ಹೃದಯಸಂಬಂಧಿ ಎನ್ನಲಾಗುವ ಹಲವಾರು ರೋಗಲಕ್ಷಣಗಳು ಕೆಲವೊಮ್ಮೆ ಬೇರೆ ಅಂಗಗಳ ಕಾಯಿಲೆಯಿಂದಲೂ ಬರಬಹುದಾದರೂ, ಇಂತಹ ಮುನ್ಸೂಚನೆಗಳು ಕಂಡಾಗ ತಪಾಸಣೆ ಮಾಡಿಸಿ, ಕಾರಣವನ್ನು ಪತ್ತೆ ಮಾಡಿ, ಅದಕ್ಕೆ ಚಿಕಿತ್ಸೆ ಪಡೆಯುವುದು ಅತ್ಯಗತ್ಯ. ಪ್ರತಿಯೊಂದು ಸಮಸ್ಯೆಗೂ ಸೀದಾ ಹೃದ್ರೋಗತಜ್ಞರನ್ನೇ ಕಾಣಬೇಕೆಂದಿಲ್ಲ, ಪರಿಚಯದ ಕುಟುಂಬ ವೈದ್ಯರೂ ಈ ನಿಟ್ಟಿನಲ್ಲಿ ನೆರವಾಗುತ್ತಾರೆ. ಆದರೆ ಯಾವ ಕಾರಣಕ್ಕೂ ಈ ಮುನ್ಸೂಚನೆಗಳನ್ನು ಅವಗಣಿಸಬಾರದು. ❖

ಮನೆಯಲ್ಲೇ ಇದೆ ಕೆಮ್ಮಿಗೆ ಔಷಧ

ಡಾ. ಗೀತಾ ಸತ್ಯ

ಚಳಿದಿನಗಳಲ್ಲಿ ಚಳಿಯ ಸಂಗಡ ಮೋಡಗಳೂ ಬಳಲಿಸುತ್ತಿವೆ. ಇಂತಹ ಹವಾಮಾನ ವೈಪರೀತ್ಯದಿಂದ ಎಳೆಯ ಶಿಶುಗಳಿಂದ ಹಿರಿಯರವರೆಗೆ ಕಾಡುವ ಏಕೈಕ ಸಮಸ್ಯೆಯೆಂದರೆ ಗಂಟಲಿನ ಕಿರಿಕಿರಿ. ನಂತರ ತಲೆದೋರುವುದೇ ನಿಲ್ಲದ ಕೆಮ್ಮು, ಉಸಿರಾಟದ ಸಮಸ್ಯೆ. ಇದೀಗ ದಿನೇ ದಿನೇ ಉಲ್ಬಣಿಸುವ ಈ ಸಮಸ್ಯೆಗಿದೆ ತಡೆ ಮತ್ತು ಪರಿಹಾರರೂಪೀ ಮನೆ ಮದ್ದು. ಕೆಲವು ಮಾದರಿಗಳು ಮನೆಯ ಮಟ್ಟದಲ್ಲಿ ಕೈಗೊಳ್ಳುವುದು ಸುಲಭ ಸಾಧ್ಯ.

- ಒಣದ್ರಾಕ್ಷಿಯನ್ನು ಪದೇ ಪದೇ ಚೆನ್ನಾಗಿ ಜಗಿದು ತಿನ್ನಬಹುದು. ಬಹುತೇಕರಿಗೆ ರಾತ್ರಿಯ ಸಮಯದಲ್ಲಿ ಉಂಟಾಗುವ ಗಂಟಲಿನ ಕಿರಿ ಕಿರಿ, ಉಸಿರಾಟ ತೊಂದರೆ ಮತ್ತು ಕೆಮ್ಮು ಉಲ್ಬಣಕ್ಕೆ ಈ ಉಪಚಾರದಿಂದ ಕೊಂಚ ಬಿಡುಗಡೆ ದೊರೆಯಲಿದೆ.
- ಕೆಂಪು ಕಲ್ಲುಸಕ್ಕರೆಯನ್ನು ಬಾಯಲ್ಲಿ ಇರಿಸಿಕೊಂಡು ಚೀಪಿರಿ. ಕಫವನ್ನು ಕರಗಿಸುವ ಗುಣ ಕಲ್ಲುಸಕ್ಕರೆಗಿದೆ. ಗಂಟಲ ಉರಿ, ಕಿರಿಕಿರಿಗೆ ಅಲ್ಪ ವಿರಾಮ ಸಾಧ್ಯ.
- 'ಮಧುಯಷ್ಟಿ' ಎಂದರೆ ಜ್ಯೇಷ್ಠಮಧು. ಗಿಡದ ಬೇರು ಇದು. ಅದರ ಪುಡಿ ಗ್ರಂಧಿಗೆ ಅಂಗಡಿಯಲ್ಲಿ ಲಭ್ಯ. ಜೇನಿನ ಸಂಗಡ ಪುಡಿ ಕಲಸಿ ನೆಕ್ಕಿದರೆ ಒಣಕೆಮ್ಮು, ಗಂಟಲ ಉರಿಯೂತಕ್ಕೆ ಪೂರ್ಣ ವಿರಾಮ.
- ಎಲ್ಲರಿಗೂ ಸುಲಭ ಸಂಜೀವಿನಿ ವೀಳ್ಯದೆಲೆ. ಚಿಗುರು ಎಲೆಯ ರಸವನ್ನು ಜೇನಿನ ಸಂಗಡ ಎಳೆಯ ಕಂದನಿಂದ ಹಿರಿಹರೆಯದ ಮಂದಿಗೆ ನೆಕ್ಕಿಸಲು ಸುಲಭ. ನಿತ್ಯ ಮುಂಜಾನೆ ಕಫಕಾಲದಲ್ಲಿ ಆರೇಳು ಚಿಗುರೆಲೆಗೆ ಒಂದು ಕಪ್ ನೀರು ಹಾಕಿ ಕುದಿಸಿರಿ. ಐದಾರು ನಿಮಿಷ ಕುದಿದ ಮೇಲೆ ಕಷಾಯ ಬಿಸಿ ಇದ್ದಾಗಲೆ ಗಂಟಲಿಗಿಳಿಸಿರಿ. ವೀಳ್ಯದೆಲೆಯನ್ನು ಮೀರಿಸುವ ಕಫಪರಿಹಾರಿ ಮೂಲಿಕೆ ಮತ್ತೊಂದಿಲ್ಲ.
- ಊಟ ಮತ್ತು ತಿಂಡಿಯ ನಡು ನಡುವೆ ಬಿಸಿ ಬಿಸಿ ನೀರು ಗಂಟಲಿಗೆ ಇಳಿಸಿ ಆಹಾರವನ್ನು ಚೆನ್ನಾಗಿ ಜಗಿದು ತಿಂದರೆ ಕಫ ಉದ್ರೇಕಕ್ಕೆ ಕಡಿವಾಣ. ಕೆಮ್ಮನ್ನು ನೀಗಲು ಇದು ಸಹಕಾರ.
- ನೆಗಡಿ ಮತ್ತು ಪದೇ ಪದೇ ಕಾಡುವ ಕೆಮ್ಮಿನ ಪರಿಹಾರಕ್ಕೆ ಹುರುಳಿಬೀಜವನ್ನು ಬಳಸುವ ಸುಲಭ ಉಪಾಯ ಹಿಂದಿನ ತಲೆಮಾರಿನ ಅನುಭವ. ಹುರುಳಿಯ ಕಷಾಯಕ್ಕೆ 'ಕುಲತ್ಥಯೂಷ' ಎಂಬ ಗ್ರಂಥಸ್ಥ ಹೆಸರಿದೆ. ಮಲವೂ ಸರಾಗ. ಥಂಡಿಯೂ ಪರಿಹಾರ. ಕೆಮ್ಮು ನೆಗಡಿಗೆಗಳಿಗೆ ಕಡಿವಾಣ.
- ಏಲಕ್ಕಿ ಸುಗಂಧವಸ್ತು ಮಾತ್ರ ಅಲ್ಲ, ಗಂಟಲು ದನಿಯನ್ನು ಸುಧಾರಿಸಲು ಬಲು ಸಹಕಾರಿ. 'ಏಲಾದಿ ವಟಿ' ಎಂಬ ಮಾತ್ರೆ ಆಯುರ್ವೇದ ಅಂಗಡಿಗಳಲ್ಲಿ ದೊರಕುತ್ತದೆ. ಇದು ಆಗಾಗ ಚೀಪಬಹುದಾದ ನಿರಪಾಯಕಾರಿ ಚಿಕಿತ್ಸೆ.
- ಲವಂಗ ಮತ್ತು ಚಕ್ಕೆಗಳಿಗೆ ಕಫವನ್ನು ತೊಡೆದು ಹಾಕುವ ಗುಣವಿದೆ. ಅವುಗಳನ್ನು ಹಿತಮಿತವಾಗಿ ಪುಡಿಯ ರೂಪದಲ್ಲಿ ಬಳಸಬಹುದು. ದಾಲ್ಚೀನಿ ಎಲೆಗೂ ಕಫವನ್ನು ನೀರಾಗಿಸುವ ಗುಣ ಇದೆ. ಇಂತಹ ಸುಗಂಧ ವಸ್ತು ಬಳಸಿದ ಕಷಾಯ ಕುಡಿದರೆ ಕಫದ ಕಿರಿಕಿರಿಗಿದೆ ಸುಲಭ ಉಪಾಯ.
- 'ಆಡುಸೋಗೆ' ಎಂಬ ಬೇಲಿಗಿಡದ ಕಹಿಕಹಿ ಎಲೆಯ ಕಷಾಯ ನಿತ್ಯ ಕುಡಿಯಬಹುದು. ಇದರಿಂದ ಶ್ವಾಸಕೋಶಗಳಿಗೆ ತಾಕತ್ತು. ಕೆಮ್ಮು ನಿವಾರಕ ಎಲ್ಲ ಸಿರಪ್, ಕಷಾಯ, ಅರಿಷ್ಟಗಳಲ್ಲಿದೆ ಆಡುಸೋಗೆ. ಅದನ್ನು ಅಂಗಡಿಯಿಂದ ಖರೀದಿಸಿಟ್ಟುಕೊಳ್ಳಿರಿ. ದೇಹದ ರೋಗ ನಿರೋಧಕ ಕಸುವು ಹೆಚ್ಚಲು ಆಡುಸೋಗೆ ಬಹಳ ಪೂರಕ. ಇದನ್ನು ದಿನವೂ ಬಳಸಬಹುದು.
- ಶುಂಠಿ, ಕಾಳುಮೆಣಸು ಮತ್ತು ಹಿಪ್ಪಲಿ ಗೊತ್ತಿವೆ. ಮೆಣಸಿನಕಾಯಿ ನಮ್ಮ ದೇಶದ ಸರಕಲ್ಲ, ದಕ್ಷಿಣ ಅಮೆರಿಕದ್ದು.ಅದು ಆಮದಾಗುವ ಮುನ್ನ ನಮ್ಮ ಅಡಿಗೆಗೊದಗುತ್ತಿದ್ದ ಖಾರದ ಸಂಬಾರವಸ್ತು ಇವೇ ಆಗಿದ್ದವು. ಅಂತಹವು ಇಂದಿಗೂ ಸಲ್ಲುವವು; ಅಡುಗೆಗೆ ಮತ್ತು ಮದ್ದಿಗೆ ಒದಗುವವು. ಪನ್ಸಾರಿ ದುಕಾನಿನಲ್ಲಿ ಸಿಗುವ ಒಂದೊಂದು ಅಥವಾ ಮಿಶ್ರಣದ ಕಷಾಯ, ಚೂರ್ಣದ ಸೇವನೆಯಿಂದ ಉಸಿರಾಟದ ಅಂಗಗಳ ಒತ್ತಡ ಇಳಿಕೆ. ಕೆಮ್ಮು-ದಮ್ಮುಗಳ ನಿವಾರಣೆ.
- ಕಸ್ತೂರಿ ಮತ್ತು ಗೋರೋಚನ ಎಂಬ ಎರಡು ವಸ್ತು ಪ್ರಾಣಿಜನ್ಯ ಸುಗಂಧದ್ರವ್ಯಗಳು. ಇವುಗಳಿಂದ ಮಾತ್ರೆಗಳನ್ನು ಸಿದ್ಧಪಡಿಸುತ್ತಾರೆ. ಅವು ಎಲ್ಲೆಡೆ ಸಿಗುತ್ತವೆ. ವೀಳ್ಯದೆಲೆ ಸಂಗಡ ಜೇನಿನಸಹಿತ ಬಳಸಿದರೆ ನಿರಪಾಯ. ಸುಲಭಶಃ ಶೀತ, ನೆಗಡಿ, ಕೆಮ್ಮಿಗೆ ಪರಿಹಾರ.
- ತೆಂಗಿನೆಣ್ಣೆ ಮತ್ತು ಸಾದಾ ಉಪ್ಪಿನ ಪುಡಿ ಸೇರಿಸಿರಿ. ಅದರ ಮಿಶ್ರಣವನ್ನು ಸೌಟಿನಲ್ಲಿ ಹಾಕಿರಿ. ಉರಿಗಿರಿಸಿ ಬಿಸಿ ಮಾಡಿರಿ. ಉಪ್ಪು ಕರಗದು ನಿಜ. ಆದರೆ ಈ ದ್ರಾವಣದ ಮಾಲೀಶನ್ನು ಎದೆಯ ಭಾಗ ಮತ್ತು ಬೆನ್ನಿಗೆ ಮಾಡಲು ಸಾಧ್ಯ. ಕೆಮ್ಮು ಮತ್ತು ಉಸಿರಾಟದ ತೊಂದರೆಗೆ ತಾತ್ಕಾಲಿಕ ಉಪಶಮನ ಖಂಡಿತ. ಕಾರ್ಬನ್ ಡೈ ಆಕ್ಸೈಡ್ ಮತ್ತು ಪ್ರಾಣವಾಯುವಿನ ವಿನಿಮಯಕ್ಕೆ ಬಲೂನಿಗೆ ತಾಕತ್ತು ಬೇಕೆ? ಅಂತಹ ವಾತಾವರಣ ನಿರ್ಮಾಣವಾಗಲು ಇಂತಹ ಸುಲಭ ಉಪಾಯ ಸಹಕಾರಿ.

ನಿದ್ರೆಯನ್ನು ಬರಿಸುವ ಕೆಮ್ಮುನಿವಾರಕ 'ಸಿರಪ್', ಪದೇ ಪದೇ ಆ್ಯಂಟಿಬಯಾಟಿಕ್‌ಗಳ ಗೊಡವೆಗೆ ಶರಣು ಹೋಗುವ ಮುನ್ನ ಇಂತಹ ಸರಳ ಉಪಾಯಕ್ಕೆ ಖಂಡಿತ ಪ್ರಯತ್ನಿಸಿರಿ. ಇವು ದೇಹದ ರೋಗನಿರೋಧಕ ಶಕ್ತಿಯು ಬೆಳೆಯಲು ಮುಖ್ಯವಾದ ಸಂಗತಿ ನೆನಪಿಡಿರಿ. ಮಹಾಭೈಷಜ್ಯ ಎಂಬುದೇನು ಗೊತ್ತೆ? ನಾವುಣ್ಣುವ ಆಹಾರ. 'ಈಟ್ ದಿ ಕೋಲ್ಡ್ ಆ್ಯಂಡ್ ಡ್ರಿಂಕ್ ದಿ ಫೀವರ್' ಎಂಬ ಆಂಗ್ಲನುಡಿಗಟ್ಟಿದೆ. ಎಂದರೆ ನೆಗಡಿಗೆ ತಿಂದುಣ್ಣುವ ಉಪಚಾರವಿರಲಿ. ಜ್ವರ ಬಂದಾಗ ಹೆಚ್ಚು ದ್ರವಾಂಶವನ್ನು ಸೇವಿಸಿರಿ. ನಿರಾಳವಾಗಿರಿ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಅಧ್ಯಾಯ–10 ವೃತ್ತಗಳು

ಅಭ್ಯಾಸ 10.2

9) ಚಿತ್ರ 10.13 ರಲ್ಲಿ, 'O' ವೃತ್ತ ಕೇಂದ್ರ ಹೊಂದಿರುವ ಒಂದು ವೃತ್ತಕ್ಕೆ XY ಮತ್ತು X'Y' ಸಮಾಂತರ ಸ್ಪರ್ಶಕಗಳಾಗಿವೆ ಮತ್ತು ಸ್ಪರ್ಶ ಬಿಂದು C ನಲ್ಲಿ ಎಳೆದ ಮತ್ತೊಂದು ಸ್ಪರ್ಶಕ AB ಯು XY ಅನ್ನು A ಬಿಂದುವಿನಲ್ಲಿ ಮತ್ತು X'Y' ಅನ್ನು B ಬಿಂದುವಿನಲ್ಲಿ ಛೇದಿಸುತ್ತದೆ. ಹಾಗಾದರೆ AOB = 90^0 ಎಂದು ಸಾಧಿಸಿ.

ಪರಿಹಾರ:– ಕೊಟ್ಟಿರುವ ಚಿತ್ರದಲ್ಲಿ OC ಸೇರಿಸಿ ಆಗ ಚಿತ್ರವು ಹೀಗೆ ಕಾಣಲಿದೆ



ಈಗ △OPA ಮತ್ತು △OCA ದಲ್ಲಿ

1) OP = OC ವೃತ್ತದ ತ್ರಿಜ್ಯಗಳು
2) AP = AC ಬಾಹ್ಯ ಬಿಂದು Aನಿಂದ ಎಳೆದ ಸ್ಪರ್ಶಕಗಳಾಗಿವೆ
3) AO = AO ಸಾಮಾನ್ಯ

ಹೀಗಾಗಿ $\triangle OPA \cong \triangle OCA$

ಅದರಂತೆ $\triangle OQB \cong \triangle OCB$

ಹೀಗಾಗಿ $\angle POA = \angle COA$ … (Equation i)

ಮತ್ತು $\angle QOB = \angle COB$ … (Equation ii)

ಒಂದು POQ ಸರಳ ರೇಖೆಯಾಗಿದೆ. ಇದು ವೃತ್ತದ ವ್ಯಾಸವಾಗಿದೆ.

ಹೀಗಾಗಿ $\angle POA + \angle COA + \angle COB + \angle QOB = 180°$

ಸಮೀಕರಣ(i) ಮತ್ತು (ii)ರಿಂದ ನಾವು ಹೀಗೆ ಪಡೆಯಬಹುದು

$2\angle COA + 2\angle COB = 180°$

$\angle COA + \angle COB = 90°$

$\therefore \angle AOB = 90°$

10) ಬಾಹ್ಯ ಬಿಂದುವಿನಿಂದ ಒಂದು ವೃತ್ತಕ್ಕೆ ಎಳೆದ ಎರಡು ಸ್ಪರ್ಶಕಗಳ ನಡುವಿನ ಕೋನ ಹಾಗೂ ಸ್ಪರ್ಶ ಬಿಂದುಗಳನ್ನು ವೃತ್ತಕೇಂದ್ರಕ್ಕೆ ಸೇರಿಸುವಂತೆ ಎಳೆದ ರೇಖಾಖಂಡಗಳ ನಡುವಿನ ಕೋನಗಳು ಪರಿಪೂರಕಗಳಾಗಿರುತ್ತವೆ ಎಂದು ಸಾಧಿಸಿ.

ಪರಿಹಾರ:– O ಕೇಂದ್ರವುಳ್ಳ ವೃತ್ತವನ್ನು ರಚಿಸಿ, P ಬಾಹ್ಯ ಬಿಂದುವಿನಿಂದ ಎರಡು ಸ್ಪರ್ಶಕವನ್ನು ಎಳೆಯಿರಿ. ಅವು ವೃತ್ತದ A ಮತ್ತು B ಬಿಂದುವಿನಲ್ಲಿ ಸಂಧಿಸಲಿ

OA ಯು PA ಗೆ ಲಂಬವಾಗಿದೆ ಚಕ್ರೀಯ



ಹೀಗಾಗಿ $\angle OAP = 90°$

ಅದೇ ರೀತಿ $OB \perp PB$ ಮತ್ತು $\angle OBP = 90°$

OAPB, ಚತುರ್ಭುಜವಾಗಿದೆ

$\therefore \angle APB + \angle OAP + \angle PBO + \angle BOA = 360°$

ಹೀಗಾಗಿಯೇ ನಾವು ಕೆಳಗಿನವುಗಳ ಬೆಲೆಯನ್ನು ಈ ರೀತಿ ಕಂಡುಹಿಡಿಯಬಹುದಾಗಿದೆ,

$\angle APB + 180° + \angle BOA = 360°$

$\angle APB + \angle BOA = 180°$ (ಸಾ. ಸಿ.).

11) ಒಂದು ಸಮಾಂತರ ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ ಸಮಾಂತರ ಚತುರ್ಭುಜವು ವಜ್ರಾಕೃತಿಯಾಗುತ್ತದೆ ಎಂದು ಸಾಧಿಸಿ .

ಪರಿಹಾರ:–



O ಕೇಂದ್ರವಿರುವ ವೃತ್ತಕ್ಕೆ ABCD ಚತುರ್ಭುಜವು ವೃತ್ತಪರಿಧಿಯಲ್ಲಿರುವ PQRS ಬಿಂದುಗಳಲ್ಲಿ ಸ್ಪರ್ಶಿಸುತ್ತದೆ. ಮತ್ತು ABCD ಚತುರ್ಭುಜವು ಸಮಾಂತರ ಚತುರ್ಭುಜ ವಾಗಿದೆ ಹೀಗಾಗಿಯೇ AB = CD ಮತ್ತು BC = AD.

ಮೇಲಿನ ಚಿತ್ರದಿಂದ (i) DR = DS (ii) BP = BQ (iii) CR = CQ (iv) AP = AS

(ಮುಂದುವರಿಯುವುದು).

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC: PHYSICS

MOVING CHARGES AND MAGNETISM

23. Field inside a solenoid is –
a) directly proportional to its length
b) directly proportional to current
c) inversely proportional to number of turns
d) inversely proportional to current

24. When two parallel wires carry currents in the same direction –
a) they attract each other
b) they repel each other
c) magnetic forces on two wires are perpendicular to each other
d) they do not experience any magnetic force.

25. A current I flows along the length of an infinitely long, straight thin walled pipe. Then-
a) The magnetic field at all points inside the pipe is the same, but not zero
b) The magnetic field is zero only on the axis of the pipe
c) The magnetic field is different at different points inside the pipe.
d) The magnetic field at any point

26. Consider 2 straight parallel conductors A and B separated by a distance x carrying individual currents i_A and i_B respectively. If two conductors attract each other, it indicates that
a) The two currents are parallel in direction
b) The two currents are anti - parallel in direction
c) The magnetic lines of induction are parallel
d) The magnetic lines of induction are parallel to length of conductors.

27. When two parallel wires carry currents in the same direction
a) they attract each other
b) they repel each other
c) magnetic forces on two wires are perpendicular to each other
d) they do not experience any magnetic force.

28. An ammeter and a voltmeter are joined in series to a cell. Their readings are A and V respectively. If a resistance is joined in parallel with the voltmeter.
a) A will increase and V will decrease
b) A will increase and V will increase
c) both A and V will decrease
d) A and V will increase

29. To convert moving coil galvanometer (MCG) into a voltmeter,
a) a high resistance R is connected in parallel with MCG
b) a low resistance r is connected in parallel with MCG
c) a low resistance r is connected in series with MCG
d) a high resistance R is connected in series with MCG

30. The current passing through the ideal ammeter in the circuit given below is



a) 0.75 A **b) 0.5 A**
c) 1.25 A **d) 1 A**

31. An ammeter, a voltmeter V and a resistance R are connected as shown. Ammeter reads 2A. Voltmeter reading is 10V. Then R is



a) 5Ω **b) >5Ω**
c) <5Ω
d) Dependent on resistance of voltmeter

32. A current I is flowing through the loop. The direction of the current and the shape of the loop are as in the figure. The magnetic field at the centre of the loop is $\frac{\mu_0}{R}$ time …

(MA = R, MB = 2R, ∠ le DMA = 90^0)



a) $\frac{7}{16}$, but into the plane of the paper

a) $\frac{7}{16}$, but into the plane of the paper
b) $\frac{7}{16}$, but out of the plane of the paper
c) $\frac{5}{16}$, but into the plane of the paper
d) $\frac{5}{16}$, but out of the plane of the paper

33. A wire of length L is bent into a semicircle. The magnetic field at the centre is
a) $\frac{\mu_0 \pi I}{4L}$ b) $\frac{\mu_0 I}{4\pi L}$ c) $\frac{\mu_0 I}{\pi L}$ d) $\frac{\mu_0 I}{4L}$

Ans:- 23)b 24)a 25)a 26)a 27)a 28)a 29)b 30)b 31)b 32)a 33)a

ಎನ್‌ಆರ್‌ ರಸ್ತೆಯಲ್ಲಿ ಒಳಚರಂಡಿ ಮ್ಯಾನ್‌ಹೋಲ್‌ನಿಂದ ನೀರು ಹೊರಹರಿದು ವಾಹನ ಸಂಚಾರಕ್ಕೆ ಅಡ್ಡಿಯಾಯಿತು (ಎಡಚಿತ್ರ). ಫೆಂಜಲ್ ಚಂಡಮಾರುತದ ಪರಿಣಾಮ, ನಗರದ ವಿಮಾನನಿಲ್ದಾಣ ರಸ್ತೆ ಮೋಡ ಕವಿದ ವಾತಾವರಣದಿಂದಾಗಿ ಸೋಮವಾರ ಮಧ್ಯಾಹ್ನವೇ ಮಸುಕಾಗಿತ್ತು (ಬಲಚಿತ್ರ)

ಶಾಲೆ–ಕಾಲೇಜು, ಕಚೇರಿಗಳಿಗೆ ತೆರಳಲು ಸಾಹಸ; ಸವಾರರ ಪರದಾಟ

ಮಳೆ: ಸಂಚಾರ ನಿಧಾನಗತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆಂಜಲ್ ಚಂಡ ಮಾರುತದ ಪರಿಣಾಮದಿಂದಾಗಿ ನಗರದಲ್ಲಿ ಸೋಮವಾರ ದಿನವಿಡೀ ನಿರಂತರವಾಗಿ ಮಳೆ ಸುರಿಯಿತು. ಹಲವು ರಸ್ತೆಗಳಲ್ಲಿ ಮಳೆ ನೀರು ನಿಂತು, ವಾಹನ ಸಂಚಾರ ನಿಧಾನಗತಿಯಲ್ಲಿತ್ತು. ರಾತ್ರಿ ಬಿರುಸಾದ ಮಳೆ, ರಾತ್ರಿಯಿಡೀ ಸುರಿಯಿತು.

ಸೋಮವಾರ ಮುಂಜಾನೆ ಬಿರುಸಾಗಿದ್ದ ಮಳೆ, ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಅಡ್ಡಿಯಾಗಿತ್ತು. ಕಚೇರಿಗಳಿಗೆ ತೆರಳುವ ನಾಗರಿಕರು ಕೂಡ ಪರಿತಪಿಸಿದರು. ಮಧ್ಯಾಹ್ನದ ನಂತರ ಆಗಾಗ್ಗೆ ಕೆಲವು ಸಮಯ ಮಳೆ ಬಿಡುವು ನೀಡಿ, ಸುರಿಯತೊಡಗಿತು.

ಸೋಮವಾರ ರಾತ್ರಿ 10 ಗಂಟೆಯ ನಂತರ, ನಗರದ ಹಲವು ಭಾಗಗಳಲ್ಲಿ ಮಳೆ ಆರ್ಭಟ ಹೆಚ್ಚಾಯಿತು. ಗುಡುಗು ಮತ್ತು ಸಿಡಿಲಿನೊಂದಿಗೆ ಬಿರುಸಾಗಿ ಸುರಿಯಿತು. ರಾತ್ರಿ ಮಳೆ ಅಧಿಕವಾಗಿದ್ದರಿಂದ ರಸ್ತೆಯಲ್ಲಿ ನೀರು ನಿಂತ ಪ್ರಮಾಣ ಹೆಚ್ಚಾಗಿತ್ತು. ಗುಂಡಿಗಳಲ್ಲಿ ನೀರು ನಿಂತಿದ್ದನ್ನು ಗ್ರಹಿಸದ ದ್ವಿಚಕ್ರ ವಾಹನ ಸವಾರರು ನಿಯಂತ್ರಣ ತಪ್ಪಿದರು.

ನಗರದಲ್ಲಿ ಸೋಮವಾರ ಹಗಲಿನ ವೇಳೆ ಹಂಪಿನಗರ ಸುತ್ತಮುತ್ತ ಮಾತ್ರ ಹೆಚ್ಚು (1.5 ಸೆಂ.ಮೀ) ಮಳೆಯಾಯಿತು. ಮಳೆ ಸಾಧಾರಣವಾಗಿದ್ದರೂ, ರಸ್ತೆಗಳಲ್ಲಿ ನೀರು ನಿಂತಿದ್ದು ವಾಹನ ಸವಾರರನ್ನು ಪರದಾಡಿಸಿತು. ಚರಂಡಿಗಳಲ್ಲಿ ಸರಾಗವಾಗಿ ನೀರು ಹರಿಯದೆ, ರಸ್ತೆ ಮೇಲಿದ್ದ ನೀರಿನಿಂದ ದ್ವಿಚಕ್ರ ವಾಹನ ಸವಾರರು ಸಂಕಷ್ಟ ಅನುಭವಿಸಿದರು.

ನಾಗವಾರ ವೃತ್ತ, ಸಿಂಧೂರ ಜಂಕ್ಷನ್, ಅಯ್ಯಪ್ಪನಗರದಿಂದ ದೇವಸಂದ್ರ ರಸ್ತೆ, ಹಳೆ ಮೈಸೂರು ರಸ್ತೆಯಿಂದ ಖೋಡೆ ಜಂಕ್ಷನ್, ಸಾರಕ್ಕಿ ಮೆಟ್ರೊ ನಿಲ್ದಾಣ, ಆಡುಗೋಡಿಯಿಂದ ಆನೆಪಾಳ್ಯ, ಕೆಂಗೇರಿಯಿಂದ ಉತ್ತರಹಳ್ಳಿ, ಕಲ್ಯಾಣ ನಗರದಿಂದ ಹೊರಮಾವು, ಹೆಬ್ಬಾಳದಿಂದ ಸಂಜಯನಗರ ಕ್ರಾಸ್, ಉತ್ತರಹಳ್ಳಿಯಿಂದ ಚಿಕ್ಕಲಸಂದ್ರ, ವೈಟ್‌ಫೀಲ್ಡ್‌ನಿಂದ ಬಿ ನಾರಾಯಣಪುರ, ರಾಮಮೂರ್ತಿನಗರ ಮುಖ್ಯರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ದಟ್ಟಣೆ ಉಂಟಾಗಿತ್ತು.

ಬಿಬಿಎಂಪಿಯಿಂದ ಮುಂಜಾಗ್ರತೆ: ‘ಫೆಂಜಲ್ ಚಂಡಮಾರುತದಿಂದ ಗಾಳಿ ವೇಗ ಹಾಗೂ ಮಳೆಯಾಗುವ ಮುನ್ಸೂಚನೆ ಇದೆ. ಈವರೆಗೆ ಸಾಧಾರಣ ಮಳೆಯಾಗಿದೆ. ಆದರೂ, ನಗರದಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದ್ದು, 80 ಜೆಸಿಬಿ ಯಂತ್ರಗಳು ಕಾರ್ಯಾಚರಣೆಗೆ ಸಿದ್ಧವಾಗಿವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಗಾಳಿಗೆ ಮರ ಹಾಗೂ ಕೊಂಬೆಗಳು ಬೀಳುವ ಸಾಧ್ಯತೆ ಇದ್ದು, ಕ್ಷಿಪ್ರ ಕಾರ್ಯಾಚರಣೆಗೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ’ ಎಂದರು.

ಎಲ್ಲಿ ಹೆಚ್ಚು ಮಳೆ?
(ಸೆಂ.ಮೀನಲ್ಲಿ)

ಕೋರಮಂಗಲ	2.8
ವಿದ್ಯಾಪೀಠ	2.4
ದೊರೆಸಾನಿಪಾಳ್ಯ	2.3
ಮಾರತ್ ಹಳ್ಳಿ	2.1
ಬಿಳೇಕಹಳ್ಳಿ	2.0
ಹಂಪಿ ನಗರ	2.0
ಕಾಟನ್ ಪೇಟೆ	2.0
ಎಚ್‌ಎಎಲ್ ವಿಮಾನ ನಿಲ್ದಾಣ	1.9
ಗೊಟ್ಟಿಗೆರೆ	1.7
ಪುಲಕೇಶಿನಗರ	1.6
ಅರೆಕೆರೆ	1.6
ದೊಡ್ಡನೆಕ್ಕುಂದಿ	1.5
ಪೂರ್ವ ಬಾಣಸವಾಡಿ	1.5
ಬಸವೇಶ್ವರ ನಗರ	1.5
ಕೆಂಗೇರಿ	1.5

ಯುಪಿಎಸ್‌ಸಿ ಮಾಜಿ ಅಧ್ಯಕ್ಷ ಡಿ.ಪಿ ಅಗರವಾಲ್ ಅಭಿಪ್ರಾಯ

‘ಯಶಸ್ಸಿಗೆ ಗುಣಮಟ್ಟದ ಓದು ಮುಖ್ಯ’

ಪ್ರಜಾವಾಣಿ ವಾರ್ತೆ

ಸಂವಾದದಲ್ಲಿ ಯುಪಿಎಸ್‌ಸಿ ಮಾಜಿ ಅಧ್ಯಕ್ಷ ಡಿ.ಪಿ.ಅಗರ್‌ವಾಲ್ ಮಾತನಾಡಿದರು

ಬೆಂಗಳೂರು: ‘ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ದೀರ್ಘ ಹಾಗೂ ನಿರಂತರ ಓದಿಗಿಂತ, ಏಕಾಗ್ರತೆ ಹಾಗೂ ಗುಣಮಟ್ಟದ ಓದು ಬಹಳ ಮುಖ್ಯ’ ಎಂದು ಯುಪಿಎಸ್‌ಸಿ ಮಾಜಿ ಅಧ್ಯಕ್ಷ ಡಿ.ಪಿ ಅಗರವಾಲ್ ಅಭಿಪ್ರಾಯಪಟ್ಟರು.

ನಗರದ ಗ್ರೇಸ್ ಐಎಎಸ್ ಕೋಚಿಂಗ್ ಸೆಂಟರ್‌ನಲ್ಲಿ ಆಯೋಜಿಸಿದ್ದ ‘ಐಎಎಸ್ ಆಕಾಂಕ್ಷಿ ಗಳೊಂದಿಗೆ ವಿಶೇಷ ಸಂವಾದ’ದಲ್ಲಿ, ಯುಪಿಎಸ್‌ಸಿ ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸುವ ತಂತ್ರಗಳ ಕುರಿತು ಮಾತನಾಡಿದರು.

‘ಓದುವುದರ ಜೊತೆಗೆ, ಅದನ್ನು ಸರಿಯಾಗಿ ಅರ್ಥೈಸಿಕೊಂಡು, ಸಮರ್ಥವಾಗಿ ಉತ್ತರ ಬರೆಯುವುದು ಮುಖ್ಯ. ವಿಷಯವನ್ನು ಆಳವಾಗಿ ಅರ್ಥೈಸಿಕೊಂಡು ಹಾಗೂ ಅದನ್ನು ತರ್ಕಬದ್ದವಾಗಿ, ವಿಶ್ಲೇಷಣಾತ್ಮಕವಾಗಿ ಉತ್ತರ ಬರೆಯುವುದನ್ನು ರೂಢಿಸಿಕೊಳ್ಳುವುದು ಅಗತ್ಯ’ ಎಂದು ಕಿವಿಮಾತು ಹೇಳಿದರು.

‘ತರಬೇತಿ ಕೇಂದ್ರಗಳಲ್ಲಿ ಸಿಗುವ ಸಂಪನ್ಮೂಲ ಪತ್ಯಗಳ ಜೊತೆಯಲ್ಲಿ, ಸಮಗ್ರವಾಗಿ ವಿಷಯವನ್ನು ತಿಳಿದುಕೊಳ್ಳಲು, ಬೇರೆ ಪುಸ್ತಕಗಳನ್ನು ಅಧ್ಯಯನ ಮಾಡಬೇಕು. ಆದರೆ, ಉತ್ತರ ಮಾತ್ರ ನಿಮ್ಮದೇ ವಿಶೇಷ ಶೈಲಿಯಲ್ಲಿರಬೇಕೇ ಹೊರತು, ಪುಸ್ತಕದಲ್ಲಿರುವುದರ ನಕಲಿನಂತಲ್ಲ’ ಎಂದು ತಿಳಿಸಿದರು.

‘ಪರೀಕ್ಷೆಗಾಗಿ ಓದುವುದರ ಜೊತೆಗೆ, ಮುಂದಿನ ಹಂತಗಳಲ್ಲಿ ಯಶಸ್ಸು ಸಾಧಿಸಲು ನಿಮ್ಮದೇ ಆದ ವ್ಯಕ್ತಿತ್ವ ಬೆಳೆಸಿಕೊಳ್ಳಿ. ಯುಪಿಎಸ್‌ಸಿ ಪರೀಕ್ಷೆ ಎದುರಿಸುವ ಆಯ್ಕೆ ಮಾಡಿದ ದಿನದಿಂದಲೇ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿ ನಿರಂತರ ದಿನಪತ್ರಿಕೆಗಳನ್ನು ಓದಿ’ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರೇಸ್ ಐಎಎಸ್ ಕೋಚಿಂಗ್ ಸೆಂಟರ್‌ನ ನಿರ್ದೇಶಕ ಸಂಜು ಸಿಂಗ್ ಮಾತನಾಡಿದರು.

ಸಂಸ್ಥೆಯ ಮಾರ್ಗದರ್ಶಕರಾದ ಧ್ರುವ ಕುಮಾರ್ ಮತ್ತು ಗೌರವ್ ಗುಪ್ತಾ, ನೂರಾರು ಯುಪಿಎಸ್‌ಸಿ ಪರೀಕ್ಷಾ ಆಕಾಂಕ್ಷಿಗಳು ಉಪಸ್ಥಿತರಿದ್ದರು.

‘ಯಶಸ್ವಿನಿ’ಗೆ ₹30 ಸಾವಿರ ವೇತನದ ಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕಂಪನಿ ಅಥವಾ ಸಂಸ್ಥೆಗಳಲ್ಲಿ ತಿಂಗಳಿಗೆ ₹30 ಸಾವಿರಕ್ಕಿಂತ ಹೆಚ್ಚು ಸಂಬಳ ಪಡೆಯುವ ಯಾವುದೇ ಸಹಕಾರಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ ಅರ್ಹರಾಗುವುದಿಲ್ಲ.

ಸಹಕಾರ ಇಲಾಖೆ 2025–26ನೇ ಸಾಲಿನ ಯಶಸ್ವಿನಿ ಯೋಜನೆಗೆ ಅರ್ಹ ಸಹಕಾರಿಗಳನ್ನು ನೋಂದಣಿ ಮಾಡಿಕೊಳ್ಳಲು ಆದೇಶ ಹೊರಡಿಸಿದ್ದು, ಡಿ.31ರವರೆಗೆ ಅವಕಾಶ ನೀಡಿದೆ.

ಸಮಾಪನಗೊಂಡಿರುವ, ನಿಷ್ಕ್ರಿಯವಾಗಿರುವ ಸಹಕಾರ ಸಂಘಗಳ ಸದಸ್ಯರು, ನೌಕರರ ಸಹಕಾರ ಸಂಘಗಳ ಸದಸ್ಯರು ಯೋಜನೆಗೆ ಅರ್ಹರಾಗಿರುವುದಿಲ್ಲ. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯ ಸರ್ಕಾರಿ ನೌಕರರಾಗಿದ್ದರೂ ಸೌಲಭ್ಯ ಸಿಗುವುದಿಲ್ಲ. ಈಗಾಗಲೇ ಒಂದು ಯೋಜನೆ ಅಡಿ ಆರೋಗ್ಯ ಸೌಲಭ್ಯ ಪಡೆಯುತ್ತಿರುವವರು ಯಶಸ್ವಿನಿ ಅಡಿ ನೋಂದಾಯಿಸಿಕೊಳ್ಳುವಂತಿಲ್ಲ ಎಂದು ವಿವರಿಸಲಾಗಿದೆ.

ಗ್ರಾಮೀಣ ಪ್ರದೇಶದ ಒಂದು ಕುಟುಂಬದಲ್ಲಿ ನಾಲ್ಕು ಜನರಿದ್ದರೆ ಆ ಕುಟುಂಬ ₹500 ವಂತಿಗೆ ಭರಿಸಬೇಕು. ನಾಲ್ಕಕಿಂತ ಹೆಚ್ಚು ಸದಸ್ಯರಿದ್ದರೆ ತಲಾ ₹100 ಹೆಚ್ಚುವರಿ ವಂತಿಗೆ ನೀಡಬೇಕು. ನಗರ ಪ್ರದೇಶದ ಒಂದು ಕುಟುಂಬದಲ್ಲಿ ನಾಲ್ಕು ಜನರಿದ್ದರೆ ₹1,000 ಹಾಗೂ ಅದಕ್ಕಿಂತ ಹೆಚ್ಚು ಜನರಿದ್ದರೆ ತಲಾ ₹200 ನಿಗದಿ ಮಾಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಂದ ಯಾವುದೇ ವಂತಿಗೆ ಸಂಗ್ರಹಿಸುವಂತಿಲ್ಲ.

ಈ ಯೋಜನೆ ಅಡಿ 2,128 ಚಿಕಿತ್ಸೆಗಳಿಗೆ ನಗದುರಹಿತ ಸೌಲಭ್ಯ ದೊರಕಲಿದೆ. ಈ ಸಾಲಿನಲ್ಲಿ ಒಟ್ಟು 50 ಲಕ್ಷ ಫಲಾನುಭವಿಗಳನ್ನು ನೋಂದಣಿ ಮಾಡುವ ಗುರಿ ಹೊಂದಲಾಗಿದೆ ಎಂದು ಸಹಕಾರ ಇಲಾಖೆ ಹೇಳಿದೆ.

ಕೆರೆ ಸಂರಕ್ಷಣೆ: ಶೀಘ್ರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸುಮಾರು 40 ಸಾವಿರ ಜಲಮೂಲಗಳ ವ್ಯಾಪ್ತಿಯನ್ನು ಹೊಂದಿರುವ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಭೆಯನ್ನು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಶೀಘ್ರವೇ ನಡೆಸಲಾಗುವುದು ಎಂದು ಸಣ್ಣ ನೀರಾವರಿ ಸಚಿವ ಎನ್‌.ಎಸ್‌.ಬೋಸರಾಜು ತಿಳಿಸಿದರು.

ಇದಕ್ಕಾಗಿ ವಿವಿಧ ಇಲಾಖೆಗಳ ಮಧ್ಯೆ ಸಮನ್ವಯಗೊಳಿಸಲು ಸರ್ಕಾರದ ಮುಖ್ಯಕಾರ್ಯದರ್ಶಿ ಮತ್ತು ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಸೋಮವಾರ ಅವರು ಸಭೆ ನಡೆಸಿದರು.

ಜಲ ಮೂಲಗಳ ಸಂರಕ್ಷಣೆ ಮತ್ತು ಸಮರ್ಪಕ ನಿರ್ವಹಣೆಯಿಂದ ಅಂತರ್ಜಲ ವೃದ್ಧಿಯಾಗಲಿದೆ. ಈ ದಿಸೆಯಲ್ಲಿ ಇಲಾಖೆಗಳ ಮಧ್ಯೆ ಸಮನ್ವಯ ಬಹಳ ಮುಖ್ಯ. ಈ ಜಲಮೂಲಗಳ ನಿರ್ವಹಣೆಗೆ ಹಣಕಾಸಿನ ಅಗತ್ಯವಿದೆ. ಇದಕ್ಕಾಗಿ ಮೀನುಗಾರಿಕೆ, ಫ್ಲೋಟಿಂಗ್ ಸೋಲಾರ್, ಬೋಟಿಂಗ್‌ನಂತಹ ಆದಾಯ ಮೂಲಗಳನ್ನು ಗುರುತಿಸಬೇಕು ಎಂದು ಅವರು ಸೂಚನೆ ನೀಡಿದರು.

ಜಲಮೂಲಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಹಲವು ಪ್ರಮುಖ ವಿಷಯಗಳ ಬಗ್ಗೆ ಅಂತಿಮ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಸಮ್ಮುಖದಲ್ಲೇ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳುವುದು ಅತ್ಯಗತ್ಯ. ಈ ಸಭೆಯಲ್ಲಿ ಮಂಡಿಸಬೇಕಾದ ವಿಷಯಗಳ ಬಗ್ಗೆ ಅಗತ್ಯ ವರದಿಯನ್ನು ಸಲ್ಲಿಸಬೇಕು ಎಂದು ಬೋಸರಾಜು ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ ಆಯವ್ಯಯದಲ್ಲಿ ಘೋಷಿಸಿರುವಂತೆ ಕೆರೆ ಬಳಕೆದಾರರ ಸಂಘಗಳನ್ನು ಪುನರುಜ್ಜೀವನಗೊಳಿಸುವುದಕ್ಕಾಗಿ ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಅಗತ್ಯ ಪ್ರಸ್ತಾವನೆ ಸಲ್ಲಿಸುವಂತೆಯೂ ಅಧಿಕಾರಿಗಳಿಗೆ ತಿಳಿಸಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಣ್ಣ ನೀರಾವರಿ ಇಲಾಖೆ ಕಾರ್ಯದರ್ಶಿ ರಾಘವನ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಮಾದರಿ ಶಾಲೆಗಳ ಮುಖ್ಯ ಶಿಕ್ಷಕರ ಮೇಲೆ ಕ್ರಮದ ಎಚ್ಚರಿಕೆ

ಎಸ್ಸೆಸ್ಸೆಲ್ಸಿ ಫಲಿತಾಂಶ ಕುಸಿತ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯಮಟ್ಟದ ಒಟ್ಟು ಸರಾಸರಿ ಫಲಿತಾಂಶಕ್ಕಿಂತ (ಶೇ 73.40) ಕಡಿಮೆ ಫಲಿತಾಂಶ ದಾಖಲಾದ ಮೊರಾರ್ಜಿ ದೇಸಾಯಿ ಮತ್ತು ಮೌಲಾನಾ ಆಜಾದ್ ಮಾದರಿ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಶೋಕಾಸ್ ನೋಟಿಸ್ ನೀಡಿರುವ ಅಲ್ಪಸಂಖ್ಯಾತರ ನಿರ್ದೇಶನಾಲಯ, ಶಿಸ್ತುಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದೆ.

40ಕ್ಕೂ ಹೆಚ್ಚು ಮೌಲಾನಾ ಆಜಾದ್ ಮಾದರಿ ಶಾಲೆಗಳು ಹಾಗೂ ಆರು ಮೊರಾರ್ಜಿ ದೇಸಾಯಿ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ನ. 26ರಂದು ನಿರ್ದೇಶನಾಲಯದ ಶಿಸ್ತು ಪ್ರಾಧಿಕಾರಿಯೂ ಆಗಿರುವ ನಿರ್ದೇಶಕ ಜೀಲಾನಿ ಎಚ್. ಮೊಕಾಶಿ ನೋಟಿಸ್ ನೀಡಿದ್ದಾರೆ.

ಈ ಕುರಿತು ಮಾತನಾಡಿದ ಜೀಲಾನಿ ಎಚ್. ಮೊಕಾಶಿ, ‘ಮೌಲಾನಾ ಆಜಾದ್ ಶಾಲೆಗಳ ಪೈಕಿ ಕೆಲವು ಶಾಲೆಗಳಲ್ಲಿ ಶೇ 5, ಇನ್ನೂ ಕೆಲವು ಶಾಲೆಗಳಲ್ಲಿ ಶೇ 10 ಫಲಿತಾಂಶ ದಾಖಲಾಗಿದೆ. ಫಲಿತಾಂಶ ಈ ಮಟ್ಟಕ್ಕೆ ಕುಸಿದರೆ ಮುಖ್ಯ ಶಿಕ್ಷಕರ ಪಾತ್ರವೇನು? ಅವರಿಗೆ ಹೊಣೆಗಾರಿಕೆ ಇಲ್ಲವೇ? ಈ ನಿರ್ಲಕ್ಷ್ಯವನ್ನು ಗಂಭೀರವಾಗಿ ಪರಿಗಣಿಸಬಾರದೇ’ ಎಂದು ಪ್ರಶ್ನಿಸಿದರು.

‘ಮೂಲಸೌಲಭ್ಯದ ಕೊರತೆಯೇ ಕಳಪೆ ಫಲಿತಾಂಶಕ್ಕೆ ಕಾರಣ ಎನ್ನುವುದು ಎಷ್ಟು ಸರಿ? ಶೇ 100 ಫಲಿತಾಂಶ ದಾಖಲಾದ ಮೌಲಾನಾ ಆಜಾದ್ ಶಾಲೆಗಳೂ ಇವೆ. ನಮ್ಮ ಅಧೀನದಲ್ಲಿರುವ ಕೆಲವು ವಸತಿ ಶಾಲೆಗಳಲ್ಲಿ ಶೇ 9, ಸಿಬಿಎಸ್‌ಇ ಶಾಲೆಗಳಲ್ಲಿ ಶೇ 100, ದ್ವಿತೀಯ ಪಿಯುಸಿ ಇರುವ ಶಾಲೆಗಳಲ್ಲಿ ಶೇ 98.50ರಷ್ಟು ಫಲಿತಾಂಶ ದಾಖಲಾಗಿದೆ. ಉತ್ತಮ ಫಲಿತಾಂಶ ದಾಖಲಾದ ಶಾಲೆಗಳ ಮುಖ್ಯ ಶಿಕ್ಷಕರನ್ನು ಇತ್ತೀಚೆಗೆ ಸನ್ಮಾನಿಸಿದ್ದೇವೆ’ ಎಂದೂ ಹೇಳಿದರು.

> ಕಳಪೆ ಫಲಿತಾಂಶ ದಾಖಲಾದ ಶಾಲೆಗಳಲ್ಲಿ ಫಲಿತಾಂಶ ಸುಧಾರಿಸಬೇಕೆಂಬ ಕಾರಣಕ್ಕೆ ಎಚ್ಚರಿಕೆಯಾಗಿ ಮುಖ್ಯೋಪಾಧ್ಯಾಯರಿಗೆ ನೋಟಿಸ್ ನೀಡಿದ್ದೇವೆ. ಇದರಲ್ಲಿ ತಪ್ಪೇನಿದೆ?
> **ಜೀಲಾನಿ ಎಚ್. ಮೊಕಾಶಿ,** ನಿರ್ದೇಶಕ, ಅಲ್ಪಸಂಖ್ಯಾತರ ನಿರ್ದೇಶನಾಲಯ

‘ಸಾರ್ವಜನಿಕ ಶಿಕ್ಷಣ ಇಲಾಖೆಯ ಹಳೆಯ, ಕಿರಿದಾದ ಕೊಠಡಿಗಳಲ್ಲಿ ಮೌಲಾನಾ ಆಜಾದ್ ಶಾಲೆಗಳು ನಡೆಯುತ್ತಿದ್ದು, ಮೂಲಸೌಕರ್ಯಗಳೇ ಇಲ್ಲ. ಹಿಂದಿ ಭಾಷಾ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು, ‘ಡಿ’ ಗ್ರೂಪ್ ನೌಕರರ ಹುದ್ದೆ ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಮಂಜೂರಾಗಿಲ್ಲ. 25 ಶಾಲೆಗಳಲ್ಲಿ ಪಿಯುಸಿ ವಿಭಾಗ ತೆರೆಯಲಾಗಿದೆ.

ಈ ವರ್ಷ ವೆಬ್ ಕಾಸ್ಟಿಂಗ್ ಕಾರಣಕ್ಕೆ ಫಲಿತಾಂಶ ಕಡಿಮೆ ಆಗಿರುವುದು ಎಲ್ಲರಿಗೂ ಗೊತ್ತಿದೆ. 2024–25 ಸಾಲಿನಲ್ಲಿ ಫಲಿತಾಂಶ ಸುಧಾರಿಸಲು ಎಲ್ಲ ರೀತಿಯ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲಿ ಹೀಗೆ ನೋಟಿಸ್ ನೀಡಿ ಮಾನಸಿಕವಾಗಿ ಕುಗ್ಗುವಂತೆ ಮಾಡುತ್ತಿರುವುದು ದುರದೃಷ್ಟಕರ’ ಎಂದು ನೋಟಿಸ್ ಪಡೆದ ಮುಖ್ಯ ಶಿಕ್ಷಕರೊಬ್ಬರು ಪ್ರತಿಕ್ರಿಯಿಸಿದರು.

ಕರ್ತವ್ಯ ಲೋಪವೇನು?

‘2023–24ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಕಡಿಮೆ ಫಲಿತಾಂಶ ದಾಖಲಾಗಲು ನೇರ ಕಾರಣರಾಗಿರುತ್ತೀರಿ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯಲ್ಲಿ ಹಿನ್ನಡೆಯಾಗಲು ಹೊಣೆಗಾರರಾಗುವ ಮೂಲಕ ಕರ್ತವ್ಯದಲ್ಲಿ ಬೇಜವಾಬ್ದಾರಿಯನ್ನು ತೋರಿಸಿದ್ದೀರಿ. ಆ ಮೂಲಕ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳನ್ನು ಉಲ್ಲಂಘಿಸಿದ್ದು, ಶಿಸ್ತುಕ್ರಮಕ್ಕೆ ಗುರಿಯಾಗುತ್ತೀರಿ’ ಎಂದು ಮುಖ್ಯೋಪಾಧ್ಯಾಯರ ಮೇಲೆ ‘ಕರ್ತವ್ಯ ಲೋಪ’ದ ಆರೋಪ ಹೊರಿಸಲಾಗಿದೆ.

ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಕಿರಣ್ ಕರ್ತವ್ಯ

ಕಿರುಕುಳ: ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಸ್‌ಪೋರ್ಟ್‌ಗೆ ಸಂಬಂಧಿಸಿದಂತೆ ದಾಖಲೆಗಳ ಪರಿಶೀಲನೆ ವೇಳೆ 21 ವರ್ಷದ ಯುವತಿಗೆ ಕಿರುಕುಳ ನೀಡಿದ ಹಾಗೂ ಅಸಭ್ಯ ವರ್ತನೆ ತೋರಿದ ಆರೋಪದ ಅಡಿ ಬ್ಯಾಟರಾಯನಪುರ ಪೊಲೀಸ್ ಠಾಣೆ ಕಾನ್‌ಸ್ಟೆಬಲ್ ಕಿರಣ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಯುವತಿ ನೀಡಿದ ದೂರಿನ ಮೇರೆಗೆ ಕಿರಣ್ ಅವರನ್ನು ಪ್ರಾಥಮಿಕವಾಗಿ ವಿಚಾರಣೆ ನಡೆಸಲಾಗಿದೆ. ದೂರು ನೀಡಿ ದವರಿಂದಲೂ ಘಟನೆ ಕುರಿತು ಮಾಹಿತಿ ಪಡೆಯಲಾಗಿದೆ. ಮೇಲ್ನೋಟಕ್ಕೆ ಯುವತಿಯ ಆರೋಪ ನಿಜ ಎಂಬುದು ಕಂಡುಬಂದಿದ್ದು, ಕಿರಣ್‌ನನ್ನು ಅಮಾನತು ಪಡಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಠಾಣಾ ವ್ಯಾಪ್ತಿಯ ಟೆಕಿಯೊಬ್ಬರು ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ನಿರ್ಧರಿಸಿದ್ದರು. ಇತ್ತೀ ಚೆಗೆ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಿ ದ್ದರು. ‘ಪಾಸ್‌ಪೋರ್ಟ್ ವೆರಿಫಿಕೇಷನ್’ಗೆ ಎಂದು ಯುವತಿಯ ಮನೆಗೆ ಕಾನ್‌ಸ್ಟೆಬಲ್ ತೆರಳಿದ್ದರು. ಆ ಸಂದರ್ಭದಲ್ಲಿ ಅಸಭ್ಯ ವರ್ತನೆ ತೋರಿದ ಆರೋಪವಿದೆ’ ಎಂದು ಮೂಲಗಳು ಹೇಳಿವೆ.

‘ದಾಖಲೆಗಳ ಪರಿಶೀಲನೆಗೆ ಮನೆಗೆ ಬಂದಿದ್ದ ವೇಳೆ ಕಿರಣ್ ಮುಂದಿನ ಬಾಗಿಲು ಅರ್ಧಕ್ಕೆ ಮುಚ್ಚಿದರು. ನಿಮ್ಮ ಸಹೋದರನಿಗೆ ಅಪರಾಧ ಹಿನ್ನೆಲೆಯಿದೆ. ತಮಗೆ ಪಾಸ್‌ಪೋರ್ಟ್ ದೊರೆಯದೇ ಇರಬಹುದು. ತಾವು ಸಹಕರಿಸಿದರೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಹೇಳಿದ್ದರು. ಇದಕ್ಕೆ ಆಕೆ ಒಪ್ಪದಿದ್ದಾಗ ತಾನೇ ಬಾಗಿಲು ಮುಚ್ಚಿದ್ದರು. ಅಲ್ಲದೇ ಯಾರಿಗೂ ವಿಷಯ ಹೇಳದಂತೆ ಸೂಚಿಸಿ ಒಮ್ಮೆ ಅಪ್ಪಿ-ಕೊಳ್ಳುವಂತೆ ಬಲವಂತ ಮಾಡಿದ್ದರು’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಕೊಠಡಿಯಲ್ಲಿದ್ದ ಸಹೋದರ: ‘ಈ ಸಂದರ್ಭದಲ್ಲಿ ಸಹೋದರ ಮನೆಯ ಕೊಠಡಿಯಲ್ಲೇ ಇದ್ದರು. ಅದು ಗಮನಕ್ಕೆ ಬಂದ ಕೂಡಲೇ ಕಾನ್‌ಸ್ಟೆಬಲ್ ಮಾತು ಬದಲಿಸಿದರು. ನೀನು ನನ್ನ ಸಹೋದರಿ ಇದ್ದಂತೆ ಎಂಬುದಾಗಿ ಹೇಳಿದರು. ಬಳಿಕ ಮೊಬೈಲ್ ನಂಬರ್ ಬ್ಲಾಕ್ ಮಾಡಿ, ಪಾಸ್‌ಪೋರ್ಟ್ ಬಗ್ಗೆ ಯಾವುದೇ ಮಾಹಿತಿ ನೀಡಲಿಲ್ಲ’ ಎಂಬುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪೊಲೀಸರ ಸೋಗಿನಲ್ಲಿ ₹15 ಲಕ್ಷ ಕಸಿದು ಮೂವರು ಪರಾರಿ

ಅಪರಾಧ ಸುದ್ದಿ

ಬೆಂಗಳೂರು: ನಗರಕ್ಕೆ ಬಂದಿದ್ದ ಕೇರಳದ ವ್ಯಕ್ತಿಯನ್ನು ಪೊಲೀಸರ ಸೋಗಿನಲ್ಲಿ ವಿಚಾರಣೆಗೆ ಕರೆದೊಯ್ಯುವ ನೆಪದಲ್ಲಿ ಅಪಹರಣ ಮಾಡಿ ₹15 ಲಕ್ಷ ಕಸಿದುಕೊಂಡು ಮೂವರು ಪರಾರಿ ಆಗಿದ್ದು, ಈ ಸಂಬಂಧ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೇರಳದ ಮಟನೂರಿನ ಕೆ. ಹಾಶೀಮ್ ಎಂಬವರು ದೂರು ನೀಡಿದ್ದು, ಮೂವರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಹಾಶೀಮ್ ಅವರು ಕುಟುಂಬಸ್ಥರ ಜತೆಗೆ ಮಟನೂರಿನಲ್ಲಿ ನೆಲಸಿದ್ದು, ಸಂಬಂಧಿಕರ ಪಾಲುದಾರಿಕೆ ಯಲ್ಲಿ ಜನತಾ ಬೇಕರಿ ನಡೆಸುತ್ತಿದ್ದಾರೆ. ದೂರುದಾರರ ಪುತ್ರಿ ಫಾತಿಮಾ ಹಸ್ನತ್ ಅವರನ್ನು ಬೆಂಗಳೂರಿನ ಹೆಬ್ಬಾಳದ ನಿವಾಸಿ ಶಮ್ಮಾಸ್ ಅಹ್ಮದ್ ಅವರಿಗೆ ಮದುವೆ ಮಾಡಿ-ಕೊಟ್ಟಿದ್ದರು. ಹಾಶೀಮ್ ಅವರು ಬೆಂಗಳೂರಿನಲ್ಲಿ ಬೇಕರಿ ತೆರಯಲು ನಿರ್ಧರಿಸಿ ಮಳಿಗೆ ನೋಡುವಂತೆ ಅಳಿಯನಿಗೆ ತಿಳಿಸಿದ್ದರು. ಶಮ್ಮಾಸ್ ಅವರು ಮಳಿಗೆಯೊಂದನ್ನು ನೋಡಿ ₹15 ಲಕ್ಷ ಆಗಲಿದೆ ಎಂದು ಮಾಹಿತಿ ನೀಡಿದ್ದರು. ಅದರಂತೆ ದೂರುದಾರರು, ಮಟನೂರಿನ ಸಹಕಾರ ಬ್ಯಾಂಕ್‌ನಲ್ಲಿ ನವೆಂಬರ್ 27ರಂದು ಚಿನ್ನಾಭರಣ ಅಡಮಾನವಿಟ್ಟು₹8 ಲಕ್ಷ ಸಾಲ ಪಡೆದಿದ್ದರು. ಉಳಿದ ಚಿನ್ನಾಭರಣವನ್ನು ತಮ್ಮ ಸ್ನೇಹಿತರಾದ ಮಜೀದ್ ಅವರ ಬಳಿ ಅಡಮಾನ ಇರಿಸಿ ₹4 ಲಕ್ಷ ಪಡೆದಿದ್ದರು. ಅವರ ಬಳಿಯಿದ್ದ ₹3 ಲಕ್ಷ ಸೇರಿದಂತೆ ಒಟ್ಟು ₹15 ಲಕ್ಷವನ್ನು ತೆಗೆದುಕೊಂಡು ನವೆಂಬರ್ 28ರಂದು ಕೇರಳದಿಂದ ಬೆಂಗಳೂರಿಗೆ ಬಸ್‌ನಲ್ಲಿ ಹೊರಟಿದ್ದರು’ ಎಂದು ಪೊಲೀಸರು ಹೇಳಿದರು.

‘ನ.29ರಂದು ಬೆಳಿಗ್ಗೆ 5 ಗಂಟೆಯ ಸುಮಾರಿಗೆ ಸಿಟಿ ಮಾರುಕಟ್ಟೆ ಮೆಟ್ರೊ ನಿಲ್ದಾಣದ ಬಳಿಯಲ್ಲಿ ಇಳಿದು, ಹೆಬ್ಬಾ-ಳದಲ್ಲಿರುವ ಅಳಿಯನ ಮನೆಗೆ ತೆರಳಿದ್ದರು. ಅದೇ ದಿನ ಬೆಳಿಗ್ಗೆ 10 ಗಂಟೆಯ ಸುಮಾರಿಗೆ ಭೂಪಸಂದ್ರದಲ್ಲಿ ಖಾಲಿ ಜಾಗ ವೀಕ್ಷಿಸಿದ್ದರು. ಅಮೃತಹಳ್ಳಿಯಲ್ಲಿ ಮತ್ತೊಂದು ಮಳಿಗೆ ವೀಕ್ಷಿಸಿದ್ದರು. ಎರಡೂ ಸ್ಥಳಗಳೂ ವ್ಯಾಪಾರಕ್ಕೆ ಇಷ್ಟವಾಗದ ಕಾರಣಕ್ಕೆ ಅಂದೇ ರಾತ್ರಿ ಕೇರಳಕ್ಕೆ ಹೊರಟಿದ್ದರು’ ಎಂದು ಪೊಲೀಸರು ಹೇಳಿದರು.

‘ಹಣದ ಬ್ಯಾಗ್ ಸಮೇತ ಕೇರಳಕ್ಕೆ ತೆರಳಲು ನ.29ರಂದು ರಾತ್ರಿ 7.45ರ ಸುಮಾರಿಗೆ ಸಿಟಿ ಮಾರುಕಟ್ಟೆಗೆ ಬಂದಿದ್ದ ಹಾಶೀಮ್ ಬಸ್‌ಗಾಗಿ ಕಾಯುತ್ತಿದ್ದರು. ರಾತ್ರಿ 9.35ರ ಸುಮಾರಿಗೆ ಸ್ಥಳಕ್ಕೆ ಬಂದ ಮೂವರು ‘ನಾವು ಪೊಲೀಸರು. ನಿನ್ನ ಬ್ಯಾಗ್‌ನಲ್ಲಿ ಮಾದಕ ವಸ್ತುವಿದೆ ಎಂಬ ಮಾಹಿತಿ ಬಂದಿದೆ. ಬ್ಯಾಗ್ ಪರಿಶೀಲನೆ ನಡೆಸಬೇಕು. ಪೊಲೀಸ್ ಠಾಣೆಗೆ ಬಾ ಎಂದು ಹೇಳಿ ಬಲವಂತದಿಂದ ಕಾರು ಹತ್ತಿಸಿಕೊಂಡು ಕರೆದೊಯ್ದು ಹಲ್ಲೆ ನಡೆಸಿ ಹಣ ಸುಲಿಗೆ ನಡೆಸಿ ಪರಾರಿಯಾಗಿದ್ದಾರೆ’ ಎಂದು ಪೊಲೀಸರು ಹೇಳಿದರು.

ತೆಕ್ಕಲಕೋಟೆ: ದೇಶದ 10ನೇ ಅತ್ಯುತ್ತಮ ಪೊಲೀಸ್ ಠಾಣೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆ ಪೊಲೀಸ್ ಠಾಣೆಯು 2024ನೇ ಸಾಲಿನ ದೇಶದ 10ನೇ ಅತ್ಯುತ್ತಮ ಪೊಲೀಸ್ ಠಾಣೆಯಾಗಿ ಆಯ್ಕೆಯಾಗಿದೆ.

ಫೇಸ್‌ಬುಕ್‌ನಲ್ಲಿ ಇದರ ಕುರಿತು ಅವರು ಮಾಹಿತಿ ನೀಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ. ಅವರು ಪೊಲೀಸ್ ಠಾಣೆಯ ಕಾರ್ಯ ಚಟುವಟಿಕೆಗೆ ಸಂಬಂಧಿಸಿದ ಹಲವು ವಿಷಯಗಳನ್ನು ಪರಾಮರ್ಶೆ ಮಾಡಿ ಕೇಂದ್ರ ಗೃಹ ಇಲಾಖೆ ಈ ಪ್ರಶಸ್ತಿ ನೀಡುತ್ತದೆ. ತೆಕ್ಕಲಕೋಟೆ ಠಾಣೆ ಈ ಗೌರವಕ್ಕೆ ಆಯ್ಕೆ ಯಾಗಿರುವುದು ಖಚಿತವಾಗಿದೆ. ಆದರೆ, ಪ್ರಮಾಣ ಪತ್ರ ಇನ್ನಷ್ಟೇ ಕೇಂದ್ರದಿಂದ ಬರಬೇಕಿದೆ’ ಎಂದು ತಿಳಿಸಿದ್ದಾರೆ.

ಡಿವೈಎಸ್‌ಪಿ ಕನಕಲಕ್ಷ್ಮಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ, ವಕೀಲೆ ಎಸ್. ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮಿ ಅವರನ್ನು ಸೋಮವಾರ ವಿಚಾರಣೆ ನಡೆಸಿದರು.

‘ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕನಕಲಕ್ಷ್ಮಿ ಅವರಿಗೆ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿತ್ತು. ಅದರಂತೆ ಸೋಮವಾರ ವಿಚಾರಣೆಗೆ ಬಂದಿದ್ದರು. ಅವರಿಂದ ಕೆಲವು ದಾಖಲೆಗಳನ್ನು ಪಡೆದು-ಕೊಳ್ಳಲಾಗಿದೆ. ಪ್ರಕರಣದ ಸಂಬಂಧ ಪ್ರಾಥಮಿಕ ಮಾಹಿತಿ ಪಡೆಯಲಾಗಿದೆ. ಬುಧವಾರ ಮತ್ತೆ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಮಧ್ಯಾಹ್ನ 12ರಿಂದ ಸಂಜೆ ಆರು ಗಂಟೆ ತನಕ ವಿಚಾರಣೆ ನಡೆಸಲಾಗಿದೆ. ಹಲವು ಪ್ರಶ್ನೆಗಳನ್ನು ಕೇಳಲಾಯಿತು. ಆತ್ಮಹತ್ಯೆ ಮಾಡಿಕೊಂಡ ಮಹಿಳೆ ನಿಮ್ಮ ವಿರುದ್ಧ ಹಲವು ಆರೋಪಗಳನ್ನು ಮಾಡಿದ್ದಾರೆ. ವಿವಸ್ತ್ರಗೊಳಿಸಿ ವಿಚಾರಣೆ ನಡೆಸಿದ್ದಾರೆ ಎಂದು ಮರಣ ಪತ್ರದಲ್ಲಿ ಬರೆದಿದ್ದಾರೆ. ಕಿರುಕುಳ ನೀಡಲಾಗಿತ್ತು ಎಂದೂ ಉಲ್ಲೇಖಿಸಿದ್ದಾರೆ. ವಿಚಾರಣೆಗೆ ಬಂದಿದ್ದ ಮಹಿಳೆಯನ್ನು ವಿವಸ್ತ್ರಗೊ-ಳಿಸಿ ವಿಚಾರಣೆ ನಡೆಸಿದ್ದು ನಿಜವೇ? ಕಿರುಕುಳ ನೀಡಿದ್ದು ಸತ್ಯವೇ? ಜೀವಾ ಅವರನ್ನು ವಿಚಾರಣೆಗೆ ಕರೆದಿದ್ದ ಉದ್ದೇಶ ಏನು ಎಂಬ ಪ್ರಶ್ನಾವಳಿಗ-ಳನ್ನು ಕೇಳಿ ಮಾಹಿತಿ ಪಡೆದುಕೊಳ್ಳ-ಲಾಗಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದ್ದ ಹಗರಣದ ತನಿಖೆಯನ್ನು ಸಿ.ಐ.ಡಿ ನಡೆಸುತ್ತಿದ್ದು, ಜೀವಾ ಅವರೂ ವಿಚಾರಣೆ ಎದುರಿಸಿದ್ದರು. ವಿಚಾರಣೆ ವೇಳೆ ತನಿಖಾಧಿಕಾರಿ-ಗಳು ಕಿರುಕುಳ ನೀಡಿದ್ದರು ಎಂದು ಆರೋಪಿಸಿ, ಮರಣ ಪತ್ರ ಬರೆದಿಟ್ಟು ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದರು. ಜೀವಾ ಆತ್ಮಹತ್ಯೆಯ ಕುರಿತು ಅವರ ಸಹೋದರಿ ಸಂಗೀತಾ ನೀಡಿದ್ದ ದೂರಿನ ಅನ್ವಯ ಡಿವೈಎಸ್‌ಪಿ ಕನಕಲಕ್ಷ್ಮಿ ವಿರುದ್ಧ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದೀಗ ಪ್ರಕರಣದ ಮುಂದಿನ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ.

ಮರಣ ಪತ್ರ ರವಾನೆ: ‘ಜೀವಾ ಅವರು ಬರೆದಿದ್ದಾರೆ ಎನ್ನಲಾದ ಮರಣ ಪತ್ರವನ್ನು ವಿಧಿ ವಿಜ್ಞಾನ ಪ್ರಯೋಗಾಯಲಕ್ಕೆ(ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ಕಲವು ಸಂಭಾಷಣೆಗಳನ್ನೂ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಅದರ ವರದಿ ನಿರೀಕ್ಷೆಯಲ್ಲಿದ್ದೇವೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಪ್ರಶಸ್ತಿಗೆ ಆಯ್ಕೆ: ಸನ್ಮಾನ

ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾದ (ಪಿಆರ್‌ಸಿಐ) ಜಾಗತಿಕ ‘ಚಾಣಕ್ಯ’ ಪ್ರಶಸ್ತಿಗೆ ಆಯ್ಕೆಯಾಗಿರುವ ಸಾಧಕರಾದ ಮಮತಾ ಬಿ.ಆರ್, ಕೆ.ಎನ್. ವಾಸುದೇವ ಅಡಿಗ, ಇಂದೂಧರ ಹೊನ್ನಾಪುರ, ಗಿರೀಶ್ ರಾವ್ ಹತ್ವಾರ್, ಎಸ್. ಷಡಕ್ಷರಿ, ಮನೋಹರ್, ಗುರುಕಿರಣ್ ಅವರನ್ನು ಪ್ಯಾನ್-ಇಂಡಿಯಾ ಪ್ರೊಫೆಷನಲ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಲಾಯಿತು. ಶಿಕ್ಷಣ ತಜ್ಞ ವೂಡೆ ಪಿ. ಕೃಷ್ಣ, ನಿವೃತ್ತ ಐಎಎಸ್ ಅಧಿಕಾರಿ ಸಿ. ಸೋಮಶೇಖರ್, ಮಿಸ್ ಗ್ಲೋಬಲ್ ಇಂಡಿಯಾ ಸ್ವೀಜಲ್ ಪುರ್ಟಾಡೊ, ನಟ ರವಿಕಿರಣ್, ಪಿಆರ್‌ಸಿಐ ಅಧ್ಯಕ್ಷ ಎಂ.ಬಿ. ಜಯರಾಮ್, ನಿವೃತ್ತ ಕುಲಪತಿ ಕೆ.ಆರ್. ವೇಣುಗೋಪಾಲ್, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ ರವಿ, ಪಿಆರ್‌ಸಿಐ ರಾಷ್ಟ್ರೀಯ ಅಧ್ಯಕ್ಷೆ ಗೀತಾ ಶಂಕರ್ ಭಾಗವಹಿಸಿದ್ದರು

ಅಪಘಾತ: ಕಿರುತೆರೆ ಸಹ ನಿರ್ದೇಶಕ ಸಾವು

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಹಾಗೂ ಪೆಟ್ರೋಲ್ ಟ್ಯಾಂಕರ್ ಮಧ್ಯೆ ಭಾನುವಾರ ಸಂಭವಿಸಿದ ಅಪಘಾತದಲ್ಲಿ ಗಂಭೀರ ವಾಗಿ ಗಾಯಗೊಂಡಿದ್ದ ಕಿರುತೆರೆ ಸಹ ನಿರ್ದೇಶಕ ಎಚ್.ಆರ್. ಕಿರಣ್ ಕುಮಾರ್(25) ಅವರು ಮೃತಪಟ್ಟಿದ್ದಾರೆ.

ದಾವಣಗೆರೆಯ ಕಿರಣ್ ಕುಮಾರ್ ಅವರು ರಾಜರಾಜೇಶ್ವರಿ ನಗರದಲ್ಲಿ ನೆಲಸಿದ್ದರು. ಕೆಲವು ವರ್ಷಗಳಿಂದ ಕಿರುತೆರೆಯಲ್ಲಿ ಸಹ ನಿರ್ದೇಶಕರಾಗಿ ಅವರು ಕೆಲಸ ಮಾಡುತ್ತಿದ್ದರು.

‘ಭಾನುವಾರ ಸಂಜೆ 6.10ರ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಕಾರ್ಯ ನಿಮಿತ್ತ ನಾಯಂಡಹಳ್ಳಿ ಸಿಗ್ನಲ್ ಕಡೆಗೆ ಕಿರಣ್ ತೆರಳುತ್ತಿದ್ದರು. ಪಂತರಪಾಳ್ಯ ಮೆಟ್ರೊ ನಿಲ್ದಾಣದ ಕೆಳಭಾಗದಲ್ಲಿ ತೆರಳುವಾಗ ಹಿಂದಿನಿಂದ ವೇಗವಾಗಿ ಬಂದ ಪೆಟ್ರೋಲ್ ಟ್ಯಾಂಕರ್ ವಾಹನ ಏಕಾಏಕಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ’ ಎಂದು ಸಂಚಾರ ಪೊಲೀಸರು ಹೇಳಿದರು.

ಚಾಲಕನ ಬಂಧನ: ಟ್ಯಾಂಕರ್ ವಾಹನದ ಚಾಲಕನ ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ವಾಹನದ ಚಾಲಕ ಅರವಿಂದ ಕುಮಾರ್ ಯಾದವ್(35) ಎಂಬಾತನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ.

ಎಂಜಿನಿಯರಿಂಗ್ ‘ಸೀಟ್ ಬ್ಲಾಕಿಂಗ್’ ದಂಧೆ: ಆರೋಪಿಗಳು ವಶಕ್ಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್ ಗಳ ‘ಸೀಟ್ ಬ್ಲಾಕಿಂಗ್’ ದಂಧೆ ನಡೆಸುತ್ತಿದ್ದ ಕೆಲವು ಆರೋಪಿಗಳನ್ನು ಮಲ್ಲೇಶ್ವರದ ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆ(ಸೈಬರ್) ಪೊಲೀಸರು ವಶಕ್ಕೆ ಪಡೆದು ಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

‘ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ನೀಡಿದ ದೂರು ಆಧರಿಸಿ, ನವೆಂಬರ್ 13ರಂದು ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿತ್ತು. ತಾಂತ್ರಿಕ ಸಾಕ್ಷ್ಯ ಆಧರಿಸಿ ಪ್ರಕರಣದ ತನಿಖೆ ನಡೆಸಲಾಗಿತ್ತು. ಕೆಲವು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ವಿಚಾರಣೆ ಮುಂದುವರೆದಿದೆ’ ಎಂದು ಸೈಬರ್ ಠಾಣೆಯ ಮೂಲಗಳು ತಿಳಿಸಿವೆ.

‘ಅಭ್ಯರ್ಥಿಗಳ ಲಾಗಿನ್, ಪಾಸ್‌ವರ್ಡ್, ಗೋಪ್ಯ ಕೀ ಅನ್ನು ಅನಧಿಕೃತವಾಗಿ ಪಡೆದುಕೊಂಡು ಅವರ ಪರವಾಗಿ ಆಯ್ಕೆ ನಮೂದಿಸಿ ಬಿಎಂಎಸ್, ಆಕಾಶ್, ನ್ಯೂ ಹೊರೈಜಾನ್ ಎಂಜಿನಿಯರಿಂಗ್ ಕಾಲೇಜುಗಳಿಗೆ ಲಾಭ ಮಾಡಿಕೊಡಲಾಗಿದೆ. ಇತರೆ ಅರ್ಹ ಅಭ್ಯರ್ಥಿಗಳು ವಂಚಿತರಾಗುವಂತೆ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಂಚಿಸಲಾಗಿದೆ’ ಎಂದು ದೂರು ನೀಡಲಾಗಿತ್ತು.

ಓದುವ ಹವ್ಯಾಸ ಬೆಳೆಸುವ ಇನ್‌ಸ್ಪೆಕ್ಟರ್ ಅನಿತಾ ಪ್ರಯತ್ನ

ಸಂಚಾರ ಠಾಣೆ ಅಂಗಳದಲ್ಲಿ ಗ್ರಂಥಾಲಯ

● ಶಿವರಾಜ್ ಮೌರ್ಯ

ಕೆ.ಆರ್.ಪುರ: ಸಂಚಾರ ಸಿಬ್ಬಂದಿ ಮತ್ತು ದೂರು ನೀಡಲು ಬರುವ ಸಾರ್ವಜನಿಕರಲ್ಲಿ ಓದುವ ಹವ್ಯಾಸ ಬೆಳೆಸಲು ಮಹದೇವಪುರ ಸಂಚಾರ ಠಾಣೆಯ ಇನ್‌ಸ್ಪೆಕ್ಟರ್ ಅನಿತಾ ಅವರು, ಕಚೇರಿ ಆವರಣದಲ್ಲಿ ಪುಟ್ಟದೊಂದು ಗ್ರಂಥಾಲಯ ನಿರ್ಮಿಸಿದ್ದಾರೆ.

ಅನಿತಾ ಅವರು, ಕೆಲಸದ ಬಿಡುವಿನಲ್ಲಿ ಕಥೆ, ಕಾದಂಬರಿ, ಕವನ, ಪ್ರವಾಸ ಕಥನ, ಪತ್ರಿಕೆ ಓದುವ ಹವ್ಯಾಸ ರೂಢಿಸಿಕೊಂಡಿದ್ದಾರೆ. ತಮ್ಮ ಸಿಬ್ಬಂದಿ, ಬಿಡುವಿನ ವೇಳೆಯಲ್ಲಿ ಮೊಬೈಲ್ ಫೋನ್‌ನಲ್ಲಿ ತಲ್ಲಿನ-ರಾಗುವುದನ್ನು ಗಮನಿಸಿದ್ದರು. ಸಿಬ್ಬಂದಿಗೂ ಓದುವ ಹವ್ಯಾಸ ಬೆಳೆಸುವ ಆಲೋಚನೆಯಿಂದ ಗ್ರಂಥಾಲಯ ನಿರ್ಮಿಸಿದ್ದಾರೆ. ಮಾತ್ರವಲ್ಲ, ಕಾರ್ಯನಿಮಿತ್ತ ಠಾಣೆಗೆ ಬರುವ ಸಾರ್ವಜನಿಕರನ್ನೂ ಓದಲು ಉತ್ತೇಜಿಸುತ್ತಿದ್ದಾರೆ.

ಗ್ರಂಥಾಲಯದಲ್ಲಿ ಕುವೆಂಪು, ಎಸ್.ಎಲ್. ಭೈರಪ್ಪ, ಯು.ಆರ್.ಅನಂತಮೂರ್ತಿ ಸೇರಿದಂತೆ ಖ್ಯಾತ ಸಾಹಿತಿಗಳ ಕೃತಿಗಳು, ಕಥೆ, ಕವನ, ಸಣ್ಣ ಕಥೆಗಳು, ನಿಘಂಟು, ಕಥಾ ಸಂಕಲನ, ಪ್ರಬಂಧಗಳು, ಪತ್ತೇದಾರಿ ಕಾದಂಬರಿಗಳನ್ನು ಇಟ್ಟಿದ್ದಾರೆ. ಬಹುತೇಕ ಕನ್ನಡ ದಿನಪತ್ರಿಕೆಗಳನ್ನು ಇಟ್ಟಿದ್ದಾರೆ. ಠಾಣೆಯ ಎಲ್ಲ ಸಿಬ್ಬಂದಿ ಸೇರಿ 500 ಪುಸ್ತಕಗಳನ್ನು ಖರೀದಿಸಿ ಗ್ರಂಥಾಲ-ಯದಲ್ಲಿಡಲು ನಿರ್ಧರಿಸಿದ್ದಾರೆ. ಜೊತೆಗೆ, ಸಾಹಿತ್ಯ ಅಭಿಮಾನಿಗಳು ಮತ್ತು ಕೆಲವು ಸಂಘಟನೆಗಳು ಪುಸ್ತಕ ದೇಣಿಗೆ ನೀಡಲು ಮುಂದೆ ಬಂದಿದ್ದಾರೆ.

ಗ್ರಂಥಾಲಯದಲ್ಲಿ ಸಿಬ್ಬಂದಿ ಪತ್ರಿಕೆ ಓದುವಲ್ಲಿ ನಿರತರಾಗಿರುವುದು

ಗ್ರಂಥಾಲಯದ ಜೊತೆಗೆ ಠಾಣೆಯನ್ನು ವಿಶಿಷ್ಟವಾಗಿ ರೂಪಿಸಿ ‘ಸಂಚಾರ’ಕ್ಕೆ ಸಂಬಂಧಪಟ್ಟ ಗೋಡೆ ಬರಹಗಳನ್ನು ಬರೆಸಿದ್ದಾರೆ. ’ಅಪ್ರಾಪ್ತ ಚಾಲನೆ ಶಿಕ್ಷಾರ್ಹ ಅಪರಾಧ’, ‘ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬೇಡಿ’, ‘ಸುರಕ್ಷತೆಗಾಗಿ ಹೆಲ್ಮೆಟ್ ಬಳಸಿ’ ಎನ್ನುವಂತಹ ಬರಹಗಳನ್ನು ಬರೆಸಿ, ಕಾನೂನಿನ ತಿಳಿವಳಿಕೆ ಮೂಡಿಸುತ್ತಿದ್ದಾರೆ.

ಎಲ್ಲ ಹಿರಿಯ ಅಧಿಕಾರಿಗಳ ನೆರವಿನೊಂದಿಗೆ ಗ್ರಂಥಾಲಯ ನಿರ್ಮಾಣ ಮಾಡಲಾಯಿತು. ಮುಂದಿನ ವಾರ ಡಿಸಿಪಿ ಗ್ರಂಥಾಲಯ ಉದ್ಘಾಟಿಸಲಿದ್ದಾರೆ’ ಎಂದು ಮಹದೇವಪುರ ಸಂಚಾರ ಠಾಣೆಯ ಇನ್‌ಸ್ಪೆಕ್ಟರ್ ಅನಿತಾ ಹೇಳಿದರು.

ಕೆಎಸ್‌ಪಿಸಿಬಿ ಅನುಮತಿ ಇಲ್ಲದೆ ಹಣಕಾಸು ಇಲಾಖೆ ತೀರ್ಮಾನ; ಮಂಡಳಿ ಸಭೆಯಲ್ಲಿ ಸದಸ್ಯರಿಂದ ತೀವ್ರ ಆಕ್ಷೇಪ

ಅರಣ್ಯಕ್ಕೆ ₹426 ಕೋಟಿ: ಮಂಡಳಿ ತಡೆ

• ಆರ್. ಮಂಜುನಾಥ್

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಅನುಮೋದನೆ ಇಲ್ಲದೆ, ಮಂಡಳಿಯ ಖಾತೆಯಿಂದ ₹426 ಕೋಟಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಮಂಡಳಿ ಸಭೆ ತಡೆಯೊಡ್ಡಿದೆ.

ಅರಣ್ಯೀಕರಣ, ಆನೆ ಹಾವಳಿ ತಡೆಗಟ್ಟಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ₹300 ಕೋಟಿ ಹಾಗೂ ಕೆ-ಶೋರ್ ಯೋಜನೆಗೆ ₹126 ಕೋಟಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಲು ಹಣಕಾಸು ಇಲಾಖೆ ಸಮ್ಮತಿಸಿತ್ತು. ಸೋಮವಾರ ನಡೆದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 248ನೇ ಸಭೆಯಲ್ಲಿ ಸದಸ್ಯರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ, 'ಯಾವುದೇ ಕಾರಣಕ್ಕೂ ಹಣ ವರ್ಗಾಯಿಸಬಾರದು' ಎಂದು ಪಟ್ಟುಹಿಡಿದರು.

'ಹಣ ವರ್ಗಾಯಿಸಬಾರದು' ಎಂಬ ಸಭೆಯ ನಿರ್ಣಯವನ್ನು ಸರ್ಕಾರದ ಗಮನಕ್ಕೆ ತರಲು ನಿರ್ಧರಿಸಿ, ಸಭೆಯನ್ನು ಮುಂದೂಡಲಾಯಿತು.

'ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಹಣ ವರ್ಗಾವಣೆ ಮಾಡಲು ಕಾನೂನಿನಲ್ಲಿ ಹಲವು ರೀತಿಯ ತಾಂತ್ರಿಕ ತೊಂದರೆಗಳಿವೆ. ಹೀಗಾಗಿ, ಸರ್ಕಾರ ಹೊರಡಿಸಿರುವ ಆದೇಶಗಳಿಗೆ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿಲ್ಲ. ಈ ಬಗ್ಗೆ ಕೂಲಂಕಷ ಪರಿಶೀಲನೆ ಅಗತ್ಯವಾಗಿದೆ' ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರದಿಂದ ಅನುದಾನ ಪಡೆಯದ ಮಂಡಳಿ, ಎಲ್ಲ ವೆಚ್ಚಗಳನ್ನು ತನ್ನ ರಾಜಸ್ವದಿಂದಲೇ ಭರಿಸಬೇಕಾಗುತ್ತದೆ. ಹೊಸ ಸಿಬ್ಬಂದಿಗೂ ವೇತನ-ಭತ್ಯೆ ನೀಡಬೇಕಾಗುತ್ತದೆ. ಹೀಗಾಗಿ, ಅರಣ್ಯೀಕರಣ ಹಾಗೂ ಬ್ಯಾರಿಕೇಡ್ ಅಳವಡಿಸಲು ಹಣ ನೀಡಬಾರದು. ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಮಂಡಳಿ ₹17 ಕೋಟಿ ನೀಡಿರುವುದಕ್ಕೆ ಮಹಾಲೇಖಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅರಣ್ಯ ಇಲಾಖೆಗೆ ₹300 ಕೋಟಿ ನೀಡಿದರೂ ಆಕ್ಷೇಪ ವ್ಯಕ್ತವಾಗುವ ಸಂಭವವಿರುತ್ತದೆ' ಎಂದು ಸೆಪ್ಟೆಂಬರ್ 9ರಂದು ನಡೆದ ಮಂಡಳಿಯ 247ನೇ ಸಭೆಯಲ್ಲೂ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಮಂಡಳಿ ಸಭೆಯ ನಿರ್ಣಯ, ಹೂಡಿಕೆ ಸಮಿತಿ ನಡಾವಳಿ, ಸಾರ್ವಜನಿಕರ ಆಕ್ಷೇಪಗಳೊಂದಿಗೆ ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಗೆ ಅಕ್ಟೋಬರ್ 9ರಂದು ಮಂಡಳಿಯ ಸದಸ್ಯ ಕಾರ್ಯದರ್ಶಿ ಪತ್ರ ಬರೆದಿದ್ದರು.

ಮಂಡಳಿಯ ತಕರಾರುಗಳನ್ನು ಪತ್ರದಲ್ಲಿ ಉಲ್ಲೇಖಿಸಿರುವ ಅವರು, 'ಹಣ ವರ್ಗಾವಣೆ ಮಾಡುವ ಬಗ್ಗೆ ಅರಣ್ಯ ಇಲಾಖೆಯೇ ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಬೇಕು' ಎಂದಿದ್ದರು. ಇದನ್ನು ಆಧರಿಸಿ, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಣಕಾಸು ಇಲಾಖೆಗೆ ಪತ್ರ ಬರೆದಿದ್ದರು.

'ರಾಜ್ಯ ಮಾಲಿನ್ಯ ಮಂಡಳಿಯಿಂದ ₹200 ಕೋಟಿಯನ್ನು ನಾಲ್ಕು ವರ್ಷಗಳಿಗೆ ಶೇ 7.5ರಷ್ಟು ಸರಳ ಬಡ್ಡಿಯಂತೆ ಪಡೆದುಕೊಳ್ಳಬಹುದು. ಅರಣ್ಯ ಇಲಾಖೆ ಇನ್ನೂ ₹100 ಕೋಟಿಯನ್ನು ಪಡೆಯಲು ಬಯಸಿದರೆ ಅದನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುದಾನವಾಗಿ ಪಡೆದುಕೊಳ್ಳಬಹುದು' ಎಂದು ಹಣಕಾಸು ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯವರು ನವೆಂಬರ್ 27ರಂದು ಅನುಮೋದನೆ (ಎಫ್‌ಡಿ/621/ಇಎಕ್ಸ್‌ಪಿ5/2024; ಎಫ್‌ಇಇ/427/ಇಪಿಸಿ/2024)ನೀಡಿದ್ದರು.

ಈ ಆದೇಶದಂತೆ ಹಣ ವರ್ಗಾವಣೆ ಬಗ್ಗೆ ಸೋಮವಾರ ನಡೆದ ಮಂಡಳಿ ಸಭೆಯಲ್ಲಿ ಆಕ್ಷೇಪ ವ್ಯಕ್ತವಾಯಿತು. ಅನುಮೋದನೆ ನೀಡಲು ಸದಸ್ಯರು ನಿರಾಕರಿಸಿದರು.

ಮಂಡಳಿಗೆ ಬಾಧಕ ಇಲ್ಲ: ಸಚಿವ ಈಶ್ವರ ಖಂಡ್ರೆ

ಈಶ್ವರ ಖಂಡ್ರೆ

'ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ₹300 ಕೋಟಿ ಪಡೆದು ಅರಣ್ಯ ಇಲಾಖೆಯ ವತಿಯಿಂದ ಅರಣ್ಯೀಕರಣ ಮತ್ತು ಮಾನವ-ವನ್ಯಜೀವಿ ಸಂಘರ್ಷ ತಪ್ಪಿಸುವ ಕಾಮಗಾರಿ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಇದರಿಂದ ಮಂಡಳಿಗೆ ಯಾವುದೇ ಬಾಧಕ ಇಲ್ಲ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಹಣ ವರ್ಗಾವಣೆ ಕುರಿತು 'ಪ್ರಜಾವಾಣಿ'ಯ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಅವರು, 'ಇದು ಪರಿಸರ ಪೂರಕ ಚಟುವಟಿಕೆ ಆಗಿದ್ದು, ಮಂಡಳಿಯಲ್ಲಿ ಸಂಗ್ರಹವಾಗುವ ಹಣ ಪರಿಸರಪೂರಕ ಚಟುವಟಿಕೆಗೆ ಬಳಕೆ ಮಾಡಬೇಕು. ಅರಣ್ಯ ಇಲಾಖೆ ಮತ್ತು ಮಂಡಳಿಯ ಉದ್ದೇಶ ಒಂದೇ ಆಗಿದೆ. ಇದು ಒಂದು ಆಂತರಿಕ ಹೊಂದಾಣಿಕೆಯಷ್ಟೆ' ಎಂದರು.

'ಕೆ-ಶೋರ್ ವಿಶ್ವ ಬ್ಯಾಂಕ್ ಪ್ರಾಯೋಜಕತ್ವದ ಯೋಜನೆ, ಇದರಡಿ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಸಮುದ್ರ ಸೇರಿ ಜಲಚರಗಳ ಸಾವಿಗೆ ಕಾರಣವಾಗುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯ ನಿಗ್ರಹವಾಗಲಿದೆ. ಜೊತೆಗೆ ಕಡಲ ಕೊರೆತ ಆಗದಂತೆ ಕಾಂಡ್ಲಾ ವನ ಬೆಳೆಸಲೂ ಈ ಹಣ ಬಳಕೆಯಾಗುತ್ತದೆ. ₹126 ಕೋಟಿಯನ್ನು ರಾಜ್ಯ ಸರ್ಕಾರ ವೆಚ್ಚ ಮಾಡಬೇಕಾಗಿದ್ದು, ಮಂಡಳಿಯಿಂದ ಹಂತ ಹಂತವಾಗಿ ಹಣ ಪಡೆಯಲಾಗುತ್ತದೆ. ವಿಶ್ವ ಬ್ಯಾಂಕ್ ಈ ಹಣವನ್ನು ಮಂಡಳಿಗೆ ಮರು ಪಾವತಿ ಮಾಡುತ್ತದೆ' ಎಂದಿದ್ದಾರೆ.

ಸಚಿವರ ಕಚೇರಿಗೆ ಟಿವಿ, ಫ್ರಿಜ್

ಅರಣ್ಯ ಸಚಿವರ ಆಪ್ತ ಶಾಖೆಯ ಕಚೇರಿಯ ನಿತ್ಯ ಬಳಕೆಗೆ ಕಂಪ್ಯೂಟರ್, ಟ್ಯಾಬ್, ಪ್ರಿಂಟರ್, ಟಿವಿ, ಯುಪಿಎಸ್, ಫ್ರಿಜ್ ಸೇರಿದಂತೆ 19 ವಿಧದ ಎಲೆಕ್ಟ್ರಾನಿಕ್ ಉಪಕರಣ- ಸಾಧನಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ಹಣದಿಂದ ಪೂರೈಸಲಾಗಿದೆ.

ಸಚಿವರ ವಿಶೇಷ ಕರ್ತವ್ಯಾಧಿಕಾರಿ ಅವರ ಟಿಪ್ಪಣಿ ಮೇರೆಗೆ ಮಂಡಳಿ ಸದಸ್ಯ ಕಾರ್ಯದರ್ಶಿ ಅವರು ಸುಮಾರು ₹72 ಲಕ್ಷ ಮೌಲ್ಯದ ಉಪಕರಣಗಳನ್ನು ಪೂರೈಸಲು ಅನುಮೋದನೆ ನೀಡಿದ್ದಾರೆ.



FD/621/EXP5/2024 Finance Department(Exp-5)
FEE/427/EPC/2024 Date.27.11.2024.

The proposal of Administrative Department has been examined. Finance Department concurs with the Proposal of Administrative Department to take Rs 200 crore as loan from KSPCB to be repaid over a period of 4 years with a simple interest of 7.5%.

If Administrative Department wants t take Rs 100 crore to be spent on afforestation activities, then the same should be taken from the KSPCB as a grant.

(Approved by Additional Chief Secretary
Finance Department)

(Aparna Pavate) 27/11/24

₹300 ಕೋಟಿ ಬಿಡುಗಡೆಗೆ ಹಣಕಾಸು ಇಲಾಖೆ ಆದೇಶ

ಕೆ-ಶೋರ್‌ಗೆ ₹126 ಕೋಟಿ

'ಕರಾವಳಿ ಕರ್ನಾಟಕದಲ್ಲಿ ಪ್ಲಾಸ್ಟಿಕ್ ನಿರ್ವಹಣೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ₹126 ಕೋಟಿಯನ್ನು ಬಡ್ಡಿರಹಿತ ಸಾಲವನ್ನಾಗಿ ಅರಣ್ಯ ಇಲಾಖೆ ಪಡೆದುಕೊಂಡು ಕೆ-ಶೋರ್ ಯೋಜನೆಗೆ ಬಳಸಿಕೊಳ್ಳಬಹುದು. ಇದಕ್ಕೆ ರಾಜ್ಯ ಹಣಕಾಸು ಇಲಾಖೆಯ ಸಮ್ಮತಿಯನ್ನು ಪಡೆಯಲಾಗಿದೆ' ಎಂದು ಅರಣ್ಯ ಇಲಾಖೆಯ ಕಾರ್ಯದರ್ಶಿ ನವೆಂಬರ್ 26ರಂದು ಆದೇಶ (ಸರ್ಕಾರಿ ಆದೇಶ: ಎಫ್‌ಇಇ 41) ಹೊರಡಿಸಿದ್ದಾರೆ.

ಕೆ-ಶೋರ್‌ಗೆ ಹಣ ನೀಡುವ ವಿಷಯ ಮಂಡಳಿ ಸಭೆಯಲ್ಲಿ ಚರ್ಚೆಯಾಗಿಲ್ಲ. ಅರಣ್ಯ ಪಡೆಯ ಮುಖ್ಯಸ್ಥರು, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಪ್ರಸ್ತಾವದಂತೆ ಅನುಮೋದನೆ ನೀಡಲಾಗಿತ್ತು. ಇದಕ್ಕೂ ಮಂಡಳಿ ಸಭೆಯಲ್ಲಿ ಆಕ್ಷೇಪ ವ್ಯಕ್ತವಾಯಿತು.

ಸಂವಿಧಾನ ಬದಲಿಸಬೇಕೆಂದು ಹೇಳಿಯೇ ಇಲ್ಲ: ಪೇಜಾವರ ಶ್ರೀ

ಪ್ರಜಾವಾಣಿ ವಾರ್ತೆ

ಉಡುಪಿ: 'ಸಂವಿಧಾನವನ್ನು ಬದಲಿಸಬೇಕು ಎನ್ನುವ ಮಾತನ್ನು ನಾನು ಆಡಿಯೇ ಇಲ್ಲ' ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಸುದ್ದಿಗಾರರ ಜೊತೆ ಇಲ್ಲಿ ಮಾತನಾಡಿದ ಅವರು, 'ವಿಶ್ವ ಹಿಂದೂ ಪರಿಷತ್ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸಂತ ಸಮಾವೇಶ ನಡೆದಿತ್ತು. ಅಲ್ಲಿ ನನ್ನ ಭಾಷಣದಲ್ಲಾಗಲಿ ಅಥವಾ ರಾಜ್ಯಪಾಲರಿಗೆ ಸಲ್ಲಿಸಲಾದ ಸಮಾವೇಶದ ನಿರ್ಣಯಗಳ ಲಿಖಿತ ಪ್ರತಿಯಲ್ಲಾಗಲಿ ಸಂವಿಧಾನ ಬದಲಾಯಿಸುವ ಕುರಿತ ಉಲ್ಲೇಖ ಇಲ್ಲ. ಆದರೂ ಕೆಲವರು ದಂಗೆ ಎದ್ದ ರೀತಿ ವರ್ತಿಸುತ್ತಿದ್ದಾರೆ' ಎಂದರು.

'ನನ್ನ ವಿರುದ್ಧ ಪ್ರತಿಭಟಿಸುವ ಮತ್ತು ಖಂಡಿಸುವ ಕೆಲಸವಾಗುತ್ತಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಮುಖ್ಯಮಂತ್ರಿ ಅವರ ಹೇಳಿಕೆಯಿಂದ ಇಷ್ಟೆಲ್ಲ ಆಗಿದೆ, ಅವರು ಪರಿಶೀಲಿಸಿ ಮಾತನಾಡಬೇಕಾಗಿತ್ತು. ಸಮಾವೇಶದ ವಿಡಿಯೊ ಅಥವಾ ಲಿಖಿತ ರೂಪದ ನಿರ್ಣಯ ಪತ್ರವನ್ನು ಪರಿಶೀಲಿಸಬಹುದು' ಎಂದು ಹೇಳಿದರು.

'ನಮ್ಮ ದೇಶದ ಜನಗಣತಿ ಹೇಳುವ ಪ್ರಕಾರ ಇದು ಹಿಂದೂಸ್ತಾನ. ಅದನ್ನು ಭಾರತ, ಇಂಡಿಯಾ ಎಂದೆಲ್ಲಾ ಹೇಳಿ. ಆದರೆ, ಇದು ಬಹುಸಂಖ್ಯಾತ ಹಿಂದೂಗಳ ರಾಷ್ಟ್ರ, ಇಲ್ಲಿ ಹಿಂದೂಗಳ ಭಾವನೆಗೂ ಬೆಲೆ ಕೊಡುವ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು ಎಂದು ನಾನು ಹೇಳಿದ್ದು ಹೌದು. ಸಂವಿಧಾನ ಬದಲಿಸಿ ಅಥವಾ ತಿದ್ದುಪಡಿ ಮಾಡಿ ಎಂದು ನಾನು ಯಾವತ್ತೂ ಹೇಳಿಲ್ಲ' ಎಂದು ಸ್ಪಷ್ಟಪಡಿಸಿದರು.

'ನಾನು ಪ್ರತಿ ಚುನಾವಣೆಯಲ್ಲೂ ಮತದಾನ ಮಾಡುತ್ತೇನೆ, ಈವರೆಗೆ ಯಾವುದೇ ಸಂವಿಧಾನ ವಿರೋಧಿ ಕೃತ್ಯ ಮಾಡಿಲ್ಲ. ಸಮಾಜದಲ್ಲಿ ದುರ್ಬಲರ ಸೇವೆಯನ್ನು ನಿರಂತರ ಮಾಡುತ್ತಿದ್ದೇವೆ, ಬಡವರಿಗೆ ಮನೆ ಕಟ್ಟಿಸಿ ಕೊಡುತ್ತಿದ್ದೇವೆ, ನಮ್ಮಿಂದ ಪ್ರೇರಣೆಗೊಂಡು ಅನೇಕ ಮಂದಿ ದುರ್ಬಲರಿಗೆ ಸೂರು ಕಟ್ಟಿಸಿ ಕೊಡುತ್ತಿದ್ದಾರೆ' ಎಂದರು.

'ನನ್ನನ್ನು ಯಾಕೆ ಗುರಿಯಾಗಿಸುತ್ತಿದ್ದಾರೆ ಎಂದು ಗುರಿ ಮಾಡುತ್ತಿರುವವರೇ ಹೇಳಬೇಕು. ನನ್ನನ್ನು ಹಣಿದರೆ ಹಿಂದೂ ಸಮಾಜಕ್ಕೆ ಮುಖವಾಣಿ ಇಲ್ಲವಾಗುತ್ತದೆ ಎಂದು ಅವರು ಅಂದುಕೊಂಡಿರಬಹುದು' ಎಂದು ಹೇಳಿದರು.

ಶಿವಸ್ವಾಮಿ ಕೆಎಂಎಫ್ ಎಂಡಿ

ಬೆಂಗಳೂರು: ಮುಖ್ಯಮಂತ್ರಿ ಜಂಟಿ ಕಾರ್ಯದರ್ಶಿಯಾಗಿದ್ದ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿ ಬಿ. ಶಿವಸ್ವಾಮಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ಅವರನ್ನು ಮುಂದಿನ ಸ್ಥಳ ನಿಯುಕ್ತಿಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಳ್ಳುವಂತೆಯೂ ನಿರ್ದೇಶನ ನೀಡಲಾಗಿದೆ.

ಬಿಎಸ್‌ವೈ ಪ್ರಕರಣ: ಹೇಳದ ಮಾತು ನೂರಿವೆ...

ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣ; ಹೈಕೋರ್ಟ್‌ಗೆ ವಕೀಲ ಎಸ್.ಬಾಲನ್ ವಿವರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ಹೇಳಬೇಕಾದ ಸಂಗತಿಗಳು ಬಹಳಷ್ಟಿವೆ' ಎಂದು ಸಂತ್ರಸ್ತ ಬಾಲಕಿಯ ಅಣ್ಣನ ಪರ ವಕೀಲ ಎಸ್.ಬಾಲನ್ ಹೈಕೋರ್ಟ್‌ಗೆ ಅರುಹಿದರು.

ಪ್ರಕರಣ ರದ್ದುಪಡಿಸುವಂತೆ ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಎಸ್.ಬಾಲನ್ ಅವರು, 'ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ಗೆ ಪೂರಕವಾಗಿ ನಾನೂ ಸಾರಾಂಶದ ಪಟ್ಟಿಯೊಂದನ್ನು ಸಿದ್ಧಪಡಿಸಿದ್ದೇನೆ. ಈ ವಿಷಯದಲ್ಲಿ ಆರೋಪಿ ಯಡಿಯೂರಪ್ಪನವರಿಗೆ ಸಂಬಂಧಿಸಿದಂತೆ ನ್ಯಾಯಪೀಠಕ್ಕೆ ಬಿನ್ನವಿಸಬೇಕಾದ ಅನೂಹ್ಯ ಸಂಗತಿಗಳು ಅಡಕಗೊಂಡಿವೆ' ಎಂದರು.

ಇದೇ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಆದ ಹಿರಿಯ ವಕೀಲ ರವಿವರ್ಮ ಕುಮಾರ್, 'ಆರೋಪಿ ಯಡಿಯೂರಪ್ಪನವರಿಗೆ ಪೋಕ್ಸೊ ವಿಶೇಷ ನ್ಯಾಯಾಲಯಕ್ಕೆ ಖುದ್ದು ಹಾಜರಾಗುವುದಕ್ಕೆ ವಿನಾಯಿತಿ ನೀಡಿ ಹೈಕೋರ್ಟ್ ಈ ಹಿಂದೆ ಹೊರಡಿಸಿರುವ ಮಧ್ಯಂತರ ಆದೇಶವನ್ನು ತೆರವುಗೊಳಿಸಬೇಕು' ಎಂದು ಮನವಿ ಮಾಡಿದರು.

ಆಗ ಮಧ್ಯಪ್ರವೇಶಿಸಿದ, ಯಡಿಯೂರಪ್ಪ ಪರ ಹಿರಿಯ ವಕೀಲ ಸಿ.ವಿ.ನಾಗೇಶ್, 'ಪ್ರಾಸಿಕ್ಯೂಷನ್ ಆಕ್ಷೇಪಣೆಗೆ ನಾನೂ ಎಲ್ಲ ತಯಾರಿ ಮಾಡಿಕೊಂಡೇ ಬಂದಿದ್ದೇನೆ' ಎಂದು ಕಡತ ಪ್ರದರ್ಶಿಸಲು ಮುಂದಾದರು.

ಕಲಾಪ ಮುಕ್ತಾಯದ ಘಟ್ಟದಲ್ಲಿದ್ದ ಕಾರಣ ನ್ಯಾಯಮೂರ್ತಿ ನಾಗಪ್ರಸನ್ನ ಅವರು, 'ವಿಚಾರಣೆಯನ್ನು ಶುಕ್ರವಾರಕ್ಕೆ (ಡಿ.6) ನಿಗದಿಗೊಳಿಸೋಣ ಮತ್ತು ಎಲ್ಲ ಸಂಗತಿಗಳನ್ನೂ ಆವತ್ತೇ ಕೂಲಂಕಷವಾಗಿ ಪರಿಶೀಲನೆ ಮಾಡೋಣ' ಎಂದರು.

'ವಿಶೇಷ ನ್ಯಾಯಾಲಯಕ್ಕೆ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಕಲಂ 35ರ ಪ್ರಕಾರ ಅಪರಾಧಕ್ಕೆ ಸಂಬಂಧಿಸಿದಂತೆ ಮಾಡಲಾಗಿರುವ ಆರೋಪವನ್ನು ಪರಿಗಣಿಸಿದ ನಂತರ ಒಂದು ತಿಂಗಳ ಅವಧಿಯಲ್ಲಿ ಸಾಕ್ಷಿ ಹಾಗೂ ಆರೋಪಿಯ ಹೇಳಿಕೆ ದಾಖಲಿಸಿಕೊಳ್ಳುವುದು ಕಡ್ಡಾಯ. ಆದರೆ, ಪ್ರಕರಣದಲ್ಲಿ ಆರೋಪ ಪರಿಗಣಿಸಿ ಈಗಾಗಲೇ ಆರು ತಿಂಗಳು ಕಳೆದಿದೆ ಎಂಬ ಪ್ರಾಸಿಕ್ಯೂಷನ್ ಮನವಿಯನ್ನೂ ಮುಂದಿನ ವಿಚಾರಣೆಯಲ್ಲೇ ಅಖೈರುಗೊಳಿಸಲಾಗುವುದು' ಎಂದು ತಿಳಿಸಿದರು.

'ಪೊಲೀಸರು ಯಡಿಯೂರಪ್ಪ ಅವರನ್ನು ಬಂಧಿಸಬಾರದು ಮತ್ತು ವಿಚಾರಣೆ ಎದುರಿಸಲು ಅವರ ಖುದ್ದು ಹಾಜರಾತಿಗೆ ವಿನಾಯಿತಿ ನೀಡಲಾಗಿದೆ' ಎಂಬ ತನ್ನ ಮಧ್ಯಂತರ ಆದೇಶವನ್ನು ಇದೇ 6ರವರೆಗೆ ಪುನಃ ವಿಸ್ತರಿಸಿ ಆದೇಶಿಸಿದರು. ಪ್ರಾಸಿಕ್ಯೂಷನ್ ಪರ ಅಶೋಕ್ ಎನ್.ನಾಯಕ್, ಯಡಿಯೂರಪ್ಪ ಪರ ವಕಾಲತ್ತು ವಹಿಸಿದ್ದ ಸಂದೀಪ್ ಎಸ್.ಪಾಟೀಲ್ ಇದ್ದರು.

ಸರ್ಕಾರಿ ಶಾಲೆಗಳಿಗೆ ವಿನಾಯಿತಿ ಸಲ್ಲ: ಹೈಕೋರ್ಟ್

ಬೆಂಗಳೂರು: 'ಅನುದಾನರಹಿತ ಶಾಲೆಗಳಿಗೆ ವಿಧಿಸಲಾಗಿರುವ ಕಟ್ಟಡ-ಅಗ್ನಿ ಸುರಕ್ಷತೆ ಸೇರಿದಂತೆ ಹಲವು ಷರತ್ತುಗಳ ಪಾಲನೆ ಹಾಗೂ ಈ ದಿಸೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಅಳವಡಿಕೆಯಲ್ಲಿ ಸರ್ಕಾರಿ ಶಾಲೆಗಳಿಗೆ ವಿನಾಯಿತಿ ಸಲ್ಲದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಸಂಘಟನೆ' (ಅವರ್ಸ್ ಸ್ಕೂಲ್ಸ್) ಕಾರ್ಯದರ್ಶಿ ಎನ್.ಪ್ರಭಾಕರ ಅರಸ್ ಸೇರಿದಂತೆ ಒಟ್ಟು 11 ವಿದ್ಯಾಸಂಸ್ಥೆ ಪ್ರತಿನಿಧಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈ ವಿಷಯದಲ್ಲಿ ಸರ್ಕಾರ ಕೂಡಾ ಮಾದರಿ ನಾಗರಿಕನಂತೆ ನಡೆದುಕೊಳ್ಳಬೇಕು' ಎಂದು ಹೇಳಿದೆ.

'ಈ ಪ್ರಕರಣದಲ್ಲಿ ಅನೇಕ ಆರ್ಥಿಕ ವಿಚಾರಗಳು ಅಡಕವಾಗಿವೆ. ಹಾಗಾಗಿ, ಕಟ್ಟಡ ಸುರಕ್ಷತೆ, ಅಗ್ನಿ ಸುರಕ್ಷತೆ ಪ್ರಮಾಣ ಪತ್ರ ಪಡೆದುಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಖಾಸಗಿ ಅನುದಾನರಹಿತ ಶಾಲೆಗಳಿಗೆ ಮುಂದಿನ ಶೈಕ್ಷಣಿಕ ವರ್ಷ ಅಂದರೆ, 2025-26ರವರೆಗೆ ಕಾಲಾವಕಾಶ ನೀಡಿ' ಎಂದು ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶನ ನೀಡಿದೆ.

'ಖಾಸಗಿ ಶಾಲೆಗಳಿಗೆ ಕಡ್ಡಾಯಗೊಳಿಸಿರುವ ಷರತ್ತುಗಳು ಸರ್ಕಾರಿ ಶಾಲೆಗಳಿಗೂ ಅನ್ವಯವಾಗುತ್ತವೆ. ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆಯ ಕ್ರಮಗಳನ್ನು ಖಾಸಗಿ ಶಾಲೆಗಳು ಕಡ್ಡಾಯವಾಗಿ ಪಾಲಿಸಬೇಕೆಂದು ಬಯಸುವ ಸರ್ಕಾರ, ತನ್ನ ಅಧೀನದಲ್ಲಿರುವ ಸರ್ಕಾರಿ ಶಾಲೆಗಳಲ್ಲೂ ಇಂತಹುದನ್ನೇ ನಿರೀಕ್ಷಿಸಬೇಕು' ಎಂದು ಹೇಳಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸುದರ್ಶನ ಸುರೇಶ್ ವಾದ ಮಂಡಿಸಿದರು.

ಅರ್ಜಿಯಲ್ಲಿ ಏನಿತ್ತು?: 'ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಕಟ್ಟಡ ಮತ್ತು ಅಗ್ನಿ ಸುರಕ್ಷತಾ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ಪಡೆದು ಸಲ್ಲಿಸುವ ಶಾಲೆಗಳ ನೋಂದಣಿ, ಮಾನ್ಯತೆ ಹಾಗೂ ಮಾನ್ಯತೆ ನವೀಕರಣವನ್ನು ನಿಯಮಾನುಸಾರ ಮಾಡಬೇಕು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು 2022ರ ಜೂನ್ 6ರಂದು ಹೊರಡಿಸಿದ್ದ ಸುತ್ತೋಲೆಯನ್ನು ಅರ್ಜಿದಾರರು ಪ್ರಶ್ನಿಸಿದ್ದರು.

ಸಿತಾರ್ ರತ್ನ ರಹಿಮತ್ ಖಾನ್ ಸ್ಮರಣಾರ್ಥ ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಮೆಮೊರಿಯಲ್ ಟ್ರಸ್ಟ್, ಸಿತಾರ್ ರತ್ನ ಸಮಿತಿ ಮತ್ತು ವಿವಿಧ ಸಂಸ್ಥೆಗಳು ಧಾರವಾಡದಲ್ಲಿ ಸೋಮವಾರ ಏರ್ಪಡಿಸಿದ್ದ ಸಂಗೀತೋತ್ಸವದಲ್ಲಿ ಮನೋಹರ ಗ್ರಂಥಮಾಲದ ಪ್ರಕಾಶಕ ರಮಾಕಾಂತ ಜೋಶಿ ಅವರು ಹಿಂದೂಸ್ತಾನಿ ಗಾಯಕಿ ಮುಂಬೈನ ಅಶ್ವಿನಿ ಭಿಡೆ ಅವರಿಗೆ ಇನ್ಫೋಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಮೆಮೊರಿಯಲ್ ಪ್ರಶಸ್ತಿ ಪ್ರದಾನ ಮಾಡಿದರು ಪ್ರಜಾವಾಣಿ ಚಿತ್ರ

'ನಮ್ಮಲ್ಲಿ ಬಣಗಳಿಲ್ಲ'

ಹೊನ್ನಾಳಿ (ದಾವಣಗೆರೆ): 'ಬಿಜೆಪಿಯಲ್ಲಿ ಯಾವ ಬಣಗಳೂ ಇಲ್ಲ. ಈಗ ಉಂಟಾಗಿರುವ ಗೊಂದಲ ತಾತ್ಕಾಲಿಕ. ಇದರಿಂದ ನಿಷ್ಠಾವಂತ ಕಾರ್ಯಕರ್ತರಿಗೆ ನೋವಾಗಿರುವುದು ನಿಜ. ಪಕ್ಷವನ್ನು ಮತ್ತೆ ಸಂಘಟಿಸುತ್ತೇವೆ. ಬಿಜೆಪಿ ಮತ್ತೆ ಪುಟಿದೇಳಲಿದೆ' ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದ್ದಾರೆ.

'ಬಿ.ವೈ.ವಿಜಯೇಂದ್ರ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿರುವುದು ಪಕ್ಷದ ವರಿಷ್ಠರು. ಅವರನ್ನು ಟೀಕಿಸಿದರೆ ಹೈಕಮಾಂಡ್ ಅನ್ನೇ ಟೀಕಿಸಿದಂತೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

Air Force School, ASTE

NAL Wind Tunnel Road, Murugeshpalya, Bengaluru -560 017

TENDER NOTIFICATION

Air Force School, ASTE, invites tender for purchase of **20 nos. of 75" UHD Touch Interactive Display.** Tender forms are available on **www.afsaste.edu.in**. For details contact 080-25272332/ 25276920.

ಫಾರಂ ಜಿ

ಶಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (SSPL) ಮತ್ತು ಇದರ ಸಂಪೂರ್ಣ ಸ್ವಾಮ್ಯ ಹೊಂದಿರುವ ಅಂಗಸಂಸ್ಥೆಯಾದ ಶಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್ (SFPL) ಕಂಪನಿಗಾಗಿ ಆಸಕ್ತಿಯ ಅಭಿವ್ಯಕ್ತಿಗೆ (EOI) ಆಹ್ವಾನ

(ಭಾರತೀಯ ದಿವಾಳಿತನ ಮತ್ತು ದಿವಾಳಿತನ ಘೋಷಣಾ ಮಂಡಳಿ (ಕಾರ್ಪೊರೇಟ್ ವ್ಯಕ್ತಿಗಳಿಗಾಗಿ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಬಂಧನೆಗಳು, 2016 ರ ನಿಬಂಧನೆ 36 (ಎ) (1) ಅಡಿಯಲ್ಲಿ)

ಸಂಬಂಧಪಟ್ಟ ವಿವರಗಳು

1	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು ಮತ್ತು CIN	**ಶಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್** (CIN: U74110KA2020PTC134121) ಮತ್ತು **ಶಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್** (CIN: U51909KA2022PTC159010)
2	ಸಾಲಗಾರ ಸಂಸ್ಥೆಯ ನೋಂದಾಯಿತ ಕಚೇರಿಯ ವಿಳಾಸ	#1207/343, 9ನೇ ಮೈನ್, 7ನೇ ಹಂತ, ಎಚ್ ಎಸ್ ಆರ್ ಲೇಔಟ್, ಬೆಂಗಳೂರು-560102
3	ವೆಬ್ ಸೈಟ್ ನ ಯು ಆರ್ ಎಲ್	ಅನ್ವಯಿಸುವುದಿಲ್ಲ
4	ಬಹುಪಾಲು ಸ್ಥಿರಾಸ್ತಿಯನ್ನು ಹೊಂದಿರುವ ಸ್ಥಳದ ವಿವರಗಳು	ಅನ್ವಯಿಸುವುದಿಲ್ಲ
5	ಮುಖ್ಯ ಉತ್ಪನ್ನಗಳ ಸ್ಥಾಪಿತ (Installed) ಸಾಮರ್ಥ್ಯ (ವಾರ್ಷಿಕ ಉತ್ಪಾದನೆ ಮೆಟ್ರಿಕ್ ಟನ್ ಗಳಲ್ಲಿ)	ನೈಸರ್ಗಿಕ ನಾರುಗಳಿಗೆ ಸಂಬಂಧಿಸಿದ ಸರಕುಗಳ ಪೂರೈಕೆ ಸರಣಿ ವ್ಯಾಪಾರದ ವ್ಯವಹಾರದಲ್ಲಿ SSPL ತೊಡಗಿತ್ತು. ರೇಷ್ಮೆ ಗೂಡುಗಳಂತಹ ಎಲ್ಲಾ ಕೃಷಿ ಸಂಬಂಧಿತ ಉತ್ಪನ್ನಗಳು, ರಸಗೊಬ್ಬರಗಳು ಇತ್ಯಾದಿಗಳ ಖರೀದಿ, ಮಾರಾಟ, ಸಗಟು ವ್ಯಾಪಾರ, ಮತ್ತು ಚಿಲ್ಲರೆ ವ್ಯಾಪಾರದಂತಹ ವ್ಯವಹಾರದಲ್ಲಿ SFPL ತೊಡಗಿಸಿಕೊಂಡಿತ್ತು.
6	ಕಳೆದ ಹಣಕಾಸು ವರ್ಷದಲ್ಲಿ ಮಾರಾಟ ಮಾಡಿದ ಉತ್ಪನ್ನಗಳ / ಸೇವೆಗಳ ಪ್ರಮಾಣ ಮತ್ತು ಮೌಲ್ಯ	**SSPL**: FY 2023-24 ರ ವಹಿವಾಟು 430 ಕೋಟಿ ರೂಪಾಯಿ **SFPL**: FY 2023-24 ರ ವಹಿವಾಟು 106 ಕೋಟಿ ರೂಪಾಯಿ
7	ಉದ್ಯೋಗಿಗಳು / ಕಾರ್ಮಿಕರು ಸಂಖ್ಯೆ	SSPL ಮತ್ತು SFPL ನಲ್ಲಿ CIRP ಪ್ರಾರಂಭವಾದ ದಿನಾಂಕದ ಮಾಹಿತಿ ಪ್ರಕಾರ ಉದ್ಯೋಗಿಗಳು / ಕಾರ್ಮಿಕರು ಯಾರೂ ಇರುವುದಿಲ್ಲ
8	ಕೊನೆಯ ಎರಡು ವರ್ಷದಲ್ಲಿ ಲಭ್ಯವಿರುವ ಹಣಕಾಸು ಹೇಳಿಕೆಗಳು (ವೇಳಾಪಟ್ಟಿಗಳೊಂದಿಗೆ), ಸಾಲಗಾರ ಪಟ್ಟಿಗಳು, ಪ್ರಕ್ರಿಯೆಯ ನಂತರದ ಘಟನೆಗಳಿಗೆ ಸಂಬಂಧಿಸಿದ ದಿನಾಂಕಗಳು ಒಳಗೊಂಡಂತೆ ಹೆಚ್ಚಿನ ವಿವರಗಳು ಇಲ್ಲಿ ಲಭ್ಯವಿದೆ:	ಮಧ್ಯಂತರ ಪರಿಹಾರ ವೃತ್ತಿಪರರಿಗೆ ಈ ಕೆಳಗಿನ ವಿಳಾಸದಲ್ಲಿ ಕ್ರಮವಾಗಿ ಇಮೇಲ್ ಕಳುಹಿಸುವ ಮೂಲಕ ನಿಮ್ಮ ವಿನಂತಿಯನ್ನು ಕೋರಬಹುದು. cirp.shapos.services@beleyur.com ಮತ್ತು cirp.shapos.farms@beleyur.com
9	ಸಂಹಿತೆಯ ಕಾಲಂ (25)(2)(ಎಚ್) ಅಡಿಯಲ್ಲಿ ರೆಸಲ್ಯೂಷನ್ ಅಪ್ಲಿಕೆಂಟ್ಸ್ ಆಗಲು ಇರುವ ಅರ್ಹತೆಗಳನ್ನು ಪಡೆದುಕೊಳ್ಳಲು	ಮಧ್ಯಂತರ ಪರಿಹಾರ ವೃತ್ತಿಪರರಿಗೆ ಈ ಕೆಳಗಿನ ವಿಳಾಸದಲ್ಲಿ ಕ್ರಮವಾಗಿ ಇಮೇಲ್ ಕಳುಹಿಸುವ ಮೂಲಕ ನಿಮ್ಮ ವಿನಂತಿಯನ್ನು ಕೋರಬಹುದು. cirp.shapos.services@beleyur.com ಮತ್ತು cirp.shapos.farms@beleyur.com
10	ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಸ್ವೀಕರಿಸಲು ಕೊನೆಯ ದಿನಾಂಕ	**17ನೇ ಡಿಸೆಂಬರ್ 2024**
11	ಸಂಭಾವ್ಯ ಪರಿಹಾರದ ಯೋಜನೆಯ ಅಭ್ಯರ್ಥಿಗಳ ಹಂಗಾಮಿ ಪಟ್ಟಿಯನ್ನು ಪ್ರಕಟಿಸುವ ದಿನಾಂಕ	**20 ನೇ ಡಿಸೆಂಬರ್ 2024**
12	ಸಂಭಾವ್ಯ ಪಟ್ಟಿಗೆ ಆಕ್ಷೇಪಗಳನ್ನು ಸಲ್ಲಿಸಲು ಕೊನೆಯ ದಿನಾಂಕ	**26 ನೇ ಡಿಸೆಂಬರ್ 2024**
13	ಅಭಿವ್ಯಕ್ತಿಯ ಆಸಕ್ತಿಯನ್ನು (EOI) ಕಳುಹಿಸಬೇಕಾದ ಇ-ಮೇಲ್ ವಿಳಾಸ	ಕ್ರಮವಾಗಿ **SSPL:** cirp.shapos.services@beleyur.com **SFPL:** cirp.shapos.farms@beleyur.com

ಸಹಿ
ಮಧ್ಯಂತರ ಪರಿಹಾರ ವೃತ್ತಿಪರರು
ಶಪೋಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
ಮತ್ತು
ಶಪೋಸ್ ಫಾರ್ಮ್ಸ್ ಪ್ರೈವೇಟ್ ಲಿಮಿಟೆಡ್
ವಿಳಾಸ : 'ಶ್ರೀವತ್ಸ', #428, 19 ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು - 560011
ಸ್ಥಿರ ದೂರವಾಣಿ : 080-41324113
ಮೊಬೈಲ್ : +91-9448146963
ಇಮೇಲ್ : ravi@beleyur.com

ದಿನಾಂಕ : 02 ನೇ ಡಿಸೆಂಬರ್ 2024
ಸ್ಥಳ : ಬೆಂಗಳೂರು

'ಬಿಜೆಪಿ-ಜೆಡಿಎಸ್‌ನವರನ್ನು ರಾಜಣ್ಣ ಕರೆ ತರಬಹುದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆ.ಎನ್. ರಾಜಣ್ಣ ಅವರು ಪಕ್ಷದ ನೇತೃತ್ವ ವಹಿಸಲು ತುಡಿತದಲ್ಲಿದ್ದಾರೆ. ಜನತಾದಳ, ಬಿಜೆಪಿಯವರ ಜೊತೆ ಅವರು ಒಳ್ಳೆಯ ಸಖ್ಯ ಇಟ್ಟುಕೊಂಡಿದ್ದಾರೆ. ಅಲ್ಲಿಂದ ಒಂದಷ್ಟು ಜನರನ್ನು ಕರೆದುಕೊಂಡು ಬರಬಹುದು ಎನಿಸುತ್ತದೆ. ಹೀಗಾಗಿ, ಅವರಿಗೆ ಹೈಕಮಾಂಡ್ ಜವಾಬ್ದಾರಿ ವಹಿಸಿದರೆ ಸಹಕಾರ ನೀಡಲು ಸಿದ್ಧ' ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಹೇಳಿದರು.

ಡಿ.ಕೆ. ಸುರೇಶ್

'ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಿದರೆ ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ' ಎನ್ನುವ ರಾಜಣ್ಣ ಅವರ ಹೇಳಿಕೆ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸುರೇಶ್, 'ತಮ್ಮ ನೇತೃತ್ವದಲ್ಲಿ ಪಕ್ಷ ಇನ್ನಷ್ಟು ಉತ್ತಮವಾಗಿ ಸಂಘಟನೆಯಾಗುತ್ತದೆ ಎನ್ನುವ ವಿಶ್ವಾಸ ರಾಜಣ್ಣ ಅವರಿಗಿದೆ' ಎಂದರು.

'ಜವಾಬ್ದಾರಿ ಹೊತ್ತುಕೊಳ್ಳಲು ಯಾರೇ ಮುಂದೆ ಬಂದರೂ, ಪಕ್ಷದ ಹೈಕಮಾಂಡ್ ತೀರ್ಮಾನಕ್ಕೆ ಬದ್ಧವಾಗಿ ಎಲ್ಲ ನಾಯಕರು, ಕಾರ್ಯಕರ್ತರು ಒಪ್ಪಿಕೊಳ್ಳುತ್ತೇವೆ. ಇದರಲ್ಲಿ ಯಾವುದೇ ಅಪಸ್ವರವಿಲ್ಲ' ಎಂದರು.

'ಕೆಪಿಸಿಸಿಯಲ್ಲಿ ಸದ್ಯ ಯಾವುದೇ ಹುದ್ದೆ ಖಾಲಿ ಇಲ್ಲ. ಅಧ್ಯಕ್ಷ ಸ್ಥಾನಕ್ಕೆ ಆಸೆ, ದುರಾಸೆ ನನ್ನಲ್ಲಿಲ್ಲ. ಕೆಲವರು ನನ್ನನ್ನು ಖುಷಿಪಡಿಸಲು, ಇನ್ನೂ ಕೆಲವರು ಇನ್ನೊಬ್ಬರನ್ನು ಖುಷಿಪಡಿಸಲು, ತಮ್ಮ ಅನುಕೂಲಕ್ಕೆ ಈ ರೀತಿ ಹೆಸರುಗಳನ್ನು ಹೇಳುತ್ತಿರುತ್ತಾರೆ. ಈಗ ನಾನು ವಿಶ್ರಾಂತಿಯಲ್ಲಿದ್ದೇನೆ. ಯಾವುದೇ ಸ್ಥಾನ ಸಿಗಬೇಕು ಅಂತಾದರೆ ಸಿಕ್ಕೇ ಸಿಗುತ್ತದೆ' ಎಂದರು.

ಪ್ರಕರಣ ಮುಕ್ತಾಯಗೊಳಿಸಲು ಮನವಿ: ಚಂದ್ರಶೇಖರನಾಥ ಸ್ವಾಮೀಜಿ ವಿರುದ್ಧದ ಪ್ರಕರಣದ ಕುರಿತು ಕೇಳಿದಾಗ, 'ಸ್ವಾಮೀಜಿ ಮೇಲೆ ದ್ವೇಷದ ರಾಜಕಾರಣ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅವರು ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಈ ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಬೇಕು ಎಂದು ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಬಳಿ ಮನವಿ ಮಾಡುತ್ತೇನೆ' ಎಂದರು.

ಉತ್ತಮ ಬಾಂಧವ್ಯ: 'ವಿಜಯೇಂದ್ರ ಮತ್ತು ಡಿ.ಕೆ ಶಿವಕುಮಾರ್ ನಡುವೆ ಹೊಂದಾಣಿಕೆ ರಾಜಕೀಯದ ದಾಖಲೆ ಬಿಡುಗಡೆ ಮಾಡುತ್ತೇನೆ' ಎಂಬ ಯತ್ನಾಳ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ಅವರು ದಾಖಲೆಗಳನ್ನು ಬಿಡುಗಡೆ ಮಾಡಲಿ. ವಿಜಯೇಂದ್ರ ಮಾತ್ರವಲ್ಲ; ಯತ್ನಾಳ ಅವರಿಗೂ ಶಿವಕುಮಾರ್ ಜತೆ ಉತ್ತಮ ಬಾಂಧವ್ಯವಿದೆ. ಕೇವಲ ವಿಜಯೇಂದ್ರ ಬಗ್ಗೆ ಯಾಕೆ ಹೇಳಿದ್ದಾರೆಂದು ಗೊತ್ತಿಲ್ಲ' ಎಂದರು.

ಮಾ. 1ರಿಂದ ಪಿಯು, 20ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಒಂದನೇ ಪುಟದಿಂದ...

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 20-ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 22-ಸಮಾಜ ವಿಜ್ಞಾನ, 24-ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 27-ಗಣಿತ, 29-ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, ಏಪ್ರಿಲ್ 1-ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 2-ವಿಜ್ಞಾನ ಹಾಗೂ ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ.

ಸ್ವಾಭಿಮಾನಿ ಅಲ್ಲ, ಜನಕಲ್ಯಾಣ ಸಮಾವೇಶ

ಕೆಪಿಸಿಸಿ, ಸ್ವಾಭಿಮಾನಿ ಒಕ್ಕೂಟಗಳ ಆಶ್ರಯದಲ್ಲಿ ಆಯೋಜನೆ: ಶಿವಕುಮಾರ್

ಪ್ರಜಾವಾಣಿ ವಾರ್ತೆ

ಹಾಸನ: 'ಪ್ರದೇಶ ಕಾಂಗ್ರೆಸ್ ಸಮಿತಿ, ಸ್ವಾಭಿಮಾನಿಗಳ ಒಕ್ಕೂಟದ ಆಶ್ರಯದಲ್ಲಿ ಡಿ.5 ರಂದು ಹಾಸನದಲ್ಲಿ ಜನಕಲ್ಯಾಣ ಸಮಾವೇಶ ನಡೆಸಲಾಗುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದಲ್ಲಿ ಸಿದ್ಧತೆಗಳನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಜನಕಲ್ಯಾಣದ ಕಾರ್ಯಗಳನ್ನು ಏನು ಮಾಡಿದ್ದೇವೆ? ಜನರನ್ನು ಎಷ್ಟರ ಮಟ್ಟಿಗೆ ತಲುಪಿದ್ದೇವೆ ಎಂಬ ಸಂದೇಶ ನೀಡಲು ಸಮಾವೇಶ ಮಾಡಲಾಗುತ್ತಿದೆ. ಹಿತೈಷಿಗಳು, ಸ್ವಾಭಿಮಾನಿಗಳ ಒಕ್ಕೂಟಗಳು ಮುಖ್ಯಮಂತ್ರಿ ಕೆಲಸವನ್ನು ಮೆಚ್ಚಿ ಬೆಂಬಲ ನೀಡಿದ್ದಾರೆ' ಎಂದರು.

'ಲೋಕಸಭಾ ಚುನಾವಣೆ ವೇಳೆ ಹಾಸನದ ಬಹಳಷ್ಟು ಕುಟುಂಬಗಳು ನೋವು ಅನುಭವಿಸಿವೆ. ಇಡೀ ದೇಶದಾದ್ಯಂತ ಚರ್ಚೆ ನಡೆದಿದೆ. ಅವರಿಗೆ ಧೈರ್ಯ ಹೇಳಲು ಸಮಾವೇಶ ಹಮ್ಮಿಕೊಂಡಿದ್ದೇವೆ. ರಾಜ್ಯದ ಜನ ಉಪಚುನಾವಣೆಯ ಮೂಲಕ ಉತ್ತರ ಕೊಟ್ಟಿರುವುದರಿಂದ, ಪ್ರತಿಪಕ್ಷಗಳ ಟೀಕೆಗಳಿಗೆ ಉತ್ತರಿಸಬೇಕಿಲ್ಲ. ನನ್ನ ನೇತೃತ್ವದಲ್ಲಿ ಪಕ್ಷದ ಎಲ್ಲರೂ ಒಟ್ಟಾಗಿ ಆಯೋಜಿಸುತ್ತಿದ್ದೇವೆ' ಎಂದರು.

'ಬಿಜೆಪಿಯವರು ಭಾವನೆಗಳ ಮೇಲೆ ರಾಜಕಾರಣ ಮಾಡುತ್ತಾರೆ. ನಾವು ಜನರ ಬದುಕಿನ ಮೇಲೆ ರಾಜಕಾರಣ ಮಾಡುತ್ತೇವೆ. ಪ್ರತಿಯೊಬ್ಬರ ಬದುಕಿಗೆ ಶಕ್ತಿ ಕೊಡುವ ಕೆಲಸ ಮಾಡುತ್ತಿದ್ದೇವೆ' ಎಂದರು.

'6 ತಿಂಗಳಲ್ಲಿ ಸರ್ಕಾರ ಬಿದ್ದುಹೋಗುತ್ತದೆ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳುತ್ತಿದ್ದಾರೆ. ಈಗಾಗಲೇ ಅವರಿಗೆ ಜನ ಉತ್ತರ ಕೊಟ್ಟಿದ್ದಾರೆ. ಸಮಾವೇಶದ ಮೂಲಕ ನಾವೂ ಉತ್ತರ ಕೊಡುತ್ತೇವೆ' ಎಂದರು.

'ಒಬಿಸಿ ನಾಯಕರಿಗೆ ವಿಜಯೇಂದ್ರ ಬೆದರಿಕೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ತನ್ನ ಬೆನ್ನಿಗೆ ನಿಲ್ಲುವಂತೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹಿಂದುಳಿದ ಮತ್ತು ಪರಿಶಿಷ್ಟ ನಾಯಕರಿಗೆ ಒತ್ತಾಯಿಸಿ, ಬೆದರಿಕೆ ಹಾಕಿದ್ದಾರೆ' ಎಂದು ಶಾಸಕ ರಮೇಶ ಜಾರಕಿಹೊಳಿ ದೂರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಅವರ ಜೊತೆಯಲ್ಲಿರುವ ಬಹುತೇಕರು ಹಿಂದುಳಿದ ಸಮುದಾಯದವರೇ ಹೊರತು ಲಿಂಗಾಯತರು, ಒಕ್ಕಲಿಗರು ಅಲ್ಲ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನಿಭಾಯಿಸುವ ಸಾಮರ್ಥ್ಯ ವಿಜಯೇಂದ್ರಗೆ ಇಲ್ಲ. ಅವರನ್ನು ಬದಲಿಸಲೇಬೇಕು ಎಂದು ಆಗ್ರಹಿಸಿದರು.

'ಬಿ.ಎಸ್.ಯಡಿಯೂರಪ್ಪ ಹುಟ್ಟು ಹೋರಾಟಗಾರ. ವಿಜಯೇಂದ್ರ, ಯಡಿಯೂರಪ್ಪ ಅವರ ಕಾಲಿನ ದೂಳಿಗೂ ಸಮನಲ್ಲ. ಜೀನ್ಸ್ ಪ್ಯಾಂಟು, ಟೀ ಶರ್ಟು ಹಾಕಿಕೊಂಡು ಓಡಾಡುವ ವಯಸ್ಸು ಅವರದ್ದು. ಪಾಪ ಅವರಿಗೆ ರಾಜಕೀಯ ಗೊತ್ತಿಲ್ಲ. ಉತ್ತಮ ಭವಿಷ್ಯವಿದೆ, ಈಗ ಪದವಿ ತ್ಯಾಗ ಮಾಡಲಿ' ಎಂದು ಹೇಳಿದರು

ಮಾಜಿ ಸಚಿವ ಕುಮಾರ್ ಬಂಗಾರಪ್ಪ ಮಾತನಾಡಿ, 'ಯತ್ನಾಳ ಅವರಿಗೆ ಬಂದ ನೋಟಿಸ್ ವಕ್ಫ್ ಅಥವಾ ವಿಜಯೇಂದ್ರ ವಿಷಯಕ್ಕೆ ಸಂಬಂಧಿಸಿದ್ದೋ ಗೊತ್ತಿಲ್ಲ. ಯಾವುದಕ್ಕಾದರೂ ಕ್ರಮಬದ್ಧ ಉತ್ತರ ಕೊಡುವ ಸಾಮರ್ಥ್ಯ ಯತ್ನಾಳ ಅವರಿಗಿದೆ. ನಾವು ಯಾವುದೇ ಸಂದರ್ಭದಲ್ಲಿಯೂ ಅವರ ಬೆನ್ನಿಗೆ ನಿಲ್ಲುತ್ತೇವೆ' ಎಂದರು.

ಯತ್ನಾಳ ಉಚ್ಚಾಟಿಸಲು ಒತ್ತಾಯ

ಬೆಂಗಳೂರು: 'ಪಕ್ಷದಲ್ಲಿ ಗುಂಪುಗಾರಿಕೆಯಿಂದ ಕಾರ್ಯಕರ್ತರು ಬೇಸತ್ತಿದ್ದಾರೆ. ಭಿನ್ನಮತವನ್ನು ಪಕ್ಷ ಯಾವುದೇ ಕಾರಣಕ್ಕೂ ಸಹಿಸಬಾರದು. ಆದ್ದರಿಂದ, ಬಸನಗೌಡ ಪಾಟೀಲ ಯತ್ನಾಳ ಅವರನ್ನು ಉಚ್ಚಾಟಿಸಬೇಕು' ಎಂದು ಬಿಜೆಪಿಯ ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರು ಒಕ್ಕೊರಲಿನಿಂದ ಒತ್ತಾಯಿಸಿದರು.

ಸೋಮವಾರ ಇಲ್ಲಿ ನಡೆದ ಜಿಲ್ಲಾಧ್ಯಕ್ಷರ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷ, ಜಯನಗರ ಶಾಸಕ ಸಿ.ಕೆ.ರಾಮಮೂರ್ತಿ, 'ಸಭೆಗೆ 31 ಸಂಘಟನಾತ್ಮಕ ಜಿಲ್ಲೆಗಳ ಅಧ್ಯಕ್ಷರಿಗೆ ಆಹ್ವಾನ ನೀಡಿದ್ದೆವು. 21 ಜಿಲ್ಲಾಧ್ಯಕ್ಷರು ಭಾಗವಹಿಸಿದ್ದರು. ಕೆಲವರು ಕಾರಣಾಂತರಗಳಿಂದ ಬರಲು ಆಗುತ್ತಿಲ್ಲ ಎಂದು ತಿಳಿಸಿದ್ದರು' ಎಂದರು.

'ನಮಗೆ ಪಕ್ಷವೇ ಮೊದಲು, ಪಕ್ಷವೇ ತಾಯಿ ಸಮಾನ. ಭಿನ್ನಮತೀಯರು ತಾಯಿಗೆ ಅವಮಾನ ಮಾಡಿದ್ದಾರೆ' ಎಂದು ಹೇಳಿದರು.

'ಯತ್ನಾಳ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಅವಮಾನ ಆಗುವಂತೆ ಬಹಿರಂಗವಾಗಿ ಮಾತನಾಡುತ್ತಿದ್ದಾರೆ. ಯಡಿಯೂರಪ್ಪ ಅವರನ್ನು ಟೀಕಿಸುತ್ತಿದ್ದಾರೆ. ಇದರಿಂದ ಪಕ್ಷಕ್ಕೆ ಮುಜುಗರ ಆಗುತ್ತಿದೆ. ಅಧ್ಯಕ್ಷರನ್ನು ಬೈಯುವುದು ಎಂದರೆ ಕಾರ್ಯಕರ್ತರನ್ನು ಬೈದಂತೆಯೇ ಸರಿ' ಎಂದರು.

'ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಬುಧವಾರ ರಾಜ್ಯಕ್ಕೆ ಬರುತ್ತಿದ್ದಾರೆ. ಪಕ್ಷದೊಳಗಿನ ಭಿನ್ನಮತವನ್ನು ಕೊನೆಗಾಣಿಸಬೇಕು ಎಂದು ಅವರಿಗೆ ಮನವಿ ಮಾಡುತ್ತೇವೆ' ಎಂದು ರಾಮಮೂರ್ತಿ ಹೇಳಿದರು.

'ಸ್ವರ್ಗ ಪ್ರವೇಶವಿಲ್ಲ'

ಒಂದನೇ ಪುಟದಿಂದ...

'ವಂಶವಾದ, ಭ್ರಷ್ಟಾಚಾರ, ಹೊಂದಾಣಿಕೆ ರಾಜಕಾರಣದ ವಿರುದ್ಧ ಮತ್ತು ಹಿಂದುತ್ವದ ಪರವಾಗಿ ಮಾತನಾಡಬೇಕೇ ಬೇಡವೇ ಎಂಬುದನ್ನು ಪಕ್ಷ ನಿರ್ಣಯಿಸಬೇಕು. ನಮ್ಮ ಪ್ರಧಾನಿಯವರು ವಂಶವಾದ ಹಾಗೂ ಭ್ರಷ್ಟಾಚಾರ ಇರಬಾರದು ಎಂದಿದ್ದಾರೆ. ಹಿಂದುತ್ವದ ಪರ ಇರಬಾರದು ಎಂದು ವಿಜಯೇಂದ್ರ ಪರವಾಗಿ ತಿದ್ದುಪಡಿ ಆಗಿದೆಯಾ ಎಂಬುದನ್ನು ವರಿಷ್ಠರಲ್ಲಿ ಪ್ರಶ್ನೆ ಮಾಡುತ್ತೇನೆ' ಎಂದರು.

'ನನಗೆ ಯಾರ ಭಯವೂ ಇಲ್ಲ. ಆದರೆ, ಅಪ್ಪ ಮಕ್ಕಳಿಗೆ ಭಯ ಇದೆ. ಯಡಿಯೂರಪ್ಪ ವಿರುದ್ಧ ಗಂಭೀರ ಪ್ರಕರಣಗಳಿವೆ. ಭ್ರಷ್ಟಾಚಾರ ಪ್ರಕರಣ ಸೇರಿದಂತೆ ವಗೈರಾ ಪ್ರಕರಣಗಳಿವೆ. ಜಾಮೀನುರಹಿತ ಪ್ರಕರಣಗಳಿವೆ. ಅವರು ಅಂಜಬೇಕು' ಎಂದು ಹೇಳಿದರು.

'ನಾವು ವಕ್ಫ್ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಆದರೆ, ವಿಜಯೇಂದ್ರ ಏನೂ ಮಾಡುತ್ತಿಲ್ಲ. ಡಿ.ಕೆ. ಶಿವಕುಮಾರ್ ವಿರುದ್ಧ ಗಂಭೀರ ಆರೋಪ ಬಂದಾಗ ಕೂಡಾ ವಿಜಯೇಂದ್ರ ಪ್ರತಿಕ್ರಿಯೆ ಕೊಡಲಿಲ್ಲ. ನಮ್ಮ ಭಿಕ್ಷೆಯಿಂದ ವಿಜಯೇಂದ್ರ ವಿಧಾನಸೌಧದ ಮೆಟ್ಟಿಲು ಹತ್ತಿದ್ದಾನೆ ಎಂದು ಶಿವಕುಮಾರ್ ಹೇಳಿಕೆ ನೀಡಿದ್ದರು. ಅದಕ್ಕೂ ಉತ್ತರ ಕೊಡಲಿಲ್ಲ' ಎಂದು ಯತ್ನಾಳ ಟೀಕಿಸಿದರು.

ನಗರದಲ್ಲಿನ ಮಾಲಿನ್ಯ ನಿಯಂತ್ರಣಕ್ಕೆ 20 ಜಂಕ್ಷನ್‌ಗಳಲ್ಲಿ ವಾಯು ಶುದ್ಧೀಕರಣ ಯಂತ್ರ ಅಳವಡಿಕೆ • ಆರಂಭಿಕ ಯಶಸ್ಸು

ಶುದ್ಧ ಗಾಳಿಯ ಭರವಸೆ ಮೂಡಿಸಿದ ಯಂತ್ರ

• ಖಲೀಲಅಹ್ಮದ ಶೇಖ

ಬೆಂಗಳೂರು: ಅತಿಯಾದ ವಾಯು ಮಾಲಿನ್ಯದಿಂದ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಜನಜೀವನ ಅಸ್ತ-ವ್ಯಸ್ತಗೊಂಡಿದೆ. ಭವಿಷ್ಯದ ದಿನಗಳಲ್ಲಿ ಬೆಂಗಳೂರು ಕೂಡ ವಾಯು ಮಾಲಿನ್ಯದ ಕರಾಳ ಪರಿಣಾಮ-ಗಳನ್ನು ಎದುರಿಸದಂತೆ ತಡೆಯುವ ಪ್ರಯತ್ನಗಳು ಆರಂಭವಾಗಿವೆ. ಕಣ್ಣಿಗೆ ಕಾಣದ ದೂಳಿನ ಕಣಗಳ ಸ್ವ-ರೂಪದಲ್ಲಿರುವ ಅಪಾಯಕಾರಿ ಲೋಹದ ಅಂಶಗಳನ್ನು ಹೀರಿ, ಸಂಗ್ರಹಿಸಿ ಗಾಳಿಯನ್ನು ಸ್ವಚ್ಛಗೊಳಿಸುವ ಯಂತ್ರಗಳ ಬಳಕೆಯ ಪ್ರಯತ್ನಕ್ಕೆ ಆರಂಭಿಕ ಯಶಸ್ಸು ದೊರಕಿದೆ.

ಗಾಳಿ ಶುದ್ಧೀಕರಣ ಯಂತ್ರೋಪಕರಣಗಳ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ 'ಎ ಟೆಕ್ ಟ್ರಾನ್' ಎಂಬ ಕಂಪನಿ ಜನದಟ್ಟಣೆಯ ಹೊರಾಂಗಣದಲ್ಲೂ ಗಾಳಿ ಶುದ್ಧೀಕರಿಸುವ ಯಂತ್ರವನ್ನು ಆವಿಷ್ಕರಿಸಿದೆ. ನಗರದ 20 ಜಂಕ್ಷನ್‌ಗಳಲ್ಲಿ ವಾಯು ಶುದ್ಧೀಕರಣ ಯಂತ್ರಗಳನ್ನು ಅಳವಡಿಸಿದ್ದು, ಅವು ಗಾಳಿಯಲ್ಲಿರುವ ದೂಳಿನ ಕಣಗಳನ್ನು ಹೀರಿಕೊಂಡು ಶುದ್ಧ ಗಾಳಿಯನ್ನು ಹೊರಸೂಸುತ್ತಿವೆ. ಗಾಳಿಯಲ್ಲಿ ಸೇರಿಕೊಂಡಿರುವ ಕ್ಯಾಡ್ಮಿಯಂ, ಕ್ರೋಮಿಯಂ, ಸೀಸ ಮುಂತಾದ ಅಪಾಯಕಾರಿ ಲೋಹದ ಧಾತುಗಳು ಕೆ.ಜಿ. ಗಟ್ಟಲೆ ಈ ಯಂತ್ರಗಳಲ್ಲಿ ಸೆರೆಯಾಗುತ್ತಿವೆ.

'ಎ ಟೆಕ್ ಟ್ರಾನ್' ಕಂಪೆನಿಯು ಎನ್ವಿರಾನ್ ಮೆಂಟಲ್ ಅಸೋಸಿಯೇಷನ್ ಆಫ್ ಬೆಂಗಳೂರು, ಯುನೈಟೆಡ್ ವೇ ಬೆಂಗಳೂರು ಸಹಭಾಗಿತ್ವದಲ್ಲಿ ಈ ಯಂತ್ರಗಳನ್ನು ಸಂಚಾರ ದಟ್ಟಣೆಯ ಜಂಕ್ಷನ್‌ಗಳಲ್ಲಿ ಅಳವಡಿಸಿದೆ. ಇನ್‌ಫಾರ್ಮೆಟಿಕಾ, ಎನ್‌ಟಿಟಿ ಡೇಟಾ, ಕ್ಯಾಪ್ಕೊ ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯ ಮೂಲಕ ಪ್ರಾಯೋಜಕತ್ವ ನೀಡಿವೆ.

2019ರಲ್ಲಿ ಹಡ್ಸನ್ ವೃತ್ತದಲ್ಲಿ ಪ್ರಾಯೋಗಿಕವಾಗಿ ವಾಯು ಶುದ್ಧೀಕರಣ ಯಂತ್ರ ಅಳವಡಿಸಲಾಗಿತ್ತು. ಇದರಿಂದ ಅಲ್ಲಿ ಮಾಲಿನ್ಯ ನಿಯಂತ್ರಣಕ್ಕೆ ಬಂದಿತ್ತು. ವಾಹನ ದಟ್ಟಣೆ ಹೆಚ್ಚಿರುವ ಮತ್ತಷ್ಟು ಜಂಕ್ಷನ್‌ಗಳಲ್ಲಿ ಯಂತ್ರಗಳನ್ನು ಅಳವಡಿಸಲು ಈ ಕಂಪನಿಗೆ ಬಿಬಿಎಂಪಿ ಅನುಮತಿ ನೀಡಿತ್ತು.

ಬಿಷಪ್ ಕಾಟನ್ ಸ್ಕೂಲ್ ಜಂಕ್ಷನ್ ಬಳಿ ಅಳವಡಿಸಿರುವ ವಾಯು ಶುದ್ಧೀಕರಣ ಯಂತ್ರ
ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಸಂಚಾರ ಪೊಲೀಸರಿಗೆ ಸಹಕಾರಿ

'ಸಂಚಾರದಟ್ಟಣೆ ಪ್ರದೇಶಗಳಲ್ಲಿ ಕಾರ್ಯನಿರ್ವಹಿ-ಸುವಾಗ ವಾಯು ಮಾಲಿನ್ಯದಿಂದ ಎದೆ ನೋವು, ಮೂಗು ಉರಿ ಸಮಸ್ಯೆ ಹೆಚ್ಚಾಗಿತ್ತು. ವಾಯು ಶುದ್ಧೀಕರಣ ಯಂತ್ರ ಅಳವಡಿಸಿದ ನಂತರ ಈ ಸಮಸ್ಯೆ ಕಡಿಮೆಯಾಗಿವೆ' ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದರು.

ಮಾಲಿನ್ಯ ಪ್ರಮಾಣ ಜಾಸ್ತಿ ಇರುವ ಜಂಕ್ಷನ್‌ಗಳನ್ನು ಗುರುತಿಸಿ, ಅಲ್ಲಿ ವಾಯು ಶುದ್ಧೀಕರಣ ಯಂತ್ರಗಳನ್ನು ಅಳವಡಿಸಲಾಗಿದೆ.

ನಗರದ ಹಲವು ಪ್ರದೇಶಗಳಲ್ಲಿ ಗಾಳಿಯಲ್ಲಿ ತೇಲಾಡುವ ದೂಳಿನ ಕಣಗಳ ಪ್ರಮಾಣವು ಮಿತಿ ಮೀರಿದೆ. ಮೆಟ್ರೊ, ಚರಂಡಿ, ಕಟ್ಟಡ ನಿರ್ಮಾಣ, ರಸ್ತೆ ಅಭಿವೃದ್ಧಿ ಮತ್ತಿತರ ಕಾಮಗಾರಿಗಳಿಂದಾಗಿ ದೂಳಿನ ಪ್ರಮಾಣವು ಜಾಸ್ತಿಯಾಗಿದ್ದು, ಉಸಿರಾಡಲು ಕಷ್ಟವಾಗುವ ಸ್ಥಿತಿ ಇದೆ.

'ವಾಯು ಶುದ್ಧೀಕರಣ ಯಂತ್ರವು ವಾತಾ-ವರಣದಲ್ಲಿ ಬೆರೆತು ಹೋಗಿರುವ ದೂಳಿನ ಕಣ, ಹೊಗೆಯನ್ನೆಲ್ಲಾ ಹೀರಿಕೊಂಡು ಶುದ್ಧ ಗಾಳಿಯನ್ನು ಹೊರಬಿಡುತ್ತದೆ. ಆರು ಹಂತದಲ್ಲಿ ಗಾಳಿಯನ್ನು ಸೋಸುತ್ತದೆ. ಒಂದೊಂದು ಶೋಧಕವೂ (ಫಿಲ್ಟರ್) ಮಾಲಿನ್ಯಕಾರಕಗಳನ್ನು ಹಂತ ಹಂತವಾಗಿ ಸೋಸುತ್ತದೆ. ಕೊನೆಗೆ ಯಂತ್ರದ ತಳಭಾಗದಿಂದ ಶುದ್ಧ ಗಾಳಿ ಹೊರಬರುತ್ತದೆ' ಎಂದು ಎ ಟೆಕ್ ಟ್ರಾನ್ ಕಂಪನಿಯ ಸಂಸ್ಥಾಪಕ ರಾಜೀವ್ 'ಪ್ರಜಾವಾಣಿ'ಗೆ ವಿವರಿಸಿದರು.

'ಯಂತ್ರವು ಒಂದು ನಿಮಿಷಕ್ಕೆ 3600 ಕ್ಯೂಬಿಕ್ ಗಾಳಿಯನ್ನು ಹೀರಿಕೊಂಡು ಶುದ್ಧೀಕರಿಸುತ್ತದೆ. ಈ ಯಂತ್ರದಿಂದ ಯಾವುದೇ ರೀತಿಯ ಶಬ್ದ ಮಾಲಿನ್ಯ ಇರುವುದಿಲ್ಲ. ಹೀರಿಕೊಳ್ಳುವ ದೂಳು ಮತ್ತಿತರ ಮಾಲಿನ್ಯಕಾರಕಗಳು ಈ ಯಂತ್ರದಲ್ಲಿ ಸಂಗ್ರಹವಾ-ಗುತ್ತವೆ. 15ರಿಂದ 20 ದಿನಗಳಿಗೊಮ್ಮೆ ಅದನ್ನು ಹೊರತೆಗೆಯಬೇಕು. ಮಾಲಿನ್ಯದ ಪ್ರಮಾಣ ಹೆಚ್ಚಿದ್ದರೆ, 15 ದಿನಗಳಲ್ಲಿ ಸುಮಾರು 2 ಕೆ.ಜಿಯಿಂದ 3 ಕೆ.ಜಿ.ಗಳಷ್ಟು ದೂಳು ಸಂಗ್ರಹಗೊಳ್ಳುವ ಸಾಧ್ಯತೆ ಇರುತ್ತದೆ' ಎಂದರು.

ಗಾಳಿಯಲ್ಲಿರುವ ಲೋಹಗಳು ಪ್ರಮಾಣದ (ಪಿಪಿಎಂ) ಪಟ್ಟಿ

ಸ್ಥಳಗಳು	ಸಾವಯವ ಇಂಗಾಲ(ಶೇ.)	ಕ್ಯಾಡ್ಮಿಯಂ	ಕ್ರೋಮಿಯಂ	ಸೀಸ	ಸತು	ತಾಮ್ರ	ಕಬ್ಬಿಣ	ಮ್ಯಾಗ್ನೀಸ್	ಬೇರಿಯಂ	ಸಿಲಿಕಾ	ನಿಕ್ಕಲ್
ಬಿಷಪ್ ಕಾಟನ್ ಸ್ಕೂಲ್ ಜಂಕ್ಷನ್	48.5	0.50	32.37	149.9	17.94	27.43	22.24	3.77	0.85	76.25	3.06
ಎಂ.ಜಿ. ರಸ್ತೆ–ಬ್ರಿಗೇಡ್ ರಸ್ತೆ ಜಂಕ್ಷನ್	51.3	2.62	46.61	97.01	24.6	232.09	1,247.27	335.11	31.65	49.27	21.28
ಟ್ರಿನಿಟಿ ವೃತ್ತ	39.4	4.55	54.11	106.22	28.29	245.08	1,515.83	416.73	37.55	27.2	25.7
ಎಚ್‌ಎಎಲ್ ಸಿಗ್ನಲ್	39.4	3.5	57.88	108.8	27.71	315.34	1,533.45	457.73	42.47	69.2	26.47
ಅನಿಲ್ ಕುಂಬ್ಳೆ ವೃತ್ತ	33.1	2.6	42.1	83.77	21.23	219.97	1,118.64	282.52	28.39	52.2	17.17
ಕ್ಲೌಡ್‌9 ಪ್ರೆಸ್ಟೀಜ್ ಶಾಂತಿನಿಕೇತನ ಜಂಕ್ಷನ್	33.1	2.59	44.12	81.25	20.57	333.65	1,088.06	294.63	27.57	26.4	23.57

ಎಂ.ಜಿ. ರಸ್ತೆ–ಬ್ರಿಗೇಡ್ ರಸ್ತೆ ಜಂಕ್ಷನ್ ಬಳಿ ಅಳವಡಿಸಿರುವ ವಾಯು ಶುದ್ಧೀಕರಣ ಯಂತ್ರ

ಏನೆಲ್ಲ ಹೀರಲಿದೆ?

- ಪಾರ್ಟಿಕ್ಯುಲೇಟ್ ಮ್ಯಾಟರ್ (ಪಿ.ಎಂ.)
- ಪಿ.ಎಂ.10
- ಪಿ.ಎಂ. 2.5
- ದೂಳಿನ ಕಣ
- ಹೊಂಜು
- ದುರ್ವಾಸನೆ
- ಹೊಗೆಯ ಕಣ

ಪ್ರತಿ ಯಂತ್ರಕ್ಕೆ ₹ 5 ಲಕ್ಷ

ರಾಜೀವ್

ಒಂದು ಯಂತ್ರದ ಬೆಲೆಯು ₹4 ಲಕ್ಷದಿಂದ ₹5 ಲಕ್ಷದವರೆಗೂ ಇದೆ. ಇವು 360 ಡಿಗ್ರಿ ವ್ಯಾಪ್ತಿಯಲ್ಲಿನ ಗಾಳಿಯನ್ನು ಹೀರಿಕೊಂಡು ಶುದ್ಧೀಕರಿಸಿ ಹೊರಬಿಡುತ್ತವೆ ಎಂದು ರಾಜೀವ್ ತಿಳಿಸಿದರು.

ಮನುಷ್ಯರು, ಪ್ರಾಣಿ ಮತ್ತು ಪಕ್ಷಿಗಳ ಶ್ವಾಸಕೋಶವನ್ನು ಪ್ರವೇಶಿಸಿ ಹಾನಿಮಾಡಬಲ್ಲ ಅತಿಸಣ್ಣ ದೂಳಿನ ಕಣಗಳು ಹಾಗೂ ಕ್ಯಾಡ್ಮಿಯಮ್, ಕ್ರೋಮಿಯಂ, ಸೀಸ, ಸತುವಿನಂತಹ ಹಾನಿಕಾರಕ ಭಾರ ಲೋಹಗಳ ಕಣಗಳನ್ನು ಗಾಳಿ ಶುದ್ಧೀಕರಣ ಯಂತ್ರಗಳು ಹೀರಿಕೊಳ್ಳುತ್ತವೆ. ಯಂತ್ರಗಳಿಂದ ಶುದ್ಧ ಗಾಳಿ ಹೊರಬರುತ್ತದೆ ಎಂದರು.

ನಾಳೆಯಿಂದ ಐಒಎಸಿಒಎನ್‌ನ 69ನೇ ವಾರ್ಷಿಕ ಸಮ್ಮೇಳನ

ಬೆಂಗಳೂರು: ಡಿಸೆಂಬರ್ 4ರಿಂದ 7ರವರೆಗೆ ಬೆಂಗಳೂರು ಅರಮನೆಯ ನಾಡಪ್ರಭು ಕೆಂಪೇಗೌಡ ಸಭಾಂಗಣದಲ್ಲಿ ಭಾರತೀಯ ಆರ್ಥೋಪೆಡಿಕ್ ಅಸೋಸಿಯೇಷನ್‌ನ (ಐಒಎಸಿಒಎನ್) 69ನೇ ವಾರ್ಷಿಕ ಸಮ್ಮೇಳನ ಆಯೋಜಿಸಲಾಗಿದೆ.

16 ವರ್ಷಗಳ ನಂತರ ನಗರದಲ್ಲಿ ಸಮ್ಮೇಳನ ನಡೆ-ಸಲಾಗುತ್ತಿದ್ದು, ದೇಶ, ವಿದೇಶಗಳಿಂದ ಆರು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಕೌಶಲ ಹೆಚ್ಚಳ ಹಾಗೂ ಗುಣಮಟ್ಟದ ಸೌಲಭ್ಯ ಸಮ್ಮೇಳನದ ಧ್ಯೇಯವಾಗಿದೆ ಎಂದು ಐಒಎಸಿಒಎನ್ ಅಧ್ಯಕ್ಷ ಡಾ.ಎಚ್.ಎಸ್. ಚಂದ್ರಶೇಖರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಿ.4ರಂದು ಸಂಜೆ 5.30ಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಸಮ್ಮೇಳನದ ಉದ್ಘಾಟನೆ ನೆರ-ವೇರಿಸಲಿದ್ದು, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಭಾಗವಹಿಸುವರು. ಡಿ. 1ರಿಂದ 7ರವರೆಗೆ ರಸ್ತೆ ಸುರಕ್ಷತಾ ಜಾಗೃತಿ ಸಪ್ತಾಹ ಆಯೋಜಿಸಲಾಗಿದೆ ಎಂದರು.

ಸಮ್ಮೇಳನದ ಅಂಗವಾಗಿ ಡಿ.3ರಂದು ನಗರದ ವಿವಿಧ ಆಸ್ಪತ್ರೆಗಳಲ್ಲಿ 17 ಕಾರ್ಯಾಗಾರಗಳನ್ನು ನಡೆ-ಸಲಾಗುತ್ತಿದ್ದು, ರಾಮಯ್ಯ ಅಡ್ವಾನ್ಸ್ಡ್ ಲರ್ನಿಂಗ್ ಸೆಂಟರ್ ಮತ್ತು ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನಲ್ಲಿ ಮೃತದೇಹ ಛೇದಿಸುವ ಕಾರ್ಯಾಗಾರ ನಡೆದರೆ, ಬೆಂಗಳೂರು ವೈದ್ಯಕೀಯ ಕಾಲೇಜು, ಸಂಜಯ್ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಟ್ರಾಮಾ ಅಂಡ್ ಆರ್ಥೋಪೆಡಿಕ್ಸ್ ಮತ್ತು ಇಂದಿರಾಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಚೈಲ್ಡ್ ಹೆಲ್ತ್‌ನಲ್ಲಿ ಶಸ್ತ್ರಚಿಕಿತ್ಸಾ ಕಾರ್ಯಾಗಾರ ನಡೆಸಲಾಗುವುದು ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪ

ಸ್ವಾಮೀಜಿಗೆ ಸರ್ಕಾರದ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ದೇಶದ್ರೋಹದ ಚಟುವಟಿಕೆಯಲ್ಲಿ ಪಾಲ್ಗೊಂಡವರ ಕೇಸ್‌ಗಳನ್ನು ಹಿಂಪಡೆಯುತ್ತಿದೆ. ಆದರೆ, ಸ್ವಾಮೀಜಿಗಳಿಗೆ ಬೆದರಿಕೆ ಹಾಕುತ್ತಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಟೀಕಿಸಿದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದಲ್ಲಿ ಚಂದ್ರಶೇಖರನಾಥ ಸ್ವಾಮೀಜಿಯವರನ್ನು ಸೋಮವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸ್ವಾಮೀಜಿಯವರ ಜತೆ ನಾವು ನಿಲ್ಲುತ್ತೇವೆ' ಎಂದರು.

ರಾಜ್ಯದಲ್ಲಿನ ಪರಿಸ್ಥಿತಿ ಬಗ್ಗೆ ಸ್ವಾಮೀಜಿಯವರು ಸಹಜವಾಗಿ ಆಕ್ರೋಶದಿಂದ ಮಾತನಾಡಿದ್ದಾರೆ. ಇದೇ ಕಾರಣಕ್ಕೆ ಸರ್ಕಾರ ಸ್ವಾಮೀಜಿಯವರಿಗೆ ಬೆದರಿಕೆ ಹಾಕಿದೆ. ಸ್ವಾಮೀಜಿ ವಿರುದ್ಧ ಎಫ್‌ಐಆರ್ ದಾಖಲು ಮಾಡಿ ವಿಚಾರಣೆಗೆ ಬರುವಂತೆ ಒತ್ತಡ ಹೇರುತ್ತಿದೆ ಎಂದು ದೂರಿದರು.

ಸ್ವಾಮೀಜಿಯವರು ತಮ್ಮ ಆರೋಗ್ಯ ಸರಿ ಇಲ್ಲ ಎಂದು ಹೇಳಿ, ತಮ್ಮ ಅಭಿ-ಪ್ರಾಯವನ್ನು ಪತ್ರದ ಮೂಲಕ ಪೊಲೀಸರಿಗೆ ಕಳುಹಿಸಿದ್ದಾರೆ. ಆದರೂ ಖುದ್ದಾಗಿ ಹಾಜರಾಗುವಂತೆ ಒತ್ತಡ ಹೇರುತ್ತಿದ್ದಾರೆ. ಇದು ಸರಿಯಲ್ಲ ಎಂದು ಹೇಳಿದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, 'ನಿಮ್ಮ ಪಕ್ಷದಲ್ಲೇ ನಿಂತು ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಹಾಕಿದವರನ್ನು ಸರ್ಕಾರ ರಕ್ಷಿಸುತ್ತದೆ. ಇಂತಹ ದ್ವಿಮುಖ ನೀತಿಯನ್ನು ಸರ್ಕಾರ ಏಕೆ ಅನುಸರಿಸುತ್ತಿದೆ' ಎಂದು ಪ್ರಶ್ನಿಸಿದರು.

ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾ-ಯಣ ಮಾತನಾಡಿ, ಸ್ವಾಮೀಜಿ ಕ್ಷಮೆ ಕೇಳಿದರೂ ಕೇಸು ದಾಖಲಿಸಿದ್ದಾರೆ. ಆದರೆ, ದೇಶ ವಿರೋಧಿ ಶಕ್ತಿಗಳು, ಗಲಭೆ ಎಬ್ಬಿಸುವವರು, ಸೌಹಾರ್ದ ಹಾಳು ಮಾಡುವವರ ವಿರುದ್ಧ ಯಾವುದೇ ಕ್ರಮ ಏಕೆ ತೆಗೆದುಕೊಳ್ಳುತ್ತಿಲ್ಲ ಎಂದು ಪ್ರಶ್ನಿಸಿದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಸೋಮವಾರ ಭೇಟಿ ನೀಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಕುಮಾರ ಚಂದ್ರಶೇಖರನಾಥ ಸ್ವಾಮೀಜಿಯವರನ್ನು ಭೇಟಿ ಮಾಡಿದರು

'ವಿಚಾರಣೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ'

'ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವ ಕಾರಣ ವಿಚಾರಣೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ವೈದ್ಯರು ಹತ್ತು ದಿನಗಳ ವಿಶ್ರಾಂತಿಗೆ ಸೂಚಿಸಿದ್ದಾರೆ' ಎಂದು ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರು ಉಪ್ಪಾರಪೇಟೆ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅವರಿಗೆ ಪತ್ರ ಬರೆದಿದ್ದಾರೆ.

ಮುಸ್ಲಿಮರ ಮತದಾನದ ಹಕ್ಕಿನ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದರ ಕುರಿತು ದಾಖಲಾಗಿದ್ದ ಪ್ರಕರಣ ಸಂಬಂಧ ಡಿಸೆಂಬರ್ 2ರಂದು ವಿಚಾರಣೆಗೆ ಹಾಜರಾಗುವಂತೆ ಉಪ್ಪಾರಪೇಟೆ ಪೊಲೀಸರು ಸ್ವಾಮೀಜಿಗೆ ನೋಟಿಸ್ ನೀಡಿದ್ದರು.

'ನನಗೆ 81 ವರ್ಷ ವಯಸ್ಸು. ಕಾಯಿಲೆಯಿಂದ ಬಳುತ್ತಿರುವ ಕಾರಣ ವಿಚಾರಣೆಗೆ ಹಾಜರಾಗಲು ಸಾಧ್ಯ-ವಾಗುತ್ತಿಲ್ಲ. ಒಂದು ವೇಳೆ ಚೇತರಿಸಿಕೊಂಡಲ್ಲಿ ಡಿಸೆಂಬರ್ 18ರ ಮಧ್ಯಾಹ್ನ 3 ಗಂಟೆಗೆ ವಿಚಾರಣೆಗೆ ಹಾಜರಾಗುತ್ತೇನೆ. ವಿಚಾರಣೆಗೆ ಬರಲು ಸಾಧ್ಯವಿಲ್ಲವಾದ್ದರಿಂದ ಏನಾದರೂ ಅನನುಕೂಲವಾದಲ್ಲಿ ತನಿಖಾಧಿಕಾರಿಯೇ ಮಠಕ್ಕೆ ಬಂದು ಹೇಳಿಕೆಯನ್ನು ಪಡೆದುಕೊಳ್ಳಲು ಯಾವುದೇ ಅಭ್ಯಂತರವಿ-ಲ್ಲ' ಎಂದು ಸ್ವಾಮೀಜಿ ಪತ್ರದಲ್ಲಿ ತಿಳಿಸಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಯಿ ತಪ್ಪಿನಿಂದಾಗಿ ನೀಡಿದ್ದ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿ, ಸ್ಪಷ್ಟೀಕರಣ ನೀಡಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಆದ್ದರಿಂದ ಸಮಾಜದ ಸ್ವಾಸ್ಥ್ಯ ಹಾಗೂ ಶಾಂತಿಯ ದೃಷ್ಟಿಯಿಂದ ಈ ಪ್ರಕರಣವನ್ನು ಬೆಳೆಸದೇ ಇಲ್ಲಿಗೇ ಮುಕ್ತಾಯಗೊಳಿಸಬೇಕು' ಎಂದು ಮನವಿ ಮಾಡಿದ್ದಾರೆ.

ಬೆಂಗಳೂರಿನ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸ್ವಾಮೀಜಿ, 'ಮುಸ್ಲಿಂ ಸಮುದಾಯಕ್ಕೆ ಮತದಾನದ ಹಕ್ಕು ನಿರಾಕರಿಸುವ ಕಾನೂನು ತರಬೇಕು' ಎಂದು ಹೇಳಿದ್ದರು.

ಆನೇಕಲ್: ಸಿಲಿಂಡರ್ ಸ್ಫೋಟ–ಮೂವರ ಸ್ಥಿತಿ ಗಂಭೀರ

ಆನೇಕಲ್: ಸೂರ್ಯಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಕಾಚನಾಯ-ಕನಹಳ್ಳಿಯ ಮನೆಯೊಂದರಲ್ಲಿ ಸೋಮವಾರ ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡು ಮೂವರು ಗಂಭೀರ ಗಾಯಗೊಂಡಿದ್ದಾರೆ.

ಅಸ್ಸಾಂ ಮೂಲದ ಬಿದನ್ ದಾಸ್(28), ದಯಾಲ್ ಶಾಂತಿ (27) ಮತ್ತು ಗುಲಾಬ್ ಕರ್ಮಾಕರ(26) ಗಾಯಗೊಂಡವರು. ಗಾಯಾಳುಗಳ ಪೈಕಿ ಒಬ್ಬರ ಸ್ಥಿತಿ ಗಂಭೀರವಾಗಿದ್ದು, ಸಾವು ಬದುಕಿನ ನಡುವೆ ಹೋರಾಟ ನಡೆಸಿದ್ದಾರೆ.

ಬಿದನ್ ದಾಸ್ ದೇಹ ಬಹುತೇಕ ಸುಟ್ಟುಹೋಗಿದೆ. ಉಳಿದ ಇಬ್ಬರ ದೇಹ ಶೇ 50ಕ್ಕಿಂತ ಹೆಚ್ಚು ಸುಟ್ಟು ಹೋಗಿದೆ. ಮೂವರೂ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮನೆ ಸಮೀಪದ ಐಕಾನ್ ಲೇಔಟ್‌ನಲ್ಲಿ ಭದ್ರತಾ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಈ ಮೂವರು, ಎಚ್.ಹೊಸಹಳ್ಳಿಯ ರಮೇಶ್ ಎಂಬುವರ ಮನೆಯಲ್ಲಿ ಬಾಡಿಗೆ ಇದ್ದರು.

ಭಾನುವಾರ ರಾತ್ರಿ ಊಟ ಮಾಡಿ ಮಲಗಿದ್ದರು. ರಾತ್ರಿ ಅಡುಗೆ ಮಾಡಿ ಗ್ಯಾಸ್ ಆರಿಸುವುದನ್ನು ಮರೆತಿದ್ದರು ಎನ್ನಲಾಗಿದೆ. ಸೋಮವಾರ ಬೆಳಗ್ಗೆ ಅಡುಗೆ ಮನೆ ವಿದ್ಯುತ್ ದೀಪ ಹಾಕುತ್ತಿದ್ದಂತೆ ಸಿಲಿಂಡರ್ ಸ್ಫೋಟಗೊಂಡಿದೆ. ಸ್ಫೋಟದ ರಭಸಕ್ಕೆ ಮನೆಯಲ್ಲಿದ್ದ ವಸ್ತುಗಳು ಚೆಲ್ಲಾಪಿಲ್ಲಿ-ಯಾಗಿದ್ದು, ಧ್ವಂಸ ಗೊಂಡಿವೆ.

ಮನೆಯ ಕಿಟಕಿ ಬಾಗಿಲುಗಳು ಛಿದ್ರಗೊಂಡು ಹಾರಿಹೋಗಿವೆ. ಪಕ್ಕದ ಮನೆಗಳಿಗೂ ಹಾನಿಯಾಗಿದೆ. ವಿಷಯ ತಿಳಿಯುತ್ತಿದ್ದಂತೆ ಸೂರ್ಯಸಿಟಿ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿದರು. ಸಿಲಿಂಡರ್ ಹೊರ ತೆಗೆದು, ಗಾಯಗೊಂ-ಡವರನ್ನು ರಕ್ಷಿಸಿದರು.

ನಗರದಲ್ಲಿ ಇಂದು

ವಿಶ್ವ ಅಂಗವಿಕಲರ ದಿನಾಚರಣೆ–2024, ವಿಶ್ವ ಆರೈಕೆದಾರರ ದಿನಾಚರಣೆ ಹಾಗೂ ತಿಂಗಳ ಭತ್ಯೆ ಯೋಜನೆಗೆ ಚಾಲನೆ, ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಇಲಾಖಾ ಯೋಜನೆಗಳ ಕೈಪಿಡಿ ಬಿಡುಗಡೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ರಾಜ್ಯ ಪ್ರಶಸ್ತಿಗಳ ಪ್ರದಾನ ಹಾಗೂ ಆರೈಕೆದಾರರ ಭತ್ಯೆ ವಿತರಣೆ: ಲಕ್ಷ್ಮೀ ಹೆಬ್ಬಾಳಕರ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಬೆಳಿಗ್ಗೆ 10

'ಅಗ್ರಿಕಲ್ಚರ್ ಫ್ಯೂಚರ್ ಫಾರ್ವರ್ಡ್–ಸ್ಟಾರ್ಟ್‌ಅಪ್ ಕಾನ್‌ಕ್ಲೇವ್'ನ ಉದ್ಘಾಟನೆ: ಚಲುವರಾಯಸ್ವಾಮಿ, ಅಧ್ಯಕ್ಷತೆ: ಎಸ್.ವಿ. ಸುರೇಶ, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹಾಗೂ ಅಗ್ರಿ ಇನ್ನೋವೇಶನ್ ಸೆಂಟರ್, ಸ್ಥಳ: ಕುವೆಂಪು ಸಭಾಂಗಣ, ಜಿಕೆವಿಕೆ ಆವರಣ, ಬೆಳಿಗ್ಗೆ 10.30

ಪಿ.ಎಸ್. ಜಯರಾಮು ಅವರ 'ರಿಫ್ಲೆಕ್ಷನ್ಸ್ ಆನ್ ಇಂಡಿಯನ್ ಪಾಲಿಟಿಕ್ಸ್ ಇನ್ ರಿಸೆಂಟ್ ಇಯರ್ಸ್' ಪುಸ್ತಕ ಬಿಡುಗಡೆ: ಎಸ್.ಎಂ. ಜಯಕರ, ಪುಸ್ತಕದ ಕುರಿತು: ಸಂದೀಪ್ ಶಾಸ್ತ್ರಿ, ಅಧ್ಯಕ್ಷತೆ: ಸುಶೀಲಾ ಸುಬ್ರಮಣ್ಯ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗ, ಸದರನ್ ಎಕನಾಮಿಸ್ಟ್, ಸ್ಥಳ: ಸೆಮಿನಾರ್ ಹಾಲ್, ರಾಜ್ಯಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

'ಆರೋಗ್ಯ ಸಿಟಿ ಸಮ್ಮಿಟ್-2024': ಅತಿಥಿಗಳು: ದಿನೇಶ್ ಗುಂಡೂರಾವ್, ಪ್ರಮೋದಾ ದೇವಿ ಒಡೆಯರ್, ಡಾ. ದೇವಿ ಶೆಟ್ಟಿ, ಅಶ್ವಿನಿ ನಾಚಪ್ಪ, ಭಾಷಣಕಾರರು: ಡಾ. ಸುದರ್ಶನ್ ಬಲ್ಲಾಳ್, ಆಯೋಜನೆ ಮತ್ತು ಸ್ಥಳ: ಪ್ಲಾಟಿನಂ ಜುಬಿಲಿ ಸಭಾಂಗಣ, ಮೌಂಟ್ ಕಾರ್ಮೆಲ್ ಕಾಲೇಜು, ಅರಮನೆ ರಸ್ತೆ, ಅಬ್ಬಾಟ್ ಲೇಔಟ್, ವಸಂತನಗರ, ಮಧ್ಯಾಹ್ನ 2.30

ಅಶ್ವಿನಿ ನಾಚಪ್ಪ

ದ್ವಾರನಕುಂಟೆ ಪಾತಣ್ಣ ಅವರು ಸಂಪಾದಿಸಿದ 'ತೊರೆ', ಸುನಂದ ರು. ಬಸಪ್ಪ ಅವರ 'ನಕ್ಷತ್ರ ಹಾಗೂ ರೇಖೆಗಳ ನಾಡು–ಒಂದು ಚಿತ್ರಣ', ಶಾಂತಿ ವಾಸು ಅವರ 'ವಚನಗನ್ನಡಿ' ಪುಸ್ತಕಗಳ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಸಿ. ಸೋಮಶೇಖರ್, ಪುಸ್ತಕಗಳ ಕುರಿತು: ಚೆನ್ನಪ್ಪ ಕಟ್ಟಿ, ಎನ್. ರಾಮನಾಥ್, ಆಯೋಜನೆ: ಸ್ವಾಭಿಮಾನಿ ಕರ್ನಾಟಕ ವೇದಿಕೆ, ಸ್ಥಳ: ದತ್ತಿ ಸಭಾಂಗಣ, ಎರಡನೇ ಮಹಡಿ, ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 5

ಪ್ರಶಸ್ತಿ ಪ್ರದಾನ, ಪುಸ್ತಕ ಬಹುಮಾನ, ಎಲ್.ಎಸ್.ಎಸ್. 100ರ ನೆನಪಿನಲ್ಲಿ ಕನ್ನಡ ಶಾಲೆ ಪ್ರಶಸ್ತಿ, ಕನ್ನಡ ಮಾಧ್ಯಮ ಮಕ್ಕಳಿಗೆ ಪುರಸ್ಕಾರ: ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಎಲ್. ಹನುಮಂತಯ್ಯ, ಟಿ.ಎಸ್. ನಾಗಾಭರಣ, ಉಪಸ್ಥಿತಿ: ವ.ಚ. ಚನ್ನೇಗೌಡ, ಅಮೃತ ನಾರಾಯಣ್, ಭಾರತಿ ಶೇಷಗಿರಿರಾವ್, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ಕಾರ್ಮಿಕಲೋಕ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING
Sites
Mysore
COMMERCIAL SITES FOR SALE / JV
(Vanijya 11B Khata)
45 x 90 & 45 x 82
South - East Facing
Near ATME College
Bannur Road, Mysore.
Ph: 96637 67007

BUILDERS ESSENTIAL
Roofing Materials
WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

JOB OPPORTUNITIES
General
WANTED HOUSEWIVES and Retired people for part time job opportunity in MNC company. Manager: 8217042937.

Teachers/ Professors
PERSONAL TUTOR. Seeking experienced Math / Science teacher to tutor student in Bangalore. 5 days / week. Prefer male teachers aged 40+, retirees welcome. Contact vivekaiyyar79@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL
Change of Name

I, SADHVEE SHIVANAND, residing at No. 10/E, 2nd Floor, Guruprasad, P.G. Halli Main Road, Near Dattatreya Temple, Malleshwaram, Bangalore 560003, have changed my name from SADHVEE SHIVANAND to SADHVEE SHIVANAND BHATKAL, vide Affidavit dated 28/11/2024, sworn before B.R. SHASHIKALA, Notary, Bangalore.

I, HARSHITHA.S Residing`at No.1379, 10th_Main, 5th_Cross, Vijayanagar, Bangalore-560040 have`changed my`name`to RAKSHA_S.GOWDA vide`Affidavit Dtd:02.12.2024 Sworn`Before Notary R.Basavaraja, Bangalore

I, CHANDRAKANTH B S S/o. Sadashiva Residing at No.327/B, 13th Cross,2nd Phase, WOC Road, Manjunathnagar, Rajajinagar, Bengaluru-560010 have changed my name to CHANDRAKATH BABASHET SADASHIV vide affidavit dated 02.12.2024 Sworn before notary: Vanajakshi.R, Bangalore

CHANGE OF NAME
I, BABU & BABU N S/o Narasimhareddy, residing at Yerrahalli Village, Hampasandra Post, Gudibande Taluk, Chikkaballapura Dist.-561204, declare that above names pertain to me only. Vide affidavit dated 29.11.2024 before Notary Y. Lakshmipathy Reddy, Bagepalli

CHANGE OF NAME
I, SHAKEEB AHMED S/o Abdul Razak, R/at #24, 5th Cross, LIC Colony, 3rd Block East Jayanagar, Bangalore- 560011, have changed my name to SHAKEEB AHMED R for all my future purpose. Vide affidavit dated 30.11.2024 sworn before Notary Mohammed Hussain K., Bangalore.

CHANGE OF NAME
I, Zepherino Felix Dsouza @ Zepherino Dsouza, residing at Mystic Rose, St Thomas Town, 13, VST Road, Lingarajpuram, Bengaluru- 560 084, declare that the above names partain to me and henceforth I shall be known as ZEPHERINO FELIX DSOUZA vide affidavit dated 29/11/2024 before Notary Uday Kumar K, Bengaluru.

ಡಿಸೆಂಬರ್ 14ರಂದು ಮಂಡಳಿ ಚುನಾವಣೆ ಕಾರಣ ಸಮಿತಿಗೆ ತಡೆ

ಪಾಶ್ ಸಮಿತಿ: ಹಿಂದಡಿ ಇಟ್ಟ ಕೆಎಫ್‌ಸಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ನಿರ್ದೇಶಕಿ, ನಿರ್ಮಾಪಕಿ ಕವಿತಾ ಲಂಕೇಶ್ ಅಧ್ಯಕ್ಷತೆಯಲ್ಲಿ ಲೈಂಗಿಕ ದೌರ್ಜನ್ಯ ತಡೆ ಸಮಿತಿ (ಪಾಶ್) ರಚಿಸಿದ್ದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು (ಕೆಎಫ್‌ಸಿಸಿ), ಮಂಡಳಿಯ ಚುನಾವಣೆಯ ಕಾರಣವನ್ನು ನೀಡಿ ಸಮಿತಿ ರಚನೆಯನ್ನು ತಡೆ ಹಿಡಿದಿದೆ.

ಎನ್‌.ಎಂ. ಸುರೇಶ್

ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಅಧ್ಯಯನಕ್ಕೆ ಕೇರಳ ಸರ್ಕಾರ ನೇಮಿಸಿದ್ದ ನ್ಯಾಯಮೂರ್ತಿ ಕೆ. ಹೇಮಾ ಸಮಿತಿಯ ವರದಿ ಬಹಿರಂಗಗೊಂಡ ಬೆನ್ನಲ್ಲೇ, ಕನ್ನಡ ಚಿತ್ರರಂಗದಲ್ಲೂ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಬೇಕು ಎನ್ನುವ ಕೂಗು ಕೇಳಿಬಂದಿತ್ತು. ಮೂರು ತಿಂಗಳ ಹಿಂದೆ ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಆ್ಯಂಡ್ ಇಕ್ವಾಲಿಟಿ (ಫೈರ್) ಸದಸ್ಯರು ಮುಖ್ಯಮಂತ್ರಿಯನ್ನು ಭೇಟಿಯಾಗಿ ಈ ಬಗ್ಗೆ ಮನವಿಯನ್ನೂ ನೀಡಿದ್ದರು.

ಕನ್ನಡ ಚಿತ್ರರಂಗದ ಮಹಿಳಾ ಕಲಾವಿದರು, ತಂತ್ರಜ್ಞರು ಹಾಗೂ ಕಾರ್ಮಿಕರ ರಕ್ಷಣೆಗಾಗಿ ಕೆಎಫ್‌ಸಿಸಿಯು ಸಾಧ್ಯವಾದಷ್ಟು ಬೇಗ ಪಾಶ್ ಸಮಿತಿ ರಚಿಸಬೇಕೆಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಕಳೆದ ಸೆ.16ರಂದು ಸೂಚಿಸಿದ್ದರು. ಆಗ ಸಮಿತಿ ರಚನೆಗೆ ಕೆಎಫ್‌ಸಿಸಿ ಕಾಲಾವಧಿ ಕೇಳಿತ್ತು. ಎರಡು ತಿಂಗಳು ಕಳೆದರೂ ಸಮಿತಿ ರಚಿಸದೇ ಇರುವ ಕುರಿತು ನಾಗಲಕ್ಷ್ಮಿ ಚೌಧರಿ ಅಸಮಾಧಾನ ವ್ಯಕ್ತಪಡಿಸಿದ್ದರು. ಇದರ ಬೆನ್ನಲ್ಲೇ ಕವಿತಾ ಲಂಕೇಶ್ ಅಧ್ಯಕ್ಷತೆಯಲ್ಲಿ 11 ಸದಸ್ಯರನ್ನೊಳಗೊಂಡ ಸಮಿತಿ ರಚಿಸುವ ನಿರ್ಧಾರವನ್ನು ಕೆಎಫ್‌ಸಿಸಿ ಅಧ್ಯಕ್ಷ ಎನ್‌.ಎಂ.ಸುರೇಶ್ ಮಾಡಿದ್ದರು.

ಆಯಾ ಅವಧಿಯ ಚುನಾಯಿತ ಕೆಎಫ್‌ಸಿಸಿ ಅಧ್ಯಕ್ಷ, ನಟಿ ಪ್ರಮೀಳಾ ಜೋಷಾಯ್, ಮಹಿಳಾ ಹಕ್ಕು ಹೋರಾಟಗಾರ್ತಿ ವಿಮಲಾ ಕೆ.ಎಸ್., ವಕೀಲರಾದ ರಾಜಲಕ್ಷ್ಮೀ ಅಂಕಲಗಿ, ಟ್ರಾನ್ಸ್‌ಜೆಂಡರ್ ಆ್ಯಕ್ಟಿವಿಸ್ಟ್ ಮಲ್ಲು ಕುಂದಾರ್, ನಟಿ ಶ್ರುತಿ ಹರಿಹರನ್, ನಿರ್ಮಾಪಕ ಎನ್‌.ಎಂ.ಸುರೇಶ್, ಪತ್ರಕರ್ತ ಮುರುಳೀಧರ್ ಖಜಾನೆ, ಸ್ತ್ರೀವಾದಿ ಮತ್ತು ರಂಗಕರ್ಮಿ ಶಶಿಕಾಂತ ಯಡಹಳ್ಳಿ, ನಿರ್ಮಾಪಕ ಸಾ.ರಾ. ಗೋವಿಂದು ಸಮಿತಿ ಸದಸ್ಯರು ಎಂದು ನಿರ್ಧರಿಸಲಾಗಿತ್ತು. ಈ ನಿರ್ಧಾರವನ್ನು ಇದೀಗ ಕೆಎಫ್‌ಸಿಸಿ ತಡೆಹಿಡಿದಿದೆ.

ಡಿ.14ಕ್ಕೆ ಚುನಾವಣೆ: 'ಮಂಡಳಿಯ ಚುನಾವಣೆ ಘೋಷಣೆಯಾಗಿದೆ. ನೀತಿ ಸಂಹಿತೆ ಜಾರಿಯಲ್ಲಿದೆ. ಡಿ.14ಕ್ಕೆ ಚುನಾವಣೆ ನಡೆಯಲಿದ್ದು ಅಲ್ಲಿಯವರೆಗೆ ಪಾಶ್ ಸಮಿತಿ ರಚನೆಯನ್ನು ತಡೆ ಹಿಡಿದಿದ್ದೇವೆ. ನಾವು ಸಮಿತಿ ರಚಿಸಿದ್ದೆವು. ನಾನು ಅಧ್ಯಕ್ಷನಾಗಿ ಸಹಿ ಮಾಡಿದರೆ ಅದು ಊರ್ಜಿತವಾಗುವುದಿಲ್ಲ. ನನಗೆ ಕಾನೂನು ಪ್ರಕಾರ ಸದ್ಯ ಯಾವ ಅಧಿಕಾರವೂ ಇಲ್ಲ. ಡಿ.14ರ ಚುನಾವಣೆ ಬಳಿಕ ಸಮಿತಿ ರಚನೆಯಾಗಲಿದೆ. ಈ ವಿಷಯವನ್ನು ಮಹಿಳಾ ಆಯೋಗಕ್ಕೂ ತಿಳಿಸಿದ್ದೇವೆ' ಎಂದರು ಎನ್‌.ಎಂ.ಸುರೇಶ್.

'ಕೆಲವರ ವಿರೋಧದಿಂದ ಸಮಿತಿ ರಚನೆಗೆ ತಡೆ'

ಕವಿತಾ ಲಂಕೇಶ್

'ಸಮಿತಿ ರಚನೆಯನ್ನು ತಡೆಹಿಡಿದಿರುವುದಕ್ಕೆ ಚುನಾವಣೆಯ ಕಾರಣವನ್ನು ಕೆಎಫ್‌ಸಿಸಿ ನೀಡಿದೆ. ನನಗಿರುವ ಮಾಹಿತಿಯಂತೆ ಕೆಲವರು ಸಮಿತಿ ಹಾಗೂ ಅದರಲ್ಲಿರುವ ಸದಸ್ಯರ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅಂದು ಸಭೆಯಲ್ಲಿ ಪಾಶ್ ಸಮಿತಿ ರಚನೆಗೆ ವಿರೋಧ ವ್ಯಕ್ತಪಡಿಸಿದವರೇ ಇಂದು ಸಮಿತಿ ಸದಸ್ಯರಾಗಬೇಕು ಎಂದು ಆಗ್ರಹಿಸಿದ್ದಾರೆ. ಹೀಗಾದರೆ ಮುಂದೆ ಏನಾಗಬಹುದು ಎಂದು ಯೋಚಿಸಿ' ಎಂದು ಕವಿತಾ ಲಂಕೇಶ್ ಪ್ರಶ್ನಿಸಿದರು.

'ಸೆಪ್ಟೆಂಬರ್‌ನಲ್ಲಿ ನಾಗಲಕ್ಷ್ಮಿ ಚೌಧರಿ ಅವರು ಬಂದ ಬಳಿಕ ಸಮಿತಿ ರಚನೆ ಬಗ್ಗೆ ಹಲವು ಸುತ್ತಿನ ಮಾತುಕತೆ ನಡೆಸಿದ್ದೆವು. ನ್ಯಾಯಾಲಯದ ಮೆಟ್ಟಿಲೇರಿದರೆ ಈ ಪಾಶ್ ಸಮಿತಿ ರಚನೆಗೆ ಕೆಎಫ್‌ಸಿಸಿ ಕಾರ್ಯಕಾರಿ ಸಮಿತಿ ಒಪ್ಪಿಗೆ ಬೇಕಾಗಿಯೇ ಇಲ್ಲ. ಪಾಶ್ ಸಮಿತಿಯಲ್ಲಿ ಬೇರೆ ಬೇರೆ ಕ್ಷೇತ್ರದ ಸದಸ್ಯರು ಇರಬೇಕು. ಮಹಿಳೆಯೇ ಅಧ್ಯಕ್ಷೆಯಾಗಿರಬೇಕು. ಹೀಗಾಗಿಯೇ ಮಾತುಕತೆ ನಡೆಸಿಯೇ ಈ ಸಮಿತಿ ರಚಿಸಿದ್ದೆವು. ನನಗೆ ಆ ಸಮಿತಿಯ ಅಧ್ಯಕ್ಷಳಾಗಬೇಕು ಎನ್ನುವ ಯಾವ ಆಸೆಯೂ ಇರಲಿಲ್ಲ. 'ನೀವು ಕೆಎಫ್‌ಸಿಸಿ ಸದಸ್ಯೆಯಾಗಿದ್ದು, ಫೈರ್ ಸಂಸ್ಥೆಯ ಅಧ್ಯಕ್ಷರಾಗಿದ್ದೀರಿ. ಹೀಗಾಗಿ ನೀವೇ ಅಧ್ಯಕ್ಷರಾಗಿ' ಎಂದು ಎನ್‌.ಎಂ.ಸುರೇಶ್ ಹೇಳಿದರು. ಎಲ್ಲರ ಒಪ್ಪಿಗೆ ಪಡೆದೇ ಸದಸ್ಯರನ್ನು ಆಯ್ಕೆ ಮಾಡಿದ್ದೆವು' ಎಂದು ಕವಿತಾ ಲಂಕೇಶ್ ಹೇಳಿದರು.

ಸ್ವ ಇಚ್ಛೆಯಿಂದ ಪುನರ್ವಸತಿ ಬಯಸುವ ಅರಣ್ಯವಾಸಿಗಳಿಗೆ ಸೌಲಭ್ಯ

ನಿರಾಶ್ರಿತ ಪ್ರಮಾಣ ಪತ್ರಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹುಲಿ ಸಂರಕ್ಷಿತ ಪ್ರದೇಶಗಳು, ರಾಷ್ಟ್ರೀಯ ಉದ್ಯಾನಗಳು, ಅಭಯಾರಣ್ಯಗಳು ಮತ್ತು ಅರಣ್ಯ ಪ್ರದೇಶಗಳಿಂದ ಸ್ವಯಂ ಪ್ರೇರಿತರಾಗಿ ಹೊರ ಬಂದು ಪುನರ್ವಸತಿ ಹೊಂದಲು ಬಯಸುವ ಅರಣ್ಯವಾಸಿಗಳಿಗೆ 'ಯೋಜನಾ ನಿರಾಶ್ರಿತ ಪ್ರಮಾಣ ಪತ್ರ' ನೀಡುವ ಅಗತ್ಯವಿದೆ ಎಂದು ಪಿಸಿಸಿಎಫ್ (ಅರಣ್ಯಪಡೆ ಮುಖ್ಯಸ್ಥರು) ಬ್ರಿಜೇಶ್ ಕುಮಾರ್ ದೀಕ್ಷಿತ್ ಪ್ರತಿಪಾದಿಸಿದ್ದಾರೆ. ಈ ಸಂಬಂಧ ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿಯವರಿಗೆ ಇತ್ತೀಚೆಗೆ ಪತ್ರ ಬರೆದಿದ್ದಾರೆ.

ಹುಲಿಸಂರಕ್ಷಿತ ಪ್ರದೇಶ, ವನ್ಯಜೀವಿಧಾಮ ಮತ್ತು ರಾಷ್ಟ್ರೀಯ ಉದ್ಯಾನಗಳಿಂದ ಸ್ವ ಇಚ್ಛೆಯಿಂದ ಪುನರ್ವಸತಿಗೊಳಿಸುವ ಕಾರ್ಯ ಪರಿಣಾಮಕಾರಿಯಾಗಿ ಜಾರಿಯಾದರೆ ಅರಣ್ಯ ಸಂರಕ್ಷಣೆ ಮತ್ತು ಮಾನವ–ವನ್ಯಜೀವಿ ಸಂಘರ್ಷದ ನಿಯಂತ್ರಣವೂ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಇದಕ್ಕಾಗಿ, 'ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) (57ನೇ ತಿದ್ದುಪಡಿ) ನಿಯಮ, 2000' ಕಾಯ್ದೆಗೆ ತಿದ್ದುಪಡಿ ಮಾಡಿ 'ಪ್ರಾಜೆಕ್ಟ್' ವ್ಯಾಖ್ಯಾನದಡಿ, 'ಹುಲಿ ಸಂರಕ್ಷಿತ ಪ್ರದೇಶ, ವನ್ಯಜೀವಿಧಾಮ ಮತ್ತು ರಾಷ್ಟ್ರೀಯ ಉದ್ಯಾನಗಳಿಂದ ಸ್ವ ಇಚ್ಛೆಯಿಂದ ಪುನರ್ವಸತಿಗೊಳ್ಳುವ ಕುಟುಂಬ' ಎಂಬುದನ್ನು ಸೇರಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸೂಕ್ತ ಶಿಫಾರಸು ಮಾಡಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ವಿಚಾರವಾಗಿ ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ ಗಿರಿಧರ ಕುಲಕರ್ಣಿಯವರು ಅರಣ್ಯ ಸಚಿವರಿಗೆ ಮನವಿಯೊಂದನ್ನು ಸಲ್ಲಿಸಿದ್ದು, ಅದರ ಅನ್ವಯ ಮುಂದಿನ ಕ್ರಮಕ್ಕಾಗಿ ಸಚಿವರ ಕಚೇರಿಯಿಂದ ಟಿಪ್ಪಣಿಯೊಂದನ್ನು ಕಳುಹಿಸಲಾಗಿದೆ ಎಂದು ದೀಕ್ಷಿತ್ ಉಲ್ಲೇಖಿಸಿದ್ದಾರೆ.

ರಾಜ್ಯದ ವಿವಿಧ ಹುಲಿ ಸಂರಕ್ಷಿತ ಪ್ರದೇಶಗಳು, ರಾಷ್ಟ್ರೀಯ ಉದ್ಯಾನಗಳು, ಅಭಯಾರಣ್ಯಗಳು ಹಾಗೂ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಅರಣ್ಯವಾಸಿಗಳು ಹಾಗೂ ಗಿರಿಜನರು ತಮ್ಮ ಕಲ್ಯಾಣಕ್ಕಾಗಿ ಮತ್ತು ಅಭಿವೃದ್ಧಿಗಾಗಿ ಅರಣ್ಯಗಳಿಂದ ಹೊರ ಬರಲು ಸಿದ್ಧರಿದ್ದಾರೆ. ಇದರಿಂದಾಗಿ ಮಾನವರಿಂದ ಅರಣ್ಯಗಳ ಮೇಲಿನ ಒತ್ತಡ ಕಡಿಮೆ ಆಗುತ್ತದೆ. ಅರಣ್ಯವಾಸಿಗಳು ಮತ್ತು ಗಿರಿಜನರ ಮುಂದಿನ ಪೀಳಿಗೆಯು ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆತು ತಮ್ಮ ಭವಿಷ್ಯ ರೂಪಿಸಲು ಸಹಾಯಕವಾಗುತ್ತದೆ ಎಂದು ಗಿರಿಧರ್ ಅವರು ಅರಣ್ಯ ಸಚಿವರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

ಈ ರೀತಿ ಪುನರ್ವಸತಿಗೊಳ್ಳುವ ಜನರಿಗೆ ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನ ಪಡೆಯುವುದಕ್ಕೆ ಅನುಕೂಲವಾಗಲು ಮತ್ತು ಪುನರ್ವಸತಿ ಯೋಜನೆ ಇನ್ನಷ್ಟು ಪರಿಣಾಮಕಾರಿಯಾಗಿಸಲು ಮಹಾರಾಷ್ಟ್ರದಲ್ಲಿ ನೀಡುತ್ತಿರುವ ರೀತಿಯಲ್ಲಿ 'ಯೋಜನಾ ನಿರಾಶ್ರಿತ ಪ್ರಮಾಣ ಪತ್ರ' ನೀಡಬೇಕು ಎಂದು ಅವರು ಹೇಳಿದ್ದಾರೆ.

15ರವರೆಗೆ 'ಪದಗಳ ಪೈಪೋಟಿ' ವಿಸ್ತರಣೆ

ಬೆಂಗಳೂರು: ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಇಂಗ್ಲಿಷ್ ಪದಗಳಿಗೆ ಕನ್ನಡದಲ್ಲೇ ಸುಲಭವಾಗಿ ಪದ ಕಟ್ಟಲು ಮುನ್ನೋಟ ಟ್ರಸ್ಟ್ ಹಮ್ಮಿಕೊಂಡಿರುವ ಸ್ಪರ್ಧೆಯಲ್ಲಿ ಪದಗಳ ಕಡತ ಸಲ್ಲಿಸಲು ಇದೇ 15ರವರೆಗೂ ಅವಧಿ ವಿಸ್ತರಿಸಲಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳಿಗೆ ಬೇಕಾಗುವ ಕನ್ನಡದ ಪದಗಳು ಒಂದೆಡೆ ಸಿಗುವಂತೆ ಮಾಡಲು ಟ್ರಸ್ಟ್ ಕಡೆಯಿಂದ tilipada.org ಎಂಬ ಅಂತರ್ಜಾಲ ನಿರ್ಮಿಸಲಾಗಿದೆ.

ಅಂತರ್ಜಾಲದ ಮುಖಪುಟದಲ್ಲಿನ 'ತಿಳಿಪದ ಪೈಪೋಟಿ' ಆಯ್ಕೆಯಲ್ಲಿ ಎಕ್ಸೆಲ್ ಕಡತವನ್ನು ಡೌನ್‌ಲೋಡ್ ಮಾಡಿಕೊಂಡು, ಇಂಗ್ಲಿಷ್ ಪದಗಳಿಗೆ ಕನ್ನಡ ಪದಗಳನ್ನು ಬರೆಯಬೇಕಿದೆ. ಅದರಲ್ಲಿ ಸ್ವವಿವರನ್ನೂ ತುಂಬಿ munnotaweb@gmail.comಗೆ ಕಳುಹಿಸಿ ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ

ಬೆಂಗಳೂರಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮಾಸ್ಟರ್ಸ್ ಟೆನಿಸ್ ಆಟಗಾರ ಮತ್ತು ಮಾಜಿ ಐಪಿಎಸ್ ಅಧಿಕಾರಿ ಬಿ.ಎನ್‌.ಎಸ್. ರೆಡ್ಡಿ ಅವರಿಗೆ ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ಗೃಹ ಸಚಿವ ಜಿ. ಪರಮೇಶ್ವರ ಹಾಜರಿದ್ದರು

ನಗರದ ಕೇಶವಶಿಲ್ಪ ಸಭಾಂಗಣದಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಆಯೋಜಿಸಿದ್ದ ಕನ್ನಡ ಪುಸ್ತಕ ಹಬ್ಬದ ಸಮಾರೋಪದಲ್ಲಿ ಸಾಹಿತಿ ಪರಿಚಾರಕ ಪ್ರಕಾಶ್ ಕೊಡೆಂಕಿರಿ ಅವರನ್ನು ಸಾಹಿತಿ ಡಾ.ಸಿ.ಆರ್. ಚಂದ್ರಶೇಖರ್ ಸನ್ಮಾನಿಸಿದರು. ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ. ಕುಮಾರ್ ಉಪಸಿತರಿದ್ದರು ಪ್ರಜಾವಾಣಿ ಚಿತ್ರ



ಹೊಂಬೇಗೌಡನಗರದ ಪ್ರಭಾತ್ ಕಲಾ ಸಂಭ್ರಮ ಸಭಾಂಗಣದಲ್ಲಿ ಶನಿವಾರ ನಡೆದ ರಂಗ ಪ್ರವೇಶ ಕಾರ್ಯಕ್ರಮದಲ್ಲಿ ಸ್ಫೂರ್ತಿ ಎಸ್. ಜೋಶಿ ಅವರು ನೃತ್ಯ ಪ್ರದರ್ಶಿದರು

'ಪ್ರಗತಿಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ'

ತುಮಕೂರು: ಅಭಿವೃದ್ಧಿ ವಿಷಯದಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

'ದೇಶದ ಒಟ್ಟಾರೆ ಜಿಡಿಪಿ 8.2ರಷ್ಟು ಬೆಳವಣಿಗೆ ಸಾಧಿಸಿದ್ದರೆ, ಕರ್ನಾಟಕದ ಜಿಡಿಪಿ 10.2ಕ್ಕೆ ಹೆಚ್ಚಳವಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ), ಕೇಂದ್ರಕ್ಕೆ ತೆರಿಗೆ ಪಾವತಿಯಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ರಾಜ್ಯ ಎರಡನೇ ಸ್ಥಾನ ದಲ್ಲಿದೆ. ಅಭಿವೃದ್ಧಿಯಲ್ಲಿ ಇತರೆ ಎಲ್ಲ ರಾಜ್ಯಗಳಿಗಿಂತ ನಾವು ಮುಂಚೂಣಿ ಯಲ್ಲಿ ಇದ್ದೇವೆ. ಯಾರು ಬೇಕಾ ದರೂ ಬಂದು ಪರಿಶೀಲಿಸಲಿ. ತಪ್ಪು ಹೇಳುತ್ತಿದ್ದೇವೆ ಎಂಬ ಬಗ್ಗೆ ಹೇಳಲಿ ನೋಡೋಣ' ಎಂದು ಸವಾಲು ಹಾಕಿದರು.

ನಗರದಲ್ಲಿ ಸೋಮವಾರ ಜಿಲ್ಲಾ ಆಡಳಿತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಿಸಿ ಅವರು ಮಾತನಾಡಿದರು.

'ಕೆಲವರು ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಟೀಕೆ ಮಾಡುತ್ತಾರೆ. ಗ್ಯಾರಂಟಿ ಯೋಜನೆಗಳಿಗೆ ಹಣ ನೀಡಿದ್ದರಿಂದ ಅನುದಾನವಿಲ್ಲದೆ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿವೆ ಎನ್ನುತ್ತಾರೆ. ಜಿಲ್ಲೆಯೊಂದರಲ್ಲೇ ವಿವಿಧ ರೂಪದಲ್ಲಿ 1.50 ಲಕ್ಷ ಸವಲತ್ತು ವಿತರಿಸಿರುವುದು ಅಭಿವೃದ್ಧಿಯಲ್ಲವೇ' ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಎಸ್‌ಇಪಿ, ಟಿಎಸ್‌ಪಿ ಕಾಯ್ದೆ ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ಪರಿಶಿಷ್ಟರಿಗೆ ₹39,214 ಕೋಟಿ ಖರ್ಚು ಮಾಡಲಾಗುತ್ತಿದೆ. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಹೊರತುಪಡಿಸಿ, ಬೇರೆ ಯಾವ ರಾಜ್ಯದಲ್ಲೂ ಪ್ರತ್ಯೇಕ ಅನುದಾನ ಮೀಸಲಿಟ್ಟಿಲ್ಲ. ಪರಿಶಿಷ್ಟರಿಗೆ ಹಣ ಮೀಸಲಿಡುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಏಕೆ ಮಾಡಲಿಲ್ಲ ಎಂದು ಕೇಳಿದರು.

ಕಳ್ಳಬೇಟೆ ತಡೆಗೆ ಡಾಗ್ ಸ್ಕ್ವಾಡ್

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ರಾಜ್ಯದ ಐದು ಹುಲಿ ಸಂರಕ್ಷಿತ ಅರಣ್ಯಗಳಲ್ಲಿ ಅಕ್ರಮ ಬೇಟೆ, ಅರಣ್ಯ ಸಂಪತ್ತು ಕಳ್ಳಸಾಗಣೆ ತಡೆ ಹಾಗೂ ಪ್ರಕರಣಗಳ ಪತ್ತೆಗೆ ದೇಶದಲ್ಲೇ ಮೊದಲ ಟ್ರ್ಯಾಕರ್ ಡಾಗ್ ತರಬೇತಿ ಕೇಂದ್ರವನ್ನು ಗುಂಡ್ಲುಪೇಟೆ ತಾಲ್ಲೂಕಿನ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆರಂಭಿಸಲಾಗಿದೆ.

'ಮೇಲಕಾಮನಹಳ್ಳಿ ಅರಣ್ಯ ವ್ಯಾಪ್ತಿಯ ಗೋಪಾಲಸ್ವಾಮಿ ಬೆಟ್ಟ ವಲಯದ ಸಫಾರಿ ಕೇಂದ್ರದ ಬಳಿ ಈ ಕೇಂದ್ರ ಆರಂಭಿಸಲಾಗಿದ್ದು, 8 ಬೆಲ್ಜಿಯಂ ಮಾಲಿನಾಯ್ಸ್ (ಹೆಣ್ಣು) ತಳಿಯ ಶ್ವಾನಗಳನ್ನು ತರಿಸಿಕೊಳ್ಳಲಾಗಿದೆ' ಎಂದು ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎನ್‌.ಪ್ರಭಾಕರನ್ ತಿಳಿಸಿದರು.

ನುರಿತ ತಜ್ಞರಾದ ಅಮೃತ್ ಶ್ರೀಧರ್ ಹಿರಣ್ಯ ಅವರ ನೇತೃತ್ವದ ತಂಡ, ಶ್ವಾನಗಳಿಗೆ 8 ರಿಂದ 10 ತಿಂಗಳು ತರಬೇತಿ ನೀಡಿ, ಹುಲಿ ಸಂರಕ್ಷಿತ ಅರಣ್ಯಗಳಾದ ನಾಗರಹೊಳೆ, ಭದ್ರಾ, ಕಾಳಿ, ಬಂಡಿಪುರ ಹಾಗೂ ಬಿಳಿಗಿರಿರಂಗನ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶಗಳಿಗೆ ತಲಾ ಎರಡು ಶ್ವಾನಗಳನ್ನು ಕಳಿಸಿಕೊಡಲಿದ್ದಾರೆ.

ಗೌರವಧನ ಹೆಚ್ಚಳಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿ ಗೌರವಧನ ನೀಡುವ ಆದೇಶ ವಾಪಸ್ ಪಡೆದು ಎಲ್ಲರಿಗೂ ಸಮಾನ ಗೌರವಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಗ್ರಾಮ ಪಂಚಾಯಿತಿ ಮಟ್ಟದ ಮುಖ್ಯ ಪುಸ್ತಕ ಬರಹಗಾರರ (ಎಂಬಿಕೆ) ಮತ್ತು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ (ಎಲ್‌ಸಿಆರ್‌ಪಿ), ಸಖಿಯರ ಮಹಾ ಒಕ್ಕೂಟ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷೆ ರುದ್ರಮ್ಮ, 'ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿದೆ. ಆದರೆ ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗೆ ಹಗಲು, ರಾತ್ರಿ ಶ್ರಮಿಸಿ ದುಡಿಯುತ್ತಿರುವ ಮುಖ್ಯ ಪುಸ್ತಕ ಬರಹಗಾರರು, ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು ಮತ್ತು ಸಖಿಯರಿಗೆ ಕಡಿಮೆ ವೇತನ ನೀಡಲಾಗುತ್ತಿದೆ. ಮೊದಲ ಹಂತದಲ್ಲಿ ಸಮಾನ ವೇತನ ನೀಡಿ, ನಂತರ ಮೌಲ್ಯಮಾಪನದ ಮೂಲಕ ಹೆಚ್ಚು ವ್ಯವಹರಿಸುವವರಿಗೆ ಪ್ರೋತ್ಸಾಹ ಧನ ನೀಡಿ ಉತ್ತೇಜಿಸಬೇಕು' ಎಂದು ಹೇಳಿದರು.

ಮಹಾ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕುಸಮಾ ಮಾತನಾಡಿ, 'ಮುಖ್ಯ ಪುಸ್ತಕ ಬರಹಗಾರರಿಗೆ ತಿಂಗಳಿಗೆ ಗೌರವಧನ ₹20 ಸಾವಿರ ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಗೆ ₹15 ಸಾವಿರ ನಿಗದಿಪಡಿಸಬೇಕು. ವಾರ್ಷಿಕವಾಗಿ ಸೇವಾ ಹಿರಿತನದ ಆಧಾರದಲ್ಲಿ ಶೇಕಡ 10ರಷ್ಟು ವೇತನ ಹೆಚ್ಚಳ ಮಾಡಬೇಕು' ಎಂದು ಆಗ್ರಹಿಸಿದರು.

ಸರ್ಕಾರ ನೀಡುತ್ತಿರುವ ಗೌರವಧನದಿಂದ ಜೀವನ ನಡೆಸುವುದು ಕಷ್ಟವಾಗಿದೆ. ಕೂಡಲೇ ವೇತನ ಹೆಚ್ಚಳ ಮಾಡಬೇಕು. ಇಲ್ಲವಾದರೆ ಬೆಳಗಾವಿಯಲ್ಲಿ ನಡೆಯುವ ವಿಧಾನಮಂಡಲದ ಚಳಿಗಾಲದ ಅಧಿವೇಶನ ಸಂದರ್ಭದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಹೋರಾಟ ಮಾಡುತ್ತಾರೆ ಎಂದು ಎಚ್ಚರಿಸಿದರು.

ಮಹಾ ಒಕ್ಕೂಟದ ಉಪಾಧ್ಯಕ್ಷೆ ಉಮಾ, ರಾಜ್ಯದ 30 ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶಗಳ ಕಸ ವಿಲೇವಾರಿಯನ್ನು ಗ್ರಾಮ ಪಂಚಾಯತಿಗೆ ನೀಡಬೇಕು. ಮೃತಪಟ್ಟ ಸಂಘದ ಸದಸ್ಯರಿಗೆ ₹6 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ: ವರ್ಷವಿಡೀ 'ಗಾಂಧಿ ಭಾರತ' ಕಾರ್ಯಕ್ರಮ

ಬೆಳಗಾವಿಯಲ್ಲಿ ಡಿ. 26ಕ್ಕೆ ಸಿಡಬ್ಲ್ಯುಸಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆಯ ಅಂಗವಾಗಿ ಇದೇ 26ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ ಮತ್ತು 27ರಂದು ಸಾರ್ವಜನಿಕ ಸಭೆ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶತಮಾನೋತ್ಸವ ಆಚರಣೆ ಕುರಿತು ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ಅವರು ಶತಮಾನೋತ್ಸವ ಸಮಿತಿಯ ಸಭೆ ನಡೆಸಿದರು.

'ಕಾರ್ಯಕ್ರಮಗಳಿಗೆ 26 ಮತ್ತು 27ರಂದು ಚಾಲನೆ ನೀಡುವ ಜೊತೆಗೆ, ಮೊದಲ ದಿನ ಗಣ್ಯ ಪ್ರತಿನಿಧಿಗಳಿಗೆ, ಮರುದಿನ ಸಾರ್ವಜನಿಕರಿಗೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಅಲ್ಲದೆ, ವರ್ಷವಿಡೀ 'ಗಾಂಧೀ ಭಾರತ' ಹೆಸರಿನಲ್ಲಿ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಶತಮಾನೋತ್ಸವದ ನೆನಪಿಗೆ ವಿಶೇಷ ಅಂಚೆ ಚೀಟಿ ಬಿಡುಗಡೆ ಮಾಡಬೇಕು ಎಂದು' ಸೂಚನೆ ನೀಡಿದರು.

ಮುಖ್ಯಾಂಶಗಳು

- ವಿಶೇಷ ಅಂಚೆಚೀಟಿ ಬಿಡುಗಡೆಗೆ ಸೂಚನೆ
- ವೀರಸೌಧ ಅಭಿವೃದ್ಧಿಗೆ ತೀರ್ಮಾನ
- ರಾಜ್ಯದ 120 ಸ್ಥಳಗಳಲ್ಲಿ ನೆನಪಿನ ಸ್ತಂಭಗಳ ಸ್ಥಾಪನೆ

ಸಭೆಯಲ್ಲಿ, ಬೆಳಗಾವಿ ನಗರದ ಪ್ರಮುಖ 32 ಕಿ.ಮೀ ಉದ್ದದ ರಸ್ತೆ ಹಾಗೂ 30 ವೃತ್ತಗಳಲ್ಲಿ ಮೈಸೂರು ದಸರಾ ಮಾದರಿಯಲ್ಲಿ ದೀಪಾಲಂಕಾರ ಮಾಡಲು ಮತ್ತು ಕಾಂಗ್ರೆಸ್ ಅಧಿವೇಶನ ನಡೆದ ಸ್ಥಳದಲ್ಲಿ ವೀರಸೌಧ ಅಭಿವೃದ್ಧಿಪಡಿಸಲು ಹಾಗೂ ಈ ಸ್ಥಳದಲ್ಲಿ ಗ್ರಂಥಾಲಯ ಮತ್ತು ಗಾಂಧಿ ಪ್ರತಿಮೆ ಅನಾವರಣ ಮಾಡಲು ತೀರ್ಮಾನಿಸಲಾಯಿತು. ಅಲ್ಲದೆ, ಬೆಳಗಾವಿಯ 2.1 ಕಿ.ಮೀ ಉದ್ದದ ರಸ್ತೆಯಲ್ಲಿ ಶತಮಾನೋತ್ಸವದ ಸ್ಮಾರಕವಾಗಿ ತಾತ್ಕಾಲಿಕ ವಿರೂಪಾಕ್ಷ ಗೋಪುರ ನಿರ್ಮಾಣ, ರೈಲು ಮಾರ್ಗದ ತಡೆಗೋಡೆಯುದ್ದಕ್ಕೂ ಉಬ್ಬು ಶಿಲ್ಪಗಳ ನಿರ್ಮಾಣ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲೂ ನಿರ್ಧರಿಸಲಾಯಿತು.

ಕಲಬುರಗಿಯಲ್ಲಿ ಗಂಗಾಧರ ರಾವ್ ದೇಶಪಾಂಡೆಯವರ ಸ್ಮಾರಕದಲ್ಲಿ ಮೂರ್ತಿ ಸ್ಥಾಪನೆ, ಮ್ಯೂಸಿಯಂ ಉದ್ಘಾಟನೆ, ಹುದಲಿಯಲ್ಲಿ ಗಾಂಧೀ ಸ್ಮಾರಕ ಹಾಗೂ ಛಾಯಾಚಿತ್ರ ಗ್ಯಾಲರಿಯ ಅಭಿವೃದ್ಧಿ. ಗಾಂಧೀಜಿಯವರು ವಿವಿಧ ಕಾಲಘಟ್ಟಗಳಲ್ಲಿ ಭೇಟಿ ನೀಡಿದ ರಾಜ್ಯದ 120 ಸ್ಥಳಗಳಲ್ಲಿ ನೆನಪಿನ ಸ್ತಂಭಗಳ ನಿರ್ಮಾಣ, ಅಟನ್ ಬರೋ ನಿರ್ಮಿಸಿದ ಪ್ರಸಿದ್ಧ 'ಗಾಂಧಿ' ಸಿನಿಮಾವನ್ನು ಕನ್ನಡದಲ್ಲಿ ನಿರ್ಮಾಣ, ಸುವರ್ಣ ವಿಧಾನಸೌಧದಲ್ಲಿ ಕಾಂಗ್ರೆಸ್ ಅಧಿವೇಶನ, ಸ್ವಾತಂತ್ರ್ಯ ಚಳವಳಿಯನ್ನು ಪ್ರತಿಬಿಂಬಿಸುವ ಛಾಯಾಚಿತ್ರ ಗ್ಯಾಲರಿ ನಿರ್ಮಿಸಲೂ ತೀರ್ಮಾನಿಸಲಾಗಿದೆ.

ವರ್ಷವಿಡೀ ಎಲ್ಲ ಶಾಲೆಗಳಲ್ಲಿ 'ಗಾಂಧಿ ಭಾರತ' ಅಡಿಯಲ್ಲಿ 'ನಾವು ಮನುಜರು' ಕಾರ್ಯಕ್ರಮಗಳ ಆಯೋಜನೆ. ಮಕ್ಕಳಲ್ಲಿ ಗಾಂಧೀಜಿ ವಿಚಾರಧಾರೆ ಬಗ್ಗೆ ಅರಿವು ಮೂಡಿಸಲು ವಿವಿಧ ಸ್ಪರ್ಧಾ ಕಾರ್ಯಕ್ರಮಗಳ ಆಯೋಜನೆ. ಗಾಂಧೀಜಿ ಅವರು ಬೋಧಿಸಿದ ಸಪ್ತ ಪಾತಕಗಳು ಹಾಗೂ ಸಂವಿಧಾನದ ಪೀಠಿಕೆಗಳನ್ನು ಮುದ್ರಿಸಿ ಶಾಲೆಗಳಲ್ಲಿ ವಿತರಿಸಲು ಕೂಡಾ ನಿರ್ಧರಿಸಲಾಗಿದೆ.

ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಸಚಿವರಾದ ಎಚ್‌.ಕೆ. ಪಾಟೀಲ, ಜಮೀರ್ ಅಹಮದ್ ಖಾನ್, ಲಕ್ಷ್ಮೀ ಹೆಬ್ಬಾಳಕರ, ಶಿವರಾಜ ತಂಗಡಗಿ, ಮಧು ಬಂಗಾರಪ್ಪ, ಮಾಜಿ ಸಚಿವರಾದ ಆರ್‌.ವಿ. ದೇಶಪಾಂಡೆ, ರಮಾನಾಥ ರೈ, ಶಾಸಕರಾದ ಆಸಿಫ್ ಸೇಠ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಉಪಸ್ಥಿತರಿದ್ದರು.

'ಫಸಲ್ ಭಿಮಾ' ವ್ಯಾಪ್ತಿಗೆ ತಂಬಾಕು; ಮನವಿ

ನವದೆಹಲಿ: ತಂಬಾಕು ಬೆಳೆಯನ್ನು ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ ವ್ಯಾಪ್ತಿಗೆ ತರಬೇಕು ಹಾಗೂ ತಂಬಾಕಿಗೆ ಬೆಂಬಲ ಬೆಲೆ ನೀಡಬೇಕು ಎಂದು ಒತ್ತಾಯಿಸಿ ಜೆಡಿಎಸ್ ಹಾಗೂ ಬಿಜೆಪಿ ನಿಯೋಗವು ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ಅವರಿಗೆ ಸೋಮವಾರ ಮನವಿ ಸಲ್ಲಿಸಿತು.

'ಬೆಲೆ ಕುಸಿತ ಸೇರಿ ಹಲವಾರು ಸಮಸ್ಯೆಗಳಿಗೆ ಸಿಲುಕಿ ತೀವ್ರ ಸಂಕಷ್ಟದಲ್ಲಿರುವ ರಾಜ್ಯದ ತಂಬಾಕು ಬೆಳೆಗಾರರ ಹಿತದೃಷ್ಟಿಯಿಂದ ನಾವು ಸಚಿವರಿಗೆ ಈ ಮನವಿ ಸಲ್ಲಿಸಿದ್ದೇವೆ. ಇದೇ ವೇಳೆ ನಮ್ಮ ಜತೆಯಲ್ಲಿದ್ದ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರೂ ಗೋಯಲ್ ಅವರಿಗೆ ತಂಬಾಕು ಬೆಳೆಗಾರರ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟರು' ಎಂದು ಯುವ ಜನತಾದಳದ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

'ಐಟಿಸಿಯಂತಹ ಬೃಹತ್ ಕಂಪನಿಗಳು ತಂಬಾಕು ಬೆಳೆಗಾರರಿಂದ ನೇರವಾಗಿ ಖರೀದಿಸುವಂತೆ ಸೂಚನೆ ಕೊಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಚಿವ ಸಾ.ರಾ.ಮಹೇಶ್, ಹುಣಸೂರು ಶಾಸಕ ಜಿ.ಟಿ.ಹರೀಶ್ ಗೌಡ, ಕೋಲಾರ ಸಂಸದ ಮಲ್ಲೇಶ್ ಬಾಬು ನಿಯೋಗದಲ್ಲಿ ಇದ್ದರು.

ಸಾರ್ವಜನಿಕ ನೋಟೀಸು – ಇ–ಹರಾಜು
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ (RCCPL) (ಸಮಾಪನ ಪ್ರಕ್ರಿಯೆಯಲ್ಲಿ–in Liquidation)
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ

ಇ–ಹರಾಜು
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರ ಅಡಿಯಲ್ಲಿ ಆಸ್ತಿಗಳ ಮಾರಾಟ
ಇ–ಹರಾಜಿನ ದಿನಗಳು: 02.01.2025 ಮತ್ತು 03.01.2025

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಚೆನ್ನೈ (NCLT, Chennai) ಇದರ 09/08/2024 ರ ಆದೇಶದ ಅನುಸಾರ ಮತ್ತು ಕಲಂ 35 (f) ರ IBC, 2016 ಮತ್ತು ನಿಬಂಧನೆ 32(e) ಹಾಗು 32A ಸಮಾಪನ ಪ್ರಕ್ರಿಯೆ ನಿಬಂಧನೆಗಳು, 2016 ಅನುಸಾರವಾಗಿ ಕಂಪನಿಯ ಆಸ್ತಿಗಳನ್ನು ಸಕ್ರಿಯ ಸಂಸ್ಥೆಯಂತೆ ಇಡಿಯಾಗಿ ಅಥವಾ ಬಿಡಿ ಬಿಡಿಯಾಗಿ ಮಾರಾಟ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಈ ಮಾರಾಟವು 'ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ' ಮತ್ತು ಮರು ಪಡೆಯುವಿಕೆ ಇಲ್ಲದೆ **("AS IS WHERE IS ", "AS IS WHAT IS", "WHATEVER THERE IS BASIS" and "NO RECOURSE BASIS")** ಮಾರಾಟ ಮಾಡಲಾಗುವುದು.

ಸದರಿ ಮಾರಾಟವನ್ನು ಇ–ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ – ಆಕ್ಷನ್ ಟೈಗರ್‌ನ ಇ–ಹರಾಜು ವೇದಿಕೆಯ ಮೂಲಕ https://ncltauction.auctiontiger.net ನಲ್ಲಿ ಮಾಡಲಾಗುವುದು. ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಆಸ್ತಿಗಳ ಪಟ್ಟಿ	ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
	'ಎ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ಇ–ಹರಾಜಿನ ದಿನ ಮತ್ತು ಸಮಯ: 02.01.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ		
ಆಸ್ತಿ ಪಟ್ಟಿ 1	ಪ್ರಧಾನವಲ್ಲದ (non-core) ಆಸ್ತಿಗಳು ಸೇರಿದಂತೆ, ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದು ಮತ್ತು ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು iii. ಒತ್ತೆಯ ಸಾಲದಾತರು ತಮ್ಮ ಭದ್ರತಾ ಹಕ್ಕನ್ನು ಬಿಟ್ಟು ಕೊಟ್ಟಿಲ್ಲದ ಆಸ್ತಿಗಳು	22.44 ಕೋಟಿ	2.244 ಕೋಟಿ
	'ಬಿ' ವರ್ಗ: ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಮಾರಾಟ ('ಎ' ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 02.01.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 2	ಪ್ರಧಾನವಲ್ಲದ (non-core) ಆಸ್ತಿಗಳನ್ನು ಹೊರತುಪಡಿಸಿ ಕಾರ್ಪೊರೇಟ್ ಸಾಲಗಾರ ಸಂಸ್ಥೆಯನ್ನು ಸಕ್ರಿಯ ಸಂಸ್ಥೆಯಂತೆ ಪರಿಗಣಿಸಿ ಸಮಾಪನ ಪ್ರಕ್ರಿಯೆ ನಿಬಂಧನೆಗಳು 32 (e) ಮತ್ತು 32A ಪ್ರಕಾರ ಕೆಳಗಿನವುಗಳನ್ನು ಹೊರತುಪಡಿಸಿ: i. ನಗದಿಗೆ ಸಮಾನವಾದವು ಮತ್ತು ಇತರ ಬ್ಯಾಂಕ್ ಶಿಲ್ಕು ii. ವರ್ಗ 'ಸಿ'ಯಲ್ಲಿ ಹೇಳಿರುವಂತೆ ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಪ್ರಧಾನವಲ್ಲದ ಆಸ್ತಿಗಳು iii. ಸದರಿ ಮೊಕದ್ದಮೆಗಳಿಂದ ಬರಬಹುದಾದ ಮೌಲ್ಯಗಳು iv. ಒತ್ತೆಯ ಸಾಲದಾತರು ತಮ್ಮ ಭದ್ರತಾ ಹಕ್ಕನ್ನು ಬಿಟ್ಟು ಕೊಟ್ಟಿಲ್ಲದ ಆಸ್ತಿಗಳು	19.44 ಕೋಟಿ	1.944 ಕೋಟಿ
	'ಸಿ' ವರ್ಗ: ಪ್ರಧಾನವಲ್ಲದ ಆಸ್ತಿಗಳ ಮಾರಾಟ (ಕೇವಲ ನಿವೇಶನಗಳು) ಮಾರಾಟ ('ಎ' ವರ್ಗದಲ್ಲಿ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 02.01.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 3	ಮಂಗಳೂರು ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಮಂಗಳೂರು ನಗರ ಕಾರ್ಪೊರೇಷನ್ನಿಗೆ ಸೇರಿದ ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಇಲ್ಲಿ ಸರ್ವೆ ನಂ. 37–1ರಲ್ಲಿರುವ 65.50 ಸೆಂಟ್ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	1.44 ಕೋಟಿ	0.144 ಕೋಟಿ
ಆಸ್ತಿ ಪಟ್ಟಿ 4	ಕಾರ್ಕಳ ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದಲ್ಲಿ ಸರ್ವೆ ನಂ. 792–1ರಲ್ಲಿರುವ 3.89 ಎಕರೆ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	1.14 ಕೋಟಿ	0.114 ಕೋಟಿ
	'ಡಿ' ವರ್ಗ: ಲೀಸ್ ಆವರಣಗಳಲ್ಲಿ ಇರುವ ಚರಾಸ್ತಿಗಳ ಮಾರಾಟ ('ಎ' ಅಥವಾ 'ಬಿ' ವರ್ಗದ ಆಸ್ತಿಗಳಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 02.01.2025ರಂದು ಮಧ್ಯಾಹ್ನ 05.00ರಿಂದ 06.00 ಗಂಟೆಯವರೆಗೆ		
ಆಸ್ತಿ ಪಟ್ಟಿ 5	ಡಿ. ನಂ. 12/92 ಮತ್ತು 12/93, ಪಡವು ಪೋಸ್ಟ್, ಶಕ್ತಿನಗರ, ಕುಲಶೇಖರ, ಮಂಗಳೂರು, ಕರ್ನಾಟಕ, ಇಲ್ಲಿರುವ ಯಂತ್ರೋಪಕರಣ ಮತ್ತು ಒಂದು ವಾಹನ	97.00 ಲಕ್ಷ	9.70 ಲಕ್ಷ
ಆಸ್ತಿ ಪಟ್ಟಿ 6	ಸರ್ವೆ ನಂ. 209/1ರಲ್ಲಿ ಡಿ. ನಂ. 50/4ಎ ಮತ್ತು 4ಬಿ, ಜಿಂಜೀ ರಸ್ತೆ, ತಿರುವಮತೂರು ಗ್ರಾಮ, ವಿಕ್ರವಂಡಿ ತಾಲ್ಲೂಕು, ವಿಲ್ಲುಪುರಮ್, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು	1.12 ಕೋಟಿ	0.112 ಕೋಟಿ
ಆಸ್ತಿ ಪಟ್ಟಿ 7	ಸರ್ವೆ ನಂ. 261/6 ಮತ್ತು 267/2, ಕಟ್ಟಂಡಿಕುಪ್ಪಮ್, ಪನ್‌ರುಟಿ, ಕಡಲೂರು ಜಿಲ್ಲೆ, ತಮಿಳುನಾಡು, ಇಲ್ಲಿರುವ ಯಂತ್ರೋಪಕರಣಗಳು ಮತ್ತು ವಾಹನಗಳು	53.00 ಲಕ್ಷ	5.30 ಲಕ್ಷ
	'ಇ' ವರ್ಗ: ಪ್ರತ್ಯೇಕ ಆಸ್ತಿಗಳ ಬಿಡಿ ಬಿಡಿ ಮಾರಾಟ (ಚರಾಸ್ತಿಗಳು ಮತ್ತು ಸ್ಥಿರಾಸ್ತಿಗಳು) ('ಎ' ಅಥವಾ 'ಬಿ' ವರ್ಗದ ಆಸ್ತಿಗಳಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 03.01.2025ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ		
ಆಸ್ತಿ ಪಟ್ಟಿ 8	ಕೈಗಾರಿಕಾ ಸ್ವತ್ತು (ಸ್ಥಿರ ಮತ್ತು ಚರ ಆಸ್ತಿಗಳು) ಪ್ಲಾಟ್ ನಂ. 425(ಪಿ), ಸರ್ವೆ ನಂ. 6–ಪಿ, ಕೈಗಾರಿಕಾ ಪ್ರದೇಶ, ಬೈಕಂಪಾಡಿ, ಮಂಗಳೂರು, ಕರ್ನಾಟಕ ಇಲ್ಲಿನ 56 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು	3.54 ಕೋಟಿ	0.354 ಕೋಟಿ
ಆಸ್ತಿ ಪಟ್ಟಿ 9	ಕೈಗಾರಿಕಾ ಸ್ವತ್ತು (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೆ ನಂ. 20/ಪಿ, ಕೈಗಾರಿಕಾ ಪ್ರದೇಶ, ಪ್ಲಾಟ್ ನಂ. 429 ಬೈಕಂಪಾಡಿ, ಮಂಗಳೂರು, ಕರ್ನಾಟಕ ಇಲ್ಲಿನ 52.63 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	4.12 ಕೋಟಿ	0.412 ಕೋಟಿ
ಆಸ್ತಿ ಪಟ್ಟಿ 10	ಕೈಗಾರಿಕಾ ಸ್ವತ್ತು (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿನ 100 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	3.30 ಕೋಟಿ	0.33 ಕೋಟಿ
ಆಸ್ತಿ ಪಟ್ಟಿ 11	ಕೈಗಾರಿಕಾ ಸ್ವತ್ತು (ಸ್ಥಿರ ಆಸ್ತಿ) ಸರ್ವೆ ನಂ. 150, ಹರನೀರ ಗ್ರಾಮ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ, 117 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ ಮತ್ತು ಕಟ್ಟಡಗಳು	2.88 ಕೋಟಿ	0.288 ಕೋಟಿ
	'ಎಫ್' ವರ್ಗ: ಚರಾಸ್ತಿಗಳ ಮಾರಾಟ (ಆಸ್ತಿ ಪಟ್ಟಿ 8ಕ್ಕೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ) ಇ–ಹರಾಜಿನ ದಿನ ಮತ್ತು ಸಮಯ: 03.01.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 12	ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು ಪ್ಲಾಟ್ ನಂ. 425/ಪಿ, ಸರ್ವೆ ನಂ. 6–ಪಿ, ಕೈಗಾರಿಕಾ ಪ್ರದೇಶ, ಬೈಕಂಪಾಡಿ, ಮಂಗಳೂರು, ಕರ್ನಾಟಕ ಇಲ್ಲಿರುವ ಯಂತ್ರೋಪಕರಣಗಳು, ಎಲ್ಲಾ ಚರಾಸ್ತಿಗಳ ಸಹಿತವಾಗಿ.	22.00 ಲಕ್ಷ	2.20 ಲಕ್ಷ
	'ಜಿ' ವರ್ಗ: ಚರಾಸ್ತಿಗಳ ಮಾರಾಟ (ಆಸ್ತಿ ಪಟ್ಟಿ 9ರ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ) ಇ–ಹರಾಜಿನ ದಿನ ಮತ್ತು ಸಮಯ: 03.01.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 13	ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು ಪ್ಲಾಟ್ ನಂ. 429, ಸರ್ವೆ ನಂ. 20/ಪಿ, ಕೈಗಾರಿಕಾ ಪ್ರದೇಶ, ಬೈಕಂಪಾಡಿ, ಮಂಗಳೂರು, ಕರ್ನಾಟಕ ಇಲ್ಲಿರುವ ಯಂತ್ರೋಪಕರಣಗಳು, ಎಲ್ಲಾ ಚರಾಸ್ತಿಗಳ ಮತ್ತು ವಾಹನಗಳ ಸಹಿತವಾಗಿ.	47.00 ಲಕ್ಷ	4.70 ಲಕ್ಷ
	'ಎಚ್' ವರ್ಗ: ಚರಾಸ್ತಿಗಳ ಮಾರಾಟ (ಆಸ್ತಿ ಪಟ್ಟಿ 10ರ ಹರಾಜಿಗೆ ಯಾವುದೇ ಬಿಡ್‌ಗಳು ಸ್ವೀಕೃತವಾಗದಿದ್ದಲ್ಲಿ) ಇ–ಹರಾಜಿನ ದಿನ ಮತ್ತು ಸಮಯ: 03.01.2025ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ		
ಆಸ್ತಿ ಪಟ್ಟಿ 14	ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ ಎಲ್ಲಾ ಚರಾಸ್ತಿಗಳು ಮತ್ತು ವಾಹನಗಳು	55.00 ಲಕ್ಷ	5.50 ಲಕ್ಷ
	'ಐ' ವರ್ಗ: ಸ್ಥಿರಾಸ್ತಿಗಳ ಮಾರಾಟ (ಆಸ್ತಿ ಪಟ್ಟಿ 12ಕ್ಕೆ ಬಿಡ್‌ಗಳು ದೊರೆತು ಹರಾಜು ಯಶಸ್ವಿಯಾದಲ್ಲಿ ಮಾತ್ರ ಇ–ಹರಾಜು ನಡೆಯುತ್ತದೆ) ಇ–ಹರಾಜಿನ ದಿನ ಮತ್ತು ಸಮಯ: 03.01.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 15	ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ) ಪ್ಲಾಟ್ ನಂ. 425/ಪಿ, ಸರ್ವೆ ನಂ. 6–ಪಿ, ಕೈಗಾರಿಕಾ ಪ್ರದೇಶ, ಬೈಕಂಪಾಡಿ, ಮಂಗಳೂರು, ಕರ್ನಾಟಕ ಇಲ್ಲಿನ ಕಟ್ಟಡದ ಸಮೇತವಾಗಿ 56 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ.	3.33 ಕೋಟಿ	0.333 ಕೋಟಿ
	'ಜೆ' ವರ್ಗ: ಸ್ಥಿರಾಸ್ತಿಗಳ ಮಾರಾಟ (ಆಸ್ತಿ ಪಟ್ಟಿ 13ಕ್ಕೆ ಬಿಡ್‌ಗಳು ದೊರೆತು ಹರಾಜು ಯಶಸ್ವಿಯಾದಲ್ಲಿ ಮಾತ್ರ ಇ–ಹರಾಜು ನಡೆಯುತ್ತದೆ) ಇ–ಹರಾಜಿನ ದಿನ ಮತ್ತು ಸಮಯ: 03.01.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 16	ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ) ಪ್ಲಾಟ್ ನಂ. 429, ಸರ್ವೆ ನಂ. 20/ಪಿ, ಕೈಗಾರಿಕಾ ಪ್ರದೇಶ, ಬೈಕಂಪಾಡಿ, ಮಂಗಳೂರು, ಕರ್ನಾಟಕ ಇಲ್ಲಿನ ಕಟ್ಟಡದ ಸಮೇತವಾಗಿ 52.63 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ.	3.65 ಕೋಟಿ	0.365 ಕೋಟಿ
	'ಕೆ' ವರ್ಗ: ಸ್ಥಿರಾಸ್ತಿಗಳ ಮಾರಾಟ (ಆಸ್ತಿ ಪಟ್ಟಿ 14ಕ್ಕೆ ಬಿಡ್‌ಗಳು ದೊರೆತು ಹರಾಜು ಯಶಸ್ವಿಯಾದಲ್ಲಿ ಮಾತ್ರ ಇ–ಹರಾಜು ನಡೆಯುತ್ತದೆ) ಇ–ಹರಾಜಿನ ದಿನ ಮತ್ತು ಸಮಯ: 03.01.2025ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ		
ಆಸ್ತಿ ಪಟ್ಟಿ 17	ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ) ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ 100 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡದ ಸಹಿತವಾಗಿ.	2.76 ಕೋಟಿ	0.276 ಕೋಟಿ

1. ಈ ಮಾರಾಟದ ನೋಟೀಸನ್ನು ಆಸ್ತಿಗಳ ವಿವರಗಳು ಅರ್ಹತೆ ಇ–ಹರಾಜು ಬಿಡ್ ಪ್ರಪತ್ರ ಇತ್ಯಾದಿಗಳನ್ನು ಒಳಗೊಂಡ ಸಂಪೂರ್ಣ 'ಇ–ಹರಾಜು ಪ್ರಕ್ರಿಯೆಯ ಮಾಹಿತಿ' (ಪ್ರಕ್ರಿಯೆ ದಾಖಲೆ)ಯ ಜೊತೆಯಲ್ಲಿ ಓದಿಕೊಳ್ಳತಕ್ಕದ್ದು. ಇದು https://ncltauction.auctiontiger.net ನಲ್ಲಿ ದೊರೆಯುತ್ತದೆ, ಇಲ್ಲವೆ, ಲಿಕ್ವಿಡೇಟರ್‌ರನ್ನು ಅಥವಾ ಮೆ. ಇ–ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್, ಈಮೇಲ್: nclt@auctiontiger.net, support@auctiontiger.net, ಫೋನ್ +919722778828/ 6351896834/ 079 6813855/854 ಇವರನ್ನು ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬಹುದು.
2. ದಯವಿಟ್ಟು ಗಮನಿಸಿ: **'ಎ' ಅಥವಾ 'ಬಿ' ಆಸ್ತಿ ವರ್ಗಕ್ಕೆ** ಹರಾಜು ಪ್ರಕ್ರಿಯೆಯಲ್ಲಿ ಬಿಡ್ಡರುಗಳು ಪಾಲುಗೊಳ್ಳದೆ ಯಶಸ್ವಿಯಾಗದೆ ಇದ್ದಲ್ಲಿ ಸದರಿ ಆಸ್ತಿಗಳನ್ನು ಮೇಲಿನ ಕೋಷ್ಟಕದ ಅನುಸಾರ ಪ್ರತ್ಯೇಕವಾಗಿ ಮಾರಾಟ ಮಾಡಲಾಗುವುದು. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ವರ್ಗದ(ಗಳ) ಅಡಿಯಲ್ಲಿ ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಇ–ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಲಿಕ್ವಿಡೇಟರ್ ಉಳಿಸಿಕೊಂಡಿರುತ್ತಾರೆ.
3. ಆಯಾ ವರ್ಗದ ಮತ್ತು/ಅಥವಾ ಆಸ್ತಿ(ಗಳ) ಸಲುವಾಗಿ ಆಸಕ್ತ ಬಿಡ್‌ದಾರರು 'ಆಸಕ್ತಿಯ ಅಭಿವ್ಯಕ್ತಿ'ಯನ್ನು ಅಗತ್ಯವಿರುವ ಅರ್ಹತಾ ದಾಖಲೆಗಳ ಜೊತೆಯಲ್ಲಿ, ಪ್ರಕ್ರಿಯಾ ದಾಖಲೆಯಲ್ಲಿ ತಿಳಿಸಿರುವ ಪ್ರಕಾರ, **17.12.2024**ರಂದು ಇಲ್ಲವೆ ಅದಕ್ಕೆ ಮುನ್ನ ಸಲ್ಲಿಸಬೇಕು.
4. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳೂ (ಸೂಚಿತ ಸಮಯಗಳು) ಸೇರಿದಂತೆ ಮುಖ್ಯ ಷರತ್ತುಗಳನ್ನು ಮಾರ್ಪಡಿಸುವ ಅಧಿಕಾರ ಲಿಕ್ವಿಡೇಟರ್ ಅವರಿಗೆ ಇರುತ್ತದೆ – ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಅನ್ವಯ ಇರುವ ಮಿತಿಗಳ ಒಳಗೆ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳ ಬದಲಾವಣೆಗಳ/ ವಿಸ್ತರಣೆಗಳ ಕುರಿತಾದ ಯಾವುದೇ ಮಾಹಿತಿಯು ಇ–ಹರಾಜು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ, ಮತ್ತು ಅರ್ಹ/ಅರ್ಹತೆ ಗಳಿಸಿದ/ ಯಶಸ್ವೀ ಬಿಡ್‌ದಾರರಿಗೆ ತಿಳಿಯಪಡಿಸಲಾಗುವುದು.
5. ಈ ಪ್ರಕಟಣೆಯಲ್ಲಿ ತಿಳಿಸಿರುವ ಯಾವುದೇ ಆಸ್ತಿ ಮಾರಾಟ / ಸಕ್ರಿಯ ಸಂಸ್ಥೆಯಂತೆ ಪರಿಗಣಿತ ಮಾರಾಟ ಪ್ರಸ್ತಾಪವನ್ನು ಬದ್ಧ ಕರಾರು ಎಂದು ಪರಿಗಣಿಸಬಾರದು.

ಸಂಕ್ಷಿಪ್ತ ವಿವರಗಳಿಗಾಗಿ ದಯವಿಟ್ಟು ಕೆಳಗಿನ QR ಕೋಡ್‌ಅನ್ನು ಸ್ಕ್ಯಾನ್ ಮಾಡಿರಿ.

ಸಹಿ/–
ರವೀಂದ್ರ ಬೆಳೆಯೂರ್
ಲಿಕ್ವಿಡೇಟರ್
ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ ಇನ್ ಲಿಕ್ವಿಡೇಶನ್,
428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 11
ಈಮೇಲ್: Reliable_Cashew_CIRP@beleyur.com
ಫೋನ್: 080 26540193 ಮೊಬೈಲ್: +91 94481 46963

ದಿನಾಂಕ: 02.12.2024
ಸ್ಥಳ: ಬೆಂಗಳೂರು

‘ಫೆಂಜಲ್’ ಪರಿಣಾಮ ರಾಜ್ಯದ ವಿವಿಧೆಡೆ ವರ್ಷಧಾರೆ • ಡಿಸೆಂಬರ್ 6ರವರೆಗೆ ಮೀನುಗಾರಿಕೆಗೆ ತೆರಳದಂತೆ ಸೂಚನೆ

ಅಕಾಲಿಕ ಮಳೆ: ಭತ್ತ, ಅಡಿಕೆಗೆ ಹಾನಿ

ಪ್ರಜಾವಾಣಿ ವಾರ್ತೆ

ಮಂಗಳೂರು/ಮೈಸೂರು: ಫೆಂಜಲ್ ಚಂಡಮಾರುತದ ಪರಿಣಾಮ ಮಂಗಳೂರು, ಉಡುಪಿ ಸೇರಿ ರಾಜ್ಯದ ವಿವಿಧ ಭಾಗಗಳಲ್ಲಿ ಸೋಮವಾರ ಮಳೆಯಾಗಿದೆ. ಮಂಗಳೂರು ನಗರ ಮತ್ತು ಸುತ್ತಮುತ್ತ ಸಂಜೆ ಭಾರಿ ಮಳೆ ಸುರಿಯಿತು. ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಕೆಲವೆಡೆ ಸಾಧಾರಣ ಮಳೆಯಾಗಿದೆ.

ಬೋಳಿಯಾರುನಲ್ಲಿ 13, ಬಾಳೆಪುಣಿಯಲ್ಲಿ 12 ಸೆಂ.ಮೀ. ಮಳೆ ದಾಖಲಾಗಿದೆ. ಮಂಗಳೂರು ನಗರದಲ್ಲಿ ಮಧ್ಯಾಹ್ನ 3.30ರ ಸುಮಾರು ಆರಂಭವಾದ ಮಳೆ, ನಿರಂತರವಾಗಿ ಮೂರು ಗಂಟೆಗೂ ಹೆಚ್ಚು ಕಾಲ ಸುರಿಯಿತು. ಜಿಲ್ಲಾ ಪಂಚಾಯಿತಿಯ ನೇತ್ರಾವತಿ ಸಭಾಂಗಣದಲ್ಲಿ ಉಪ ಲೋಕಾಯುಕ್ತ ನ್ಯಾ.ವೀರಪ್ಪ ಅವರು ಸಭೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಮಳೆ ನೀರು ಸಭಾಂಗಣಕ್ಕೆ ನುಗ್ಗಿದ್ದರಿಂದ ಸಭೆಗೆ ಅಡಚಣೆಯಾಯಿತು. ಕೊಟ್ಟಾರ ಪ್ರದೇಶದಲ್ಲಿ ಭಾರಿ ಮಳೆ ನೀರು ರಸ್ತೆ ಮೇಲೆ ಹರಿದಿದ್ದರಿಂದ ಸಂಚಾರಕ್ಕೆ ಅಡಚಣೆ ಉಂಟಾಯಿತು. ಇದೇ 6ರವರೆಗೆ ಅರಬ್ಬೀ ಸಮುದ್ರ ಪ್ರಕ್ಷುಬ್ಧವಾಗಿರಲಿದ್ದು, ಮೀನುಗಾರರು ಮೀನುಗಾರಿಕೆಗೆ ತೆರಳದಂತೆ ಸೂಚನೆ ನೀಡಲಾಗಿದೆ.

ಹುಬ್ಬಳ್ಳಿ ವರದಿ: ಹುಬ್ಬಳ್ಳಿ, ಉತ್ತರ ಕನ್ನಡ, ಹಾವೇರಿ, ವಿಜಯಪುರ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಕೆಲವೆಡೆ ಸೋಮವಾರ ಮಳೆಯಾಗಿದೆ.

ಕಾರವಾರ ಸೇರಿ ಕರಾವಳಿ ಭಾಗದಲ್ಲಿ ಕೆಲ ನಿಮಿಷ ಜಿಟಿಜಿಟಿ ಮಳೆ ಸುರಿದರೆ, ಘಟ್ಟದ ಮೇಲಿನ ಶಿರಸಿ, ಸಿದ್ದಾಪುರ ಮತ್ತು ಮುಂಡಗೋಡ ಭಾಗದಲ್ಲಿ ಕೆಲ ಗಂಟೆ ಬಿರುಸಿನ ಮಳೆ ಸುರಿದಿದೆ. ಅಕಾಲಿಕ ಮಳೆಯಿಂದ ಕಟಾವು ಮಾಡಲಾದ ಭತ್ತ, ಒಣಗಲು ಹಾಕಿದ್ದ ಅಡಿಕೆಗೆ ಹಾನಿಯಾಗಿದೆ.

‘ಫೆಂಜಲ್’ ಚಂಡಮಾರುತದ ಪರಿಣಾಮ ಮಳೆಯಿಂದ ಬಳ್ಳಾರಿ ಜಿಲ್ಲೆ ಕಂಪ್ಲಿಯಲ್ಲಿ ನೆಲಕ್ಕೊರಗಿದ ಭತ್ತದ ಬೆಳೆ

ರಾಗಿ, ಅವರೆ, ಮೆಕ್ಕೆಜೋಳ ಬೆಳೆಗೆ ಹಾನಿ

ಮೈಸೂರು: ಕಾವೇರಿ ಕಣಿವೆಯ ಐದು ಜಿಲ್ಲೆಗಳಲ್ಲೂ ಸೋಮವಾರವೂ ಜೋರು ಮಳೆ ಮುಂದುವರಿದಿದ್ದು, ಜನಜೀವನಕ್ಕೆ ಅಡ್ಡಿಯಾಯಿತು.

ಭಾನುವಾರ ರಾತ್ರಿಯಿಂದಲೂ ಜಿಟಿಜಿಟಿ ಮಳೆಯಾಗುತ್ತಿದೆ. ಮಳೆಯಿಂದ ಕೃಷಿ ಚಟುವಟಿಕೆಗಳ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಈ ಭಾಗದಲ್ಲಿ ಭತ್ತದ ಕೊಯ್ಲಿಗೆ ರೈತರು ಸಿದ್ಧತೆ ನಡೆಸಿದ್ದು, ಅಕಾಲಿಕ ಮಳೆ ಸಂಕಷ್ಟ ತಂದೊಡ್ಡಿದೆ. ಭತ್ತ, ರಾಗಿ, ಅವರೆ ಹಾಗೂ ಮೆಕ್ಕೆಜೋಳದ ಬೆಳೆಗೂ ಹಾನಿಯಾಗಿದೆ. ಕೊಯ್ಲಿಗೆ ಬಂದ ಭತ್ತದ ಗದ್ದೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ನಿಂತಿದ್ದು, ಬೆಳೆ ಹಾನಿಯ ಭೀತಿ ಎದುರಾಗಿದೆ.

ದಿನವಿಡೀ ಚಳಿ ಹಾಗೂ ಶೀತಗಾಳಿಯ ವಾತಾವರಣ ಇತ್ತು. ಸೋಮವಾರ ರಾತ್ರಿಯೂ ಮಳೆ ಮುಂದುವರಿದಿತ್ತು.

ಎಡೆಬಿಡದೆ ಸುರಿದ ಮಳೆಯಿಂದಾಗಿ ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟ ಹಾಗೂ ಕಾಡಂಚಿನ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಜಲಾವೃತಗೊಂಡಿದ್ದವು. ಬೆಟ್ಟದ ತಂಬಡಿಗೇರಿ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಬಿದ್ದಿದೆ. ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟಕ್ಕೆ ತೆರಳುವ ಮಾರ್ಗ ಮಧ್ಯೆ ಮರಗಳು ಹಾಗೂ ಬಿದಿರು ರಸ್ತೆಗೆ ಬಿದ್ದಿದ್ದರಿಂದಾಗಿ, ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆಯು, ರೆಡ್ ಅಲರ್ಟ್ ಘೋಷಿಸಿದೆ. ಭತ್ತ ಹಾಗೂ ಅರೇಬಿಕಾ ಕಾಫಿ ಕೊಯ್ಲಿಗೆ ಬಂದಿದ್ದು, ರೈತರು ಮತ್ತು ಬೆಳೆಗಾರರಲ್ಲಿ ಆತಂಕ ಮೂಡಿದೆ. ಶನಿವಾರಸಂತೆ ಭಾಗದ ಅಲ್ಲಲ್ಲಿ ಅರೇಬಿಕಾ ಕಾಫಿ ಕೊಯ್ಲು ಮಾಡಲಾಗುತ್ತಿದೆ. ಜಿಟಿ ಜಿಟಿ ಮಳೆಯ ಕಾಫಿ ಹಣ್ಣುಗಳನ್ನು ಒಣಗಿಸಲು ಅಡ್ಡಿಯಾಗಿದೆ.

ಹುಬ್ಬಳ್ಳಿ ನಗರ, ಧಾರವಾಡ ಜಿಲ್ಲೆಯ ಕೆಲವೆಡೆ ತುಂತುರು ಮಳೆಯಾಗಿದೆ. ವಿಜಯನಗರ ಜಿಲ್ಲೆಯ ಹೊಸಪೇಟೆ, ಹಗರಿಬೊಮ್ಮನಹಳ್ಳಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಜಿಟಿ ಜಿಟಿ ಮಳೆ ಬಿದ್ದಿದೆ.

ಬಾಗಲಕೋಟೆ ಜಿಲ್ಲೆ ಬಾದಾಮಿ ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮೀಣ ಪ್ರದೇಶದಲ್ಲಿ ಒಂದು ತಾಸು ರಭಸದ ಮಳೆ ಸುರಿಯಿತು. ಹಿಂಗಾರು ಹಂಗಾಮಿನ ಜೋಳ, ಸೂರ್ಯಕಾಂತಿ, ಶೇಂಗಾ, ಕುಸಬಿ, ಹುರುಳಿ ಬೆಳೆಗೆ ಅನುಕೂಲವಾಗಿದೆ. ಆದರೆ, ಕಡಲೆ ಬೆಳೆಗೆ ಮಳೆಯಿಂದ ತೊಂದರೆಯಾಗಿದೆ ಎಂದು ರೈತರು ತಿಳಿಸಿದರು.

‘ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಆರ್‌ಎನ್‌ಆರ್ ತಳಿ ಭತ್ತ ಬೆಳೆಯಲಾಗುತ್ತದೆ. ಬೆಳೆ ಸದ್ಯ ಕಟಾವು ಹಂತಕ್ಕೆ ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ಮಳೆ ಬರಬಾರದು. ತೇವಾಂಶ ಹೆಚ್ಚಾಗಿ, ಬೆಳೆ ನೆಲಕ್ಕೆ ಒರಗುತ್ತದೆ. ಮೊಳಕೆ ಒಡೆಯುತ್ತದೆ. ಇದು ಬೆಳೆ ಹಾನಿಗೆ ಕಾರಣವಾಗುತ್ತದೆ’ ಎಂದು ಕೃಷಿ ಇಲಾಖೆ ಬಳ್ಳಾರಿ ಜಿಲ್ಲಾ ಉಪ ನಿರ್ದೇಶಕ ಸೋಮಸುಂದರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಲ್ಯಾಣ’ದ ಕೆಲವೆಡೆ ತುಂತುರು ಮಳೆ

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ರಾಯಚೂರು, ಕೊಪ್ಪಳ, ಬೀದರ್, ಕಲಬುರಗಿ ಜಿಲ್ಲೆಗಳಲ್ಲಿ ದಿನವಿಡೀ ಮೋಡಕವಿದ ವಾತಾವರಣವಿದ್ದು, ಸಂಜೆ ಕೆಲ ಕಾಲ ತುಂತುರು ಮಳೆಯಾಗಿದೆ. ರಾಯಚೂರು ಜಿಲ್ಲೆಯ ಸಿಂಧನೂರು, ಕವಿತಾಳದಲ್ಲಿ ಸಾಧಾರಣ ಮಳೆ ಸುರಿದಿದೆ. ಲಿಂಗಸುಗೂರಿನಲ್ಲಿ ತುಂತುರು ಮಳೆಯಾಗಿದೆ.

ಕೊಪ್ಪಳ, ಮುನಿರಾಬಾದ್, ಕಾರಟಗಿಯಲ್ಲಿ ದಿನವಿಡೀ ಮೋಡಕವಿದ ವಾತಾವರಣವಿತ್ತು. ಕೊಪ್ಪಳದಲ್ಲಿ ಮಧ್ಯಾಹ್ನ ಕೆಲಹೊತ್ತು, ಬೀದರ್‌ನಲ್ಲಿ ಸಂಜೆ ಜಿಟಿಜಿಟಿಯಾಗಿ ಮಳೆ ಸುರಿದಿದೆ. ಕಲಬುರಗಿ ನಗರದಲ್ಲೂ ಸಂಜೆ ಕೆಲ ಕಾಲ ತುಂತುರು ಮಳೆಯಾಗಿದೆ.

ಆರು ಜಿಲ್ಲೆಗೆ ಯೆಲ್ಲೊ ಅಲರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಫೆಂಜಲ್’ ಚಂಡಮಾರುತದ ಪರಿಣಾಮ ರಾಜ್ಯಕ್ಕೂ ತಟ್ಟಿರುವುದರಿಂದ ಮಂಗಳವಾರ ಆರು ಜಿಲ್ಲೆಗಳಲ್ಲಿ ಭಾರಿ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ಉಡುಪಿ, ದಕ್ಷಿಣ ಕನ್ನಡ, ಮೈಸೂರು, ಕೊಡಗು, ರಾಮನಗರ, ಚಾಮರಾಜನಗರ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಕೆಲವೆಡೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ.

ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಕರ್ನಾಟಕ ಮತ್ತು ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳ ಹೆಚ್ಚಿನ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ತುಂತುರು ಮಳೆಯಾಗುವ ಸಂಭವವಿದೆ.

ಬೆಂಗಳೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಂಭವ ಇದೆ. ಕೆಲವೊಮ್ಮೆ ಭಾರಿ ಮಳೆ ಸಾಧ್ಯತೆ ಇದೆ. ಬೆಳಗಿನ ಜಾವ ಮಂಜು ಬೀಳುವ ಸಂಭವವಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಬೆಂಗಳೂರು ನಗರದಲ್ಲಿ ಗರಿಷ್ಠ ಉಷ್ಣಾಂಶ 23 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ತಿಳಿಸಿದೆ. ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಚಾಮರಾಜನಗರದಲ್ಲಿ 5 ಸೆಂ.ಮೀ, ಬಂಡೀಪುರದಲ್ಲಿ 4 ಸೆಂ.ಮೀ, ಕೋಲಾರ ಜಿಲ್ಲೆಯ ರಾಯಲ್ಪಾಡಿನಲ್ಲಿ 4 ಸೆಂ.ಮೀ ಮಳೆಯಾಗಿದೆ.

ಸುದ್ದಿ 2 ನಿಮಿಷ

ಮತ್ತೆ ಸನ್ಯಾಸತ್ವ ಸ್ವೀಕಾರಕ್ಕೆ ಮುಂದಾದ ನಾಗರಾಜು?

ಮಂಡ್ಯ: ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿ ಎಚ್.ಎಲ್.ನಾಗರಾಜು ಅವರು ಸರ್ಕಾರಿ ಹುದ್ದೆ ತೊರೆದು ಸನ್ಯಾಸತ್ವ ಸ್ವೀಕರಿಸಲಿದ್ದಾರೆ ಎಂಬ ಸುದ್ದಿ ಮತ್ತೆ ಮುನ್ನೆಲೆಗೆ ಬಂದಿದ್ದು, ಚರ್ಚೆಗೆ ಗ್ರಾಸವಾಗಿದೆ.

ಪ್ರಸ್ತುತ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿರುವ ಅವರು, 2–3 ದಿನಗಳಲ್ಲಿ ‘ದೀರ್ಘ ರಜೆ’ ಮೇಲೆ ಹೋಗಲಿದ್ದಾರೆ. ನಂತರ ಸ್ವಯಂನಿವೃತ್ತಿ ಪಡೆದು, ಸ್ವಾಮೀಜಿಯಾಗಲಿದ್ದಾರೆ ಎಂಬ ಮಾತು ಕೇಳಿಬಂದಿದೆ.

ಕೆಲವು ವರ್ಷಗಳಿಂದ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಹಾಗೂ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದ ಸ್ವಾಮೀಜಿಯವರೊಂದಿಗೆ ಸಂಪರ್ಕದಲ್ಲಿದ್ದಾರೆ ಎನ್ನಲಾಗಿದೆ.

ಅವರು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹೊನ್ನೇನಹಳ್ಳಿಯವರು. ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ಮಂಡ್ಯ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ.

ನಿಶ್ಚಲಾನಂದನಾಥ ಸ್ವಾಮೀಜಿ: 2011ರಲ್ಲಿ ಕೆ.ಆರ್.ಪೇಟೆ ತಹಶೀಲ್ದಾರ್ ಹುದ್ದೆಗೆ ರಾಜೀನಾಮೆ ನೀಡಿ, ಆದಿಚುಂಚನಗಿರಿ ಮಠದಲ್ಲಿ ಸನ್ಯಾಸತ್ವ ದೀಕ್ಷೆ ಪಡೆದು, ‘ನಿಶ್ಚಲಾನಂದನಾಥ’ ಎಂದು ಹೆಸರು ಬದಲಾಯಿಸಿಕೊಂಡಿದ್ದರು. ಆಗ, ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ರಾಜೀನಾಮೆ ನೀಡಬಾರದು ಎಂದು ಹಿತೈಷಿಗಳು ಮತ್ತು ಸಾರ್ವಜನಿಕರು ಒತ್ತಾಯಿಸಿದ್ದರು. ನಂತರ ಮತ್ತೆ ಕೆಲಸಕ್ಕೆ ಹಾಜರಾಗಿದ್ದರು.

‘ಉತ್ತರ ಕನ್ನಡ ಜಿಲ್ಲೆಯಲ್ಲಿ ಸಂಭವಿಸಿದ್ದು ಭೂಕಂಪನ’

ಕಾರವಾರ: ಜಿಲ್ಲೆಯಲ್ಲಿ ಪಶ್ಚಿಮ ಘಟ್ಟ ಹಾದುಹೋಗಿರುವ ಶಿರಸಿ ಮತ್ತು ಕುಮಟಾ ಭಾಗದಲ್ಲಿ ಭಾನುವಾರ ದೊಡ್ಡ ಸದ್ದಿನ ಜೊತೆ ಭೂಮಿ ನಡುಗಿದ ಅನುಭವ ಆಗಿರುವುದು ಭೂಕಂಪನದಿಂದ ಎಂದು ಭೂಕಂಪಶಾಸ್ತ್ರದ ರಾಷ್ಟ್ರೀಯ ಕೇಂದ್ರ ಖಚಿತಪಡಿಸಿದೆ.

ಗೋವಾದ ಮಡಗಾಂವ ಸಮೀಪದಲ್ಲಿರುವ ಕೇಂದ್ರದ ಭೂಕಂಪನ ಅಳೆಯುವ ರಿಕ್ಟರ್ ಮಾಪಕದಲ್ಲಿ 3.5ರಷ್ಟು ತೀವ್ರತೆಯ ಭೂಕಂಪನ ದಾಖಲು ಆಗಿರುವುದಾಗಿ ಕೇಂದ್ರವು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಭೂಮೇಲ್ಮೈನಿಂದ 5 ಕಿ.ಮೀ ಆಳದಲ್ಲಿ ಈ ಕಂಪನ ಸಂಭವಿಸಿದೆ ಎಂದೂ ತಿಳಿಸಿದೆ.

‘ಜಿಲ್ಲೆಯಲ್ಲಿ ಭೂಕಂಪನ ಸಂಭವಿಸಿಲ್ಲ’ ಎಂದು ಘೋಷಿಸಿದ್ದ ಜಿಲ್ಲಾಡಳಿತದ ನಡೆಗೆ ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿದೆ. ಪಶ್ಚಿಮ ಘಟ್ಟದ ಸೂಕ್ಷ್ಮ ವಲಯದಲ್ಲಿ ಕಂಪನ ಉಂಟಾಗಿರುವುದಕ್ಕೆ ಆತಂಕ ಹೆಚ್ಚಿದೆ. ಕೈಗಾ ಅಣುಸ್ಥಾವರವೂ ಇರುವುದರಿಂದ ಸಹಜವಾಗಿ ಜನರು ಆತಂಕದಲ್ಲಿದ್ದಾರೆ. ಜೊಯಿಡಾ ತಾಲ್ಲೂಕಿನ ಸೂಪಾ ಅಣೆಕಟ್ಟಿನಲ್ಲಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರದ (ಕೆಎಸ್‌ಎನ್‌ಡಿಸಿ) ಭೂಕಂಪನಶಾಸ್ತ್ರ ವಿಭಾಗದ ಮಾಪಕ ಇದ್ದರೂ ಅದಲ್ಲಿ ಭೂಕಂಪನದ ಮಾಹಿತಿ ದಾಖಲಾಗಿರಲಿಲ್ಲ.

‘ಕರ್ನಾಟಕ ರಾಜ್ಯದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಇಬ್ಬರು ಹಿರಿಯ ತಜ್ಞರು ಶಿರಸಿ ತಾಲ್ಲೂಕಿನ ಕೆಲ ಗ್ರಾಮಗಳಿಗೆ ಸೋಮವಾರ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಿದ್ದಾರೆ. ಯಾಣ ಸಮೀಪ ಭೂಕಂಪದ ಕೇಂದ್ರ ಇರುವ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದು, ಮಂಗಳವಾರ ಆ ಸ್ಥಳಕ್ಕೆ ತೆರಳಿ ಪರಿಶೀಲಿಸುವರು. ಆ ನಂತರವಷ್ಟೇ ಭೂಕಂಪನದ ಕುರಿತು ಖಚಿತ ಆಗಲಿದೆ’ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

‘ಜಾಮೀನಿನ ಹಂತದಲ್ಲಿ ಸಾಕ್ಷ್ಯ ಪರಿಶೀಲನೆ ಸಲ್ಲ’

ನವದೆಹಲಿ (ಪಿಟಿಐ): ಕ್ರಿಮಿನಲ್ ಪ್ರಕರಣಗಳಲ್ಲಿ ಜಾಮೀನು ನೀಡುವ ಸಂದರ್ಭದಲ್ಲಿ ಹೈಕೋರ್ಟ್‌ಗಳು ಸಾಕ್ಷ್ಯಗಳ ಪರಿಶೀಲನೆಗೆ ಹಾಗೂ ಆರೋಪಿಯು ತಪ್ಪಿತಸ್ಥ ಹೌದೋ ಅಲ್ಲವೋ ಎಂಬುದರ ಪರಿಶೀಲನೆಗೆ ಮುಂದಾಗುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಉಜ್ವಲ್ ಭುಯಾನ್ ಅವರು ಇರುವ ವಿಭಾಗೀಯ ಪೀಠವು, ಕೊಲೆ ಪ್ರಕರಣವೊಂದರ ಸತ್ಯಾಸತ್ಯತೆಯ ವಿಚಾರವಾಗಿ ಬಹಳ ವಿಶಾಲವಾದ ಅರ್ಥವನ್ನು ಧ್ವನಿಸುವ ಹೇಳಿಕೆಗಳನ್ನು ಜಾಮೀನು ನೀಡುವ ಸಂದರ್ಭದಲ್ಲಿ ನೀಡಿದ್ದ ಅಲಹಾಬಾದ್ ಹೈಕೋರ್ಟ್‌ನ ಆದೇಶವೊಂದರನ್ನು ರದ್ದುಪಡಿಸಿದೆ.

‘ಹೈಕೋರ್ಟ್‌ಗಳು ಜಾಮೀನು ನೀಡುವ ಸಂದರ್ಭದಲ್ಲಿ ಸಾಕ್ಷ್ಯಗಳನ್ನು ಪರಿಶೀಲಿಸಿ ವ್ಯಕ್ತಿಯೊಬ್ಬ ತಪ್ಪಿತಸ್ಥ ಹೌದೋ, ಅಲ್ಲವೋ ಎಂಬುದನ್ನು ತೀರ್ಮಾನಿಸುವಂತಿಲ್ಲ. ಈ ಆದೇಶವನ್ನು ನಾವು ಒಂದು ದಿನವೂ ಉಳಿಸುವುದಿಲ್ಲ. ಇದನ್ನು ನಾವು ಒಂದು ದಿನದಮಟ್ಟಿಗೆ ಚಾಲ್ತಿಯಲ್ಲಿ ಇರಿಸಿದರೂ, ಜಾಮೀನು ನೀಡುವ ಹಂತದಲ್ಲಿ ಆರೋಪಿಯನ್ನು ತಪ್ಪಿತಸ್ಥ ಅಥವಾ ನಿರ್ದೋಷಿ ಎಂದು ಹೇಳಲು ಹೈಕೋರ್ಟ್‌ಗಳಿಗೆ ಮುಕ್ತ ಅವಕಾಶ ಸಿಗುತ್ತದೆ’ ಎಂದು ವಿಭಾಗೀಯ ಪೀಠವು ಹೇಳಿದೆ.

ಅಮಿತ್ ಕುಮಾರ್ ಎನ್ನುವವರಿಗೆ ಮೇ 27ರಂದು ಜಾಮೀನು ಮಂಜೂರು ಮಾಡುವ ಸಂದರ್ಭದಲ್ಲಿ ಅಲಹಾಬಾದ್ ಹೈಕೋರ್ಟ್, ಪ್ರಕರಣದ ಸತ್ಯಾಸತ್ಯತೆ ಬಗ್ಗೆ ಅಭಿಪ್ರಾಯ ದಾಖಲಿಸಿತ್ತು ಎಂದು ವರದಿಯಾಗಿದೆ. ಪ್ರಕರಣದ ಸತ್ಯಾಸತ್ಯತೆ ಬಗ್ಗೆ ತಾನು ಯಾವುದೇ ಅಭಿಪ್ರಾಯ ದಾಖಲಿಸಿಲ್ಲ ಎಂಬುದನ್ನು ಒತ್ತಿಹೇಳಿರುವ ಸುಪ್ರೀಂ ಕೋರ್ಟ್, ಪ್ರಕರಣವನ್ನು ಮರುಪರಿಶೀಲಿಸುವಂತೆ ಹೈಕೋರ್ಟ್‌ಗೆ ಸೂಚನೆ ನೀಡಿದೆ.

ತಮಿಳುನಾಡಿನ ತಿರುವಣ್ಣಾಮಲೈನಲ್ಲಿ ಸುರಿದ ಭಾರಿ ಮಳೆಯಿಂದ ಉಂಟಾದ ಭೂಕುಸಿತದಲ್ಲಿ ಸಿಲುಕಿದ ಅವಶೇಷಗಳನ್ನು ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆಯ ಸಿಬ್ಬಂದಿ ತೆರವುಗೊಳಿಸಿದರು (ಎಡಚಿತ್ರ) ಕೃಷ್ಣಗಿರಿ ಜಿಲ್ಲೆಯ ಉತ್ತಂಗರೈನಲ್ಲಿ ಪ್ರವಾಹದ ನೀರಿಗೆ ಸಿಲುಕಿದ ವಾಹನಗಳು ರಸ್ತೆಯಿಂದ ಪಕ್ಕಕ್ಕೆ ಸರಿದಿರುವುದು —ಪಿಟಿಐ ಚಿತ್ರ

ಮುಳುಗಿದ ಮನೆಗಳು, ಉರುಳಿಬಿದ್ದ ಮರಗಳು; ರೈಲುಗಳ ಸೇವೆಯಲ್ಲಿ ವ್ಯತ್ಯಯ

ತಮಿಳುನಾಡು: ಜನಜೀವನ ಅಸ್ತವ್ಯಸ್ತ

ವಿಲ್ಲುಪುರಂ (ಪಿಟಿಐ): ಫೆಂಜಲ್ ಚಂಡಮಾರುತದ ಪರಿಣಾಮ ಉಂಟಾದ ಮಳೆಯಿಂದಾಗಿ ಉತ್ತರ ತಮಿಳುನಾಡಿನ ಹಲವೆಡೆ ಜನಜೀವನ ಅಸ್ತವ್ಯಸ್ತಗೊಂಡಿದೆ.

ವಿಲ್ಲುಪುರಂ ಮತ್ತು ಕಡಲೂರಿನ ಹಲವು ಕಡೆಗಳಲ್ಲಿ ರಸ್ತೆಗಳು ಸಂಪೂರ್ಣವಾಗಿ ಜಲಾವೃತವಾಗಿದ್ದು, ವಾಹನಗಳು ಎರಡು ಅಡಿವರೆಗೆ ಮುಳುಗಿದ್ದವು. ಹಲವೆಡೆ ಮನೆಗಳು ಮುಳುಗಿದ್ದು, ಮರಗಳು ಬುಡಮೇಲಾಗಿ ಉರುಳಿ ಬಿದ್ದಿವೆ.

ವಿಲ್ಲುಪುರಂನ ವಿಕ್ರವಂಡಿ ಮತ್ತು ಮುಂಡಿಯಂಪಕ್ಕಂ ನಡುವಿನ ಪ್ರಧಾನ ಸೇತುವೆಯಲ್ಲಿ ನೀರು ಅಪಾಯ ಮಟ್ಟ ಮೀರಿ ಹರಿದ ಕಾರಣ ದಕ್ಷಿಣ ರೈಲ್ವೆಯು ಸೋಮವಾರ ಬೆಳಿಗ್ಗೆ ಸೇವೆಯನ್ನು ಸ್ಥಗಿತಗೊಳಿಸಿತ್ತು. ಇದರಿಂದ ಹಲವು ರೈಲುಗಳ ಸಂಚಾರ ರದ್ದು ಮಾಡಲಾಯಿತು. ಕೆಲವು ರೈಲುಗಳ ಮಾರ್ಗವನ್ನು ಬದಲಾಯಿಸಲಾಯಿತು. ಹೀಗಾಗಿ ಬಸ್ ಮತ್ತು ರೈಲು ನಿಲ್ದಾಣಗಳಲ್ಲಿ ಜನದಟ್ಟಣೆ ಉಂಟಾಯಿತು. ವಿಲ್ಲುಪುರಂ ಸುತ್ತಮುತ್ತ ಮತ್ತು ಚೆನ್ನೈ–ತಿರುಚಿರಾಪಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿಯೂ ಸಂಚಾರ ದಟ್ಟಣೆ ಉಂಟಾಗಿತ್ತು.

ವಿಲ್ಲುಪುರಂ ಮೂಲಕ ಸಾಗುವ ಎಲ್ಲಾ ರೈಲುಗಳ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದ ಕಾರಣ ನೂರಾರು ಪ್ರಯಾಣಿಕರಿಗೆ ತೊಂದರೆಯಾಯಿತು. ರೈಲು ಸಂಚಾರ ಪುನಃ ಆರಂಭಿಸಿದ ನಂತರ ಪರಿಸ್ಥಿತಿ ಸುಧಾರಿಸಿತು.

ಭಾರಿ ಮಳೆಯ ಪರಿಣಾಮ ತಿರುವಣ್ಣಾಮಲೈ ಸಮೀಪದ ಸೇತುವೆಯೊಂದು ಭಾಗಶಃ ಮುರಿದುಬಿದ್ದಿದೆ. ಕರುಣಾಪುರಂ ಸಮೀಪದ ಸೇತುವೆ ಮುಳುಗಿ ಸಮೀಪದ ಪ್ರದೇಶಗಳಿಗೆ ನೀರು ನುಗ್ಗಿದೆ.

ಗಿಂಗಿ ಸರ್ಕಾರಿ ಆಸ್ಪತ್ರೆಗೆ ನೀರು ನುಗ್ಗಿದ್ದು, ಎಚ್ಚೆತ್ತ ಅಧಿಕಾರಿಗಳು ಕೂಡಲೇ ರೋಗಿಗಳನ್ನು ಸ್ಥಳಾಂತರಿಸಿದರು.

ಸ್ಟಾಲಿನ್ ಭೇಟಿ: ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮತ್ತು ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು ವಿಲ್ಲುಪುರಂಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿದರು.

ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ಕೃಷ್ಣಗಿರಿಗೆ ಭೇಟಿ ನೀಡಿ, ತೊಂದರೆಗೊಳಗಾದ ರೈತರು ಮತ್ತು ಜನರಿಗೆ ಪರಿಹಾರ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

ದಾಖಲೆ ಮಳೆಗೆ ಕಾರಣವೇನು?

ಚೆನ್ನೈ: ಫೆಂಜಲ್ ಚಂಡಮಾರುತವು ತಮಿಳುನಾಡಿನ ಚೆನ್ನೈನಿಂದ ಚೆಂಗಲ್‌ಪಟ್ಟುವರೆಗೆ ಮತ್ತು ದೂರದ ಕೃಷ್ಣಗಿರಿಯಲ್ಲಿ ದಾಖಲೆ ಪ್ರಮಾಣದಲ್ಲಿ ಮಳೆ ಸುರಿಸಿದೆ. ಕೃಷ್ಣಗಿರಿಯಲ್ಲಿ 24 ತಾಸುಗಳಲ್ಲಿ 50 ಸೆಂಟಿಮೀಟರ್‌ನಷ್ಟು ಮಳೆಯಾಗಿದೆ. 300 ವರ್ಷಗಳಿಗೊಮ್ಮೆ ಇಂಥ ಮಳೆಯಾಗುತ್ತದೆ.

ಚೆನ್ನೈ ಮತ್ತು ಅದರ ನೆರೆಯ ಜಿಲ್ಲೆಗಳಾದ ತಿರುವಳ್ಳೂರ್, ಕಾಂಚೀಪುರಂ ಮತ್ತು ಚೆಂಗಲ್‌ಪಟ್ಟುನಲ್ಲಿ ಚಂಡಮಾರುತವು ಮೊದಲು ಪ್ರಭಾವ ಬೀರಿತ್ತು. ನಂತರ ತಮಿಳುನಾಡಿನ ವಿಲ್ಲುಪುರಂ, ಕಡಲೂರು ಮತ್ತು ಪುದುಚೇರಿಯತ್ತ ಸಾಗಿ ಅಧಿಕ ಮಳೆ ಸುರಿಸಿದೆ. ಬಳಿಕ ತಿರುವಣ್ಣಮಲೈ, ರಾಣಿಪೇಟ್, ವೆಲ್ಲೂರು, ಧರ್ಮಪುರಿ, ಕೃಷ್ಣಗಿರಿ, ಸೇಲಂನಲ್ಲೂ ಮಳೆ ಸುರಿಸಿದೆ.

ಕೃಷ್ಣಗಿರಿಯ ಒಳನಾಡು ಪ್ರದೇಶ ಉತ್ತಂಗರೈನಲ್ಲಿ 50 ಸೆಂ. ಮೀ. ಮಳೆಯಾಗಿದೆ. ಇದೊಂದು ‘ಅಪರೂಪದ ಸಂಗತಿ’. ಕೃಷ್ಣಗಿರಿ, ಧರ್ಮಪುರಿ ಮತ್ತು ಸೇಲಂ ಜಿಲ್ಲೆಗಳ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಭಾನುವಾರ ಮತ್ತು ಸೋಮವಾರ ದಾಖಲೆಯ ಮಳೆಯಾಗಿದೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ.

‘ನಿಧಾನಗತಿಯಲ್ಲಿ ಸಾಗುವ ಚಂಡಮಾರುತಗಳು ಅತ್ಯಂತ ಅಪಾಯಕಾರಿ. ಉತ್ತಂಗರೈನಲ್ಲಿ ಎಂದೂ ಇಷ್ಟೊಂದು ಮಳೆಯಾಗಿರಲಿಲ್ಲ. ನಿಧಾನಗತಿಯ ಫೆಂಜಲ್ ಚಂಡಮಾರುತವು ಇಲ್ಲಿ ಇಷ್ಟೊಂದು ಮಳೆಗೆ ಕಾರಣವಾಗಿದೆ’ ಎಂದು ಹವಾಮಾನ ತಜ್ಞ ಪ್ರದೀಪ್ ಜಾನ್ ಹೇಳಿದ್ದಾರೆ.

ಎನ್‌ಡಿಆರ್‌ಎಫ್ ಸಿಬ್ಬಂದಿ ಸೋಮವಾರ ರಕ್ಷಣಾ ಕಾರ್ಯಾಚರಣೆ ನಡೆಸಿದರು —ಪಿಟಿಐ ಚಿತ್ರ

ವಾತಾವರಣದ ಕೆಳ ಮತ್ತು ಮಧ್ಯಮ ಮಟ್ಟದಲ್ಲಿ ಮಾರುತಗಳು ಒಗ್ಗೂಡಿರುವುದರಿಂದ ಮತ್ತು ಫೆಂಜಲ್ ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ತಮಿಳುನಾಡಿನಾದ್ಯಂತ ಭಾರಿ ಮಳೆಯಾಗಿದೆ ಎಂದು ಮತ್ತೊಬ್ಬ ತಜ್ಞ ಅಜಿತ್ ಕುಮಾರ್ ಹೇಳಿದ್ದಾರೆ.

ಫೆಂಜಲ್ ಚಂಡಮಾರುತವು ಪುದುಚೇರಿ–ವಿಲ್ಲುಪುರಂ–ತಿರುವಣ್ಣಾಮಲೈ ಪ್ರದೇಶದಲ್ಲಿ ಸುಮಾರು 30 ಗಂಟೆಗಳ ಕಾಲ ಇತ್ತು. ಹೀಗಾಗಿ ಇಲ್ಲಿ ಭಾರಿ ಮಳೆಯಾಗಿದೆ. ಚಂಡಮಾರುತ ದುರ್ಬಲವಾಗಿದ್ದರೂ, ಈ ಪ್ರದೇಶದಲ್ಲಿ ಮಾರುತಗಳ ಒಗ್ಗೂಡುವಿಕೆಯು ಹೆಚ್ಚು ಕಾಲ ಮೋಡ ಕವಿದ ವಾತಾವರಣಕ್ಕೆ ಕಾರಣವಾಗುತ್ತದೆ. ಹೀಗಾಗಿ ಇಲ್ಲಿ ಅಧಿಕ ಮಳೆಯಾಗಿದೆ ಎಂದಿದ್ದಾರೆ.

ಮನೆಯಡಿ ಸಿಲುಕಿದ್ದ ಐವರ ಶವ ಪತ್ತೆ

ತಿರುವಣ್ಣಾಮಲೈ: ಭಾರಿ ಮಳೆಯಿಂದಾಗಿ ಕುಸಿದು ಬಿದ್ದ ಮನೆಯ ಅವಶೇಷಗಳಡಿ ಸಿಲುಕಿದ್ದ ಐದು ಶವಗಳನ್ನು ಸೋಮವಾರ ಹೊರತೆಗೆಯಲಾಯಿತು.

ಎನ್‌ಡಿಆರ್‌ಎಫ್ ತಂಡ ಮತ್ತು ಪೊಲೀಸ್ ಸಿಬ್ಬಂದಿಯ ಸತತ ಕಾರ್ಯಾಚರಣೆ ಬಳಿಕ ಮಗು ಸೇರಿದಂತೆ ಐವರ ಶವಗಳನ್ನು ಹೊರತೆಗೆಯಲಾಯಿತು ಎಂದು ಪೊಲೀಸರು ತಿಳಿಸಿದರು. ಇನ್ನು ಇಬ್ಬರಿಗಾಗಿ ಶೋಧ ನಡೆಯುತ್ತಿದೆ.

ಫಲಾನುಭವಿಗಳಿಗೆ ನಿವೇಶನ ಮುಡಾ ನಿರ್ಣಯ ರದ್ದು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ದಟ್ಟಗಳ್ಳಿಯ ಚಾಮುಂಡೇಶ್ವರಿ ನಗರ ಸರ್ವೋದಯ ಸಹಕಾರ ಸಂಘಕ್ಕೆ ನಿವೇಶನಗಳ ಹಂಚಿಕೆ ವಿಚಾರದಲ್ಲಿ ಮುಡಾ ಸಾಮಾನ್ಯ ಸಭೆಯು ಕೈಗೊಂಡಿದ್ದ ನಿರ್ಣಯವನ್ನು ರದ್ದು ಮಾಡಿ ನಗರಾಭಿವೃದ್ಧಿ ಇಲಾಖೆಯು ನವೆಂಬರ್ 30ರಂದು ಆದೇಶ ಹೊರಡಿಸಿದೆ.

ದಟ್ಟಗಳ್ಳಿಯ ವಿವಿಧ ಸರ್ವೆ ಸಂಖ್ಯೆಗಳನ್ನು ಒಳಗೊಂಡು ಒಟ್ಟು 17 ಎಕರೆ 21 ಗುಂಟೆ ಜಮೀನಿನಲ್ಲಿ ರಚನೆಯಾಗಿದ್ದ ಕಂದಾಯ ನಿವೇಶನಗಳ ಸಂಬಂಧ 1986ರಿಂದಲೂ ಭೂವಿವಾದವು ನ್ಯಾಯಾಲಯದಲ್ಲಿದೆ. 1985ರಲ್ಲಿ ಇಲ್ಲಿನ ಮನೆಗಳನ್ನು ಕೆಡವಿ ಜಾಗವನ್ನು ಸಿಐಟಿಬಿ ವಶಕ್ಕೆ ಪಡೆದಿತ್ತು.

ನಂತರ ನಿವೇಶನಗಳ ಮಾಲೀಕರು ಚಾಮುಂಡೇಶ್ವರಿ ನಗರ ಸರ್ವೋದಯ ಸಹಕಾರ ಸಂಘವನ್ನು ರಚಿಸಿಕೊಂಡು, ಬಡಾವಣೆ ಸಕ್ರಮ ಹಾಗೂ ನಿವೇಶನಗಳ ಹಂಚಿಕೆ ಕೋರಿ ಮನವಿ ಸಲ್ಲಿಸಿದ್ದರು. 1997ರಲ್ಲಿ ಮುಡಾ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಸರ್ಕಾರ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿತ್ತು.

2023ರ ಮಾರ್ಚ್ 21ರಂದು ನಡೆದ ಮುಡಾ ಸಾಮಾನ್ಯ ಸಭೆಯಲ್ಲಿ ವಿಷಯ ಮತ್ತೊಮ್ಮೆ ಚರ್ಚೆಯಾಗಿದ್ದು, 1997ರ ಆದೇಶ ಕಾರ್ಯಗತಗೊಳಿಸಲು ಸರ್ಕಾರದ ಗಮನಕ್ಕೆ ತಂದು ಕ್ರಮ ಜರುಗಿಸುವಂತೆ ಸಭೆಯು ಆಯುಕ್ತರಿಗೆ ಸೂಚಿಸಿತ್ತು. ಆದರೆ ಸರ್ಕಾರದ ಅನುಮತಿಗೆ ಮುನ್ನವೇ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ನ್ಯಾಯಾಲಯದ ಆದೇಶಗಳನ್ನು ಉಲ್ಲೇಖಿಸಿ ಸಂಘದ ಸದಸ್ಯರಿಗೆ ನಿವೇಶನಗಳನ್ನು ಮಂಜೂರು ಮಾಡಿದ್ದರು ಎನ್ನಲಾಗಿದೆ.

ಈ ವಿಚಾರದಲ್ಲಿ ಆಯುಕ್ತರು ಸರ್ಕಾರಕ್ಕೆ ನೀಡಿದ್ದ ಸ್ಪಷ್ಟನೆಯನ್ನು ನಗರಾಭಿವೃದ್ಧಿ ಇಲಾಖೆಯು ಒಪ್ಪದೆ, ಸಭೆಯ ನಿರ್ಣಯವನ್ನು ರದ್ದುಗೊಳಿಸಿ ಆದೇಶಿಸಿದೆ. ಇದರಿಂದ ಮುಡಾದಿಂದ ಸಂಘಕ್ಕೆ ಮಂಜೂರಾಗಿರುವ ಸುಮಾರು 48 ನಿವೇಶನಗಳ ಫಲಾನುಭವಿಗಳಿಗೆ ಆತಂಕ ಎದುರಾಗಿದೆ.

ನೂತನ ಶಾಸಕ–ಬೆಂಬಲಿಗರ ದಾಂದಲೆ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಶಿಗ್ಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಜಾನಪದ ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ನನ್ನನ್ನು ಆಹ್ವಾನಿಸಿಲ್ಲ’ ಎಂದು ಆರೋಪಿಸಿ ಶಾಸಕ ಯಾಸೀರ ಅಹಮದ್ ಖಾನ್ ಪಠಾಣ ಹಾಗೂ ಬೆಂಬಲಿಗರು, ಆಡಳಿತ ಕಚೇರಿಯಲ್ಲಿರುವ ಕುಲಪತಿ ಕೊಠಡಿಗೆ ಸೋಮವಾರ ಬೆಳಿಗ್ಗೆ ನುಗ್ಗಿ ದಾಂದಲೆ ಮಾಡಿದರು.

ಮೆರವಣಿಗೆ ವೇಳೆ ವಿಶ್ವವಿದ್ಯಾಲಯದ ಆವರಣಕ್ಕೆ ಬಂದ ಪಠಾಣ, ‘ನನ್ನನ್ನು ಏಕೆ ಘಟಿಕೋತ್ಸವಕ್ಕೆ ಆಹ್ವಾನಿಸಿಲ್ಲ. ಆಮಂತ್ರಣ ಪತ್ರಿಕೆಯಲ್ಲೂ ಹೆಸರು ಹಾಕಿಲ್ಲ’ ಎಂದು ಹರಿಹಾಯ್ದರು.

ಮೆರವಣಿಗೆ ವೇದಿಕೆ ತಲುಪುತ್ತಿದ್ದಂತೆ, ಕುಲಪತಿ ಕಚೇರಿಗೆ ನುಗ್ಗಿದ ಪಠಾಣ ಹಾಗೂ ಬೆಂಬಲಿಗರು, ಕುಲಪತಿ ವಿರುದ್ಧ ಘೋಷಣೆ ಕೂಗಿದರು. ಕಚೇರಿಯಲ್ಲಿದ್ದ ಸಹಾಯಕ ಪ್ರಾಧ್ಯಾಪಕ ಚಂದ್ರಪ್ಪ ಅವರೊಂದಿಗೆ ಜಗಳವಾಡಿ, ದುಂಡಾವರ್ತನೆ ತೋರಿದರು.

‘ಸದ್ಯದಲ್ಲೇ ಶಾಸಕನಾಗಿ ಪ್ರಮಾಣ ವಚನ ಸ್ವೀಕರಿಸುತ್ತೇನೆ. ಆ ಮೇಲೆ ನಿಮ್ಮನ್ನು ನೋಡಿಕೊಳ್ಳುತ್ತೇನೆ’ ಎಂದು ಪಠಾಣ ಬೆದರಿಕೆ ಹಾಕಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ಪೊಲೀಸರು ಮಧ್ಯಪ್ರವೇಶಿಸಿದರು. ನಂತರ, ಪಠಾಣ ಅವರು ಬೆಂಬಲಿಗರ ಸಮೇತ ಸ್ಥಳದಿಂದ ಹೊರಟು ಹೋದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಚೇರಿ, ಕಲಬುರಗಿ
(ಉಗ್ರಾಣ ಮತ್ತು ಖರೀದಿ ಇಲಾಖೆ)
ಸಂ.ಕಕರಸಾ/ಕೇಕ/ಉ&ಮಖಿ/ 08 /2024–25 ದಿನಾಂಕ 02.12.2024
:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ) ::
ಈ ಕೆಳಗಿನ ಟೆಂಡರ್‌ನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
1) ಟೆಂಡರ್ ಸಂ. ಮತ್ತು ದಿನಾಂಕ : **G-41/02.12.24**, 2) ಟೆಂಡರ್ ಹೆಸರು : **Selection of an agency for providing 725 nos. of Heavy Passenger Vehicle Drivers to KKRTC**, 3) ಟೆಂಡರ್ ಮೌಲ್ಯ: **Rs. 16.90 Crores**, 4) ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕ: **19.12.2024 at 15:00 hrs.**
ಟೆಂಡರ್, ನೊಂದಣಿ, ಟೆಂಡರ್ ಫಾರ್ಮ್ ದಾಖಲಾತಿಗಳ ಎಲ್ಲಾ ವಿವರಗಳು http://eproc.karnataka.gov.in ನಲ್ಲಿ ಲಭ್ಯವಿದೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ eprocurementhelpdesk@gmail.com ಗೆ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಭಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ–ಪ್ರುಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)
ವಾ.ಸಾ.ಸಂ.ಇ/ಕಲಬುರಗಿ/675/ಕೆ.ಎಸ್.ಎಂ.ಸಿ.&ಎ/2024–25

‘ಅನುದಾನದ ಕೊರತೆ ಇಲ್ಲ’

ಜಮಖಂಡಿ: ‘ರಾಜ್ಯದಲ್ಲಿ ಅನುದಾನದ ಕೊರತೆ ಇಲ್ಲ. ₹ 3 ಲಕ್ಷ ಕೋಟಿ ಖರ್ಚು ಮಾಡುತ್ತಿದ್ದೇವೆ. ಹಂತ ಹಂತವಾಗಿ ಎಲ್ಲ ಅಭಿವೃದ್ಧಿ ಕಾರ್ಯ ಮಾಡುತ್ತೇವೆ. ಎಲ್ಲವೂ ಒಮ್ಮೆಲೇ ಆಗದು’ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಮುಡಾ ಬಗ್ಗೆ ತನಿಖೆ ಪ್ರಗತಿಯಲ್ಲಿದ್ದು, ಪೂರ್ಣಗೊಳ್ಳುವವರೆಗೆ ಕಾಯಬೇಕು. ಎರಡು ವರ್ಷಗಳಿಂದ ಸರ್ಕಾರ ಸುಸೂತ್ರವಾಗಿ ನಡೆದಿದೆ. ಪ್ರವಾಹ ಪೀಡಿತ ಪ್ರದೇಶಗಳ ರಸ್ತೆಗಳ ಪುನರ್ನಿರ್ಮಾಣ ಮತ್ತು ದುರಸ್ತಿ ಕಾರ್ಯವನ್ನು ಹಂತ ಹಂತವಾಗಿ ಮಾಡುತ್ತಿದ್ದೇವೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಸಮಾಧಾನಪಡಿಸಿದ ಹಿರಿಯ ನಾಯಕರು

ಕಾಂಗ್ರೆಸ್ ಭವನದಲ್ಲಿ ನಾಯಕರ ಹೊಡೆದಾಟ?

ಪ್ರಜಾವಾಣಿ ವಾರ್ತೆ

ಮಂಗಳೂರು: ವಿವಿಧ ವಿಷಯಗಳ ಬಗ್ಗೆ ಚರ್ಚಿಸಲು ನಗರದ ಕಾಂಗ್ರೆಸ್ ಭವನದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್ ಮತ್ತು ಕೆಪಿಸಿಸಿ ಸದಸ್ಯ ಬಂಟ್ವಾಳದ ಪ್ರಕಾಶ್ ಶೆಟ್ಟಿ ತುಂಬೆ ನಡುವೆ ಹೊಡೆದಾಟ ನಡೆದಿದೆ ಎಂದು ಪ್ರತ್ಯಕ್ಷದರ್ಶಿ ಕೆಲ ಕಾರ್ಯಕರ್ತರು ತಿಳಿಸಿದ್ದಾರೆ.

ಬೆಳಿಗ್ಗೆ 11 ಗಂಟೆಯಿಂದ ಕಾಂಗ್ರೆಸ್ ಮುಖಂಡರ ಸಭೆ ನಡೆದಿತ್ತು. ಆರಂಭದಲ್ಲಿ ಮುಂಬರುವ ಮಹಾನಗರ ಪಾಲಿಕೆ ಚುನಾವಣೆಯ ಬಗ್ಗೆ ಚರ್ಚೆ ನಡೆದು, ನಂತರ ಬ್ಲಾಕ್‌ಗಳಲ್ಲಿ ಪಕ್ಷದ ಕಚೇರಿಗೆ ಸ್ವಂತ ಕಟ್ಟಡ ನಿರ್ಮಿಸುವ ಬಗ್ಗೆ ಮಾತುಕತೆ ನಡೆದಿತ್ತು. ಈ ನಡುವೆ ಈಚೆಗೆ ನಡೆದ ಉಪಚುನಾವಣೆಯಲ್ಲಿ ಗೆದ್ದ ಗ್ರಾಮ ಪಂಚಾಯಿತಿ ಪ್ರತಿನಿಧಿಗಳಿಗೆ ಸನ್ಮಾನ ಮಾಡಲು ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ಮುಂದಾಗಿತ್ತು. ಆಗ ಭಿನ್ನಾಭಿಪ್ರಾಯ ಮೂಡಿ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿತು.

ಚುನಾಯಿತ ಸದಸ್ಯರನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ಸನ್ಮಾನಿಸಬೇಕು ಎಂದು ಪ್ರಕಾಶ್ ಶೆಟ್ಟಿ ಆಗ್ರಹಿಸಿದರು. ಮತ್ತೊಂದು ಸಭೆ ನಡೆಯಬೇಕಾಗಿರುವುದರಿಂದ ಸನ್ಮಾನ ಕಾರ್ಯಕ್ರಮವನ್ನು ಬೇಗ ಮುಗಿಸಬೇಕು ಎಂದು ಹರೀಶ್ ಕುಮಾರ್ ತಿಳಿಸಿದರು. ಈ ವಿಷಯದಲ್ಲಿ ಮಾತಿಗೆ ಮಾತು ಬೆಳೆದು ವಿಕೋಪಕ್ಕೆ ತಲುಪಿತು. ಸಭೆಯಲ್ಲಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಪದ್ಮರಾಜ್, ಮಿಥುನ್ ರೈ ಸಮಾಧಾನಪಡಿಸಿದರು ಎಂದು ಕಾರ್ಯಕರ್ತರು ತಿಳಿಸಿದ್ದಾರೆ.

ಏನೂ ಆಗಿಲ್ಲ: ಘಟನೆಯ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಪ್ರಕಾಶ್ ಶೆಟ್ಟಿ, ‘ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನು ಬದಲಾಯಿಸಿದರೆ ಪಕ್ಷಕ್ಕೆ ಒಳ್ಳೆಯದು. ಇಲ್ಲವಾದರೆ ಜಿಲ್ಲೆಯಲ್ಲಿ ಪಕ್ಷಕ್ಕೆ ಭವಿಷ್ಯ ಇಲ್ಲ’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಹರೀಶ್ ಕುಮಾರ್ ‘ನಾನು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಎರಡು ವರ್ಷಗಳೇ ಕಳೆದಿವೆ. ಬದಲಿ ವ್ಯವಸ್ಥೆ ಆಗುವವರೆಗೆ ಹೈಕಮಾಂಡ್ ನನ್ನನ್ನು ಮುಂದುವರಿಸಿದೆ. ಅಧ್ಯಕ್ಷರ ಕುರ್ಚಿಗೆ ಯಾರೂ ಅಂಟಿಕೊಂಡು ಕುಳಿತಿಲ್ಲ’ ಎಂದರು.

ಮಂಜುನಾಥ ಭಂಡಾರಿ ಮತ್ತು ಮಿಥುನ್ ರೈ, ‘ಪಕ್ಷದಲ್ಲಿ ಯಾರಿಗೂ ಅಸಮಾಧಾನ ಇಲ್ಲ. ಸಭೆಯಲ್ಲಿ ಗದ್ದಲ, ಗಲಾಟೆ ಆಗಲಿಲ್ಲ. ಸಣ್ಣಮಟ್ಟಿನ ವಾಕ್ ಸಮರ ನಡೆದಿದ್ದು, ನಂತರ ಎಲ್ಲವನ್ನೂ ಇತ್ಯರ್ಥಪಡಿಸಲಾಗಿದೆ’ ಎಂದು ತಿಳಿಸಿದರು.

2023, 2024ನೇ ಸಾಲಿನ ಗೌರವ, ವಾರ್ಷಿಕ ಪ್ರಶಸ್ತಿ: ಡಿಸೆಂಬರ್ ಕೊನೆ ವಾರದಲ್ಲಿ ಪ್ರದಾನ

ಬಯಲಾಟ ಅಕಾಡೆಮಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಪಂಪಯ್ಯಸ್ವಾಮಿ

ಶಿವಣ್ಣ ಬಿರಾದಾರ

ಗಂಗಮ್ಮ

ಈಶ್ವರಪ್ಪ ಹಲಗಣಿ

ನಾರಾಯಣ

ಓಂಕಾರಮ್ಮ

ಡಿ.ಕೆ. ರಾಜೇಂದ್ರ

ಇಮಾಮ್‌ಸಾಬ್

ಸಿದ್ರಾಮ ನಾಯಕ

ತಿಮ್ಮಣ್ಣ ಚನ್ನದಾಸರ

ಬಾಗಲಕೋಟೆ: ಕರ್ನಾಟಕ ಬಯಲಾಟ ಅಕಾಡೆಮಿ 2023 ಹಾಗೂ 2024ನೇ ಸಾಲಿನ ಗೌರವ ಹಾಗೂ ವಾರ್ಷಿಕ ಪ್ರಶಸ್ತಿ ಪ್ರಕಟಿಸಿದೆ.

'ಗೌರವ ಪ್ರಶಸ್ತಿಯು ₹50 ಸಾವಿರ ನಗದು, ವಾರ್ಷಿಕ ಪ್ರಶಸ್ತಿ ₹25 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಡಿಸೆಂಬರ್ ಕೊನೆ ವಾರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. 2021 ಮತ್ತು 2022ನೇ ಸಾಲಿನ ಪ್ರಶಸ್ತಿಗಳ ವಿತರಣೆ ಬಾಕಿ ಇದ್ದು, ಅವುಗಳನ್ನೂ ಇದೇ ಸಂದರ್ಭದಲ್ಲಿ ಪ್ರದಾನ ಮಾಡಲಾಗುವುದು' ಎಂದು ಅಕಾಡೆಮಿ ಅಧ್ಯಕ್ಷ ಪ್ರೊ. ಕೆ.ಆರ್.ದುರ್ಗಾದಾಸ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

2023-24ನೇ ಸಾಲಿನ ಗೌರವ ಪ್ರಶಸ್ತಿ: ಮೈಸೂರು ಜಿಲ್ಲೆಯ ಡಿ.ಕೆ.ರಾಜೇಂದ್ರ (ಬಯಲಾಟ ವಿದ್ವಾಂಸ), ಬೆಳಗಾವಿಯ ಸಿದ್ರಾಮ ನಾಯಕ (ಸಣ್ಣಾಟ), ಬಾಗಲಕೋಟೆಯ ನಾರಾಯಣ ಪತ್ತಾರ (ಶ್ರೀಕೃಷ್ಣ ಪಾರಿಜಾತ), ಬಳ್ಳಾರಿಯ ಓಂಕಾರಮ್ಮ (ದೊಡ್ಡಾಟ), ಕೊಪ್ಪಳದ ಕೆ.ಇಮಾಮ್‌ಸಾಬ್ (ದೊಡ್ಡಾಟ).

ವಾರ್ಷಿಕ ಪ್ರಶಸ್ತಿ: ವಿಜಯಪುರದ ಕೆ.ರಾಮಚಂದ್ರಪ್ಪ (ದೊಡ್ಡಾಟ), ಬಾಗಲಕೋಟೆಯ ಕೃಷ್ಣಪ್ಪ ಪೂಜಾರ (ಶ್ರೀಕೃಷ್ಣ ಪಾರಿಜಾತ), ಚಿತ್ರದುರ್ಗದ ಕೆ.ಎಂ.ರಘುಪಾಲಯ್ಯ, ಹಾವೇರಿಯ ಮಲ್ಲೇಶಪ್ಪ ಭಜಂತ್ರಿ, ರಾಯಚೂರಿನ ಅಮರೇಶ ತಿಮ್ಮಯ್ಯ (ದೊಡ್ಡಾಟ), ಬೆಳಗಾವಿಯ ಚಂದ್ರವ್ವ ನೀಲಪ್ಪನವರ (ಸಣ್ಣಾಟ), ದಾವಣಗೆರೆಯ ಎಂ.ಬಡಪ್ಪ (ದೊಡ್ಡಾಟ), ವಿಜಯಪುರದ ರುದ್ರಪ್ಪ ಸಾಳುಂಕೆ (ಬಯಲಾಟ), ವಿಜಯನಗರದ ಚುಕ್ಕನಕಲ್ಲು ರಾಮಣ್ಣ (ದೊಡ್ಡಾಟ), ತುಮಕೂರಿನ ತಿಪ್ಪಣ್ಣ ದೊಡ್ಡೆಗೌಡ (ಮೂಡಲಪಾಯ ಬಯಲಾಟ).

2024-25ನೇ ಸಾಲಿನ ಗೌರವ ಪ್ರಶಸ್ತಿ: ಬಳ್ಳಾರಿಯ ಎಚ್.ಎಂ. ಪಂಪಯ್ಯಸ್ವಾಮಿ, ವಿಜಯನಗರದ ಗಂಗಮ್ಮ, ಕೊಪ್ಪಳದ ತಿಮ್ಮಣ್ಣ ಚನ್ನದಾಸರ (ದೊಡ್ಡಾಟ), ಬಾಗಲಕೋಟೆಯ ಈಶ್ವರಪ್ಪ ಹಲಗಣಿ (ಶ್ರೀಕೃಷ್ಣ ಪಾರಿಜಾತ), ವಿಜಯಪುರದ ಶಿವಣ್ಣ ಬಿರಾದಾರ (ದೊಡ್ಡಾಟ).

ವಾರ್ಷಿಕ ಪ್ರಶಸ್ತಿ: ಚಿತ್ರದುರ್ಗದ ಗುಗ್ ಮಲ್ಲಯ್ಯ (ದೊಡ್ಡಾಟ), ಬೆಳಗಾವಿಯ ಭರಮಪ್ಪ ಸತ್ತೆನ್ನವರ (ಶ್ರೀಕೃಷ್ಣ ಪಾರಿಜಾತ), ದಾವಣಗೆರೆಯ ಬಾಲಮ್ಮ ಕಾಟಪ್ಪ, ವಿಜಯನಗರದ ಡಿ.ಎಂ.ಯರ್ರಿಸ್ವಾಮಿ (ದೊಡ್ಡಾಟ), ಬಾಗಲಕೋಟೆಯ ಗ್ಯಾನಪ್ಪ ಮಾದರ (ಶ್ರೀಕೃಷ್ಣ ಪಾರಿಜಾತ), ತುಮಕೂರಿನ ಶಂಕರಪ್ಪ ಎ.ಬಿ (ಮೂಡಲಪಾಯ ಬಯಲಾಟ), ವಿಜಯನಗರದ ಕೊಟ್ಟಿ ಹಾಲೇಶ್ವರ (ದೊಡ್ಡಾಟ, ನೇಪಥ್ಯ), ವಿಜಯಪುರದ ರುದ್ರಗೌಡ ಬಿರಾದಾರ, ಧಾರವಾಡದ ಚೆನ್ನವೀರಪ್ಪ ಮುದಲಿಂಗಣ್ಣವರ (ದೊಡ್ಡಾಟ) ಹಾಗೂ ಬಳ್ಳಾರಿ ಜಿಲ್ಲೆಯ ಕೆ.ಹೊನ್ನೂರಸ್ವಾಮಿ (ತೊಗಲು ಗೊಂಬೆಯಾಟ).

ಎಚ್. ವಿ.ಸಾವಿತ್ರಮ್ಮ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ 'ಎಚ್.ವಿ. ಸಾವಿತ್ರಮ್ಮ' ಪ್ರಶಸ್ತಿಯನ್ನು ಪ್ರಕಟಿಸಿದೆ.

'2020, 2021, 2022 ಹಾಗೂ 2023ನೇ ಸಾಲಿನ ಪ್ರಶಸ್ತಿಗಳಿಗೆ ಕ್ರಮವಾಗಿ ಅಲಕಾ ಕಟ್ಟೆಮನೆ ಅವರ 'ಹೊರಳು ಹಾದಿಯ ನೋಟ' ಕಥಾ ಸಂಕಲನ, ಎಲ್.ವಿ. ಶಾಂತಕುಮಾರಿ ಅವರ 'ಎಪಿಕ್ಟೆಟಸ್' ಅನುವಾದಿತ ಕೃತಿ, ಎಚ್.ಆರ್. ಸುಜಾತಾ ಅವರ 'ಮಣಿಬಾಲೆ' ಕಾದಂಬರಿ ಹಾಗೂ ಅನುಪಮಾ ಪ್ರಸಾದ್ ಅವರ 'ಚೋದ್ಯ' ಕಥಾಸಂಕಲನ ಆಯ್ಕೆಯಾಗಿವೆ' ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ತಿಳಿಸಿದ್ದಾರೆ.

'ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಡಿಸೆಂಬರ್ 8ರಂದು ಬೆಳಿಗ್ಗೆ 10.30ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಕೀಲೆ ಹೇಮಲತಾ ಮಹಿಷಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಲೇಖಕ ಬಂಜಗೆರೆ ಜಯಪ್ರಕಾಶ್ ಅತಿಥಿಯಾಗಿ ಭಾಗವಹಿಸಲಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಆನೇಕಲ್ ಗಡಿಯಲ್ಲಿ ಕಾಡಾನೆ ಹಿಂಡು

ಆನೇಕಲ್: ಕಾಡಾನೆಗಳ ಹಿಂಡೊಂದು ತಮಿಳುನಾಡಿನಿಂದ ಆಹಾರ ಅರಸಿ ಇಲ್ಲಿಗೆ ಸಮೀಪದ ಗಡಿಭಾಗದ ಡೆಂಕಣಿಕೋಟೆ ಬಳಿ ಸೋಮವಾರ ಬಂದಿದ್ದು, ಸುತ್ತಮುತ್ತಲಿನ ತೋಟಗಳಲ್ಲಿ ಓಡಾಡುತ್ತಿದೆ.

ಸುತ್ತಮುತ್ತಲಿನ ತೋಟಗಳಲ್ಲಿ ಬೀಡುಬಿಟ್ಟಿರುವ ಆನೆಗಳನ್ನು ಡೆಂಕಣಿಕೋಟೆ ಪೊಲೀಸರು ಮತ್ತು ರಾಜ್ಯ ಅರಣ್ಯ ಇಲಾಖೆ ಸಿಬ್ಬಂದಿ ಪುನಃ ಕಾಡಿಗೆ ಅಟ್ಟುವ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ಹಿಂಡಿನಲ್ಲಿ ಹತ್ತಕ್ಕೂ ಹೆಚ್ಚು ಕಾಡಾನೆಗಳಿದ್ದು, ಆ ಪೈಕಿ ಮೂರರಿಂದ ನಾಲ್ಕು ಮರಿಯಾನೆಗಳಿವೆ. ಆನೆಗಳು ರಾಜ್ಯದೊಳಗೆ ನುಸುಳದಂತೆ ಅರಣ್ಯ ಇಲಾಖೆಯ ಸಿಬ್ಬಂದಿ ತಾಲ್ಲೂಕಿನ ಗಡಿಗಳಲ್ಲಿ ಮೊಕ್ಕಾಂ ಹೂಡಿದ್ದಾರೆ.

ಮುತ್ಯಾಲಮಡುವು, ವಣಕನಹಳ್ಳಿ, ದೇವರಬೆಟ್ಟ ಸೇರಿದಂತೆ ವಿವಿಧೆಡೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳದಲ್ಲೇ ಬಿಡಾರ ಹೂಡಿದ್ದು, ಕಾಡಾನೆಗಳು ನಾಡಿನತ್ತ ಬರದಂತೆ ತಡೆಯುತ್ತಿದ್ದಾರೆ.

ಆನೇಕಲ್ ಸಮೀಪದ ಡೆಂಕಣಿಕೋಟೆಯಲ್ಲಿ ಕಾಡಾನೆಗಳ ಹಿಂಡು ಕಾಣಿಸಿಕೊಂಡವು

ಹೆದ್ದಾರಿಯಲ್ಲಿ ಬಸ್ ಪಲ್ಟಿ: ಮೂವರು ಮಹಿಳಾ ಪ್ರಯಾಣಿಕರ ಸಾವು

ಪ್ರಜಾವಾಣಿ ವಾರ್ತೆ

ಶಿರಾ: ರಾಷ್ಟ್ರೀಯ ಹೆದ್ದಾರಿ 48 ಚಿಕ್ಕನಹಳ್ಳಿ ಬಳಿ ಸೋಮವಾರ ಬೆಳಗಿನ ಜಾವ ಸಂಭವಿಸಿದ ಬಸ್ ಅಪಘಾತದಲ್ಲಿ ಮೂವರು ಮಹಿಳಾ ಪ್ರಯಾಣಿಕರು ಮೃತಪಟ್ಟಿದ್ದಾರೆ.

ನೊಯ್ಡಾ ನಿವಾಸಿ ಊರ್ವಿ ನಯನ್ (28), ಕೋಲ್ಕತ್ತ ನಿವಾಸಿ ಪ್ರಿಯಾಂಕಾ ಮಂಡಲ್ (26), ಮಹಾರಾಷ್ಟ್ರದ ಮುಂಬೈ ನಿವಾಸಿ ಶುಬಾಲಿ ಸಿಂಗ್ (26) ಮೃತ ಮಹಿಳೆಯರು.

ಗೋವಾದಿಂದ ಬೆಂಗಳೂರಿಗೆ ಹೊರಟಿದ್ದ ಬಸ್ (ಸನ್ ರೈಸ್ ಟೂರ್ಸ್ ಅಂಡ್ ಟ್ರಾವೆಲ್ಸ್) ಚಿಕ್ಕನಹಳ್ಳಿ ಬಳಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ನಂತರ ವಿದ್ಯುತ್ ಕಂಬ ಹಾಗೂ ತಡೆಗೋಡೆಗೂ ಡಿಕ್ಕಿ ಹೊಡೆದು ತಲೆ ಕೆಳಗಾಗಿ ಉರುಳಿ ಬಿದ್ದಿದೆ. ಪ್ರಿಯಾಂಕಾ ಮಂಡಲ್ ಮತ್ತು ಊರ್ವಿ ನಯನ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಶುಬಾಲಿ ಸಿಂಗ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ.

ಗಾಯಗೊಂಡಿದ್ದ ಇತರ 15 ಪ್ರಯಾಣಿಕರನ್ನು ಶಿರಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿಗೆ ಕಳುಹಿಸಿಕೊಡಲಾಗಿದೆ.

ಅತಿ ವೇಗ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಕಳ್ಳಂಬೆಳ್ಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಜ್ಜೇನು ದಾಳಿ ವ್ಯಕ್ತಿ ಸಾವು

ತ್ಯಾವಣಿಗೆ (ದಾವಣಗೆರೆ): ಹೆಜ್ಜೇನು ದಾಳಿಯಿಂದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಸಮೀಪದ ನವಿಲೇಹಾಳ್ ಗ್ರಾಮದಲ್ಲಿ ನಡೆದಿದೆ.

ಕೆ.ನಾಗೇಂದ್ರಪ್ಪ

ಕೆ.ನಾಗೇಂದ್ರಪ್ಪ (66) ಮೃತರು. ದೊಡ್ಡಘಟ್ಟ ಗ್ರಾಮದ ಸಮೀಪ ಇರುವ ತೋಟಕ್ಕೆ ತೆರಳಿದ್ದಾಗ ಜೇನು ನೊಣಗಳು ಕಡಿದಿವೆ. ಪ್ರಜ್ಞೆ ಕಳೆದುಕೊಂಡಿದ್ದ ಅವರನ್ನು ಚಿಕಿತ್ಸೆಗಾಗಿ ದಾವಣಗೆರೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ. ಬಸವಾಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಕ್ಷಿಪ್ತ ಸುದ್ದಿ

ಕಾನ್‌ಸ್ಟೆಬಲ್ ವಿರುದ್ಧ ಪೋಕ್ಸೊ ಪ್ರಕರಣ

ಕಲಬುರಗಿ: ತನ್ನ ಇಬ್ಬರು ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸಿದ ಆರೋಪದಡಿ ಡಿಎಆರ್ ಕಾನ್‌ಸ್ಟೆಬಲ್ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಕಾನ್‌ಸ್ಟೆಬಲ್ 16 ಮತ್ತು 12 ವರ್ಷ ವಯೋಮಾನದ ತನ್ನ ಮಕ್ಕಳ ಮೇಲೆ ಹಲ್ಲೆ ಮಾಡಿ, ಅಸಭ್ಯವಾಗಿ ವರ್ತಿಸುತ್ತಿದ್ದರು ಎಂದು ಆರೋಪಿಸಿ ಪತ್ನಿಯು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸದ್ಯ, ಇಬ್ಬರೂ ಬಾಲಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಪಿ ಪರಾರಿಯಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗಂಟಲಲ್ಲಿ ಬಲೂನ್ ಸಿಲುಕಿ ಬಾಲಕ ಸಾವು

ಹಳಿಯಾಳ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಜೋಗನಕೊಪ್ಪ ಗ್ರಾಮದ ಬಾಲಕ ನವೀನ್ ನಾರಾಯಣ ಬೆಳಗಾಂವಕರನ (13) ಗಂಟಲಲ್ಲಿ ಬಲೂನ್ ಸಿಲುಕಿ, ಭಾನುವಾರ ರಾತ್ರಿ ಮೃತಪಟ್ಟಿರುವ ಘಟನೆ ನಡೆದಿದೆ.

ನವೀನ್

ನಿಧನ ವಾರ್ತೆ

ಪ್ರೊ.ಪ್ರಮೋದ ಮುತಾಲಿಕ್

ಬೆಂಗಳೂರು: ಬಸವನಗುಡಿಯ ನ್ಯಾಷನಲ್ ಪದವಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರಮೋದ ಮುತಾಲಿಕ್ (68) ಸೋಮವಾರ ನಿಧನರಾದರು.

ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಉಪ ಪ್ರಾಂಶುಪಾಲರಾಗಿ ಕೆಲಸ ಮಾಡಿದ್ದ ಅವರು ವಿವಿಧ ಸಾಹಿತಿಗಳ ಹಲವು ಕೃತಿಗಳನ್ನು ಕನ್ನಡದಿಂದ ಇಂಗ್ಲಿಷ್‌ಗೆ ಹಾಗೂ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದರು.

ಯಶವಂತ ಚಿತ್ತಾಲರ ಕತೆಗಳು, ಎಚ್. ನರಸಿಂಹಯ್ಯ ಅವರ ಆತ್ಮಕಥೆಗಳನ್ನು ಅನುವಾದಿಸಿದ್ದಾರೆ. ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದ ಶಿವರಾಮ ಕಾರಂತರ 'ಅಳಿದ ಮೇಲೆ' ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು.

ಆರ್.ಕೆ. ನಾರಾಯಣ್ ಅವರ 'ಗೈಡ್' ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಅವರು ಕೊನೆಯದಾಗಿ ಅನುವಾದಿಸಿದ ತರಾಸು ಅವರ 'ಹಂಸಗೀತೆ' ಅಚ್ಚಿನಲ್ಲಿದೆ.

ವಿಶ್ವದ ಅತ್ಯುತ್ತಮ ಕವಿತೆಗಳನ್ನು ಅವರು 'ಕಣಜ' ಹೆಸರಲ್ಲಿ ಪ್ರಕಟಿಸಿದ್ದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಚಾಮರಾಜಪೇಟೆಯ ಚಿತಾಗಾರದಲ್ಲಿ ಮಂಗಳವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬಸ್ಥರು ಹೇಳಿದ್ದಾರೆ.

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ – 585 401.
ಆಸ್ತಿ ಅಧಿಕಾರಿಗಳವರ ಕಛೇರಿ: ಇ–ಮೇಲ್: eokvafsu@gmail.com

ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.127/ಕಾಮಗಾರಿ/2024–25 ದಿನಾಂಕ:30.11.204

:: ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ) ::

1) ಕಾಮಗಾರಿ ವಿವರ: Construction of Various essential buildings for LFC / LPT / VPP/ VCC Departments at Veterinary College Puttur, 2) ಕಾಮಗಾರಿ ಅಂದಾಜು ಮೊತ್ತ: Rs.4,33,75,186.00, 3) ಗುತ್ತಿಗೆದಾರರಅರ್ಹತೆ ವಿವರ: e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ ಟೆಂಡರ ಮೊತ್ತದ ವಿವರ: Rs. 4,33,75,186.00, 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಪೂರ್ವ ಬಿಡ್ ಸಭೆಯ ದಿನಾಂಕ : 16.12.2024 at 11.00 AM, 7) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ: 31.12.2024 up to 5.00 PM, 8) ತಾಂತ್ರಿಕ ಬಿಡ (ದ್ವಿ ಲಕೋಟೆ ಟೆಂಡರ)ತೆರೆಯುವ ದಿನಾಂಕ: 02.01.2025 at 11.30 AM, 9) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ ದಿನಾಂಕ: 03.01.2025 at 11.30. AM, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ: ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482–245446, 11) ಅಂತರ್ಜಾಲ ತಾಣದ ವಿಳಾಸ: e-procurement portal- https://kppp.karnataka.gov.in

ಸಹಿ/– ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ.

ವಾ.ಸಾ.ಸಂ.ಇ/ಬೀದರ/266/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ
ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು

ಸಂ. ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/JJM–2024–25/ಇ–ಟೆಂಡರ/ ದಿನಾಂಕ: 28–11–2024

ಇ–ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-4 (Standard Bid Document) ನಿಬಂಧನೆಗೊಳಪಟ್ಟಂತೆ ಪಂಚಾಯತ ರಾಜ ಇಂಜಿನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ Jal Jeevan Mission(JJM) ಯೋಜನೆಯಡಿಯ ಕೇಂದ್ರ & ರಾಜ್ಯ (90%) ಮತ್ತು ಸಮುದಾಯ ವಂತಿಕೆ (10%) ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ ಆಹ್ವಾನಿಸಲಾಗಿದೆ.

1] E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ: 30–11–2024 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ: 30–11–2024 3] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 09–12–2024 ಸಂಜೆ 4:30 ಗಂಟೆವರೆಗೆ 4] ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 10–12–2024 ಸಂಜೆ 5:30ಗಂಟೆ ಸಾಧ್ಯವಿದ್ದಲ್ಲಿ 5] ಆರ್ಥಿಕ ಬಿಡ್ ತೆರೆಯುವ ದಿನಾಂಕ : 11–12–2024 ಸಂಜೆ 5:30ಗಂಟೆಗೆ ಸಾಧ್ಯವಿದ್ದಲ್ಲಿ

Indent Nos. Lingasugur: 8684

ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟhttps://kppp.karnataka.gov.in/ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು.,
ಗ್ರಾ.ನೀ.ಸ & ನೈ ವಿಭಾಗ, ರಾಯಚೂರು.

DIP/RCR/562KSMCA/560/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಳಿಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (2ನೇ ಕರೆ)

ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ(ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ಪೂರ್ವ–2	ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1497	ರೂ. 76,38,000/– / ರೂ. 1,52,760/–	11.12.2024ರ ಸಂಜೆ 04:00 ಗಂಟೆಯವರೆಗೆ	12.12.2024ರ ಸಂಜೆ 04:00 ಗಂಟೆಗೆ
2		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1483	ರೂ. 77,14,000/– / ರೂ. 1,54,280/–		
3		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1549	ರೂ..79,03,000/– / ರೂ. 1,58,060/–		
4		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1552	ರೂ. 79,03,000/– / ರೂ. 1,58,060/–		
5		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1551	ರೂ. 79,03,000/– / ರೂ. 1,58,060/–		
6		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1494	ರೂ. 79,41,000/– / ರೂ. 1,58,820/–		
7		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1461	ರೂ. 54,04,000/– / ರೂ. 11,00,500/–		
8		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1460	ರೂ. 54,04,000/– / ರೂ. 1,08,080/–		
9		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1480	ರೂ. 75,38,000/– / ರೂ. 1,50,760/–		
10		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1545	ರೂ. 66,74,000/– / ರೂ. 1,33,480/–		
11		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1459	ರೂ. 50,24,000/– / ರೂ. 1,00,480/–		
12		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1501	ರೂ. 69,67,000/– / ರೂ. 1,39,340/–		
13		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1539	ರೂ. 79,03,000/– / ರೂ. 1,58,060/–		
14		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1508 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 69,67,000/– / ರೂ. 69,670/–		
15		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1463 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 51,46,000/– / ರೂ. 52,000/–		
16		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1543	ರೂ. 79,03,000/– / ರೂ. 1,58,060/–		
17		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1526	ರೂ. 55,08,000/– / ರೂ. 1,10,160/–		
18		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ) ಇಂಡೆಂಟ್ ಸಂಖ್ಯೆ : 1541	ರೂ. 79,03,000/– / ರೂ. 79,030/–		
19		ಬೆಂಜಮಂ/ಕಾನಿಅ(ಪೂ–2)/ತಾಂಅ/ಸಅ/4303/ 2024–25 ದಿನಾಂಕ: 02.12.2024 ಇಂಡೆಂಟ್ ಸಂಖ್ಯೆ : 1441 (ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	ರೂ. 66,35,000/– / ರೂ. 66,350/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜೆಎ/3569/2024–25

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
ಇ–ಮೇಲ್: commissionerahvs@gmail.com ಫೋನ್: 080–23412767

ಸಂ.ಆಪಸಂ/ಅನಿ(ಜಾಆ)ASCAD & NADCP/TENDER/2024-25 ದಿನಾಂಕ : 02.12.2024

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2024–25ನೇ ಸಾಲಿನಲ್ಲಿ ಆಸ್ಕಾಡ್ ಯೋಜನೆಯಡಿ ತಾಲ್ಲೂಕು ಮಟ್ಟದ ಪ್ರಯೋಗಾಲಯಗಳಿಗೆ ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡುವ ಸಂಬಂಧ KPP Portal ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿದ ಮೊತ್ತ 329.96 ಲಕ್ಷಗಳು. ಪೂರ್ಣ ಟೆಂಡರ್ ದಾಖಲೆಯನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ : 02.12.2024 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPP Portal ನಲ್ಲಿ ದಿನಾಂಕ : 02.12.2024 ರಿಂದ 01.01.2025 ರವರೆಗೆ 17.30 ಗಂಟೆಯೊಳಗೆ ಅವಶ್ಯ ದಾಖಲಾತಿಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ KPP Portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು, ಜಾನುವಾರು ರೋಗಗಳ ಕಣ್ಗಾವಲು ಯೋಜನೆ
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/3573/Zen/2024-25

ಮೈಸೂರು ಅರಮನೆ ಮಂಡಳಿ
ಕಾರ್ಯನಿರ್ವಾಹಕ ಅಧಿಕಾರಿರವರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು
ದೂರವಾಣಿ ಸಂ:0821-2421051 ಇಮೇಲ್: ddmysorepalace@gmail.com

No: EO/MPB/DD/AEE/ELEC/T.NO-12/2024-25 ದಿನಾಂಕ: 02.12.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿಯಲ್ಲಿ)
(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು, ಮೈಸೂರು ಅರಮನೆಯ ಆವರಣದಲ್ಲಿ ಡಿಸೆಂಬರ್–2024ನೇ ಮಾಹೆಯಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನವನ್ನು ವಿವಿಧ ವಿದ್ಯುತ್ ದೀಪಗಳಿಂದ ಅಲಂಕರಿಸಲು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ Line array Flying Sound System, Lighting System & Generator ಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಒಟ್ಟು ಮೊತ್ತ **ರೂ. 57.00 ಲಕ್ಷದ** ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ನೊಂದಾಯಿತ ಅರ್ಹ ಗುತ್ತಿಗೆದಾರರು/ ಏಜೆನ್ಸಿ / ಸಂಸ್ಥೆಯವರಿಂದ ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. (1) ವಿದ್ಯುನ್ಮಾನ (ಇ–ಟೆಂಡರ್) ವ್ಯವಸ್ಥೆ ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **09–12–2024 ಸಂಜೆ 5.30 ಗಂಟೆಯವರೆಗೆ.** (2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **11–12–2024 ಬೆಳಿಗ್ಗೆ 11.00 ಗಂಟೆಯ ನಂತರ** (3) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ : 12–12–2024 ಬೆಳಿಗ್ಗೆ 11.00 ಗಂಟೆಯ ನಂತರ** ಅಥವಾ ನಂತರ ದಿನಗಳಲ್ಲಿ ತೆರೆಯಲಾಗುವುದು, (4) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ **ರೂ. 42.00 ಲಕ್ಷಗಳು** ಹಾಗೂ ಕನಿಷ್ಠ ಮೊತ್ತ **ರೂ. 15.00 ಲಕ್ಷಗಳು.** ಟೆಂಡರ್‌ನ ನಿಬಂಧನೆಗಳು, ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ http://www.kppp.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/–ಉಪ ನಿರ್ದೇಶಕರು,
ಮೈಸೂರು ಅರಮನೆ ಮಂಡಳಿ, ಮೈಸೂರು

DIPR/MYS/KAVITA/884/2024-25

REVENUE DEPARTMENT
Revenue Commissionerate Office, Room No-711, 7th floor, 2nd Gate, M.S.Building, Bengaluru-560001.

No: RD-2024-25/IND0206 Date: 02-12-2024

TENDER NOTIFICATION

The Revenue Commissioner, Revenue Department invites Proposal through K.P.P. Portal from eligible companies for Procurement of Desktop Computers to Revenue Commissioner Office, M.S.Building, Bengaluru - 560 001.

All Interested bidders shall submit their Technical and Commercial bids electronically through KPP Portal: https://kppp.karnataka.gov.in.

The Tender Schedule is as mentioned below:

1	Tender Reference No.	RD-2024-25/IND0206
2	Date from which Bid document is ready for download through https://kppp.karnataka.gov.in portal of Govt. of Karnataka	03-12-2024
3	The Last date for seeking clarification if any.	06-12-2024 upto 11.00 A.M
4	Pre-Bid meeting	06-12-2024 at 3.00 P.M
5	Last Date & Time for uploading of Tender in e-Procurement Platform	17-12-2024 upto 5.30 P.M
6	Date & Time of opening of Tenders: Technical Bid & Technical Evaluation	20-12-2024 at 11.00 A.M
7	Date & Time of opening of Tenders: Commercial Bid	26-12-2024 @ 11.30 A.M
8	Contact Person for queries	Tahsildar (Admin), Revenue Commissioner, Telephone: 080-22032691 e-mail: commrrd@gmail.com
9	Place of Opening of Tenders and Address for communication	Revenue Commissionerate, Room No. 711, 7th floor, 2nd Gate, M.S.Building, Dr. B.R.Ambedkar Veedhi, Bengaluru-560001.

Note: Completed tender shall be uploaded through e-procurement system only in the manner described under instruction to Tenderers of RFP Documents on or before the last date & time stipulated.

Sd/-
Tahsildar (Admin),
Revenue Commissionerate, Bangalore

DIPR/CP/SPAN/3571/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಇಂಡಿ

ಕ್ರ.ಸಂ:ಕೃಉಮಾಸ/ಇಂ/ಭ.ಸಿ/368/2024–25 ದಿನಾಂಕ:29.112024

ಇ–ಸಂಗ್ರಹಣಾ ಟೆಂಡರ್ ಪ್ರಕಟಣೆ

2024–25 ನೇ ಸಾಲಿಗಾಗಿ ಈ ಸಮಿತಿಯ ಭದ್ರತಾ ವ್ಯವಸ್ಥೆಗಾಗಿ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಂಸ್ಥೆ/ಏಜೆನ್ಸಿಯವರಿಂದ ನಿಯಮಾನುಸಾರ ಕನಿಷ್ಠ ವೇತನ ಕಾಯ್ದೆಯನ್ವಯ ಈ ಕೆಳಗಿನ ಸೇವೆಗೆ ಪ್ರತ್ಯೇಕವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಕೆಲಸದ ಹೆಸರು	ಭದ್ರತಾ ಠೇವಣಿ
1	ಭದ್ರತಾ ಸಿಬ್ಬಂದಿ Indent No:APMC/2024-25/SE0525	ರೂ.1,00,000/–

ಸದರಿ ವೆಬ್‌ಸೈಟ್ http://kppp.karnataka.gov.in ಪೋರ್ಟಲ್‌ನಲ್ಲಿ ಭರ್ತಿ ಮಾಡಿದ **ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 16.12.2024 ಸಾಯಂಕಾಲ 5.30 ಗಂಟೆಗೆ ಸಲ್ಲಿಸುವುದು.** ಪ್ರಯುಕ್ತ ಸಂಬಂಧಿಸಿದ ಅರ್ಹ ಸಂಸ್ಥೆ/ಏಜೆನ್ಸಿಯವರು ವೆಬ್‌ಸೈಟ್ ಮೂಲಕ ಕ್ರಮ ಜರುಗಿಸಲು ಕೋರಲಾಗಿದೆ. ಸಹಾಯವಾಣಿ ಸಂಖ್ಯೆ : **080–25501216, 080–25501227, 08359–225024.**

ಸಹಿ/– ಕಾರ್ಯದರ್ಶಿ
ಸಹಿ/– ಆಡಳಿತಾಧಿಕಾರಿಗಳು

ವಾಸಾಸಂಇ/ವಿಜಯಪುರ/468/ಕೆಎಸ್‌ಎಂಸಿಎ/2024–25

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ–06/ಪ.ಪ್ರ/2024–25 ದಿನಾಂಕ: 02.12.2024

ಕಾಲಾವಕಾಶ ವಿಸ್ತರಣೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರ ಚಂದಾಪುರ–ಆನೇಕಲ್ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಸೂರ್ಯನಗರ 1ನೇ ಹಂತದಲ್ಲಿ **'ಸೂರ್ಯ ಶೈನ್' (Surya Shine)** ವಸತಿ ಸಮುಚ್ಚಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ 3 ಬಿಹೆಚ್‌ಕೆ ಫ್ಲಾಟ್‌ಗಳನ್ನು ನಿರ್ಮಿಸಲು ಉದ್ದೇಶಿಸಿ ಬೇಡಿಕೆ ಸಮೀಕ್ಷೆಯಡಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ವಿವಿಧ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ಅರ್ಜಿ ಸಲ್ಲಿಸಿ, ಆರಂಭಿಕ ಠೇವಣಿ ಮೊತ್ತ ಪಾವತಿಸಲು ಕೊನೆಯ ದಿನಾಂಕ: 30.11.2024ರಂದು ನಿಗದಿಪಡಿಸಲಾಗಿತ್ತು. **ಸಾರ್ವಜನಿಕರ ಹಿತದೃಷ್ಟಿಯಿಂದ ಆರಂಭಿಕ ಠೇವಣಿ ಮೊತ್ತವನ್ನು ಪಾವತಿಸಲು ಕೊನೆಯ ದಿನಾಂಕವನ್ನು 20.12.2024ರವರೆಗೆ ವಿಸ್ತರಿಸಲಾಗಿರುತ್ತದೆ.** ಉಳಿದಂತೆ ದಿನಾಂಕ: 05.10.2024ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆಸಕ್ತಿ ಇರುವ ಸಾರ್ವಜನಿಕರು ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಆನ್‌ಲೈನ್ ಅರ್ಜಿ (Online Application) ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20.12.2024.

ಸಹಿ/– ಗೃಹ ಆಯುಕ್ತರು
ಕಗೃಮಂ, ಬೆಂಗಳೂರು

DIPR/CP/YC/3568/2024-25

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕೊರಟಗೆರೆ
ತುಮಕೂರು ಜಿಲ್ಲೆ. ಕಛೇರಿ ದೂರವಾಣಿ ಸಂಖ್ಯೆ: 08138–232129, 233329 ಇ–ಮೇಲ್: itstaff_ulb_koratagere@yahoo.co.in

ಟೌ.ಪಂ.ಕೊ:ಜೆಇ/ಟೆಂ/ಸಿಆರ್/10/2024–25 ದಿನಾಂಕ: 27.11.2024

ಟೆಂಡರ್ ಪ್ರಕಟಣೆ

ಕೊರಟಗೆರೆ ಪಟ್ಟಣ ಪಂಚಾಯಿತಿಯಲ್ಲಿ ವಿವಿಧ ಅನುಧಾನಗಳಲ್ಲಿ ಟೆಂಡರ್ ಮೂಲಕ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಲೋಕೋಪಯೋಗಿ/ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತ ಸಿವಿಲ್/ಎಲೆಕ್ಟ್ರಿಕಲ್/ಬೋರ್‌ವೆಲ್ ಗುತ್ತಿಗೆದಾರರು ಭಾಗವಹಿಸ ಬಹುದಾಗಿರುತ್ತದೆ. ಸ್ವಚ್ಚ ಭಾರತ್ ಮಿಷನ್ ಅನುಧಾನ, 15ನೇ ಹಣಕಾಸು ಅನುದಾನಗಳಲ್ಲಿ ಮತ್ತು 2023–24ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನಗಳಲ್ಲಿ ಇಂಡೆಂಟ್ ನಂ.10774/call-2, 10778/call-2, 3777, 3775, 3776, 32733, 32737, 32736, SE4139, 32785, 32705 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 12/12/2024ರ 16.00 ಗಂಟೆವರೆಗೆ, ಟೆಂಡರ್ ತೆರೆಯುವ ದಿನಾಂಕ: 13/12/2024 16.30 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ. ಕಚೇರಿ ವೇಳೆ ಖುದ್ದಾಗಿ ಸಂಪರ್ಕಿಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವಿಳಾಸ; www.kppp.karnataka.gov.in (ಟೆಂಡರ್‌ನ ಗರಿಷ್ಠ ಮೊತ್ತ ರೂ.60.00ಲಕ್ಷ ಕನಿಷ್ಠ ಮೊತ್ತ ರೂ.0.65ಲಕ್ಷಗಳು)

ಸಹಿ/– ಅಧ್ಯಕ್ಷರು, ಪ. ಪಂ, ಕೊರಟಗೆರೆ.
ಸಹಿ/–ಮುಖ್ಯಾಧಿಕಾರಿ, ಪ. ಪಂ, ಕೊರಟಗೆರೆ.

DIPR/TUM/458/KSMCA/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಯಶಸ್ಸು ಪೂರ್ವಸಿದ್ಧತೆಯನ್ನು ಅವಲಂಬಿಸಿರುತ್ತದೆ ಮತ್ತು ಅಂತಹ ಸಿದ್ಧತೆ ಇಲ್ಲದಿದ್ದಾಗ ವೈಫಲ್ಯ ನಿಶ್ಚಿತ.

-ಕನ್‌ಫ್ಯೂಷಿಯಸ್

ಆಸ್ಪತ್ರೆಯಲ್ಲಿ ಬಾಣಂತಿಯರ ಸಾವು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಆಗಲಿ

ನವೆಂಬರ್ 9ರಿಂದ 11ರವರೆಗಿನ ಅವಧಿಯಲ್ಲಿ ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ 34 ಸಿಸೇರಿಯನ್ ಹೆರಿಗೆಗಳನ್ನು ಮಾಡಿಸಲಾಗಿತ್ತು. ಈ ಪೈಕಿ ಏಳು ಮಂದಿ ಬಾಣಂತಿಯರಲ್ಲಿ ಹೀಮೋಡಯಾಲಿಸಿಸ್ ಮತ್ತು ಮೂತ್ರಪಿಂಡದ ಸೋಂಕು ಕಾಣಿಸಿಕೊಂಡು, ತೀವ್ರ ಸ್ವರೂಪದ ಅನಾರೋಗ್ಯಕ್ಕೆ ಒಳಗಾಗಿದ್ದರು. ಅವರಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಬಾಣಂತಿಯರ ಸರಣಿ ಸಾವಿನ ಕಾರಣಗಳನ್ನು ಅರಿಯಲು ತನಿಖೆ ಪ್ರಗತಿಯಲ್ಲಿದೆ. ಆರಂಭಿಕ ಹಂತದ ಮಾಹಿತಿಗಳ ಪ್ರಕಾರ, ‘ಪಶ್ಚಿಮ್ ಬಂಗಾ ಫಾರ್ಮಾಸ್ಯೂಟಿಕಲ್’ ಎಂಬ ಕಂಪನಿ ಪೂರೈಸಿದ ‘ರಿಂಗರ್ ಲ್ಯಾಕ್ಟೇಟ್ ಐ.ವಿ. ದ್ರಾವಣ’ದಿಂದಾಗಿ ಬಾಣಂತಿಯರಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಅದರಿಂದಾಗಿಯೇ ಬಹು ಅಂಗಾಂಗಗಳ ವೈಫಲ್ಯವೂ ಸಂಭವಿಸಿದೆ ಎಂದು ವೈದ್ಯಕೀಯ ತಜ್ಞರು ಅಂದಾಜು ಮಾಡಿದ್ದಾರೆ. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಇದೇ ವರ್ಷದ ಫೆಬ್ರುವರಿಯಲ್ಲಿ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಗಾದ ಹಲವು ಮಹಿಳೆಯರು ಅಸ್ವಸ್ಥಗೊಂಡಿದ್ದರು. ಅವರಲ್ಲಿ ಮೂವರು ಸಾವಿಗೀಡಾಗಿದ್ದರು. ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಅದೇ ಮಾದರಿಯಲ್ಲಿ ಬಾಣಂತಿಯರ ಸರಣಿ ಸಾವಿನ ಪ್ರಕರಣ ನಡೆದಿದೆ. ರಾಜ್ಯದಲ್ಲಿ ಬಡವರು ಮತ್ತು ಮಧ್ಯಮ ವರ್ಗದವರು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗಳನ್ನೇ ಬಹುಮಟ್ಟಿಗೆ ನೆಚ್ಚಿಕೊಂಡಿದ್ದಾರೆ. ಹೆರಿಗೆ ಮತ್ತು ನಂತರದ ಚಿಕಿತ್ಸೆಗಾಗಿ ಆಸ್ಪತ್ರೆಗಳ ಮೇಲೆ ವಿಶ್ವಾಸವಿರಿಸಿ, ದಾಖಲಾಗುವವರ ಸಂಖ್ಯೆ ಏರುಗತಿಯಲ್ಲಿದೆ. ಈ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ನಡೆದಿರುವ ದುರ್ಘಟನೆಯು ಸರ್ಕಾರಿ ಆಸ್ಪತ್ರೆಗಳ ಮೇಲಿನ ವಿಶ್ವಾಸಕ್ಕೆ ಧಕ್ಕೆ ತರುವ ಅಪಾಯವಿದೆ. ಈ ಪ್ರಕರಣವು ರಾಜ್ಯದ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಮೆತ್ತಿಕೊಂಡ ಕಳಂಕ.

ಸಾರ್ವಜನಿಕರ ಜೀವದ ಜೊತೆ ಚೆಲ್ಲಾಟ ಆಡುವವರನ್ನು ಸಹಿಸುವುದಿಲ್ಲ ಎಂಬ ಪ್ರಬಲ ಸಂದೇಶವನ್ನು ಸರ್ಕಾರ ರವಾನಿಸಬೇಕು

ಚಿಕಿತ್ಸೆಗೆ ದಾಖಲಾಗುವ ಎಲ್ಲರಿಗೂ ಉತ್ತಮ ಚಿಕಿತ್ಸೆ ನೀಡಿ, ಅವರ ಪ್ರಾಣವನ್ನು ರಕ್ಷಿಸಬೇಕಾದುದು ಆಸ್ಪತ್ರೆಗಳ ಹೊಣೆಗಾರಿಕೆ. ವೈದ್ಯರು, ಶುಶ್ರೂಷಕರ ಸೇವೆ, ಯಂತ್ರೋಪಕರಣ ಮತ್ತು ಔಷಧಿಗಳು ಎಲ್ಲದರಲ್ಲೂ ಗುಣಮಟ್ಟ ಕಾಯ್ದುಕೊಂಡರೆ ಈ ಗುರಿ ಸಾಧಿಸುವುದು ಸುಲಭ. ಇವುಗಳಲ್ಲಿ ಯಾವುದರಲ್ಲಿ ದೋಷವಿದ್ದರೂ ಇಡೀ ಆಸ್ಪತ್ರೆ ವ್ಯವಸ್ಥೆಯೇ ಸಮಸ್ಯೆಗಳ ಸುಳಿಗೆ ಸಿಲುಕುತ್ತದೆ. ಸರ್ಕಾರಿ ಆಸ್ಪತ್ರೆಗಳ ಸುಧಾರಣೆ, ಗುಣಮಟ್ಟದ ಚಿಕಿತ್ಸೆ ಒದಗಿಸುವುದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರತಿವರ್ಷ ದೊಡ್ಡ ಮೊತ್ತವನ್ನು ವ್ಯಯಿಸುತ್ತವೆ. ಆದರೆ, ನೇಮಕಾತಿಯಲ್ಲಿನ ಲೋಪಗಳು, ಯಂತ್ರೋಪಕರಣ ಮತ್ತು ಔಷಧಿಗಳ ಖರೀದಿಯಲ್ಲಿನ ಭ್ರಷ್ಟಾಚಾರವು ಸುಧಾರಣೆಯ ಪ್ರಯತ್ನಗಳನ್ನು ನುಂಗಿಹಾಕುತ್ತಿವೆ. ಬಳ್ಳಾರಿ ಪ್ರಕರಣದಲ್ಲಿ ಪಶ್ಚಿಮ್ ಬಂಗಾ ಕಂಪನಿ ಪೂರೈಸಿದ್ದ ‘ರಿಂಗರ್ ಲ್ಯಾಕ್ಟೇಟ್ ಐ.ವಿ. ದ್ರಾವಣ’ದ ಗುಣಮಟ್ಟ ಪರೀಕ್ಷೆಯಲ್ಲಿ ಲೋಪವೆಸಗಿದ ಆರೋಪದಡಿ ರಾಜ್ಯ ಔಷಧ ನಿಯಂತ್ರಕರನ್ನು ಅಮಾನತು ಮಾಡಲಾಗಿದೆ. ಈ ಕಂಪನಿಯು ಈ ಹಿಂದೆಯೇ ಕಪ್ಪುಪಟ್ಟಿಯಲ್ಲಿತ್ತು. ಆ ಕಾರಣದಿಂದ ಈ ಕಂಪನಿಯು ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ ಔಷಧಗಳನ್ನು ಪೂರೈಸುವುದಕ್ಕೆ ನಿರ್ಬಂಧ ಹೇರಲಾಗಿತ್ತು. ಆದರೆ, ನ್ಯಾಯಾಲಯದ ಆದೇಶ ಪಡೆದು ಕಂಪನಿಯು ಐ.ವಿ. ದ್ರಾವಣ ಪೂರೈಸಿತ್ತು. ಅದರಲ್ಲೂ ಕೆಲವು ಬ್ಯಾಚ್‌ಗಳ ದ್ರಾವಣಗಳ ಪ್ಯಾಕೆಟ್‌ಗಳು ಗುಣಮಟ್ಟದಿಂದ ಕೂಡಿರಲಿಲ್ಲ ಎಂಬ ಕಾರಣಕ್ಕೆ ತಿರಸ್ಕರಿಸಲಾಗಿತ್ತು ಎಂದು ಆರೋಗ್ಯ ಇಲಾಖೆ ಹೇಳಿದೆ. ಈ ಕಂಪನಿಯು ಕಳಪೆ ಗುಣಮಟ್ಟದ ಉತ್ಪನ್ನಗಳನ್ನು ಪೂರೈಸುತ್ತಿತ್ತು ಎಂಬುದನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವಲ್ಲಿ ಆರೋಗ್ಯ ಇಲಾಖೆಯು ಸೋತಿರುವುದೇ ಈ ಸಮಸ್ಯೆಗೆ ಮೂಲ ಕಾರಣ. ಬಳ್ಳಾರಿಯ ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರ ಸಾವಿನಂತಹ ದುರ್ಘಟನೆಗಳು ಮಹಿಳೆಯರು ಸರ್ಕಾರಿ ಆಸ್ಪತ್ರೆಗಳ ಮೇಲಿನ ನಂಬಿಕೆ ಕಳೆದುಕೊಂಡು, ಹೆರಿಗೆ ಮತ್ತು ನಂತರದ ಚಿಕಿತ್ಸೆಗೆ ಆಸ್ಪತ್ರೆಗೆ ಬರಲು ಹಿಂದೇಟು ಹಾಕಲು ಕಾರಣವಾಗಬಾರದು.

ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆಯ ಹೆಸರಿನಲ್ಲಿ ಆರೋಗ್ಯ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ವಿಚಾರಣೆ ನಡೆಯುತ್ತಿದೆ. ಖರೀದಿಗೆ ಯೋಗ್ಯವಲ್ಲದ ಔಷಧಿಗಳನ್ನು ರಾಜ್ಯ ವೈದ್ಯಕೀಯ ಸರಬರಾಜು ನಿಗಮವು ಖರೀದಿಸಿ, ಆಸ್ಪತ್ರೆಗಳಿಗೆ ಪೂರೈಸುವುದು ಮುಂದುವರಿಯುತ್ತಲೇ ಇದೆ ಎಂಬುದನ್ನು ಬಳ್ಳಾರಿ ಪ್ರಕರಣವು ಜಾಹೀರುಗೊಳಿಸಿದೆ. ಇಂತಹ ಅಕ್ರಮಗಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ದೃಢವಾದ ನಿರ್ಧಾರ ಕೈಗೊಳ್ಳಬೇಕು. ಔಷಧ ನಿಯಂತ್ರಕರ ಅಮಾನತಿಗೆ ಈ ಕ್ರಮ ಸೀಮಿತ ಆಗಬಾರದು. ಕಳಪೆ ಗುಣಮಟ್ಟದ ಐ.ವಿ. ದ್ರಾವಣ ಖರೀದಿ ಮತ್ತು ಪೂರೈಕೆಗೆ ಕಾರಣರಾದವರು ಹಾಗೂ ಗುಣಮಟ್ಟ ಪರೀಕ್ಷೆಯಲ್ಲಿ ಲೋಪ ಎಸಗಿದ ಎಲ್ಲರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ತನಿಖೆ ನಡೆಸಬೇಕು. ಸಾರ್ವಜನಿಕರ ಜೀವದ ಜೊತೆ ಚೆಲ್ಲಾಟ ಆಡುವವರನ್ನು ಸಹಿಸುವುದಿಲ್ಲ ಎಂಬ ಪ್ರಬಲ ಸಂದೇಶ ರವಾನಿಸಬೇಕು. ವೈದ್ಯರು ಮತ್ತು ಶುಶ್ರೂಷಕರನ್ನು ಕಾಲಕಾಲಕ್ಕೆ ನೇಮಿಸುವುದು, ಔಷಧಿ ಹಾಗೂ ಯಂತ್ರೋಪಕರಣಗಳ ಖರೀದಿಯಲ್ಲಿ ಪಾರದರ್ಶಕತೆ ತರುವುದು ವ್ಯವಸ್ಥೆಯ ಸುಧಾರಣೆಗೆ ಪೂರಕವಾದ ಮೊದಲ ಹೆಜ್ಜೆಯಾಗಲಿ.

ದಿನದ ಟ್ವೀಟ್

ಪೊಲೀಸ್ ಇಲಾಖೆ: ಆಗಲಿ ಸುಧಾರಣೆ

ರಾಜಕಾರಣಿಗಳು ವಾಸ್ತವ ಸಂಗತಿಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ, ಮತಗಳನ್ನು ಒಗ್ಗೂಡಿಸುವುದು, ಜನರನ್ನು ಆಕರ್ಷಿಸುವುದು ಮಾತ್ರವೇ ಅವರಿಗೆ ಮುಖ್ಯ. ಅದನ್ನೇ ನಾವು ‘ವೋಟ್ ಬ್ಯಾಂಕ್ ರಾಜಕೀಯ’ ಎನ್ನುತ್ತೇವೆ. ಪೊಲೀಸ್ ಇಲಾಖೆಯನ್ನು ನಮ್ಮ ಸರ್ಕಾರಗಳು ಹೇಗೆ ಬಳಸಿಕೊಳ್ಳುತ್ತಿವೆಯೆಂದರೆ... ಪ್ರಾಮಾಣಿಕ ಅಧಿಕಾರಿಗಳಿಗೂ ಸರಿಯಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ... ಬದಲಾವಣೆ ಮತ್ತು ಸುಧಾರಣೆ ಬರಬೇಕಿದೆ.

ಕೆ.ಚೌಡಯ್ಯ

ಕಿಡಿನುಡಿ

ವಿಶ್ವದಾದ್ಯಂತ ಬಹುಮಟ್ಟಿಗೆ ಒಂದೇ ಮಗುವನ್ನು ಹೊಂದುವ ಪ್ರವೃತ್ತಿ ಕಂಡುಬರುತ್ತಿದೆ. ಶಿಕ್ಷಣದ ಮಟ್ಟ ಹೆಚ್ಚಾದಂತೆ, ಮಕ್ಕಳನ್ನು ಬೆಳೆಸುವ ಹೊಣೆಯನ್ನು ಏಕಾಂಗಿಯಾಗಿ ಹೊರಲು ಮಹಿಳೆಯರು ನಿರಾಕರಿಸುತ್ತಾರೆ ಮತ್ತು ಅದು ನ್ಯಾಯಯುತವೂ ಹೌದು. ವೃತ್ತಿಬದುಕನ್ನು ತೊರೆದು ಮನೆಗಳಿಗೆ ಸೀಮಿತರಾಗುವಂತೆ ಮಹಿಳೆಯರನ್ನು ಆರ್‌ಎಸ್‌ಎಸ್ ಜಾಣ್ಮೆಯಿಂದ ಪ್ರೋತ್ಸಾಹಿಸುತ್ತಿದೆ.

ಸಂದೀಪ್ ಮನುಧಾನೆ, ಉದ್ಯಮಿ

25 ವರ್ಷಗಳ ಹಿಂದೆ

ಶುಕ್ರವಾರ, 3-12-1999

• ಅಕ್ರಮ ಆಸ್ತಿ ಗಳಿಕೆ: ತಮಿಳುನಾಡು ಮಾಜಿ ಸಚಿವನಿಗೆ ಜೈಲು ಶಿಕ್ಷೆ

ಚೆನ್ನೈ, ಡಿ. 2- ಅಕ್ರಮ ಆಸ್ತಿ ಹೊಂದಿದ ಆರೋಪ ಎದುರಿಸುತ್ತಿರುವ ಎಐಎಡಿಎಂಕೆಯ ಮಾಜಿ ಸಚಿವ ನಾಗೂರ್ ಮೀರನ್ ಮತ್ತು ಅವರ ಪತ್ನಿಗೆ, ಭ್ರಷ್ಟಾಚಾರ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಧೀಶರು ಮೂರು ವರ್ಷಗಳ ಕಠಿಣ ಶಿಕ್ಷೆ, ರೂ 10,000 ದಂಡ ವಿಧಿಸಿದ್ದಾರೆ.

ಇವರು ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಯಾವುದೇ ಸಂಶಯ ಇಲ್ಲದಂತೆ ವಕೀಲರು ಸಾಕ್ಷ್ಯಾಧಾರ ಸಮೇತ ನಿರೂಪಿಸಿದ್ದಾರೆ ಎಂದು ವಿಶೇಷ ನ್ಯಾಯಾಧೀಶ ಎಸ್.ಸಂಬಂಧಂ ಆದೇಶದಲ್ಲಿ ತಿಳಿಸಿದ್ದಾರೆ.

ಎಐಎಡಿಎಂಕೆಯ ನಾಯಕಿ ಜೆ.ಜಯಲಲಿತಾ ಅವರ ಸಚಿವ ಸಂಪುಟದಲ್ಲಿ ಪ್ರವಾಸೋದ್ಯಮ ಸಚಿವರಾಗಿದ್ದ ಮೀರನ್, ಲೆಕ್ಕಪತ್ರವಿಲ್ಲದ ರೂ 33.72 ಲಕ್ಷ ಮೌಲ್ಯದ ಆಸ್ತಿಯನ್ನು ಅಕ್ರಮವಾಗಿ ಹೊಂದಿದ್ದರೆಂದು ಜಾಗೃತ ಮತ್ತು ಭ್ರಷ್ಟಾಚಾರ ವಿರೋಧಿ ನಿರ್ದೇಶನಾಲಯ ಆರೋಪಪಟ್ಟಿ ಸಲ್ಲಿಸಿತ್ತು.

• ಆಲಮಟ್ಟಿ ವಿವಾದ ಸಂವಿಧಾನ ಪೀಠಕ್ಕೆ

ನವದೆಹಲಿ, ಡಿ. 2- ಆಲಮಟ್ಟಿ ಅಣೆಕಟ್ಟು ಎತ್ತರ ಸೇರಿದಂತೆ ಕೆಲವು ವಿವಾದಾತ್ಮಕ ವಿಷಯಗಳ ಬಗೆಗೂ ವಿಚಾರಣೆ ಮಾಡುವಂತೆ ಮೂವರು ನ್ಯಾಯಮೂರ್ತಿಗಳ ವಿಭಾಗೀಯ ಪೀಠವು ಇಂದು, ಕೃಷ್ಣಾ ಜಲ ವಿವಾದಗಳ ನ್ಯಾಯಮಂಡಲಿಯ ತೀರ್ಪಿನ ಬಗೆಗೆ ಉದ್ಭವಿಸಿರುವ ಪ್ರಶ್ನೆಗಳ ಕುರಿತು ವಿಚಾರಣೆ ನಡೆಸುತ್ತಿರುವ ಸಂವಿಧಾನ ಪೀಠಕ್ಕೆ ವಹಿಸಿತು.

50 ವರ್ಷಗಳ ಹಿಂದೆ

ಮಂಗಳವಾರ, 3-12-1974

• ಪೆನ್ಷನ್‌ದಾರರ ಬವಣೆಗೆ ಕಾಯಕಲ್ಪ

ಬೆಂಗಳೂರು, ಡಿ. 2- ನಿವೃತ್ತಿ ಹೊಂದಿ ತಿಂಗಳು, ವರ್ಷಗಳು ಕಳೆದರೂ ವಿಶ್ರಾಂತಿ ವೇತನ ಮಂಜೂರಾಗಿಲ್ಲ. ಕಚೇರಿಗಳ ಹಾದಿ ತುಳಿದು ತುಳಿದು ಸಾಕಾಗಿಹೋದೆ- ಇದು ಸಾಮಾನ್ಯವಾಗಿ ಬಹುತೇಕ ಮಂದಿ ಪೆನ್ಷನ್‌ದಾರರ ಬವಣೆ. ಆದರೆ ಇನ್ನು ಮುಂದೆ ಇಂಥ ಬವಣೆ ಆಗಲಿಕ್ಕಿಲ್ಲ ಎಂಬ ಆಸೆಯ ಗೆರೆಯೊಂದು ಮೂಡಿದೆ.

ನಿವೃತ್ತಿ ಹೊಂದಿದ ಕೂಡಲೇ ವಿಶ್ರಾಂತಿವೇತನ ಮಂಜೂರಾಗುವಂತೆ ರಾಜ್ಯ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿದೆ ಹಾಗೂ ವಿಶ್ರಾಂತಿ ವೇತನ ನಿಯಮಗಳಿಗೆ ತಿದ್ದುಪಡಿ ಮಾಡಿದೆ.

ಸರ್ಕಾರಿ ನೌಕರನ ಒಟ್ಟು ಇಪ್ಪತ್ತೈದು ವರ್ಷಗಳ ಸೇವೆ ಮುಗಿದ ತಕ್ಷಣ, ಇಲಾಖೆ ಮುಖ್ಯಸ್ಥರು ಆತನ ವಿಶ್ರಾಂತಿವೇತನ ದಸ್ತಾವೇಜನ್ನು ಸಿದ್ಧಪಡಿಸಿ ತಾಳೆ ನೋಡುವುದಕ್ಕಾಗಿ ಅಕೌಂಟೆಂಟ್ ಜನರಲ್ ಅವರ ಕಚೇರಿಗೆ ಕಳುಹಿಸಿಕೊಡಬೇಕು. ನೌಕರನ ಇಪ್ಪತ್ತೈದು ವರ್ಷಗಳ ಸೇವೆ ಮುಗಿದ ಒಂದು ವಾರದೊಳಗಾಗಿ ದಸ್ತಾವೇಜು ಅಕೌಂಟೆಂಟ್ ಜನರಲ್ ಕಚೇರಿ ತಲುಪಬೇಕು. ಯಾವುದೇ ಸಂದರ್ಭದಲ್ಲೂ ಒಂದು ವಾರಕ್ಕಿಂತ ಹೆಚ್ಚು ಅವಧಿ ತೆಗೆದುಕೊಳ್ಳಬಾರದೆಂದು ಸರ್ಕಾರವು ಇಲಾಖೆ ಮುಖ್ಯಸ್ಥರಿಗೆ ಆದೇಶ ನೀಡಿದೆ.

ಈ ಅಚ್ಚರಿಯ ಫಲಿತಾಂಶಕ್ಕೆ ನಮ್ಮಲ್ಲಿ ಸಮಂಜಸ ವಿವರಣೆ ಇದೆಯೇ?

ಮಹಾರಾಷ್ಟ್ರ ಫಲಿತಾಂಶ ಎತ್ತಿದ ಪ್ರಶ್ನೆಗಳು

ವಿಶ್ಲೇಷಣೆ

ಯೋಗೇಂದ್ರ ಯಾದವ್

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿಯ ಗೆಲುವಾಗಲೀ ಸುಲಭವಾಗಿ ಗೆಲ್ಲಬಹುದಾಗಿದ್ದ ಚುನಾವಣೆಯಲ್ಲಿ ಮಹಾ ವಿಕಾಸ ಆಘಾಡಿ (ಎಂವಿಎ) ವಿಫಲವಾಗಿದ್ದಾಗಲೀ ನನ್ನನ್ನು ಚಕಿತಗೊಳಿಸಿಲ್ಲ. ಆದರೆ ದೊಡ್ಡ ಮಟ್ಟದ ಈ ಗೆಲುವನ್ನು ಮಾತ್ರ ನನಗೆ ಅರ್ಥಮಾಡಿಕೊಳ್ಳಲು ಆಗುತ್ತಿಲ್ಲ. ಈ ಫಲಿತಾಂಶವನ್ನು ಅರ್ಥಮಾಡಿಕೊಳ್ಳುವಲ್ಲಿ ನನ್ನ ಸಾಮಾನ್ಯ ಜ್ಞಾನ ಅಥವಾ ರಾಜ್ಯಶಾಸ್ತ್ರದ ನೈಪುಣ್ಯ ನೆರವಿಗೆ ಬರುತ್ತಿಲ್ಲ. ಆದರೊಂದು ಪ್ರಶ್ನೆ ಕೇಳಲೇಬೇಕಿದೆ: ಗೆದ್ದವರು ಉದ್ದೀಪನ ಮದ್ದು ಸೇವಿಸಿದ್ದರೇ?!

ಮಹಾರಾಷ್ಟ್ರದ ಚುನಾವಣೆಯು ನಾಲ್ಕು ಆಯಾಮಗಳ ಅಚ್ಚರಿಗಳನ್ನು ನಮ್ಮೆದುರು ತೆರೆದಿಟ್ಟಿದೆ. ಮೊದಲನೆಯದಾಗಿ, ಮಹಾಯುತಿಯ ಗೆಲುವಿನಲ್ಲಿ ಇರುವ ಮಹಾ ಅಂತರ: ನಾಲ್ಕನೇ ಮೂರರಷ್ಟು ಸ್ಥಾನಗಳಲ್ಲಿ ಗೆಲುವು ಮತ್ತು ಮತ ಪ್ರಮಾಣದಲ್ಲಿ ಶೇ 14ರಷ್ಟು ವ್ಯತ್ಯಾಸ. ಇಂತಹ ಗೆಲುವುಗಳು ಅತ್ಯಂತ ಅಪರೂಪ, ಆದರೆ ಅಸಾಧ್ಯವಂತೂ ಅಲ್ಲ. ಎರಡನೆಯದಾಗಿ, ಇದಕ್ಕಿಂತಲೂ ಚಕಿತಗೊಳಿಸುವಂಥದ್ದು ಮಹಾರಾಷ್ಟ್ರ ಚುನಾವಣೆಯ ಎಂದಿನ ಸ್ವರೂಪವು ಬಹುತೇಕ ಅಳಿಸಿಹೋಗಿರುವುದು. ಇಲ್ಲಿನ ಪ್ರತಿ ಚುನಾವಣೆಯಲ್ಲೂ ಪ್ರಾದೇಶಿಕ ಭಿನ್ನತೆ, ನಗರ-ಗ್ರಾಮೀಣ ಪ್ರದೇಶಗಳ ನಡುವಿನ ವ್ಯತ್ಯಾಸ, ಮೈತ್ರಿಯಲ್ಲಿನ ಒಡಕುಗಳು ಸಾಮಾನ್ಯ. ಆದರೆ ಈ ಬಾರಿ ಯಾವುದೋ ಒಂದು ಕಾಣದ ಕೈ ಇವೆಲ್ಲವನ್ನೂ ಮಟ್ಟಗೊಳಿಸಿದೆ.

ಮೂರನೆಯದು, ಲೋಕಸಭಾ ಚುನಾವಣೆಯಲ್ಲಿ 17-30ರ ಅಂತರದ ಸೋಲು ಕಂಡಿದ್ದ ಮಹಾಯುತಿಯು ವಿಧಾನಸಭಾ ಚುನಾವಣೆಯಲ್ಲಿ 235-50 ಸ್ಥಾನಗಳ ಭಾರಿ ಅಂತರದ ಗೆಲುವು ಸಾಧಿಸಿದೆ. ಜತೆಗೆ, ಲೋಕಸಭಾ ಚುನಾವಣೆಯಲ್ಲಿ ಮಹಾ ವಿಕಾಸ ಆಘಾಡಿಗಿಂತ ಶೇಕಡ 1ರಷ್ಟು ಕಡಿಮೆ ಮತ ಪಡೆದಿದ್ದ ಮಹಾಯುತಿ, ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಶೇ 14ರಷ್ಟು ಹೆಚ್ಚು ಮತಗಳನ್ನು ಪಡೆದುಕೊಂಡಿದೆ. ಐದೇ ತಿಂಗಳ ಅಂತರದಲ್ಲಿ ನಡೆದ ಎರಡು ಚುನಾವಣೆಗಳಲ್ಲಿ ಇಂತಹ ಬದಲಾವಣೆ ಆಗಿದೆ. ಇದು ಸಹ ಭಾರತದ ಚುನಾವಣಾ ಇತಿಹಾಸದಲ್ಲಿ ಅಭೂತಪೂರ್ವ ಬೆಳವಣಿಗೆಯೇನೂ ಅಲ್ಲ. ಆದರೆ ತಲೆಕೆಳಗಾದ ಈ ಫಲಿತಾಂಶವು ಅನಿರೀಕ್ಷಿತ ಸಂದರ್ಭದಲ್ಲಿ ಆಗಿರುವುದು ಮಾತ್ರ ನಿಜಕ್ಕೂ ಅಭೂತಪೂರ್ವ ಬೆಳವಣಿಗೆಯೇ ಆಗಿದೆ. ನಾಲ್ಕನೆಯದಾಗಿ, ರಾಷ್ಟ್ರೀಯ ಪಕ್ಷ ಮತ್ತದರ ಮೈತ್ರಿಕೂಟವು ಲೋಕಸಭಾ ಚುನಾವಣೆಯಲ್ಲಿನ ತನ್ನ ವೈಫಲ್ಯವನ್ನು ವಿಧಾನಸಭಾ ಚುನಾವಣೆಯಲ್ಲಿ ತಲೆಕೆಳಗು ಮಾಡಿ, ಗೆಲುವಿನತ್ತ ಹೋದ ಉದಾಹರಣೆಗಳೇ ನಮ್ಮಲ್ಲಿ ಇಲ್ಲ. ಮಹಾರಾಷ್ಟ್ರದ ಚುನಾವಣಾ ಇತಿಹಾಸವನ್ನೇ ನೋಡುವುದಾದರೆ, ಈ ಚುನಾವಣೆಯಲ್ಲಿ ಬಿಜೆಪಿಯ ಸಾಧನೆ ಕಳಪೆಯಾಗಿರು ತ್ತದೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ ಈ ಬಾರಿಯ ಚುನಾವಣಾ ಚೆಂಡು ಬಹಳ ಕ್ಷಿಪ್ರವಾಗಿ ತಿರುವು ಪಡೆಯಿತು, ಅದೂ ‘ತಪ್ಪು’ ದಿಕ್ಕಿನತ್ತ. ನಿಜಕ್ಕೂ ಇದು ಚುನಾವಣಾ ಗೂಗ್ಲಿಯೆ. ಈ ಅಚ್ಚರಿಯ ಫಲಿತಾಂಶಕ್ಕೆ ನಮ್ಮಲ್ಲಿ ಸಮಂಜಸ ವಿವರಣೆ ಇದೆಯೇ?

ಈಗ ಎಲ್ಲೆಡೆ ಕೇಳಿಬರುತ್ತಿರುವ ಸಾಮಾನ್ಯ ವಿವರಣೆಗಳನ್ನೇ ಗಮನಿಸೋಣ. ಅನಗತ್ಯ ಗದ್ದಲ ಮತ್ತು ದೂರದೃಷ್ಟಿಯಿಲ್ಲದ ನಿಲುವುಗಳಿಂದ ಎಂವಿಎ ನಾಯಕರು ತಮ್ಮೆದುರು ಇದ್ದ ಮಹಾ ಅವಕಾಶವನ್ನು ಮುಟ್ಠಾಳರಂತೆ ಕೈಚೆಲ್ಲಿದರು ಎನ್ನಲಾಗುತ್ತಿದೆ. ಇದು ನಿಜಕ್ಕೂ ಸತ್ಯ. ಲೋಕಸಭಾ ಚುನಾವಣೆಯ ಫಲಿತಾಂಶವು ಎಂವಿಎಗೆ ಒಂದು ಉತ್ತಮ, ಸ್ಥೈರ್ಯ ಹೆಚ್ಚಿಸಬಲ್ಲಂತಹ ಹಾಗೂ ವಿಧಾನಸಭಾ ಚುನಾವಣಾ ಪ್ರಚಾರವನ್ನು ಶಕ್ತಿಯುತವಾಗಿ ಆರಂಭಿಸಲು ಅನುಕೂಲವಾಗುವಂತಹ ವೇದಿಕೆಯನ್ನು ಒದಗಿಸಿಕೊಟ್ಟಿತ್ತು. ಮಹಾಯುತಿಯು ಬಿಜೆಪಿ-ಶಿಂದೆ ಮತ್ತು ಅಜಿತ್ ಪವಾರ್ ಅವರ ನಡುವಿನ ಅಪವಿತ್ರ ಮೈತ್ರಿಯಿಂದ ಹುಟ್ಟಿಕೊಂಡ ಕೂಸಾಗಿತ್ತು. ಒಬ್ಬ ಪ್ರಬುದ್ಧ ರಾಜಕಾರಣಿ ಮತ್ತು ಕೋವಿಡ್ ಸಾಂಕ್ರಾಮಿಕವನ್ನು ಯಶಸ್ವಿಯಾಗಿ ನಿರ್ವಹಿಸಿದ ಮುಖ್ಯಮಂತ್ರಿ ಎಂಬ ವರ್ಚಸ್ಸು ಉದ್ಧವ್ ಠಾಕ್ರೆ ಅವರಿಗೆ ಇತ್ತು. ಹೀಗಿದ್ದೂ ಎಂವಿಎ ನಾಯಕರು ಮೈತ್ರಿಕೂಟಕ್ಕೆ ಅನುಕೂಲವಾಗುವಂತೆ ಇದ್ಯಾವುದನ್ನೂ ಬಳಸಿಕೊಳ್ಳಲಿಲ್ಲ.

ಆದರೆ ಬಿಜೆಪಿ ನೇತೃತ್ವದ ಮಹಾಯುತಿಯು ಲೋಕಸಭಾ ಚುನಾವಣೆಯಲ್ಲಿನ ತನ್ನ ಸೋಲಿನಿಂದ ಪಾಠ ಕಲಿಯಿತು ಮತ್ತು ವಿಧಾನಸಭಾ ಚುನಾವಣೆಯಲ್ಲಿ ಅದನ್ನು ಚೆನ್ನಾಗಿಯೇ ಪ್ರಯೋಗಿಸಿತು. ಮೈತ್ರಿಕೂಟದಲ್ಲಿನ ಭಿನ್ನರಾಗವನ್ನು ಇಲ್ಲವಾಗಿಸಿತು, ಮಹಿಳೆಯರಿಗೆ ಹತ್ತಾರು ಸೌಲಭ್ಯಗಳನ್ನು ಘೋಷಿಸಿತು, ಅತ್ಯಂತ ಹಿಂದುಳಿದ ದಲಿತರು ಮತ್ತು ಒಬಿಸಿ ಮತಗಳನ್ನು ಒಗ್ಗೂಡಿಸಿತು, ಇಡೀ ಸಂಘ ಪರಿವಾರವನ್ನು ಕಣಕ್ಕೆ ಇಳಿಸಿತು. ಜತೆಗೆ ‘ಡಮ್ಮಿ’ ಪಕ್ಷಗಳು ಮತ್ತು ಅಭ್ಯರ್ಥಿಗಳನ್ನು ಸಾವಿರಾರು ಸಂಖ್ಯೆಯಲ್ಲಿ ಕಣಕ್ಕೆ ಇಳಿಸಿ, ಮತಗಳನ್ನು ಒಡೆಯಿತು. ಇವೆಲ್ಲವುಗಳ ಜತೆಗೆ ಬಿಜೆಪಿಯ ಭಾರಿ ಹಣಬಲ ಮತ್ತು ಮಾಧ್ಯಮ ಬೆಂಬಲವೂ ಸೇರಿಕೊಂಡಿತು.

ಲೋಕಸಭಾ ಚುನಾವಣೆಯಲ್ಲಿ ಸ್ವಲ್ಪ ಪ್ರಮಾಣದ ಮತ ಕಳೆದುಕೊಂಡಿದ್ದ, ವಿಧಾನಸಭಾ ಚುನಾವಣೆಯಲ್ಲಿ ಇನ್ನೂ ಶೇ 5ರಷ್ಟು ಮತಗಳನ್ನು ಕಳೆದುಕೊಳ್ಳುವ ಅಪಾಯದಿಂದ ಮಹಾಯುತಿ ಹೇಗೆ ಪಾರಾಯಿತು ಮತ್ತು ಎಂವಿಎಗಿಂತ ಹೇಗೆ ಮುನ್ನಡೆ ಸಾಧಿಸಿತು ಎಂಬುದನ್ನಷ್ಟೇ ಇವೆಲ್ಲಾ ವಿವರಿಸಬಲ್ಲವು. ಆದರೆ ಶೇ 14ರಷ್ಟು ಮತ ಪ್ರಮಾಣದ ಮುನ್ನಡೆ ಪಡೆದುಕೊಂಡದ್ದು ಹೇಗೆ ಎಂಬುದನ್ನು ಇವು ವಿವರಿಸಬಲ್ಲವೇ? ಖಂಡಿತವಾಗಿಯೂ ಇಲ್ಲ. ಸಮೀಕ್ಷಾ ಸಂಸ್ಥೆಗಳಾಗಲೀ ಮಾಧ್ಯಮಗಳಾಗಲೀ ಕಡೆಗೆ ಗೆದ್ದವರೂ ಒಳಗೊಂಡಂತೆ ಯಾವ ರಾಜಕೀಯ ನಾಯಕರೂ ಈ ಫಲಿತಾಂಶವನ್ನು ನಿರೀಕ್ಷಿಸಿರಲಿಲ್ಲ. ಒಬ್ಬರ ಅಥವಾ ಒಂದು ಪಕ್ಷದ ಪರವಾದ ಅಲೆ ಇರುವ ಚುನಾವಣೆಗಳು ರಾಜಕೀಯ ನಾಯಕರು, ವೀಕ್ಷಕರು ಮತ್ತು ವರದಿಗಾರರನ್ನೂ ದಿಗ್ಭ್ರಮೆಗೆ ದೂಡುತ್ತವೆ. 1977ರಲ್ಲಿ ಜನತಾ ಪಕ್ಷವು ಉತ್ತರ ಭಾರತದಲ್ಲಿ ಕಂಡ ಯಶ, 1985ರಲ್ಲಿ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಮತ್ತು 2019ರಲ್ಲಿ ಈಶಾನ್ಯ ಭಾರತದಲ್ಲಿ ಮೋದಿ ನೇತೃತ್ವದ ಬಿಜೆಪಿ ಗೆಲುವು ಇದಕ್ಕೆ ಉತ್ತಮ ನಿದರ್ಶನಗಳು. ಆದರೆ ಅಂತಹ ಅಲೆ ಇದೆ ಎಂಬುದರ ವಾಸನೆ ಎಲ್ಲರಿಗೂ ಬಡಿದಿರುತ್ತದೆ. ಆದರೆ ಮಹಾರಾಷ್ಟ್ರದ ಚುನಾವಣೆಯಲ್ಲಿ ಈ ಸ್ವರೂಪದ ವಾಸನೆ, ಗ್ರಹಿಕೆ ಮತ್ತು ಅಂದಾಜುಗಳು ಯಾವುವೂ ವರದಿಯಾಗಿರಲೇ ಇಲ್ಲ.

ಲೋಕನೀತಿ-ಸಿಎಸ್‌ಡಿಎಸ್ ನವೆಂಬರ್ ಕೊನೆಯ ವಾರದಲ್ಲಿ ಒಂದು ವಿಶ್ಲೇಷಣೆ ಪ್ರಕಟಿಸಿತ್ತು. ಬೇಸರವೆಂದರೆ, ಮಹಾಯುತಿ ಸರ್ಕಾರದ ಆಡಳಿತ, ಡಬ್ಬಲ್ ಎಂಜಿನ್ ಸರ್ಕಾರದ ಸಂಬಂಧ ಜನರ ಆದ್ಯತೆ, ರಾಜಕೀಯ ನಾಯಕರ ಜನಪ್ರಿಯತೆ, ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜನರ ಮನದಾಳವನ್ನು ವಿವರಿಸುವಲ್ಲಿ ಆ ವಿಶ್ಲೇಷಣೆ ಸಾಕಾಗುವುದಿಲ್ಲ.

ಇವುಗಳ ಹೊರತಾಗಿ ಮಹಾರಾಷ್ಟ್ರದ ಫಲಿತಾಂಶಕ್ಕೆ ಕಾರಣವಾದ, ನಮಗೆ ಅರ್ಥವಾಗದ ಅಂಶವೊಂದು ಇದ್ದೇ ಇದೆ. ಇವಿಎಂಗಳನ್ನು ದೂರುವುದು ಈಗ ದುಡುಕಿನ ನಿಲುವಾದರೂ ಅವುಗಳ ವಿಶ್ವಾಸಾರ್ಹತೆ ಬಗ್ಗೆ ಪ್ರಶ್ನೆಗಳು ಏಳುವುದನ್ನು ತಡೆಯುವುದಂತೂ ಅಸಾಧ್ಯ. ಇವಿಎಂಗಳನ್ನು ತಿರುಚಲಾಗುತ್ತದೆ ಎಂಬ ಸಂಚಿನ ಬಗ್ಗೆ ನನ್ನ ರಾಜಕೀಯ ಸ್ನೇಹಿತರು ಮತ್ತು ಸಹೋದ್ಯೋಗಿಗಳ ಆರೋಪವನ್ನು ನಾನು ಕಳೆದೊಂದು ದಶಕದಿಂದ ಟೀಕಿಸುತ್ತಲೇ ಬಂದಿದ್ದೇನೆ. ಇವಿಎಂನಲ್ಲಿ ಚಲಾವಣೆಯಾದ ಮತಗಳು ಮತ್ತು ಎಣಿಕೆ ಮಾಡಲಾದ ಮತಗಳ ಸಂಖ್ಯೆಯಲ್ಲಿನ ಅಂತರವು ಶಂಕಾಸ್ಪದವಾದುದಾದರೂ, ವಂಚನೆ ಎಂಬುದಕ್ಕೆ ಪ್ರಬಲ ಸಾಕ್ಷ್ಯವಾಗಲಾರದು. ಇವಿಎಂ ವಂಚನೆ ಬಗ್ಗೆ ಮಾತನಾಡುವವರು, ಆ ಬಗ್ಗೆ ಈವರೆಗೆ ಮುಂದಿಡದೇ ಇರುವ ಮತ್ತು ಇನ್ನೂ ಪ್ರಬಲವಾದ ಸಾಕ್ಷ್ಯಗಳನ್ನು ಹೊತ್ತುಬರಬೇಕಾಗುತ್ತದೆ. ಆದರೂ ನಮ್ಮ ಕಣ್ಣಿಗೆ ಕಾಣದೇ ಇರುವ ಹಲವು ಸಂಗತಿಗಳು ಈ ಫಲಿತಾಂಶಕ್ಕಾಗಿ ಕೆಲಸ ಮಾಡಿವೆ ಎಂಬುದಂತೂ ದಿಟ.

ಫಲಿತಾಂಶಗಳ ಬಗ್ಗೆ ಬಹುದೊಡ್ಡ ಪ್ರಶ್ನೆಗಳನ್ನು ಎತ್ತಿರುವ ಮೂರು ವಿಧಾನಸಭಾ (ಮಧ್ಯಪ್ರದೇಶ, ಹರಿಯಾಣ ಮತ್ತು ಮಹಾರಾಷ್ಟ್ರ) ಚುನಾವಣೆಗಳು ಒಂದು ವರ್ಷದೊಳಗೇ ನಡೆದಿದ್ದು ಮತ್ತು ಆ ಪ್ರಶ್ನೆಗಳಿಗೆ ಈವರೆಗೆ ಉತ್ತರ ಸಿಗದೇ ಇರುವುದು ಅತ್ಯಂತ ದುರದೃಷ್ಟಕರ. ಲೋಕಸಭಾ ಚುನಾವಣೆಯ ದತ್ತಾಂಶಗಳಿಗೆ ಸಂಬಂಧಿಸಿದ ವ್ಯತ್ಯಾಸಗಳ ಸಂಬಂಧ ಎದ್ದ ಗಂಭೀರ ಪ್ರಶ್ನೆಗಳಿಗೆ ಚುನಾವಣಾ ಆಯೋಗ ಸರಿಯಾಗಿ ಸ್ಪಂದಿಸಲೇ ಇಲ್ಲ. ಈ ಬಾರಿ ಉತ್ತರ ಪ್ರದೇಶದ ಉಪಚುನಾವಣೆಯೊಂದರಲ್ಲಿ ನಡೆದದ್ದು ಚುನಾವಣಾ ವಂಚನೆ ಎಂಬುದೇ ಸರಿ. ರಾಜೀವ್ ಕುಮಾರ್ ಅವರು ಮುಖ್ಯ ಚುನಾವಣಾ ಆಯುಕ್ತರಾದ ನಂತರವೇ ಈ ಎಲ್ಲಾ ಚುನಾವಣೆಗಳು ನಡೆದಿವೆ ಎಂಬುದು ವಿಪರ್ಯಾಸ. ನಮ್ಮ ನೆರೆ ದೇಶಗಳಂಥ ಸ್ಥಿತಿಗೆ ನಾವು ಕುಸಿಯಬಾರದು ಎಂದಿದ್ದರೆ, ನಾವು ಈ ಬಗ್ಗೆ ಕಾರ್ಯಪ್ರವೃತ್ತರಾಗಲೇಬೇಕು.

ಚುರುಮುರಿ



ಸಂಕಟ ಸಭೆ

• ಮಣ್ಣೆ ರಾಜು

ಉಪಚುನಾವಣೆಯ ಸೋಲಿನ ಆತ್ಮಾವಲೋಕನ ಸಭೆ ‘ದೊಡ್ಡವರ’ ನೇತೃತ್ವದಲ್ಲಿ ನಡೆದಿತ್ತು.

ಮಳೆ ನಿಂತರೂ ಮರದ ಹನಿ ನಿಂತಿಲ್ಲ ಎಂಬಂತೆ ಎಲೆಕ್ಷನ್ ಮುಗಿದರೂ ಸೋಲಿನ ನೋವು ನಿವಾರಣೆ ಆಗಿರಲಿಲ್ಲ. ವಾರ್ಷಿಕ ಪರೀಕ್ಷೆಯಲ್ಲಿ ಪಾಸಾಗಿದ್ದ ಅಪ್ಪಂದಿರ ಮಕ್ಕಳು ಸಪ್ಲಿಮೆಂಟರಿಯಲ್ಲಿ ಫೇಲಾಗಿದ್ದರು. ‘ಪುತ್ರ ಸೋಲು ನಿರಂತರ ನೋವು’ ಎನ್ನುವಂತೆ ಕಾಡಿತ್ತು.

ಸಭೆಯಲ್ಲಿ ಮಾತಿಲ್ಲ, ಮೌನವೇ ಮನೆ ಮಾಡಿತ್ತು. ಮಾತು ಹೇಗೆ ಆರಂಭಿಸಬೇಕು ಎಂದು ಯಾರಿಗೂ ತೋಚುತ್ತಿಲ್ಲ. ಅವರ ಮುಖ ಇವರು, ಇವರ ಮುಖ ಅವರು ನೋಡಿದರು. ಎಲ್ಲರ ಮುಖಗಳಲ್ಲೂ ನೋವಿನ ಛಾಯೆ.

ಚಿಂತಾಕ್ರಾಂತರಾಗಿ ಕುಳಿತಿದ್ದ ‘ದೊಡ್ಡವರು’ ಸಭೆಯಲ್ಲಿ ಹಾಜರಿದ್ದ ದುಃಖತಪ್ತರನ್ನು ಒಮ್ಮೆ ವಿಷಾದದಿಂದ ನೋಡಿ ನೊಂದರು. ಕಿಟಕಿ ಕಡೆ ನೋಡಿದರು. ಗೋಡೆ ನೋಡಿ, ಸೀಲಿಂಗ್ ನೋಡಿ ದೀರ್ಘ ನಿಟ್ಟುಸಿರುಬಿಟ್ಟರು.

‘ದೊಡ್ಡವರ’ ಮೌನ, ಸಂಕಟ ಕಂಡು ಉಳಿದವರಿಗೆ ದುಃಖ ಉಮ್ಮಳಿಸಿತು. ಏನು ಹೇಳಬೇಕೆಂದು ತೋಚದೆ ತೆಪ್ಪಗೆ ಕುಳಿತರು. ಚುನಾವಣೆಯಲ್ಲಿ ಕೈ ಹಿಡಿದವರು ಯಾರು, ಕೈ ಕೊಟ್ಟವರು ಯಾರು, ಸೋಲನ್ನು ಯಾರ ತಲೆಗೆ ಕಟ್ಟಬೇಕು ಎಂದು ಬಹುತೇಕರು ಮನಸ್ಸಿನಲ್ಲೇ ಲೆಕ್ಕಹಾಕತೊಡಗಿದರು.

ಸಾಲದ್ದಕ್ಕೆ, ಉರಿವ ಮನೆಯಲ್ಲಿ ಗಳ ಇರಿಯುವವರು, ಉರಿಯುವ ಬೆಂಕಿಗೆ ತುಪ್ಪ ಸುರಿಯುವವರು ನಮ್ಮಲ್ಲಿದ್ದಾರೆ ಎಂಬುದು ‘ದೊಡ್ಡವರ’ ಅನುಭವಕ್ಕೆ ಬಂದಿತ್ತು. ಬಳಗದ ಯಾರ್‍ಯಾರು ಮನೆಯಿಂದ ಕಾಲು ಕೀಳಬಹುದು, ಇನ್ಯಾರು ಆಪರೇಷನ್‌ಗೆ ಆಸೆಪಡಬಹುದು ಎಂಬ ಪ್ರಶ್ನೆಗಳು ತಲೆಯೊಳಗೆ ಚಕ್ರದಂತೆ ತಿರುಗಿದವು.

ಅರ್ಧ ಗಂಟೆಯಾದರೂ ಸಭೆಯಲ್ಲಿ ಯಾರೊಬ್ಬರೂ ಮಾತು ಆರಂಭಿಸಲಿಲ್ಲ, ಮಾತನಾಡಲು ಏನೂ ಉಳಿದಿರಲಿಲ್ಲ.

ಕೊನೆಗೆ, ‘ದೊಡ್ಡವರು’ ಸಣ್ಣದಾಗಿ ಕೆಮ್ಮಿ, ‘ಚುನಾವಣೆ ಸೋಲಿನಿಂದ ಯಾರೂ ವಿಚಲಿತರಾಗಬೇಡಿ. ಇಂದಿನ ಸೋಲೇ ಮುಂದಿನ ಸವಾಲು’ ಎಂದಷ್ಟೇ ಹೇಳಿ ಸಭೆ ಮುಗಿಸಿ ಹೊರನಡೆದರು.

ಸಂಗತ

ಕಲಿಸುವ ದನಿ ಉಡುಗದಿರಲಿ

ಶಿಕ್ಷಕರ ಮೇಲೆ ಬೀಳುವ ಸತತ ಒತ್ತಡದಿಂದ ಮಕ್ಕಳ ಕಲಿಕೆಗೆ ಹಿನ್ನಡೆ ಉಂಟಾಗುತ್ತಿದೆಯೇ ಎಂಬ ಬಗ್ಗೆ ಸಮಗ್ರವಾದ ಅಧ್ಯಯನ ನಡೆಯಬೇಕಿದೆ

• ಸದಾಶಿವ್ ಸೊರಟೂರು

ಎರಡೂವರೆ ತಿಂಗಳ ಅವಧಿಯಲ್ಲಿ ನನ್ನ ಮಿತ್ರಬಳಗದಲ್ಲಿ ನಾಲ್ಕು ಜನ ಹೃದಯಾಘಾತದಿಂದ ತೀರಿಹೋದರು. ಸೋಜಿಗವೆಂದರೆ ಆ ನಾಲ್ಕು ಮಂದಿಯೂ ಶಿಕ್ಷಕರು. ಮೂವರು ಸರ್ಕಾರಿ ಶಾಲೆಯಲ್ಲಿ, ಒಬ್ಬರು ಖಾಸಗಿ ಶಾಲೆಯಲ್ಲಿ ಕರ್ತವ್ಯದಲ್ಲಿದ್ದವರು. ಹೃದಯಾಘಾತದ ಸಾವುಗಳು ಈ ಹೊತ್ತಿನಲ್ಲಿ ಸಾಮಾನ್ಯ ಎಂದುಕೊಂಡರೂ ನನ್ನ ಸ್ನೇಹವಲಯದಲ್ಲಿ ನಾಲ್ವರು ಶಿಕ್ಷಕರು ಅತ್ಯಂತ ಕಡಿಮೆ ಅವಧಿಯಲ್ಲಿ ಈ ರೀತಿ ಹೃದಯಾಘಾತಕ್ಕೆ ಈಡಾಗಿರುವುದು ಬರೀ ಕಾಕತಾಳೀಯವೇ ಅಥವಾ ಅವರ ವೃತ್ತಿಬದುಕಿನ ಒತ್ತಡದಿಂದ ಏನಾದರೂ ಘಟಿಸಿಹೋದದ್ದೇ ಎಂಬಂಥ ಯೋಚನೆಯೊಂದು ಬಂದುಹೋಯಿತು.

ಕರ್ನಾಟಕದ ಗ್ರಾಮೀಣ ಭಾಗದ ಶಾಲಾ ಶಿಕ್ಷಕರಲ್ಲಿ ಉದ್ಯೋಗ ಸಂಬಂಧಿ ಒತ್ತಡದ ಕುರಿತಾಗಿ 2020ರಲ್ಲಿ ವಿವರವಾದ ಅಧ್ಯಯನವೊಂದು ಪ್ರಕಟವಾಗಿದೆ. ಚಿತ್ರದುರ್ಗ ಜಿಲ್ಲೆಯ ಕೆಲವು ಶಾಲೆಗಳನ್ನು, ನೂರಾರು ಶಿಕ್ಷಕರನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅಧ್ಯಯನದಿಂದ ಹೊರಬಂದ ವಿಚಾರಗಳು ನಿಜಕ್ಕೂ ಗಾಬರಿ ಹುಟ್ಟಿಸುವಂತಹವು.

ಶಿಕ್ಷಕರ ಬಹುತೇಕ ಆರೋಗ್ಯದ ಸಮಸ್ಯೆಗಳಿಗೆ ಅವರ ವೃತ್ತಿಯ ಒತ್ತಡವೇ ಪ್ರಮುಖವಾದದ್ದೆಂದು ಹೇಳುತ್ತದೆ ಆ ಅಧ್ಯಯನ. ರಕ್ತದೊತ್ತಡ, ಮಧುಮೇಹ, ಮೂಳೆ-ಸಂಧಿ ಸಮಸ್ಯೆಗಳು (ಶೇ 31.4), ಧ್ವನಿಸಂಬಂಧಿ ತೊಂದರೆ (ಶೇ 32.4), ಉಸಿರಾಟದ ತೊಂದರೆ (ಶೇ 26.5) ಮತ್ತು ಮಾನಸಿಕ ತೊಂದರೆಯಂತಹವುಗಳಿಗೆ ಒಳಗಾದವರ ಬಗೆಗೆ ಅಧ್ಯಯನವು ಮಾಹಿತಿ ನೀಡುತ್ತದೆ.

2022ರಲ್ಲಿ ಶಿಕ್ಷಣ ಇಲಾಖೆಯು ರಾಜ್ಯದಾದ್ಯಂತ ಶಾಲಾ ಶಿಕ್ಷಕಿಯರ ಆರೋಗ್ಯ ತಪಾಸಣೆ ನಡೆಸಿತು. ಶೇ 42ರಷ್ಟು ಶಿಕ್ಷಕಿಯರು ಅಧಿಕ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿತು. ಅದರ ಜೊತೆ ಇನ್ನಿತರ ಕಾಯಿಲೆಗಳೂ ಪತ್ತೆಯಾದವು. ತಪಾಸಣೆ ಮಾಡಿದ ವೈದ್ಯರು ಇದಕ್ಕೆ ವೃತ್ತಿಸಂಬಂಧಿತ ಒತ್ತಡವೂ ಪ್ರಮುಖ ಕಾರಣ ಎಂದು ತಿಳಿಸಿದ್ದಾರೆ.

ಈ ಎರಡೂ ಅಧ್ಯಯನಗಳು ಶಿಕ್ಷಕರ ಇಂತಹ ಅನಾರೋಗ್ಯಕರ ಬದುಕಿಗೆ ವೃತ್ತಿಯೊಳಗೆ ಪ್ರಧಾನ ಎನಿಸುವ ಕೆಲವು ಕಾರಣಗಳನ್ನು ಪಟ್ಟಿ ಮಾಡಿಕೊಟ್ಟಿವೆ. 2020ರ ಅಧ್ಯಯನವು ಹೇಳುವಂತೆ, ಸಮಾನವಲ್ಲದ ಕೆಲಸ ಹಂಚಿಕೆ, ದಿನಕ್ಕೆ ಐದಕ್ಕಿಂತ ಹೆಚ್ಚು ತರಗತಿಗಳನ್ನು ತೆಗೆದುಕೊಳ್ಳುವುದು, 30ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ತರಗತಿ ನಡೆಸುವುದು, ನಿತ್ಯ 30 ನಿಮಿಷಕ್ಕಿಂತ ಹೆಚ್ಚು ಹೊತ್ತು ಪ್ರಯಾಣ ಮಾಡುವುದು, ಸರಿಯಾಗಿ ದಕ್ಕದ ಉದ್ಯೋಗ ತೃಪ್ತಿ... ಇವೆಲ್ಲವೂ ಶಿಕ್ಷಕರಲ್ಲಿ ಅತೀವ ಒತ್ತಡವನ್ನು ಉಂಟು ಮಾಡಿ ಅನಾರೋಗ್ಯಕ್ಕೆ ಕಾರಣವಾಗಬಹುದೆಂದು ಅಧ್ಯಯನ ಎಚ್ಚರಿಸಿದೆ.

ಶಿಕ್ಷಕಿಯರು ಪ್ರತಿದಿನ ಸರಿಯಾಗಿ ವ್ಯಾಯಾಮ ಮಾಡದಿರುವುದು, ತುಂಬಾ ದೂರದ ಊರುಗಳಿಂದ ಶಾಲೆಗಳಿಗೆ ಪ್ರಯಾಣಿಸುವುದು, ಸತತ ಮನೆ ಕೆಲಸದ ಒತ್ತಡ, ಸಂಸಾರ ನಿರ್ವಹಣೆ, ಕುಟುಂಬದೊಂದಿಗೆ ಬೆರೆಯಲು ಸಮಯ ಸಿಗದಿರುವುದು, ಶಾಲೆಯಲ್ಲಿನ ಕೆಲಸದ ಒತ್ತಡದಂತಹ ಕಾರಣಗಳಿಂದ ದೀರ್ಘಕಾಲ ಕಾಡುವ ಕಾಯಿಲೆಗಳಿಗೆ ಒಳಗಾಗಿದ್ದಾರೆ ಎನ್ನುತ್ತಾರೆ ವೈದ್ಯರು.

ಶಿಕ್ಷಕ ಸಮೂಹದಿಂದ ಇತ್ತೀಚೆಗೆ ತಮ್ಮ ತಮ್ಮ ಕಾರ್ಯದ ಒತ್ತಡದ ಕುರಿತಾಗಿ ಅನೇಕ ದೂರುಗಳು ಕೇಳಿಬರುತ್ತಿವೆ. ಫಲಿತಾಂಶದ ಒತ್ತಡ, ಅದಕ್ಕಾಗಿ ಮುಂಜಾನೆಯಿಂದ ಸಂಜೆಯವರೆಗೂ ನಿರಂತರ ತರಗತಿಗಳು, ಬಿಸಿಯೂಟದ ಜವಾಬ್ದಾರಿ, ಮೊಟ್ಟೆ-ಹಾಲು ಹಂಚಿಕೆ, ಹಲವು ತರಹದ ಆನ್‌ಲೈನ್ ನೋಂದಣಿಯಂತಹ ಕೆಲಸಗಳು, ಕೆಲವು ಇಲಾಖೆಯೇತರ ಕೆಲಸಗಳು, ಹತ್ತಾರು ಕಾರ್ಯಕ್ರಮಗಳು... ಹೀಗೆ ಬೆಳೆಯುತ್ತಾ ಹೋಗುತ್ತದೆ ಅವರ ದೂರಿನ ಪಟ್ಟಿ.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದೆ. ಶಿಕ್ಷಕರ ಕೊರತೆಗೆ ಅನುಗುಣವಾಗಿ ಅತಿಥಿ ಶಿಕ್ಷಕರನ್ನೂ ನೀಡಲಾಗುತ್ತಿದೆ. ಮಕ್ಕಳ ಕಲಿಕೆ ಮತ್ತು ಫಲಿತಾಂಶ ಕೂಡ ಹೇಳಿಕೊಳ್ಳುವಷ್ಟು ಗುಣಾತ್ಮಕವಾಗಿಲ್ಲ. ಆದಾಗ್ಯೂ ಶಿಕ್ಷಕರಿಗೆ ಎಂತಹ ಒತ್ತಡ ಎಂಬ ಮಾತುಗಳೂ ಕೇಳಿಬರುತ್ತವೆ.

ಈಗಾಗಲೇ ಶಿಕ್ಷಕರು ತಮ್ಮ ವೃತ್ತಿಸಂಬಂಧಿತ ಒತ್ತಡ ಗಳನ್ನು ಎದುರಿಸುತ್ತಿರುವುದು ಅಲ್ಲಲ್ಲಿ ಕೆಲವು ಅಧ್ಯಯನಗಳಿಂದ ಸಾಬೀತಾಗಿದೆ. ಒತ್ತಡವು ದಯಪಾಲಿಸುವ ಅನಾರೋಗ್ಯದಿಂದ ಉತ್ತಮ ಕಾರ್ಯ ನಿರ್ವಹಣೆ ಕಷ್ಟಸಾಧ್ಯವಾಗುವುದೇ? ಅದರಿಂದ ಮಕ್ಕಳ ಕಲಿಕೆಗೆ ಹಿನ್ನಡೆ ಉಂಟಾಗುತ್ತಿದೆಯೇ? ಇತ್ತ ಉತ್ತಮ ಕಲಿಕೆಯೂ ಇಲ್ಲ, ಅತ್ತ ಒತ್ತಡರಹಿತ ಕರ್ತವ್ಯವೂ ಇಲ್ಲ. ಅಂದಮೇಲೆ ನಿಜವಾದ ಸಮಸ್ಯೆ ಇರುವುದು ಎಲ್ಲಿ? ಖಂಡಿತ ಇದರ ಕುರಿತಾಗಿ ಸಮಗ್ರವಾದ ಅಧ್ಯಯನವೊಂದು ಆಗಬೇಕಿದೆ. ಕಾರಣ ಗೊತ್ತಾದ ಮೇಲೆ ಅದಕ್ಕೆ ಪರಿಹಾರ ಕಂಡುಕೊಳ್ಳುವುದು ಎಷ್ಟು ಹೊತ್ತಿನ ಮಾತು.

ಕಲಿಕೆ ಎಂಬುದು ಯಾವತ್ತೂ ಒಂದು ಮುಕ್ತ ವಾತಾವರಣದಲ್ಲಿ ಆಗಬೇಕಾದದ್ದು. ಕಲಿಯುವವರು ಮತ್ತು ಕಲಿಸುವವರು ಇಬ್ಬರೂ ಲವಲವಿಕೆಯಿಂದ ಇದ್ದರೆ ಮಾತ್ರ ಒಂದೊಳ್ಳೆ ಕಲಿಕೆ ಸಾಧ್ಯ.

ಮನುಷ್ಯ ಕೆಲಸಕ್ಕೆ ಹೋಗುವುದು ತಾನು ಖುಷಿಯಿಂದ ಬದುಕಬೇಕೆಂಬ ಉದ್ದೇಶದಿಂದ. ಆದರೆ ಕೆಲಸದ ಒತ್ತಡವೇ ಬದುಕನ್ನು ಕಸಿಯುವಂತಾದರೆ ಅದಕ್ಕಿಂತ ದುರ್ದೈವದ ಸಂಗತಿ ಮತ್ತೊಂದಿಲ್ಲ. ಯಶಸ್ವಿ ಕಲಿಕೆಯೂ ಆಗಬೇಕು, ಮೇಷ್ಟ್ರ ಬದುಕು ಚೆಂದವಾಗಬೇಕು. ಅಂತಹದ್ದೊಂದು ಹೊಸ ದಾರಿಯನ್ನು ನಾವು ಕಂಡುಕೊಳ್ಳಬೇಕು.

ಲೇಖಕ: ಸರ್ಕಾರಿ ಪ್ರೌಢಶಾಲೆಯೊಂದರ ಶಿಕ್ಷಕ

ವಾಚಕರ ವಾಣಿ

ಮೂಕಪ್ರಾಣಿಗಳನ್ನು ದೂರುವುದರಲ್ಲಿ ಅರ್ಥವಿದೆಯೇ?

ಮನೆಯಲ್ಲಿ ಮೂತ್ರ ವಿಸರ್ಜಿಸಿದ ಕಾರಣಕ್ಕೆ ಬೆಕ್ಕಿನ ಮರಿಗೆ ಬೆಂಗಳೂರಿನಲ್ಲಿ ಯುವಕನೊಬ್ಬ ಕಾಲಿನಿಂದ ಒದ್ದು ಗಾಯ ಮಾಡಿರುವ ಸಂಬಂಧ, ಆತನ ಜೊತೆಯಲ್ಲಿ ವಾಸವಿರುವ ಮತ್ತೊಬ್ಬ ಯುವಕ ದೂರು ನೀಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 2). ಈ ವಿಚಾರ ಪೊಲೀಸ್ ಠಾಣೆಯ ಮೆಟ್ಟಿಲೇರಿರುವುದು ಆಶ್ಚರ್ಯಕರ ಸಂಗತಿ. ಪ್ರಾಣಿ-ಪಕ್ಷಿಗಳೋ ಜಾಗ ಯಾವುದೇ ಇರಲಿ ತಮಗರಿವಿಲ್ಲದಂತೆ ಮಲ-ಮೂತ್ರ ವಿಸರ್ಜನೆ ಮಾಡುವುದು ಸಹಜ. ಪ್ರಜ್ಞಾವಂತ ಮನುಷ್ಯರೇ ಸದಾ ಜನ ಓಡಾಡುವ ರಸ್ತೆಬದಿಯಲ್ಲೇ ಮೂತ್ರ ವಿಸರ್ಜಿಸುವ ಬಗ್ಗೆ ದೂರುಗಳು ಕೇಳಿಬರುತ್ತಿರುತ್ತವೆ. ಉತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳವಾದ ಉಳವಿಗೆ ಇತ್ತೀಚೆಗೆ ಹೋಗಿದ್ದಾಗ, ದರ್ಶನ ಮುಗಿಸಿ ನಾವಿದ್ದ ಕೊಠಡಿಗೆ ತೆರಳುತ್ತಿದ್ದೆವು. ಆಗ ಮುಖ್ಯ ರಸ್ತೆಯಲ್ಲಿ ನಿಂತಿದ್ದ ಟಿ.ಟಿ. ವಾಹನದಲ್ಲಿದ್ದವರು ಮೂಗು, ಬಾಯಿ ಮುಚ್ಚಿಕೊಂಡು, ಕೆಲವರು ಕೆಮ್ಮುತ್ತಾ ಇಳಿಯುತ್ತಿದ್ದರು. ಕಾರಣ ಕೇಳಿದಾಗ, ‘ಅಂಥದ್ದೇನಿಲ್ಲ, ನಮ್ಮಲ್ಲಿದ್ದ ಒಬ್ಬರು ಹೊಲಸು ತುಳಿದುಬಂದಿದ್ದರಿಂದ ವಾಹನದಲ್ಲಿ ತುಂಬಾ ವಾಸನೆ ಆವರಿಸಿತ್ತು, ಸ್ವಚ್ಛ ಮಾಡಲು ಇಳಿಯಬೇಕಾಯಿತು’ ಎಂದರು. ರಸ್ತೆ ಪಕ್ಕದಲ್ಲಿಯೇ ಬಯಲು ಬಹಿರ್ದೆಸೆ ಮಾಡಿದ್ದುದು ಕಂಡುಬಂತು. ಅದೂ ದೇವಾಲಯದ ಸನಿಹದಲ್ಲೇ!

ಕೆಲವರು ಮಾಡುವ ಇಂತಹ ಅಸಹ್ಯಕರ ಕೃತ್ಯಗಳಿಗೆ ಹೊಣೆ ಯಾರು? ಬಯಲು ಬಹಿರ್ದೆಸೆಯು ರೋಗರುಜಿನಗಳಿಗೆ ಕಾರಣವಾಗುತ್ತದಾದ್ದರಿಂದ, ಈ ಬಗೆಗಿನ ದುಷ್ಪರಿಣಾಮದ ಬಗ್ಗೆ ಹಲವು ರೀತಿಯಲ್ಲಿ ಜನರ ಗಮನ ಸೆಳೆಯಲಾಗುತ್ತದೆ. ಆದರೂ ಅರಿವುಳ್ಳವರೇ ಹೀಗೆ ಅಜ್ಞಾನ ಪ್ರದರ್ಶಿಸುತ್ತಾರೆ. ಇನ್ನು ಪ್ರಾಣಿ-ಪಕ್ಷಿಗಳನ್ನು ಇದಕ್ಕಾಗಿ ದೂರುವುದರಲ್ಲಿ ಅರ್ಥವಿದೆಯೇ?

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಅಭಿವೃದ್ಧಿಗೆ ಮಾರಕವಾದ ಹೇಳಿಕೆ

‘ಭಾರತೀಯ ಸಮಾಜ ಉಳಿಯಬೇಕಾದರೆ ಪ್ರತಿ ದಂಪತಿ ಕನಿಷ್ಠ ಮೂವರು ಮಕ್ಕಳನ್ನು ಹೊಂದಬೇಕು’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಕರೆ ನೀಡಿರುವುದು (ಪ್ರ.ವಾ., ಡಿ. 2) ಅವೈಜ್ಞಾನಿಕ ಹಾಗೂ ಒಂದು ದೇಶದ ಅಭಿವೃದ್ಧಿಗೆ ಮಾರಕವಾಗುವಂಥದ್ದು. ನಾಗಾಲೋಟದಿಂದ ಓಡುತ್ತಿರುವ ಈ ನಾಗರಿಕ ಸಮಾಜದಲ್ಲಿ ಒಂದು ಮಗುವಿಗೇ ಗುಣಮಟ್ಟದ ಶಿಕ್ಷಣ, ಆರೋಗ್ಯದಂತಹ ಮೂಲ ಸೌಕರ್ಯಗಳನ್ನು ಒದಗಿಸಿ ಸದೃಢವಾಗಿ ಬೆಳೆಸಲು ಪೋಷಕರು ಹೆಣಗಾಡುತ್ತಿರುವುದನ್ನು ನೋಡುತ್ತಿದ್ದೇವೆ. ಹೀಗಿರುವಾಗ, ಭಾಗವತ್ ಅವರ ಈ ಹೇಳಿಕೆ ತುಂಬಾ ಅಪಾಯಕಾರಿಯಾದದ್ದು ಎನಿಸುತ್ತದೆ. ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿರುವುದನ್ನು ಹಲವಾರು ಸಮೀಕ್ಷಾ ವರದಿಗಳು ತಿಳಿಸಿವೆ. ಈಗ ಇರುವ ಮಕ್ಕಳಿಗೇ ಸೂಕ್ತ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗದೇ ಇರುವಾಗ ಭಾಗವತ್ ಅವರ ಹೇಳಿಕೆ ಜಾರಿಗೆ ಬಂದರೆ ಎಂತಹ ದುಃಸ್ಥಿತಿ ಎದುರಾಗಬಹುದು? ಇದೆಲ್ಲವನ್ನೂ ಗಮನಿಸಿಯೇ ಸರ್ಕಾರ ಕುಟುಂಬ ಯೋಜನೆ ಜಾರಿಗೆ ತಂದು ಹಲವಾರು ವರ್ಷಗಳೇ ಸಂದುಹೋಗಿವೆ.

ಇನ್ನು ‘ಭಾರತೀಯ ಸಮಾಜ’ ಎಂದರೆ ಭಾಗವತ್ ಅವರ ದೃಷ್ಟಿಯಲ್ಲಿ ಯಾವುದು ಎನ್ನುವ ಪ್ರಶ್ನೆ ಮುನ್ನೆಲೆಗೆ ಬರುತ್ತದೆ. ಅವರ ‘ಭಾರತೀಯ ಸಮಾಜ’ದ ಕಲ್ಪನೆ ಜಾತ್ಯತೀತವಾದದ್ದೇ ಅಥವಾ ಅವರು ಪ್ರತಿನಿಧಿಸುವ ಹಿಂದೂ ಸಮಾಜಕ್ಕೆ ಮಾತ್ರ ಸೀಮಿತವಾದದ್ದೇ ಎಂಬ ಅಂಶ ಅವರ ಹೇಳಿಕೆಯಲ್ಲಿ ಸ್ಪಷ್ಟವಾಗಿಲ್ಲ. ಅದು ಹಿಂದೂ ಸಮಾಜಕ್ಕೆ ಮಾತ್ರ ಸೀಮಿತವಾಗಿದ್ದೇ ಆದರೆ ಹಿಂದೂ ತುಷ್ಟೀಕರಣದ ಒಂದು ಭಾಗವಾಗಿ ಹಾಗೂ ದೇಶದ ಅಭಿವೃದ್ಧಿಗೆ ಮಾರಕವಾಗಿರುವ ಒಂದು ಹೇಳಿಕೆಯಾಗಿ ಇದನ್ನು ಪರಿಗಣಿಸಬೇಕಾಗುತ್ತದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಚೇತೋಹಾರಿ ಉಪದೇಶಾಮೃತ ಹರಿದುಬರಲಿ

ಅಭಿನವ ಗವಿಸಿದ್ಧೇಶ್ವರ ಸ್ವಾಮಿಯವರ ‘ನುಡಿಬೆಳಗು’ ಅಂಕಣ ಬರಹಗಳನ್ನು ಓದಿದಾಗ, ಬಹುತೇಕ ಬಾರಿ ನಮ್ಮ ಮನಸ್ಸು ಬೆಳಗುವುದರ ಬದಲು ಅತ್ಯಂತ ನೋವಿನಲ್ಲಿ ಮುದುಡುತ್ತದೆ. ಕಾರಣ, ಸಾವನ್ನು ಕುರಿತ ಬರಹಗಳೇ ಹೆಚ್ಚಾಗಿರುತ್ತವೆ. ನಿತ್ಯ ಜೀವನದ ಆಗುಹೋಗುಗಳನ್ನು ಸಾವಿನೊಂದಿಗೆ ಸಮೀಕರಿಸಿ ಹೇಳುವ ಪರಿ ಅತ್ಯಂತ ವೇದನೆ ತರಿಸುತ್ತದೆ. ಸಾವು ನೈಸರ್ಗಿಕ ವಿದ್ಯಮಾನ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಎಂದೋ ಒಂದು ದಿನ ಸಾಯುತ್ತೇವೆ ಎಂದು, ಅಂಗೈಯಲ್ಲಿರುವ ನಮ್ಮ ಸುಂದರ ಬದುಕನ್ನು ಈಗಿನಿಂದಲೇ ಸಜ್ಜುಗೊಳಿಸಬೇಕೇಕೆ?

ಎಲ್ಲರೊಂದಿಗೆ ಪ್ರೀತಿಯಿಂದ, ಸಾಮರಸ್ಯದಿಂದ ಬೆರೆತು ಬಾಳುವುದೇ ಜೀವನ. ಹೀಗಿರುವಾಗ, ಜೀವನವನ್ನು ಸಾವಿನೊಂದಿಗೆ ಸಮೀಕರಿಸಿ ಹೇಳುವುದು ಬೇಡ. ಇಂತಹ ಬರಹಗಳನ್ನು ಓದಿದಾಗ, ನಮ್ಮ ಕುಟುಂಬದಲ್ಲಿ ಕಳೆದುಕೊಂಡಿರುವವರ ನೆನಪು ಮರುಕಳಿಸಿ, ಇಡೀ ದಿನ ದುಃಖಪಡುವಂತೆ ಆಗುತ್ತದೆ. ಇದು ನನ್ನ ಸ್ವ ಅನುಭವ. ಗುರುಗಳೇ, ಸಾವು ಎಂಬ ಪದವನ್ನು ಪ್ರಸ್ತಾಪಿಸದೆ, ಆಶಾದಾಯಕವಾದ, ಭರವಸೆಯುಕ್ತ, ಚೇತೋಹಾರಿ ಉಪದೇಶಾಮೃತ ತಮ್ಮಿಂದ ಹರಿದುಬರಲಿ. ಜೀವನದ ಜಂಜಾಟಗಳಿಗೆ ಹೊಂಬೆಳಕಿನ ದಾರಿ ತೋರಿಸುವಂತಾಗಲಿ.

ಕೆ.ಎಂ.ರುಕ್ಮಿಣಿ ವೆಂಕುಮಾರ್, ಬೆಂಗಳೂರು

ಜಾತಿ, ಧರ್ಮದ ಆಧಾರದಲ್ಲಿ ಜಯಂತಿ ತರವೇ?

ದೇಶದ ಮೊದಲ ಶಿಕ್ಷಣ ಸಚಿವ ಮೌಲಾನಾ ಅಬುಲ್ ಕಲಾಂ ಆಜಾದ್ ಅವರ ಜಯಂತಿಯನ್ನು ಆಚರಿಸಲು ಅಧಿಕಾರಿಗಳು ಅನುಮತಿ ನೀಡದಿರುವುದು ಮತ್ತು ಅದನ್ನು ಪುರಸಭೆಯ ಮುಸ್ಲಿಂ ಸದಸ್ಯರು ಪ್ರತಿಭಟಿಸಿರುವುದು ತೇರದಾಳದಿಂದ ವರದಿಯಾಗಿದೆ. ನಾವು ಶಾಲೆ- ಕಾಲೇಜು ಓದುವಾಗ ರಾಷ್ಟ್ರೀಯ ನಾಯಕರ ಜಾತಿ, ಧರ್ಮದ ವಿಚಾರವೇ ಬರುತ್ತಿರಲಿಲ್ಲ. ನಾನು ಓದಿದ್ದು ಲಿಂಗಾಯತರ ಸಂಸ್ಥೆಯಾದ ಪಿ.ಡಿ.ಎ. ಎಂಜಿನಿಯರಿಂಗ್ ಕಾಲೇಜಿನಲ್ಲಿ. ವಾಸವಿದ್ದದ್ದು ಕಾಲೇಜಿನ ಎಂ.ಎ.ಎಂ. ಅಂದರೆ ಮೌಲಾನಾ ಆಜಾದ್ ಮೆಮೋರಿಯಲ್ ಹಾಸ್ಟೆಲ್‌ನಲ್ಲಿ. ಮೌಲಾನಾ ಅವರು ಮೂಲತಃ ಮೆಕ್ಕಾದವರು. ವಿದ್ವಾಂಸರಾಗಿದ್ದ ಅವರಿಗೆ ಪಾಕಿಸ್ತಾನಕ್ಕೆ ಬರಲು ಜಿನ್ನಾ ಬಹಳ ಒತ್ತಡ ಹಾಕಿದ್ದರು. ಪಾಕಿಸ್ತಾನ ಸೇರಿದರೆ ಅವರನ್ನೇ ಪ್ರಧಾನಿ ಮಾಡುವುದಾಗಿ ಸಹ ಹೇಳಿದ್ದರು. ಆದರೂ ಅವರು ಭಾರತ ಬಿಟ್ಟು ಹೋಗಲು ಒಪ್ಪಲಿಲ್ಲ. ಮುಸ್ಲಿಂ ಅನ್ನುವ ಕಾರಣಕ್ಕೆ ಇವರ ಜಯಂತಿಯನ್ನು ವಿರೋಧಿಸುವುದು ಎಲ್ಲ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡುವ ಅವಮಾನ. ಈಗ ಕಿತ್ತೂರು ಚೆನ್ನಮ್ಮ, ಕಾಳಿದಾಸ, ವಾಲ್ಮೀಕಿ, ಟಿಪ್ಪು, ಶಿವಾಜಿ, ವಿವೇಕಾನಂದ ಎಲ್ಲರನ್ನೂ ಒಂದೊಂದು ಜಾತಿ, ಪಕ್ಷದವರು ಗುತ್ತಿಗೆ ಹಿಡಿದಿದ್ದಾರೆ. ವೀರ ವನಿತೆ ಒನಕೆ ಓಬವ್ವನ ಜಾತಿಯನ್ನು ಸಹ ಪತ್ತೆ ಹಚ್ಚಿದ್ದಾರೆ. ಇದೆಲ್ಲ ಸಮಾಜ ಅವನತಿಯ ಹಾದಿ ಹಿಡಿದಿರುವುದರ ಲಕ್ಷಣ.

ಶಶಿಧರ ಪಾಟೀಲ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹುಸಿ ಬಾಂಬ್ ಕರೆ ಸರ್ಕಾರ, ಸಂಸ್ಥೆಗೆ ಹೊರೆ

ಭಾರತದ ದೇಶೀಯ ಅಂತರರಾಷ್ಟ್ರೀಯ ವಿಮಾನಗಳಿಗೆ ಭಾರಿ ಸಂಖ್ಯೆಯ ಬೆದರಿಕೆ ಕರೆಗಳು

ಭಾರತೀಯ ವಿಮಾನಯಾನ ಸೇವೆಗೆ ಹೊಸ ಸಮಸ್ಯೆಯೊಂದು ಎದುರಾಗಿದೆ. ವಿಮಾನಯಾನ ಸಂಸ್ಥೆಗಳಿಗೆ ಮತ್ತು ವಿಮಾನ ನಿಲ್ದಾಣಗಳಿಗೆ ಬಾಂಬ್ ಬೆದರಿಕೆ ಕರೆಗಳು ತೀವ್ರವಾಗಿ ಹೆಚ್ಚಳವಾಗಿದ್ದವು. ಬಂದುವೆಲ್ಲ ಹುಸಿ ಕರೆಗಳೇ. ಆದರೆ, ಅವು ಹುಸಿ ಎಂದು ಪತ್ತೆಯಾಗುವ ವೇಳೆಗೆ ಬಹಳ ಸಮಯ, ಶ್ರಮ, ಹಣ ವೆಚ್ಚವಾಗಿತ್ತು. ಜತೆಗೆ ವಿಮಾನ ಟಿಕೆಟ್‌ಗಾಗಿ ದುಬಾರಿ ಬೆಲೆ ತೆರುವ ಪ್ರಯಾಣಿಕರೂ ತೊಂದರೆ, ಆತಂಕ ಎದುರಿಸುವಂತಾಯಿತು. ಒಂದು ವರದಿಯ ಪ್ರಕಾರ, ಒಂದು ಹುಸಿ ಕರೆಯಿಂದ ವಿಮಾನಯಾನ ಸಂಸ್ಥೆ ಮತ್ತು ಸರ್ಕಾರದ ಮೇಲೆ ಸುಮಾರು ₹3 ಕೋಟಿ ಹೊರೆ ಬೀಳುತ್ತದೆ



ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಕರೆ ಬರುವುದು ಹೊಸದೇನಲ್ಲ. 2014ರಿಂದ 2017ರವರೆಗೆ ದೇಶದಲ್ಲಿ 120 ಹುಸಿ ಬಾಂಬ್ ಬೆದರಿಕೆ ಕರೆಗಳು ಬಂದಿದ್ದವು. ಅವುಗಳಲ್ಲಿ ಅರ್ಧದಷ್ಟು, ದೇಶದ ಎರಡು ಅತಿ ದೊಡ್ಡ ವಿಮಾನ ನಿಲ್ದಾಣಗಳಾದ ದೆಹಲಿ ಮತ್ತು ಮುಂಬೈನಲ್ಲಿ ದಾಖಲಾಗಿದ್ದವು. ಆದರೆ, ಇತ್ತೀಚೆಗೆ ಅದು ಸಮೂಹ ಸನ್ನಿಯ ರೀತಿಯಂತೆ ಆಗಿದೆ. ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ಸೇರಿದ ದೇಶೀಯ ಹಾಗೂ ಅಂತರರಾಷ್ಟ್ರೀಯ ವಿಮಾನಗಳಿಗೆ ಬರುತ್ತಿರುವ ಬಾಂಬ್ ಬೆದರಿಕೆ ಕರೆಗಳಲ್ಲಿ ಭಾರಿ ಹೆಚ್ಚಳವಾಗಿದೆ.

ಈ ವರ್ಷದ ಆರಂಭದಿಂದ ನವೆಂಬರ್ 14ರವರೆಗೆ 999 ಹುಸಿ ಬಾಂಬ್ ಬೆದರಿಕೆಯ ಕರೆಗಳು ಬಂದಿವೆ. ಅಕ್ಟೋಬರ್ ತಿಂಗಳ ಕೊನೆಯ ಎರಡು ವಾರಗಳಲ್ಲಿ 500 ಕರೆಗಳು ದಾಖಲಾಗಿವೆ. 2023ರಲ್ಲಿ ಬಂದಿದ್ದಕ್ಕಿಂತ 10 ಪಟ್ಟು ಹೆಚ್ಚಿನ ಕರೆಗಳು ಈ ವರ್ಷ ದಾಖಲಾಗಿವೆ.

ಸಾಮಾಜಿಕ ಜಾಲತಾಣಗಳು, ಇ-ಮೇಲ್, ಶೌಚಾಲಯಗಳಲ್ಲಿ ಬರೆಯುವ ಮೂಲಕ ಬಾಂಬ್ ಬೆದರಿಕೆಯನ್ನು ಒಡ್ಡಲಾಗುತ್ತಿದೆ. ಒಂದೇ 'ಎಕ್ಸ್' ಪೋಸ್ಟ್ ಮೂಲಕ ಹಲವು ವಿಮಾನಗಳಿಗೆ ಬೆದರಿಕೆ ಸಂದೇಶ ಒಡ್ಡಿರುವ ಘಟನೆಗಳೂ ನಡೆದಿವೆ. ಅಂಥ ಖಾತೆಗಳನ್ನು ನಿರ್ಬಂಧಿಸಿದರೆ, ಕಿಡಿಗೇಡಿಗಳು ಮತ್ತೊಂದು ಖಾತೆಯ ಮೂಲಕ ಬೆದರಿಕೆ ಸಂದೇಶ ರವಾನಿಸುತ್ತಿದ್ದಾರೆ.

ಮಾನಸಿಕ ಸಮಸ್ಯೆಗಳು, ತಕ್ಷಣ ಗಮನ ಸೆಳೆಯುವ ಪ್ರಯತ್ನ, ಕಿಡಿಗೇಡಿತನ, ವೈಯಕ್ತಿಕ ಸಮಸ್ಯೆಗಳು ಇವೇ ಮುಂತಾದ ಕಾರಣಗಳಿಂದ ಕೆಲವರು ಹುಸಿ ಬಾಂಬ್ ಬೆದರಿಕೆ ಕರೆ ಕಳಿಸುತ್ತಾರೆ ಎಂದು ವಿಶ್ಲೇಷಿಸಲಾಗಿದೆ. ಅಕ್ಟೋಬರ್ 17ರಂದು ಇದೇ ರೀತಿ ಎಕ್ಸ್‌ನಲ್ಲಿ ಹುಸಿ ಬಾಂಬ್ ಬೆದರಿಕೆ ಒಡ್ಡಿದ್ದ ಬಾಲಕನನ್ನು ವಶಕ್ಕೆ ಪಡೆಯಲಾಗಿತ್ತು.

ಬಾಂಬ್ ಬೆದರಿಕೆಗಳಿಂದ ವಿಮಾನಗಳ ಕಾರ್ಯನಿರ್ವಹಣೆಗೆ ಅಡ್ಡಿಯಾಗುತ್ತಿದೆ. ಇದರಿಂದಾಗಿ ಹಲವು ವಿಮಾನಗಳ ಮಾರ್ಗ ಬದಲಾವಣೆ ಮಾಡಲಾಗಿದೆ. ಹಲವು ವಿಮಾನಗಳನ್ನು ತುರ್ತಾಗಿ ಮತ್ತು ಮಾರ್ಗಮಧ್ಯದಲ್ಲಿಯೇ ಇಳಿಸಲಾಗಿದೆ. ಅಕ್ಟೋಬರ್ 20ರಂದು 24 ಹುಸಿ ಬಾಂಬ್ ಬೆದರಿಕೆ ಕರೆಗಳು ಬಂದಿವೆ. ಅಕ್ಟೋಬರ್ 29ರಂದು ಒಂದೇ ದಿನ ನೂರಕ್ಕೂ ಹೆಚ್ಚು ಹುಸಿ ಕರೆಗಳು ಬಂದಿವೆ.

ಶೀಘ್ರ ಪ್ರಯಾಣದ ಉದ್ದೇಶದಿಂದ ಬಂದಿದ್ದ ಪ್ರಯಾಣಕರಿಗೆ ಬೆದರಿಕೆ ಕರೆಗಳಿಂದಾಗಿ ತೊಂದರೆಯಾಗುತ್ತಿದೆ. ಅಕ್ಟೋಬರ್ ತಿಂಗಳಲ್ಲಿ 50 ಅಂತರರಾಷ್ಟ್ರೀಯ ವಿಮಾನಗಳು ಸೇರಿದಂತೆ 136 ವಿಮಾನಗಳ ಮಾರ್ಗಗಳನ್ನು ಬದಲಾಯಿಸಲಾಗಿದೆ. ಹಲವು ವಿಮಾನಗಳ ಹಾರಾಟವನ್ನು ರದ್ದುಪಡಿಸಲಾಗಿದೆ; ಕೆಲವು ವಿಮಾನಗಳ ಹಾರಾಟದ ಸಮಯ ಗಂಟೆಗಟ್ಟಲೇ ವಿಳಂಬವಾಗಿದೆ.

ದೇಶದಲ್ಲಿ 150ಕ್ಕೂ ಹೆಚ್ಚು ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ 33 ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಾಗಿವೆ. ಇವುಗಳ ಮೂಲಕ ಪ್ರತಿ ದಿನ 3,000ಕ್ಕೂ ಹೆಚ್ಚು ವಿಮಾನಗಳು ಹಾರಾಟ ನಡೆಸುತ್ತಿದ್ದು, ಕಳೆದ ವರ್ಷ 15 ಕೋಟಿ ಮಂದಿ ಪ್ರಯಾಣಿಸಿದ್ದರು.

ಹುಸಿ ಬಾಂಬ್ ಕರೆ ಯಾವಾಗ ಎಷ್ಟು?

2023	2024*
122	999

* ಜನವರಿಯಿಂದ ನವೆಂಬರ್ 14ರವರೆಗೆ

256 ಹುಸಿ ಬಾಂಬ್ ಕರೆಗೆ ಸಂಬಂಧಿಸಿದಂತೆ ಈ ವರ್ಷದ ಜನವರಿಯಿಂದ ನ.14ರವರೆಗೆ ದಾಖಲಿಸಲಾದ ಎಫ್‌ಐಆರ್‌ಗಳು

163 ಅಕ್ಟೋಬರ್ ತಿಂಗಳೊಂದರಲ್ಲೇ ದಾಖಲಿಸಲಾದ ಎಫ್‌ಐಆರ್‌ಗಳು

12 ಇಲ್ಲಿವರೆಗೆ ಬಂಧಿಸಲಾಗಿರುವ ಆರೋಪಿಗಳು

ಯಾವ ತಿಂಗಳು ಎಷ್ಟು ಕರೆ?

ತಿಂಗಳು	ಕರೆಗಳು
ಜನವರಿ	11
ಫೆಬ್ರುವರಿ	17
ಮಾರ್ಚ್	5
ಏಪ್ರಿಲ್	60
ಮೇ	26
ಜೂನ್	116
ಜುಲೈ	10
ಆಗಸ್ಟ್	21
ಸೆಪ್ಟೆಂಬರ್	15
ಅಕ್ಟೋಬರ್	666
ನವೆಂಬರ್*	52

* ನವೆಂಬರ್ 14ರವರೆಗೆ

ನೂರಾರು ಕೋಟಿ ನಷ್ಟ

ಬೆದರಿಕೆ ಹುಸಿ ಕರೆಗಳು ವಿಮಾನಯಾನ ಕಂಪನಿಗಳು, ವಿಮಾನ ನಿಲ್ದಾಣ ನಿರ್ವಹಣಾ ಸಂಸ್ಥೆಗಳು, ಭದ್ರತಾ ಸಂಸ್ಥೆಗಳು, ವಿಮಾನಯಾನ ಸಚಿವಾಲಯಕ್ಕೆ ಕೋಟ್ಯಂತರ ರೂಪಾಯಿ ನಷ್ಟವನ್ನು ಉಂಟು ಮಾಡುತ್ತವೆ. ಪ್ರಯಾಣಿಕರು ಕೂಡ ನಿಗದಿತ ಸಮಯಕ್ಕೆ ಗಮ್ಯಸ್ಥಾನ ತಲುಪದೆ ತೊಂದರೆಗೆ ಒಳಗಾಗುತ್ತಾರೆ. ಬೆದರಿಕೆ ಕರೆಯಿಂದಾಗಿ ವಿಮಾನ ಮಾರ್ಗ ಬದಲಾವಣೆ ಮಾಡಬೇಕಾಗಿ ಬಂದರೆ ಅಥವಾ ಸಮೀಪದ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಬೇಕಾಗಿ ಬಂದರೆ ವಿಮಾನಯಾನ ಸಂಸ್ಥೆಗೆ ಪ್ರತಿ ಗಂಟೆಗೆ ₹13 ಲಕ್ಷದಿಂದ ₹17 ಲಕ್ಷ ನಷ್ಟವಾಗುತ್ತದೆ ಎಂದು ಹೇಳಲಾಗುತ್ತಿದೆ. ಅಕ್ಟೋಬರ್ 14ರಂದು ಮುಂಬೈನಿಂದ ನ್ಯೂಯಾರ್ಕ್‌ಗೆ ಹೊರಟಿದ್ದ ಏರ್ ಇಂಡಿಯಾದ ಬೋಯಿಂಗ್ 777 ವಿಮಾನಕ್ಕೆ ಹುಸಿ ಬಾಂಬ್ ಕರೆ ಬಂದಿದ್ದರಿಂದ ವಿಮಾನದ ಮಾರ್ಗವನ್ನು ಬದಲಿಸಬೇಕಾಯಿತದಲ್ಲದೇ, ಸುರಕ್ಷಿತವಾಗಿ ಭೂಸ್ಪರ್ಶ ಮಾಡುವುದಕ್ಕಾಗಿ ವಿಮಾನದಲ್ಲಿದ್ದ ಇಂಧನವನ್ನೂ ಆಗಸದಲ್ಲಿ ಚೆಲ್ಲಬೇಕಾಯಿತು. ಏರ್ ಇಂಡಿಯಾಗೆ ಕನಿಷ್ಠ ಎಂದರೂ ₹3 ಕೋಟಿಯಷ್ಟು ನಷ್ಟವಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಈ ವರ್ಷದಲ್ಲಿ ಈವರೆಗೆ ಬಂದ ಹುಸಿ ಕರೆಗಳಿಂದಾಗಿ ಎಷ್ಟು ನಷ್ಟವಾಗಿದೆ ಎಂಬುದರ ನಿಖರ ಮಾಹಿತಿ ಲಭ್ಯವಿಲ್ಲ. ಕೆಲವು ಮಾಧ್ಯಮಗಳು ಈ ಬಗ್ಗೆ ವರದಿ ಮಾಡಿದ್ದು, ನೂರಾರು ಕೋಟಿ ನಷ್ಟವಾಗಿದೆ ಎಂದು ಹೇಳಿವೆ.

ದೆಹಲಿ, ಮಹಾರಾಷ್ಟ್ರದಲ್ಲಿ ಹೆಚ್ಚು

2023ರ ಜನವರಿಯಿಂದ ಈ ವರ್ಷದ ಮೇ 14ರವರೆಗೆ 1,121 ಹುಸಿ ಬಾಂಬ್ ಬೆದರಿಕೆ ಕರೆಗಳು ಬಂದಿವೆ. ಈ ಪೈಕಿ ದೆಹಲಿಗೆ ಗರಿಷ್ಠ 282 ಕರೆಗಳು ಬಂದಿದ್ದರೆ, ಮಹಾರಾಷ್ಟ್ರಕ್ಕೆ 244 ಕರೆಗಳು ಬಂದಿವೆ. ಕರ್ನಾಟಕ 99 ಬೆದರಿಕೆ ಕರೆಗಳನ್ನು ಸ್ವೀಕರಿಸಿದೆ. ಕೇರಳ (59), ತಮಿಳುನಾಡು (58) ನಂತರದ ಸ್ಥಾನಗಳಲ್ಲಿವೆ.

ಕಠಿಣ ಕ್ರಮಕ್ಕೆ ಮುಂದಾದ ಸರ್ಕಾರ

ಬೆದರಿಕೆ ಸಂದೇಶಗಳು ಮತ್ತು ಹುಸಿ ಬೆದರಿಕೆ ಸಂದೇಶಗಳನ್ನು ನಿಭಾಯಿಸಲು ನಾಗರಿಕ ವಿಮಾನಯಾನ ಸಚಿವಾಲಯವು ಇತ್ತೀಚೆಗೆ ತೀವ್ರ ಸಮಾಲೋಚನೆ ನಡೆಸುತ್ತಿದೆ. ವಿಮಾನ ಭದ್ರತಾ ನಿಯಮಗಳಿಗೆ ತಿದ್ದುಪಡಿ ತರುವುದು, ನಾಗರಿಕ ವಿಮಾನ ಸುರಕ್ಷತೆಗೆ ಭಂಗ ತರುವ ಕಾನೂನು ವಿರೋಧಿ ಚಟುವಟಿಕೆ ನಿಗ್ರಹ ಕಾಯ್ದೆ -1982ಕ್ಕೆ ತಿದ್ದುಪಡಿ ತರಲು ಚಿಂತಿಸಿದೆ. ಬೆದರಿಕೆ ಸಂದೇಶ ಕಳುಹಿಸುವವರನ್ನು ನೋ-ಫ್ಲೈ ಪಟ್ಟಿಗೆ ಸೇರಿಸಲು ಮತ್ತು ಸಂದೇಶ ಕಳುಹಿಸಿದವರನ್ನು ವಾರಂಟ್ ಇಲ್ಲದೇ ಬಂಧಿಸಲು ತಿದ್ದುಪಡಿಯಿಂದ ಸಾಧ್ಯವಾಗಲಿದೆ ಎನ್ನಲಾಗುತ್ತಿದೆ.

ಬಾಂಬ್ ಬೆದರಿಕೆ ಕರೆ: ನಿರ್ವಹಣೆ ಹೇಗೆ...

- ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯ ವಿಮಾನಯಾನ ಭದ್ರತೆಗೆ ಸಂಬಂಧಿಸಿದ ನಿಯಮಗಳನ್ನು ಆಧರಿಸಿ ವಿಮಾನಗಳು, ವಿಮಾನ ನಿಲ್ದಾಣಗಳ ಭದ್ರತೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ
- ಬಾಂಬ್ ಬೆದರಿಕೆ ಬಂದಾಗ ಪಾಲಿಸಲು ಪ್ರತ್ಯೇಕವಾದ ಶಿಷ್ಟಾಚಾರವಿದೆ. ಭಾರತದಲ್ಲಿ ನಾಗರಿಕ ವಿಮಾನಯಾನ ಭದ್ರತಾ ಸಂಸ್ಥೆಯು (ಬಿಸಿಎಎಸ್) ಬೆದರಿಕೆ ನಿರ್ವಹಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರೂಪಿಸಿದೆ
- ಪ್ರತಿ ವಿಮಾನ ನಿಲ್ದಾಣದಲ್ಲೂ ಬಾಂಬ್ ಬೆದರಿಕೆ ಪರಿಶೀಲನಾ ಸಮಿತಿ (ಬಿಟಿಎಸಿ) ಇರುತ್ತದೆ. ಬಾಂಬ್ ಬೆದರಿಕೆ ನಿರ್ವಹಣಾ ಯೋಜನೆ (ಬಿಟಿಸಿಪಿ) ಇರುತ್ತದೆ. ಅದರ ಪ್ರಕಾರವೇ ಭದ್ರತಾ ಕ್ರಮ ಕೈಗೊಳ್ಳಲಾಗುತ್ತದೆ. ಬೆದರಿಕೆ ಕರೆಯ ಸವಾಲನ್ನು ನಿಭಾಯಿಸಲಾಗುತ್ತದೆ
- ಬಾಂಬ್ ಬೆದರಿಕೆ ಪರಿಶೀಲನಾ ಸಮಿತಿ ಸಭೆ ಸೇರಿ, ಕರೆಯು ನಿರ್ದಿಷ್ಟ ಸ್ವರೂಪದ್ದೇ (ವಿಮಾನದ ಹೆಸರು/ಸಂಖ್ಯೆ, ಅದರ ಪ್ರಯಾಣದ ಹಾದಿ, ಅವಧಿ ಮುಂತಾದ ಸ್ಪಷ್ಟ ವಿವರಗಳನ್ನು ಹೊಂದಿರಬೇಕು) ಅಥವಾ ನಿರ್ದಿಷ್ಟ ಸ್ವರೂಪದ್ದು ಅಲ್ಲವೇ (ವಿಮಾನದ ಬಗ್ಗೆ ಸ್ಪಷ್ಟ ವಿವರಗಳು ಇರುವುದಿಲ್ಲ) ಅಥವಾ ವಿಮಾನದ ಒಳಗಿದ್ದವರಿಂದ ಬೆದರಿಕೆ ಬಂದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ
- ನಂತರ ಪೈಲಟ್‌ನ ಗಮನಕ್ಕೆ ತರುತ್ತಾರೆ. ಬೆದರಿಕೆ ಕರೆ ನಿರ್ದಿಷ್ಟವೇ ಅಥವಾ ಅಲ್ಲವೇ ಎಂಬುದರ ಮೇಲೆ ವಿಮಾನವನ್ನು ವಾಪಸ್ ಕರೆಸಿಕೊಳ್ಳಬೇಕೇ, ಮಾರ್ಗವನ್ನು ಬದಲಿಸಬೇಕೇ ಅಥವಾ ಹತ್ತಿರದ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿಸಬೇಕೇ ಎಂಬುದನ್ನು ನಿರ್ಧರಿಸಲಾಗುತ್ತದೆ
- ವಿಮಾನವು ಭಾರತದ ವಾಯುಪ್ರದೇಶದ ಹೊರಗಡೆ ಹಾರಾಟ ನಡೆಸುತ್ತಿದ್ದಾಗ ಬೆದರಿಕೆ ಕರೆ ಬಂದರೆ ವಿಮಾನ ಸಂಚಾರ ನಿಯಂತ್ರಣ ಕೇಂದ್ರವನ್ನು ಸಂಪರ್ಕಿಸಲು ಪೈಲಟ್‌ಗಳಿಗೆ ಸೂಚಿಸಲಾಗುತ್ತದೆ
- ಬೆದರಿಕೆ ಕರೆ ಬಂದಿರುವುದನ್ನು ಬಹುತೇಕ ಸಂದರ್ಭಗಳಲ್ಲಿ ಪೈಲಟ್‌ಗಳು ಪ್ರಯಾಣಿಕರಿಗೆ ತಿಳಿಸುವುದಿಲ್ಲ. ತುರ್ತು ಪರಿಸ್ಥಿತಿ ಇದೆ ಎಂದಷ್ಟೇ ಮಾಹಿತಿ ನೀಡುತ್ತಾರೆ
- ಕೆಲವು ಸಂದರ್ಭದಲ್ಲಿ ಆಗಸದಲ್ಲಿ ಹಾರಾಡುತ್ತಿರುವ ವಿಮಾನದ ಭದ್ರತೆಗಾಗಿ ಯುದ್ಧವಿಮಾನಗಳನ್ನೂ ನಿಯೋಜಿಸಲಾಗುತ್ತದೆ
- ವಿಮಾನವನ್ನು ಸಮೀಪದ ವಿಮಾನ ನಿಲ್ದಾಣ ಅಥವಾ ಸೂಚಿತ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಲಾಗುತ್ತದೆ
- ವಿಮಾನ ಇಳಿಯುವ ವೇಳೆಗಾಗಲೇ ಅಗ್ನಿಶಾಮಕ ದಳದ ಸಿಬ್ಬಂದಿ, ಆಂಬುಲೆನ್ಸ್, ಶ್ವಾನದಳ, ಬಾಂಬ್ ನಿಷ್ಕ್ರಿಯ ದಳ ಸೇರಿದಂತೆ ಭದ್ರತಾ ಸಿಬ್ಬಂದಿ ಸನ್ನದ್ಧ ಸ್ಥಿತಿಯಲ್ಲಿ ಇರುತ್ತಾರೆ
- ತುರ್ತು ಭೂಸ್ಪರ್ಶ ಮಾಡಿದ ವಿಮಾನವನ್ನು ನಿಲ್ದಾಣದಿಂದ ಬಹುದೂರದಲ್ಲಿ, ಹೆಚ್ಚು ಸುರಕ್ಷಿತವಾದ ಸ್ಥಳದಲ್ಲಿ ನಿಲ್ಲಿಸಲಾಗುತ್ತದೆ. ಪ್ರಯಾಣಿಕರು ಮತ್ತು ಅವರ ಲಗೇಜುಗಳನ್ನು ತ್ವರಿತವಾಗಿ ಇಳಿಸಲಾಗುತ್ತದೆ
- ಪ್ರಯಾಣಿಕರನ್ನು ಇಳಿಸಿದ ನಂತರ ಮತ್ತೊಮ್ಮೆ ಎಲ್ಲರನ್ನೂ ಭದ್ರತಾ ಪರಿಶೀಲನೆಗೆ ಒಳಪಡಿಸಲಾಗುತ್ತದೆ
- ಭದ್ರತಾ ಸಿಬ್ಬಂದಿ ವಿಮಾನವನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿ, ಬಂದಿರುವ ಬೆದರಿಕೆ ಕರೆ ಸುಳ್ಳೇ ಅಥವಾ ನಿಜವೇ ಎಂಬುದನ್ನು ದೃಢೀಕರಿಸುತ್ತಾರೆ
- ಕರೆಯು ಹುಸಿ ಎಂಬುದು ಖಚಿತವಾಗುವವರೆಗೆ ಭದ್ರತಾ ವ್ಯವಸ್ಥೆ ಚಾಲ್ತಿಯಲ್ಲಿರುತ್ತದೆ

ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ, ಸಂಸತ್‌ನಲ್ಲಿ ನಾಗರಿಕ ವಿಮಾನಯಾನ ಸಚಿವರ ಉತ್ತರಗಳು

'ಕುಲದಲ್ಲಿ ಕೀಳ್ಯಾವುದೊ' ಸಿನಿಮಾ ಅಂತಿಮ ಘಟ್ಟಕ್ಕೆ

ಕೆ.ರಾಮನಾರಾಯಣ್ ನಿರ್ದೇಶನದಲ್ಲಿ 'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಮಡೆನೂರ್ ಮನು ನಟಿಸುತ್ತಿರುವ 'ಕುಲದಲ್ಲಿ ಕೀಳ್ಯಾವುದೋ' ಚಿತ್ರದ ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣ ಇತ್ತೀಚೆಗೆ ರಾಮನಗರ ಸಮೀಪ ನಡೆಯಿತು.

ಯೋಗರಾಜ್ ಸಿನಿಮಾಸ್ ಈ ಚಿತ್ರವನ್ನು ಅರ್ಪಿಸುತ್ತಿದ್ದು, ಪರ್ಲ್ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ಸಂತೋಷ್ ಕುಮಾರ್ ಎ. ಕೆ ಮತ್ತು ವಿದ್ಯಾ ಅವರು ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಚಿತ್ರದಲ್ಲಿ ನಾಯಕಿಯಾಗಿ 'ರಾಮಾಚಾರಿ' ಧಾರಾವಾಹಿ ಖ್ಯಾತಿಯ ಮೌನ ಗುಡ್ಡೆಮನೆ ನಟಿಸುತ್ತಿದ್ದಾರೆ. ಇದು ಮೌನ ಅವರ ಚೊಚ್ಚಲ ಸಿನಿಮಾ. ವಿನೋದ್ ಮಾಸ್ಟರ್ ಸಾಹಸ ನಿರ್ದೇಶನದಲ್ಲಿ ಮಡೆನೂರ್ ಮನು, ಮೌನ, ಶರತ್ ಲೋಹಿತಾಶ್ವ, ಕರಿ ಸುಬ್ಬು, ಡ್ರ್ಯಾಗನ್ ಮಂಜು, ಸೀನ ಮುಂತಾದವರು ಕ್ಲೈಮ್ಯಾಕ್ಸ್ ಭಾಗದ ಸಾಹಸ ಸನ್ನಿವೇಶದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು.

'ನಟಿ ಸೋನಾಲ್ ಮೊಂತೆರೊ ಅವರು ಈ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದ್ದು, ಎರಡು ಹಾಡುಗಳ ಶೂಟಿಂಗ್ ಬಾಕಿಯಿದೆ' ಎಂದರು ರಾಮನಾರಾಯಣ್. 'ನಿರ್ದೇಶಕರಾದ ಯೋಗರಾಜ್ ಭಟ್ ನಮ್ಮ ಚಿತ್ರಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಫೆಬ್ರುವರಿಯಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ಮಾಪಕ ಸಂತೋಷ್.

ಮೌನ, ಮನು

ಡಿ.27ಕ್ಕೆ ಗಜರಾಮ ರಿಲೀಸ್

ಸುನಿಲ್ ಕುಮಾರ್ ವಿ.ಎ. ನಿರ್ದೇಶನದ, 'ಬಿಚ್ಚುಗತ್ತಿ' ಸಿನಿಮಾ ಖ್ಯಾತಿಯ ರಾಜವರ್ಧನ್ ನಾಯಕರಾಗಿ ನಟಿಸಿರುವ 'ಗಜರಾಮ' ಸಿನಿಮಾ ಡಿ.27ಕ್ಕೆ ಬಿಡುಗಡೆಯಾಗಲಿದೆ.

ಇತ್ತೀಚೆಗೆ ಟೈಟಲ್ ಟ್ರ್ಯಾಕ್ ರಿಲೀಸ್ ಮಾಡುವ ಮುಖಾಂತರ ಚಿತ್ರತಂಡ ಬಿಡುಗಡೆ ದಿನಾಂಕ ಘೋಷಿಸಿದೆ. ಈ ಹಾಡಿಗೆ ನಿರ್ದೇಶಕ ಚೇತನ್ ಕುಮಾರ್ ಸಾಹಿತ್ಯ, ಮನೋಮೂರ್ತಿ ಸಂಗೀತ ನಿರ್ದೇಶನವಿದ್ದು, ಹೇಮಂತ್ ಧ್ವನಿಯಾಗಿದ್ದಾರೆ. ಇದು ಸುನೀಲ್ ಕುಮಾರ್ ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ಲವ್ ಸ್ಟೋರಿ ಹಾಗೂ ಮಾಸ್ ಆ್ಯಕ್ಷನ್ ಕಥಾಹಂದರ ಒಳಗೊಂಡ ಚಿತ್ರದಲ್ಲಿ ರಾಜವರ್ಧನ್‌ಗೆ ಜೋಡಿಯಾಗಿ 'ಹರಿಕಥೆ ಅಲ್ಲ ಗಿರಿಕಥೆ' ಖ್ಯಾತಿಯ ತಪಸ್ವಿನಿ ಪೂಣಚ್ಚ ನಟಿಸಿದ್ದಾರೆ. ಶಿಷ್ಯ ದೀಪಕ್ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ. ಖಳನಟನಾಗಿ 'ಪೈಲ್ವಾನ್' ಖ್ಯಾತಿಯ ಕಬೀರ್ ದುಹಾನ್ ಸಿಂಗ್ ನಟಿಸಿದ್ದಾರೆ. 'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಸಂತು, 'ಮಜಾ ಟಾಕೀಸ್' ಪವನ್, ವಿಜಯ್ ಚೆಂಡೂರು ಒಳಗೊಂಡ ತಾರಾಬಳಗ ಸಿನಿಮಾದಲ್ಲಿದೆ.

'ಬಾಂಡ್ ರವಿ' ಸಿನಿಮಾವನ್ನು ನಿರ್ಮಾಣ ಮಾಡಿದ್ದ ಲೈಫ್ ಲೈನ್ ಫಿಲ್ಮಂ ಪ್ರೊಡಕ್ಷನ್‌ನಡಿ ನರಸಿಂಹಮೂರ್ತಿ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ.



ರಾಜವರ್ಧನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದೇವ್ರು ಮೆಚ್ಚುವಂಗ ಬದುಕಬೇಕು!

ನುಡಿ ಬೆಳಗು — ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ — 79

ಜೀವನದಲ್ಲಿ ಮೂರು ಸಂಗತಿಗಳನ್ನು ನಾವು ಗಮನಿಸಬೇಕು. ಹುಟ್ಟು, ಸಾವು ಮತ್ತು ಬದುಕು. ಹುಟ್ಟು ಈಗಾಗಲೇ ಆಗಿದೆ. ಹುಟ್ಟು ನಮ್ಮ ಕೈಯಲ್ಲಿ ಇಲ್ಲ. ನಾವ್ಯಾರೂ ಆನ್ ಲೈನ್ ಅಪ್ಲಿಕೇಷನ್ ಹಾಕಿಲ್ಲ. ಸಾವೂ ನಮ್ಮ ಕೈಯಲ್ಲಿ ಇಲ್ಲ. ನಾವು ಬ್ಯಾಡಂದ್ರೂ ಬರೋದು ಅಂದ್ರೆ ಸಾವೊಂದೆ. ಒಂದು ಕಪ್ಪೆ ನಾಲಿಗೆ ಚಾಚಿಕೊಂಡು ನೊಣಕ್ಕೆ ನೋಡುತ್ತಿತ್ತು. ನೊಣ ಹಾರಿಬಂದು ಕಪ್ಪೆ ನಾಲಿಗೆ ಮೇಲೆ ಕುಳಿತುಕೊಂಡಿತು. ಆದರೆ, ಕಪ್ಪೆಗೆ ಗೊತ್ತಿರಲಿಲ್ಲ ತಾನು ಹಾವಿನ ಬಾಯಿಯಲ್ಲಿ ಕುಂತೇನಿ ಅಂತ.

ಸಾವೆಂಬ ಕಾಳಸರ್ಪ ಯಾರನ್ನೂ ಬಿಟ್ಟಿಲ್ಲ. ರಾಜ ಮಹಾರಾಜರು ಇರಬಹುದು, ಸಚಿವರಿರಬಹುದು, ಸನ್ಯಾಸಿಗಳು, ಸಾಮಾನ್ಯ ಜನರು ಯಾರೂ ಸಾವಿನ ತೋಳ್ತೆಕ್ಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಜೀವನ ಅನ್ನೋದು ಇಸ್ಪೀಟ್ ಆಟ ಇದ್ದಂಗೆ. ಇಸ್ಪೀಟ್ ಆಡೋರಿಗೆ ಗೊತ್ತಿರತೈತಿ. ಅಲ್ಲಿ ರಾಜ, ರಾಣಿ, ಎಕ್ಕ ಎಲ್ಲಾ ಇರ್ತಾವ. ಇವೆಲ್ಲ ಆಟ ನಡೆದಾಗ ಇರ್ತಾವ. ಆಟ ಮುಗಿದ ಮೇಲೆ ರಾಜ, ರಾಣಿ, ಗುಲಾಮ ಎಕ್ಕ ಎಲ್ಲವನ್ನೂ ಒಂದೇ ಪಾಕೀಟ್‌ನಲ್ಲಿಡತ್ತಾರ. ಹಾಗೆಯೇ ಜೀವನ ಎಂಬ ಆಟದಲ್ಲಿ ಒಬ್ಬ ಸನ್ಯಾಸಿ, ಒಬ್ಬ ಸಚಿವ, ಒಬ್ಬ ಸಾಮಾನ್ಯ ಇರ್ತಾರ. ಜೀವನದ ಆಟ ಮುಗೀತು ಅಂದ್ರ ಸ್ಮಶಾನದಲ್ಲಿ ಒಂದೇ ಪಾಕೀಟಿನೊಳಗೇ ಕಳಿಸ್ತಾರ. ಯಾರೂ ಇದರಿಂದ ತಪ್ಪಿಸಿಕೊಳ್ಳಲು ಆಗೋದಿಲ್ಲ. ಹುಟ್ಟು ಮತ್ತು ಸಾವನ್ನು ತನ್ನ ಕೈಯಲ್ಲಿ ಇಟ್ಟುಕೊಂಡು ಮಧ್ಯದ ಜೀವನವನ್ನು ಮಾತ್ರ ನಮ್ಮ ಕೈಯಲ್ಲಿ ಇಟ್ಟು ಭೂಮಿಗೆ ಕಳಿಸಿದ್ದಾನೆ ದೇವ. ಇದು ಅವನ ವಿಶೇಷತೆ. ಮಧ್ಯದ ಬದುಕನ್ನು ಹ್ಯಾಂಗ್ ಬದುಕಬೇಕು ಮನುಷ್ಯ? ಹೇಗೆ ಬದುಕಬೇಕು ಎನ್ನುವುದಕ್ಕೆ ಉಪನಿಷತ್ ಹೇಳ್ತದೆ, 'ಈ ಬದುಕನ್ನು ಕೊಟ್ಟ ದೇವರಿಗೆ ಪ್ರೀತಿಯಾಗುವಂತೆ ಬದುಕಬೇಕು' ಎಂದು. ಎರಡು ತೊಲೆ ಬಂಗಾರದ ಆಭರಣ ಹಾಕಿದರೆ ಮರೆಯುತ್ತೀ ಆದರೆ ಬಂಗಾರದಂತ ಬದುಕ ಕೊಟ್ಟ ದೇವನಿಗೆ ಏನು ಕೊಟ್ಟೆ ಅಂತ ಒಮ್ಮೆ ಯೋಚನೆ ಮಾಡಬೇಕಲ್ಲ.

ಏನು ಮಾಡಿದರೆ ದೇವನಿಗೆ ಪ್ರೀತಿ ಬರ್ತದೆ? ನೀವು ದೇವರ ಮೂರ್ತಿ ಮುಂದೆ ಹೋಗಿ ತುಪ್ಪದ ದೀಪ ಬೆಳಗಿದರೆ ದೇವನಿಗೆ ಪ್ರೀತಿ ಬರ್ತದೇನು? ನೀರಿನಿಂದ ಅಭಿಷೇಕ ಮಾಡಿದರೆ ದೇವರು ತೃಪ್ತಿಯಾಗ್ತಾನೇನು? ನೈವೇದ್ಯ ನೀಡಿ ದೇವರನ್ನು ತೃಪ್ತಿಪಡಿಸಲೇನು? ಧೂಪ ಹಾಕಿ ದೇವರನ್ನು ಸಂತೃಪ್ತಿಪಡಿಸಲಿಕ್ಕೆ ಆಗ್ತದೇನು? ಸಾವಿರ ಸಾವಿರ ಕೋಟಿ ಹೂವುಗಳಲ್ಲಿ ಸುಗಂಧ ತುಂಬಿದ ದೇವರಿಗೆ ನಮ್ಮ ಒಣ ಊದಿನ ಕಡ್ಡಿಯ ಧೂಪ ಅಗತ್ಯ ಐತೇನು? ಇದು ನಮ್ಮ ಪ್ರಶ್ನೆಯಲ್ಲ. ಅಕ್ಕಮಹಾದೇವಿಯ ಪ್ರಶ್ನೆ. 'ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯಾ, ನೀನು ಬಹಿರಂಗ ವ್ಯವಹಾರ ದೂರಸ್ಥನು, ಅಂತರಂಗದಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯಾ ನೀನು ವಾಙ್ಮನಕ್ಕತೀತನು, ಜಪಸೂತ್ರದಿಂದ ಒಲಿಸುವೆನೆ ಅಯ್ಯಾ ನೀನು ನಾದಾತೀತನು' ಎನ್ನುತ್ತಾಳೆ ಅಕ್ಕ.

ಧೂಪ ದೀಪಗಳಿಂದ ಪೂಜೆ ಮಾಡಬೇಕು ಅಂದುಕೊಂಡರೂ ದೇವ ಯಾರಿಗೂ ಕಂಡಿಲ್ಲ. ಸುಮ್ಮನೆ ಮೂರ್ತಿ ಪೂಜೆ ಮಾಡುತೀವಿ ಆದರೂ ಯಾರಿಗೂ ದೇವರು ಮುಖ ತೋರ್ಸಿಲ್ಲ. ಮುಟ್ಟಿದರೆ ಸಿಗಲ್ಲ. ಆದರೆ ನಮ್ಮ ಹಿಂದಿನವರು ' ಕಾಣುವ ಜಗತ್ತಿನಲ್ಲೇ ದೇವರನ್ನು ನೋಡು' ಅಂದರು. ಕಾಣುವ ಈ ಜಗತ್ತು ಅವ್ಯಕ್ತ ದೇವನ ಅಭಿವ್ಯಕ್ತ ರೂಪ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಡಿಸೆಂಬರ್ 3, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶಿಶಿರ ಋತು ತಿಥಿ: ಮಾರ್ಗಶಿರ ಶುಕ್ಲ ದ್ವಿತೀಯ ಗಂ. 13-10 ನಕ್ಷತ್ರ: ಮೂಲ ಗಂ. 16-42 ಯೋಗ: ಶೂಲ ಗಂ. 15-08 ಕರಣ: ಕೌಲವ ಗಂ. 13-10, ವೃಶ್ಚಿಕ ಮಾಸದ 17 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 1.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-43 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 30 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 9, 3

ಮೇಷ: ಯಾವುದೇ ಅಂಕಿ ಅಂಶಗಳು ಅಥವಾ ದಾಖಲೆಗಳಿಲ್ಲದೆ ಕೇವಲ ನಂಬಿಕೆಯಿಂದ ಮಾಡಿದ ವ್ಯವಹಾರದಲ್ಲಿ ಮೋಸ ಹೋಗುವ ಸಂಭವವಿದೆ. ಹೊಸ ಕಾರ್ಯಗಳ ಚಾಲನೆಗೆ ಸೂಕ್ತ ಸಮಯವಲ್ಲ.

ವೃಷಭ: ಬಹಳ ಬೇಗ ಗುರಿ ತಲುಪಬೇಕು ಎಂಬ ಹಂಬಲವು ಫಲಿತಾಂಶಕ್ಕೆ ಅಡ್ಡಿ ಮಾಡುವ ಸಾಧ್ಯತೆಯಿದೆ. ಕ್ರಿಯಾತ್ಮಕವಾದ ರಾಜಕೀಯ ಭವಿಷ್ಯಕ್ಕೆ ಮೋಡ ಕವಿದಂತೆ ಆಗುತ್ತದೆ. ಸಂಶೋಧಕರಿಗೆ ಪ್ರಶಂಸೆ ಲಭಿಸಲಿದೆ.

ಮಿಥುನ: ತಂತ್ರಜ್ಞಾನವನ್ನು ಬಳಸುವುದರಿಂದ ವ್ಯಾಪಾರದಲ್ಲಿ ಬಹಳಷ್ಟು ಪ್ರಗತಿ ಸಾಧಿಸುವಿರಿ. ಡಿಸೈನಿಂಗ್ ಕ್ಷೇತ್ರದವರಿಗೆ ಉತ್ತಮ ಅವಕಾಶಗಳು ಲಭಿಸಲಿವೆ. ಅವಿವಾಹಿತರಿಗೆ ಕಂಕಣ ಬಲ ಕೂಡಿ ಬರುವ ಯೋಗವಿದೆ.

ಕರ್ಕಾಟಕ: ಇತರರ ಸಂತೋಷದಲ್ಲಿ ನೆಮ್ಮದಿ ಹಾಗೂ ಸಂತೋಷ ಕಾಣುವಿರಿ. ಸಿಬ್ಬಂದಿಯೊಂದಿಗಿನ ಮುಕ್ತ ಮಾತುಕತೆ ಕಾರ್ಯಾನುಕೂಲ ಉಂಟುಮಾಡಲಿದೆ. ದೀರ್ಘಕಾಲದ ಯೋಜನೆಗಳು ಮತ್ತೆ ಚಾಲನೆಗೊಳ್ಳಲಿವೆ.

ಸಿಂಹ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ, ಋಣಾತ್ಮಕ ಯೋಚನೆ ಬರಬಹುದು. ಯಾವುದೇ ಕಾರಣಗಳಿಗೂ ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ. ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು.

ಕನ್ಯಾ: ಹಿಂತಿರುಗಿ ಬರಬೇಕಾಗಿದ್ದ ಹಣಕ್ಕೆ ಇರುವ ಅಡಚಣೆ ನಿವಾರಿಸಿಕೊಳ್ಳುವ ಬಗ್ಗೆ ಗಮನಹರಿಸಿ. ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯಬೇಕಾದ ಸಂದರ್ಭ ಎದುರಾಗುವುದು. ಸತ್ಕಾರ್ಯಗಳಿಂದ ಮನೆಯಲ್ಲಿ ಸಡಗರವಿರುವುದು.

ತುಲಾ: ಹಿರಿಯರ ಮಾರ್ಗದರ್ಶನದಂತೆ ಧಾರ್ಮಿಕ ಕೆಲಸಗಳನ್ನು ಮಾಡುವುದರಿಂದ ಅಡೆತಡೆಗಳು ಇರುವುದಿಲ್ಲ. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ಸಾಧನೆಗೆ ಮುಳ್ಳಾಗಬಹುದು.

ವೃಶ್ಚಿಕ: ಸರ್ಕಾರಿ ಕಚೇರಿಗಳಲ್ಲಿ ಆರಂಭಿಸಿರುವ ಕೆಲಸಗಳು ಯಶಸ್ಸಿನೊಂದಿಗೆ ಪೂರ್ಣಗೊಳ್ಳಲಿವೆ. ಆಹಾರದಲ್ಲಿನ ಬದಲಾವಣೆಯಿಂದ ಉಷ್ಣವ್ಯಾಧಿ ನಿವಾರಣೆಯಾಗುವುದು. ಪತ್ರವ್ಯವಹಾರದಲ್ಲಿ ಅನುಕೂಲವಾಗಲಿದೆ.

ಧನು: ಮನೆ ಬದಲಾವಣೆಯ ಯೋಜನೆಯಲ್ಲಿರುವವರಿಗೆ ಉತ್ತಮ ಸ್ಥಳದಲ್ಲಿ ಮನೆ ಸಿಗಲಿದೆ. ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಇರುತ್ತದೆ. ಅಕ್ಕಪಕ್ಕದ ಮನೆಯವರೊಂದಿಗೆ ಸೌಹಾರ್ದದಿಂದ ವರ್ತಿಸಿ.

ಮಕರ: ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ. ಮಾನಸಿಕ ಅಸ್ಥಿರತೆಯಿಂದಾಗಿ ಕೆಲಸ ಕಾರ್ಯಗಳಲ್ಲಿದ್ದ ಉದಾಸೀನತೆ ದೂರಾಗಲಿದೆ. ಮನದಲ್ಲಿ ಭಯದ ಭೀತಿ ತೋರಿಬಂದೀತು.

ಕುಂಭ: ರಸಗೊಬ್ಬರ, ಕೀಟನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ. ಸಹಕಾರ ಮನೋಭಾವದಿಂದ ಸಂಬಂಧಗಳು ಮತ್ತಷ್ಟು ಸುಧಾರಿಸಲಿವೆ. ಮಾತಿನ ಕೌಶಲದಿಂದ ಕಾರ್ಯ ಸಾಧಿಸಿಕೊಳ್ಳುವಿರಿ.

ಮೀನ: ಏಜೆನ್ಸಿಯಂಥ ಉದ್ಯೋಗ ನಡೆಸುವವರಿಗೆ ಬೇಡಿಕೆ ಹೆಚ್ಚುವುದರಿಂದ ಲಾಭ. ಸಣ್ಣ-ಪುಟ್ಟ ವಿಷಯಗಳಿಗೂ ಮಹತ್ವ ಕೊಡಬೇಕಾಗುವುದು. ನೋವಿನ ಸಂಗತಿಗಳೆಲ್ಲಾ ಕಳೆದು ನಲಿವಿನ ದಿನ ಇದಾಗಲಿದೆ.

ಪದಬಂಧ 5880

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಲೋಪಗಳನ್ನೆಲ್ಲಾ ತಿದ್ದಿ ಸರಿಪಡಿಸುವವನು (4)
3.ಸಸ್ಯಗಳಿಂದ ತೆಗೆದ ಎಣ್ಣೆ (4)
5.ಹದವಾಗಿ ಸುಡುವಿಕೆ! (3)
7.ನಡುಗುವುದನ್ನು ನೋಡಿದಾಗ ಮೂಡಿದ ಮಂದಹಾಸ (2)
9.ಮಂಕರಿಯನ್ನು ಹೊತ್ತಿರುವವನು ಬಲು ದಡ್ಡ! (2)
11.ಕಾವ್ಯಲಕ್ಷಣಗಳನ್ನೆಲ್ಲಾ ಬಲ್ಲವನು (4)
12.ಯೆಂಡ್ಕುಡುಕ ರತ್ನನ ಜಗತ್ತು (4)
13.ನಾಗರಿಕತೆ ಕಲಿತಿರುವ ಸ್ತ್ರೀ (2)
14.ವಾಸಸ್ಥಾನವಿಲ್ಲಿ ಉಲ್ಟಾ ಕಾಣುತ್ತಿದೆ (2)
16.ಅರಸುತ್ತಿರುವಾಗ ಸಿಕ್ಕಿರುವ ದೊರೆ (3)
18.ಕರೆಯಲು ಬಂದವರು ಕೊಟ್ಟಿರುವ ಆಹ್ವಾನ (4)
19.ಮಾಧ್ಯಮದಿಂದ ಗೊತ್ತಾಗಿರುವ ವಸ್ತುಸ್ಥಿತಿ (4)

ಮೇಲಿಂದ ಕೆಳಕ್ಕೆ
1.ದುಮ್ಮಾನವಿದ್ದಾಗ ನಸುನಕ್ಕರೆ ಈ ಹಿಗ್ಗು! (3)
2.ಕಲಾವಿದನ ಮನೆ ಬಾಗಿಲು (2)
3.ಯೌವ್ವನದಲ್ಲಿ ನೋಡಿರುವ ಅರಣ್ಯ (2)
4.ತಿರುವಿನಲ್ಲಿ ಕಾಣಿಸುತ್ತಿರುವ ಭಿಕ್ಷುಕ (3)
6.ಆಜ್ಞಾನುಸಾರ ಕೆಲಸ ಮಾಡುವವನು (3)
8.ಗುರಿಯಲ್ಲಿ ಪರಾಧೀನತೆ! (5)
9.ಮಂತ್ರಹೇಳುತ್ತಾ ರಹಸ್ಯವಾಗಿ ಕೂಡಿ ಮಾತಾಡುವುದು (5)
12.ಪತ್ತೇದಾರನಿಗೆ ಗೋಚರಿಸಿದ ಸ್ವರ (3)
13.ಸಿನಿಕನ ಮೂಗಿದು! (3)
15.ಮನದೊಳಗಿರುವ ಕಾಮ (3)
16.ಅಬಲೆ ನೋಡುತ್ತಿರುವ ತರಂಗ (2)
17.ಕಸವಿಸಿಗೊಂಡರೂ ರುಚಿ ಎಂದುಬಿಡಿ! (2)



5879ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಗಡಿ 3.ಕಣಜ
5.ಸ್ವಾದ 6.ನಾಕ
8.ನವಮಿ 9.ಕಟಜ
10.ವಾನರಿ 11.ಸಂಗೀತ
12.ಸರಸ 14.ನಂತರ
15.ನವ 17.ಮುದ
18.ಣಿಮರ 19.ರಜನಿ

ಮೇಲಿಂದ ಕೆಳಕ್ಕೆ:
1.ಪದ 2.ಡಿನಾ
3.ಕನಕ 4.ಜನಜನಿತ
5.ಸ್ವಾಮಿವಿವೇಕಾನಂದ
7.ಕಮರಿ 10.ವಾದಸರಣಿ
11.ಸಂತಾನ 13.ಸಮರ
16.ವರ 17.ಮುನಿ

ಸುಡೊಕು 6265

		5	8				1	
2	8						7	
		4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6264 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,131
ಇಂದಿನ ಅಂತ್ಯ	24,276
▲	144
ದಿನದ ಗರಿಷ್ಠ	24,301

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹630
12 ಕ್ಕೆ	₹82
ಮೈಸೂರು	
100ಕ್ಕೆ	₹632

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹411-669
ದ್ವಿತಳಿ (ಬಿ.ವಿ)	₹444-811

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹185
ಗುಡ್ ಲಾಟ್	₹180

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1465 (1465)
ಸೋಯಾ (ರಿಫೈನ್ಡ್)	₹1330 (1325)
ಸೂರ್ಯಕಾಂತಿ (ರಿಫೈನ್ಡ್)	₹1390 (1390)
ಪಾಮೋಲಿನ್	₹1385 (1375)

ಬೆಳ್ಳಿ ದರ ಕೆ.ಜಿಗೆ ₹2,200 ಇಳಿಕೆ

ನವದೆಹಲಿ (ಪಿಟಿಐ): ಸ್ಥಳೀಯ ಆಭರಣ ತಯಾರಕರು ಮತ್ತು ಗ್ರಾಹಕರಿಂದ ಬೇಡಿಕೆ ಕಡಿಮೆಯಾಗಿದ್ದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹200 ಇಳಿಕೆಯಾಗಿದ್ದು, ₹79,200 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹78,800 ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹2,200 ಕಡಿಮೆಯಾಗಿದ್ದು, ₹90 ಸಾವಿರದಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ವಿನಿಮಯ ದರ

$ ಡಾಲರ್	84.60
£ ಪೌಂಡ್	107.62
€ ಯುರೊ	89.07
¥ ಯೆನ್ (100ಕ್ಕೆ)	56

11 ತಿಂಗಳ ಕನಿಷ್ಠಕ್ಕೆ ಸೂಚ್ಯಂಕ ದಾಖಲು: ಎಸ್ ಆ್ಯಂಡ್ ಪಿ ಗ್ಲೋಬಲ್ ಸಮೀಕ್ಷಾ ವರದಿ

ತಯಾರಿಕಾ ವಲಯ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಪ್ರಗತಿ ನವೆಂಬರ್ ತಿಂಗಳಲ್ಲಿ 11 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ವರದಿ ಸೋಮವಾರ ತಿಳಿಸಿದೆ.

ಅಕ್ಟೋಬರ್‌ನಲ್ಲಿ ಸೂಚ್ಯಂಕವು 57.5ರಷ್ಟಿತ್ತು. ಆದರೆ, ನವೆಂಬರ್‌ನಲ್ಲಿ ಸೂಚ್ಯಂಕವು 56.5ಕ್ಕೆ ಇಳಿದಿದೆ. ಸೆಪ್ಟೆಂಬರ್‌ನಲ್ಲೂ ಸೂಚ್ಯಂಕ ಇಷ್ಟೇ ಪ್ರಮಾಣ ದಾಖಲಾಗಿತ್ತು ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕದ (ಪಿಎಂಐ) ವರದಿ ತಿಳಿಸಿದೆ. ಹೆಚ್ಚಿದ ಹಣದುಬ್ಬರ ಮತ್ತು ದೇಶೀಯ ಬೇಡಿಕೆ ಮಂದಗೊಂಡಿದ್ದರಿಂದ ಪ್ರಗತಿ ಇಳಿದಿದೆ. ಆದರೂ, ಬೆಳವಣಿಗೆಯ ವೇಗವು ದೀರ್ಘಾವಧಿಯ ಸರಾಸರಿಗಿಂತ ಹೆಚ್ಚಾಗಿದೆ ಎಂದು ಹೇಳಿದೆ.



ಸೂಚ್ಯಂಕಗಳು 50ಕ್ಕಿಂತ ಕಡಿಮೆ ಇದ್ದರೆ ನಕಾರಾತ್ಮಕ ಪ್ರಗತಿ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಹೆಚ್ಚಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

'ನವೆಂಬರ್‌ನಲ್ಲಿ ತಯಾರಿಕಾ ವಲಯದ ಪಿಎಂಐ 56.5 ದಾಖಲಾಗಿದೆ. ಇದು ಅಕ್ಟೋಬರ್‌ನಲ್ಲಿ ದಾಖಲಾಗಿದ್ದಕ್ಕಿಂತಲೂ ಕಡಿಮೆಯಾಗಿದೆ. ಆದರೂ ಸೂಚ್ಯಂಕವು ಸಕಾರಾತ್ಮಕ ವಲಯದಲ್ಲಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ಹೊಸ ರಫ್ತು ಆರ್ಡರ್ ಪ್ರಮಾಣ ನಾಲ್ಕು ತಿಂಗಳ ಗರಿಷ್ಠವಾಗಿದೆ. ಇದು ದೇಶದ ತಯಾರಿಕಾ ವಲಯದ ಬೆಳವಣಿಗೆಗೆ ಉತ್ತೇಜನ ನೀಡಿತು. ಆದರೆ, ಇದೇ ವೇಳೆ ಹೆಚ್ಚುತ್ತಿರುವ ಹಣದುಬ್ಬರದಿಂದ ಉತ್ಪಾದನೆಯ ವಿಸ್ತರಣೆ ಇಳಿಕೆಯಾಗಿದೆ ಎಂದು ಹೇಳಿದೆ.

ರಾಸಾಯನಿಕ, ಹತ್ತಿ, ಚರ್ಮ, ರಬ್ಬರ್ ಸೇರಿ ವಿವಿಧ ಸರಕುಗಳ ತಯಾರಿಕಾ ಬೆಲೆ ಏರಿಕೆಯಾಗಿದೆ. ತಯಾರಿಕಾ ವೆಚ್ಚ, ಕಾರ್ಮಿಕರು, ಸಾರಿಗೆ ವೆಚ್ಚದಲ್ಲಿನ ಹೆಚ್ಚಳದಿಂದ ಉತ್ಪಾದನಾ ದರವು 11 ವರ್ಷದ ಗರಿಷ್ಠ ಮಟ್ಟಕ್ಕೆ ತಲುಪಿದೆ. ಈ ಏರಿಕೆಯನ್ನು ಕಂಪನಿಗಳು ಗ್ರಾಹಕರಿಗೆ ವರ್ಗಾಯಿಸಿದವು ಎಂದು ಭಂಡಾರಿ ಹೇಳಿದ್ದಾರೆ.

ದರ ಏರಿಕೆಯು ದೇಶೀಯ ಮಾರಾಟವನ್ನು ಸ್ವಲ್ಪ ಕಡಿಮೆ ಮಾಡಿದರೂ, ಹೊಸ ರಫ್ತು ಆರ್ಡರ್‌ಗಳು ಬೆಳವಣಿಗೆಗೆ ಸಹಕರಿಸಿದವು. ಬಾಂಗ್ಲಾದೇಶ, ಚೀನಾ, ಇರಾನ್, ಇಟಲಿ, ನೇಪಾಳ, ಜಪಾನ್, ಬ್ರಿಟನ್ ಮತ್ತು ಅಮೆರಿಕದಿಂದ ಬೇಡಿಕೆ ಹೆಚ್ಚಿದೆ. ಇದರಿಂದ ದೇಶದ ಕೈಗಾರಿಕೆಗಳು ಉತ್ಪಾದನೆಯನ್ನು ಹೆಚ್ಚಿಸಿದವು. ನೌಕರರ ನೇಮಕ ಪ್ರಮಾಣವು ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಸುಮಾರು 400 ತಯಾರಕರಿಗೆ ಕಳುಹಿಸಲಾದ ಪ್ರಶ್ನಾವಳಿಗಳಲ್ಲಿ ನಮೂದಾಗಿರುವ ಪ್ರತಿಕ್ರಿಯೆ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ಸುದ್ದಿ 2 ನಿಮಿಷ

ಜಿಎಸ್‌ಟಿ ಕಡಿತಗೊಂಡರೆ ವಿಮಾ ವೆಚ್ಚ ಇಳಿಕೆ: ನಿರ್ಮಲಾ

ನವದೆಹಲಿ (ಪಿಟಿಐ): ಜಿಎಸ್‌ಟಿ ಮಂಡಳಿಯು ಆರೋಗ್ಯ ಮತ್ತು ಜೀವ ವಿಮಾ ಕಂತುಗಳ ಮೇಲಿನ ಜಿಎಸ್‌ಟಿ ದರವನ್ನು ಕಡಿತಗೊಳಿಸಲು ಶಿಫಾರಸು ಮಾಡಿದರೆ, ಪಾಲಿಸಿದಾರರ ವಿಮಾ ವೆಚ್ಚವು ಕಡಿಮೆಯಾಗುವ ನಿರೀಕ್ಷೆ ಇದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಹೇಳಿದ್ದಾರೆ.

ಸೆಪ್ಟೆಂಬರ್ 9ರಂದು ನಡೆದ ಜಿಎಸ್‌ಟಿ ಮಂಡಳಿ ಸಭೆಯು ಜೀವ ಮತ್ತು ಆರೋಗ್ಯ ವಿಮೆಯ ಮೇಲಿನ ಜಿಎಸ್‌ಟಿ ದರಕ್ಕೆ ಸಂಬಂಧಿಸಿದಂತೆ ಸಚಿವರ ಸಮಿತಿಯನ್ನು ರಚಿಸಿದೆ. ಸಮಿತಿಯು ಈ ಕುರಿತು ಪರಿಶೀಲಿಸಿ ಶಿಫಾರಸು ಮಾಡಲಿದೆ ಎಂದು ಲೋಕಸಭೆಗೆ ಸಲ್ಲಿಸಿರುವ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಜಿಎಸ್‌ಟಿ ದರವನ್ನು ಕಡಿಮೆಗೊಳಿಸಿದರೆ, ವಿಮೆಯ ವೆಚ್ಚವು ಕಡಿಮೆಯಾಗುತ್ತದೆ. ಇದು ನೇರವಾಗಿ ಪಾಲಿಸಿದಾರರಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಹೇಳಿದ್ದಾರೆ.

ಪ್ರಸ್ತುತ, ಆರೋಗ್ಯ ಮತ್ತು ಜೀವ ವಿಮೆ ಕಂತುಗಳ ಮೇಲೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 21ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ 55ನೇ ಸಭೆ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ನಡೆಯಲಿದೆ.

ರೂಪಾಯಿ ಮೌಲ್ಯ 12 ಪೈಸೆ ಇಳಿಕೆ

ಮುಂಬೈ/ಹೈದರಾಬಾದ್ (ಪಿಟಿಐ): ಅಮೆರಿಕದ ಡಾಲರ್ ಎದುರು ಸೋಮವಾರ ರೂಪಾಯಿ ಮೌಲ್ಯವು 12 ಪೈಸೆಯಷ್ಟು ಕುಸಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹84.72ಕ್ಕೆ ತಲುಪಿದೆ.

ಇಳಿಕೆಗೆ ಕಾರಣವೇನು?: ಬ್ರಿಕ್ಸ್ ರಾಷ್ಟ್ರಗಳು ಅಮೆರಿಕದ ಡಾಲರ್‌ನಿಂದ ಹಿಂದೆ ಸರಿಯಲು ನಿರ್ಧರಿಸಿದರೆ ಆ ದೇಶಗಳ ಆಮದುಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸಬೇಕಾಗುತ್ತದೆ ಎಂದು ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್ಚರಿಕೆ ನೀಡಿದ್ದರು. ಇದರಿಂದ ಡಾಲರ್ ಮೌಲ್ಯವು ವೃದ್ಧಿಯಾಗಿದ್ದರೆ, ರೂಪಾಯಿ ಮೌಲ್ಯ ಇಳಿದಿದೆ. ವಿದೇಶಿ ಬಂಡವಾಳದ ಹೊರಹರಿವು ಕೂಡ ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಯಿತು.

ಟ್ರಂಪ್ ಎಚ್ಚರಿಕೆ ಅಸ್ಪಷ್ಟ: 'ಟ್ರಂಪ್ ಅವರು ಈ ಬೆದರಿಕೆಯನ್ನು ಎಷ್ಟರ ಮಟ್ಟಿಗೆ ಜಾರಿಗೆ ತರಬಹುದು ಎಂಬುದು ಅಸ್ಪಷ್ಟವಾಗಿದೆ' ಎಂದು ಆರ್‌ಬಿಐ ಮಾಜಿ ಗವರ್ನರ್ ದುವ್ವೂರಿ ಸುಬ್ಬಾರಾವ್ ಸೋಮವಾರ ಹೇಳಿದ್ದಾರೆ.

ಬ್ರಿಕ್ಸ್ ರಾಷ್ಟ್ರಗಳಲ್ಲೂ ಸಹ, ಡಾಲರ್‌ಗೆ ಪರ್ಯಾಯವನ್ನು ಹೊರತರುವ ಬಗ್ಗೆ ಆಂತರಿಕ ಭಿನ್ನಾಭಿಪ್ರಾಯಗಳಿವೆ ಎಂದು ಹೇಳಿದ ಅವರು ಅಮೆರಿಕದ ಕಾನೂನುಗಳು ಅಂತಹ ಕ್ರಮಕ್ಕೆ ನಿರ್ಬಂಧಗಳನ್ನು ವಿಧಿಸಲು ಅನುಮತಿ ನೀಡುತ್ತದೆಯೇ ಎಂದು ಪ್ರಶ್ನಿಸಿದ್ದಾರೆ.

ಕೆಲವು ವರ್ಷಗಳಿಂದ ರಷ್ಯಾ ಮತ್ತು ಚೀನಾ, ಡಾಲರ್‌ಗೆ ಪರ್ಯಾಯವನ್ನು ಹುಡುಕುತ್ತಿವೆ ಅಥವಾ ತಮ್ಮದೇ ಆದ ಬ್ರಿಕ್ಸ್ ಕರೆನ್ಸಿಯನ್ನು ರಚಿಸುತ್ತಿವೆ. ಭಾರತ ಇದುವರೆಗೆ ಈ ಕ್ರಮದ ಭಾಗವಾಗಿಲ್ಲ. ರೂಪಾಯಿ ಅಂತರರಾಷ್ಟ್ರೀಯವಾಗಲು ಭಾರತ ಬಹಳ ದೂರ ಸಾಗಬೇಕಿದೆ ಎಂದು ಸುಬ್ಬಾರಾವ್ ಅಭಿಪ್ರಾಯಪಟ್ಟರು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-33500
ಹಳತು	43000-50000
ಚಿತ್ರದುರ್ಗ	
ಅಪಿ	48619-49079
ಬೆಟ್ಟೆ	28729-29199
ಕೆಂಪುಗೋಟು	23209-23610
ರಾಶಿ	48139-48569
ಕಾರ್ಕಳ	
ಹೊಸತು	25000-33500
ಹಳತು	30000-50000
ಕುಮಟ	
ಚಾಲಿ	32089-36311
ಚಿಪ್ಪು	23129-26509
ಕೋಕ	6569-22869
ಫ್ಯಾಕ್ಟರಿ	3089-20529
ಹಳೆಚಾಲಿ	36899-39499
ಹೊಸಚಾಲಿ	24189-27200
ಪುತ್ತೂರು	
ಹೊಸತು	25000-33500
ಹಳತು	35000-50000
ಸಾಗರ	
ಬಿಳಿಗೋಟು	15121-25106
ಚಾಲಿ	23199-33639
ಕೋಕ	10199-23999
ಕೆಂಪುಗೋಟು	15821-30899
ರಾಶಿ	29009-50669
ಸಿಪ್ಪೆಗೋಟು	7099-16399
ಶಿವಮೊಗ್ಗ	
ಬೆಟ್ಟೆ	46009-54619
ಗೊರಬಲು	14141-32009
ಹೊಸತು	43099-49989
ರಾಶಿ	29290-50159
ಸರಕು	52420-71613
ಸಿದ್ದಾಪುರ	
ರಾಶಿ	44659-47009
ತಟ್ಟಿಬೆಟ್ಟೆ	26919-27119
ಬಿಳಿಗೋಟು	24499-27819
ಚಾಲಿ	31509-36439
ಕೋಕ	20399-25299
ಶಿರಸಿ	
ರಾಶಿ	42989-45899
ಬೆಟ್ಟೆ	28199-38989
ಬಿಳಿಗೋಟು	22899-29800
ಚಾಲಿ	34049-37839
ಯಲ್ಲಾಪುರ	
ಅಪಿ	61479-61479
ಬಿಳಿಗೋಟು	17699-27614
ಚಾಲಿ	34009-37799
ಕೋಕ	4109-16669
ಕೆಂಪುಗೋಟು	16179-24633
ರಾಶಿ	42800-51899
ತಟ್ಟಿಬೆಟ್ಟೆ	28179-36610

ಮುಂಬೈ ಧಾರಣೆ

ಶೇಂಗಾ

02-12-2024

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ(ಹೊಸ)	8900-9000
ದಪ್ಪ ಗುಜರಾತ್(ಹೊಸ)	9700-9800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1475 (1475)
ಒಂದು ವಾರದ ಡೆಲಿವರಿ	1470 (1470)
ಪಾಮ್ ವಾರದ ಡೆಲಿವರಿ	1383 (1373)
ಸೂರ್ಯಕಾಂತಿ ಎಣ್ಣೆ ಕಚ್ಚಾ	1335 (1340)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹76,150 (76,200)
ಬೆಳ್ಳಿ ಕೆ.ಜಿ ₹88,700 (89,150)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಆಕಸ್ಮಿಕ ಲಾಭ ತೆರಿಗೆ ರದ್ದು'

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ತೈಲ ಬೆಲೆಯಲ್ಲಿ ಇಳಿಕೆಯಾದ ಕಾರಣ, ದೇಶೀಯವಾಗಿ ಉತ್ಪಾದಿಸುವ ಕಚ್ಚಾ ತೈಲ ಮತ್ತು ವಿಮಾನ ಇಂಧನ (ಎಟಿಎಫ್), ಡೀಸೆಲ್ ಮತ್ತು ಪೆಟ್ರೋಲ್ ರಫ್ತಿನ ಮೇಲೆ ವಿಧಿಸುತ್ತಿದ್ದ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರ ಸೋಮವಾರ ರದ್ದುಗೊಳಿಸಿದೆ.

ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ರದ್ದುಗೊಳಿಸುವ ಅಧಿಸೂಚನೆಯನ್ನು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ರಾಜ್ಯಸಭೆಯಲ್ಲಿ ಮಂಡಿಸಿದರು.

2022ರ ಜುಲೈ 1ರಂದು ಈ ತೆರಿಗೆಯನ್ನು ಕೇಂದ್ರ ಸರ್ಕಾರ ಮೊದಲ ಬಾರಿಗೆ ಜಾರಿಗೊಳಿಸಿತ್ತು. 30 ತಿಂಗಳ ಬಳಿಕ ರದ್ದುಗೊಳಿಸಿದೆ. ಜೊತೆಗೆ, ಪೆಟ್ರೋಲ್ ಮತ್ತು ಡೀಸೆಲ್ ರಫ್ತಿನ ಮೇಲೆ ವಿಧಿಸಲಾಗಿದ್ದ ರಸ್ತೆ ಮತ್ತು ಮೂಲಸೌಕರ್ಯ ಸೆಸ್ ಅನ್ನು ಸಹ ಹಿಂಪಡೆಯಲಾಗಿದೆ.

ಜಾರಿ ವೇಳೆ, ಪೆಟ್ರೋಲ್ ಮತ್ತು ವಿಮಾನ ಇಂಧನದ ಮೇಲೆ ಪ್ರತಿ ಲೀಟರ್‌ಗೆ ₹6 ಮತ್ತು ಡೀಸೆಲ್ ಲೀಟರ್‌ಗೆ ₹13 ರಫ್ತು ಸುಂಕವನ್ನು ವಿಧಿಸಲಾಯಿತು. ದೇಶೀಯವಾಗಿ ಉತ್ಪಾದಿಸುವ ಕಚ್ಚಾ ತೈಲಕ್ಕೆ ಪ್ರತಿ ಟನ್‌ಗೆ ₹23,250 ವಿಧಿಸಲಾಗುತ್ತಿತ್ತು. ವಿಶೇಷ ಹೆಚ್ಚುವರಿ ಅಬಕಾರಿ ಸುಂಕದ (ಎಸ್‌ಎಇಡಿ) ರೂಪದಲ್ಲಿ ಕೇಂದ್ರವು ಈ ತೆರಿಗೆ ವಿಧಿಸುತ್ತಿತ್ತು.

ಭಾರತ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಸರಾಸರಿ ದರವು ಅಕ್ಟೋಬರ್‌ನಲ್ಲಿ ಪ್ರತಿ ಬ್ಯಾರೆಲ್‌ಗೆ 75.12 ಡಾಲರ್ (₹6,363) ಇತ್ತು. ನವೆಂಬರ್‌ನಲ್ಲಿ 73.02 ಡಾಲರ್‌ಗೆ (₹6,185) ಇಳಿದಿದೆ. ಏಪ್ರಿಲ್‌ನಲ್ಲಿ 90 ಡಾಲರ್ (₹7,624) ಇತ್ತು.

ರದ್ದು ಏಕೆ?: ಈ ತೆರಿಗೆ ಹೇರಿಕೆಯು ಸರ್ಕಾರ ಮತ್ತು ತೈಲ ಕಂಪನಿಗಳ ನಡುವೆ ವಿವಾದದ ವಿಷಯವಾಯಿತು. ಆರಂಭದಲ್ಲಿ ತೈಲ ದರ ಏರಿಳಿತದಿಂದ ಸರ್ಕಾರ ವರಮಾನವನ್ನು ಸಮತೋಲನಗೊಳಿಸಲು ಪ್ರಯತ್ನಿಸಿದಾಗ, ಕಂಪನಿಗಳು ಇದು ಲಾಭದಾಯಕತೆ ಮತ್ತು ಪ್ರೋತ್ಸಾಹಕತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಹೇಳಿದ್ದವು. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಕೂಡ ಈ ತೆರಿಗೆಯನ್ನು ರದ್ದುಗೊಳಿಸುವಂತೆ ಕೇಳಿತ್ತು.

ಇದೀಗ ಆಕಸ್ಮಿಕ ಲಾಭ ತೆರಿಗೆಯನ್ನು ತೆಗೆದು ಹಾಕಿರುವುದರಿಂದ ಒಎನ್‌ಜಿಸಿ ಮತ್ತು ಭಾರತೀಯ ತೈಲ ನಿಗಮಕ್ಕೆ ಲಾಭವಾಗುತ್ತದೆ. ರಿಲಯನ್ಸ್ ಇಂಡಸ್ಟ್ರೀಸ್ ಹಾಗೂ ನಯಾರಾ ಎನರ್ಜಿ ಕಂಪನಿಗಳು ದೇಶದಿಂದ ಇಂಧನವನ್ನು ರಫ್ತು ಮಾಡುತ್ತಿವೆ. ಈ ತೆರಿಗೆ ರದ್ದುಗೊಳಿಸಿರುವುದು ಈ ಕಂಪನಿಗಳಿಗೂ ಅನುಕೂಲವಾಗುತ್ತದೆ.

ಅದಾನಿ ಕಂಪನಿಯಿಂದ ವಿದ್ಯುತ್ ಖರೀದಿ ಅರ್ಧದಷ್ಟು ಕಡಿಮೆ ಮಾಡಿದ ಬಾಂಗ್ಲಾ

ಢಾಕಾ (ಬಾಂಗ್ಲಾದೇಶ): ಭಾರತದ ಅದಾನಿ ಪವರ್ ಕಂಪನಿಯಿಂದ ಖರೀದಿಸುತ್ತಿರುವ ವಿದ್ಯುತ್ ಪ್ರಮಾಣ ದಲ್ಲಿ ಅರ್ಧದಷ್ಟನ್ನು ಕಡಿಮೆ ಮಾಡಿರುವುದಾಗಿ ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಚಳಿಗಾಲದಲ್ಲಿ ಬೇಡಿಕೆ ಇಳಿಮುಖವಾಗಿರುವುದರಿಂದ ಖರೀದಿಸುತ್ತಿರುವ ವಿದ್ಯುತ್‌ನ ಪ್ರಮಾಣವನ್ನು ಅರ್ಧದಷ್ಟು ತಗ್ಗಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ನೂರಾರು ದಶಲಕ್ಷ ಡಾಲರ್‌ನಷ್ಟು ಬಾಕಿಯನ್ನು ಬಾಂಗ್ಲಾದೇಶದ ವಿದ್ಯುತ್ ಮಂಡಳಿ ಉಳಿಸಿಕೊಂಡಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ.

ದೊಡ್ಡ ಮೊತ್ತದ ಯೋಜನೆ ಪಡೆಯಲು ಭ್ರಷ್ಟಾಚಾರಕ್ಕೆ ಮುಂದಾಗಿರುವ ಪ್ರಕರಣದಲ್ಲಿ ಅಮೆರಿಕದ ನ್ಯಾಯಾಲಯವು ಅದಾನಿ ಅವರನ್ನು ಆರೋಪಿ ಎಂದು ಹೇಳಿದ್ದು, ಅದನ್ನು ಅದಾನಿ ಅಲ್ಲಗಳೆದಿದ್ದಾರೆ.

ವಿದ್ಯುತ್ ಪೂರೈಕೆಯ ಬಾಕಿ ಹಣ ಬೆಳೆದಿದೆ ಎಂಬ ಕಾರಣಕ್ಕೆ ಅಕ್ಟೋಬರ್ 31ರಂದು ಅದಾನಿ ಕಂಪನಿಯು ದಿಢೀರ್ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಿತ್ತು. ಬಾಂಗ್ಲಾದೇಶ ವಿದ್ಯುತ್ ಅಭಿವೃದ್ಧಿ ಮಂಡಳಿಯ (ಬಿಪಿಡಿಬಿ) ಅಧಿಕಾರಿಗಳಲ್ಲಿ ಇದು ಅಚ್ಚರಿ ಮೂಡಿಸಿತ್ತು.

'ಚಳಿಗಾಲ ಶುರುವಾದ ಒಂದು ತಿಂಗಳಲ್ಲಿ ಬಿಪಿಡಿಬಿ 1000 ಮೆಗಾವಾಟ್ ವಿದ್ಯುತ್ ಅನ್ನು ಅದಾನಿ ವಿದ್ಯುತ್ ಕಂಪನಿಯಿಂದ ಖರೀದಿಸಿತ್ತು. ಹಿಂದಿನ ಪ್ರಮಾಣದಲ್ಲಿಯೇ ಮತ್ತೆ ಯಾವಾಗ ವಿದ್ಯುತ್ ಖರೀದಿಸಲಾಗುತ್ತದೆ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಅಷ್ಟೊಂದು ಬಾಕಿ ಉಳಿಸಿಕೊಂಡರೆ ಕಂಪನಿ ನಿರ್ವಹಣೆಗೆ ತೊಂದರೆಯಾಗುತ್ತದೆ' ಎಂದು ಅದಾನಿ ಕಂಪನಿಯ ವಕ್ತಾರರು ತಿಳಿಸಿದ್ದಾರೆ.

'ವಿದ್ಯುತ್ ಖರೀದಿಯ ಬಾಕಿ ಮೊತ್ತವನ್ನು ಪಾವತಿ ಮಾಡುವಂತೆ ಬಿಪಿಡಿಬಿ ಅಧಿಕಾರಿಗಳನ್ನು, ಅಲ್ಲಿನ ಸರ್ಕಾರದ ಅಧಿಕಾರಿಗನ್ನು ಕೇಳಿಕೊಂಡಿದ್ದೇವೆ. ವಿದ್ಯುತ್ ಪೂರೈಕೆಯನ್ನು ನಿಲ್ಲಿಸಿಲ್ಲ' ಎಂದೂ ಹೇಳಿದ್ದಾರೆ.

ಶೇಖ್ ಹಸೀನಾ ಪ್ರಧಾನಿಯಾಗಿದ್ದಾಗ, ಇಪ್ಪತ್ತೈದು ವರ್ಷಗಳಿಗೆ ಬಾಂಗ್ಲಾದೇಶಕ್ಕೆ ವಿದ್ಯುತ್ ಪೂರೈಸುವ ಒಪ್ಪಂದವನ್ನು ಅದಾನಿ ಕಂಪನಿಯು 2017ರಲ್ಲಿ ಮಾಡಿಕೊಂಡಿತ್ತು.

ಬಿಪಿಡಿಬಿ ಅಧ್ಯಕ್ಷ ಮೊಹಮ್ಮದ್ ರಿಜಾಉಲ್ ಕರೀಮ್ ಅವರ ಪ್ರಕಾರ, 650 ದಶಲಕ್ಷ ಡಾಲರ್ (₹5,500 ಕೋಟಿಗೂ ಹೆಚ್ಚು) ಬಾಕಿಯನ್ನು ಅದಾನಿ ಕಂಪನಿಗೆ ನೀಡಬೇಕಿದೆ. ನವೆಂಬರ್‌ನಲ್ಲಿ 85 ದಶಲಕ್ಷ ಡಾಲರ್ (ಸುಮಾರು ₹720 ಕೋಟಿ) ಹಾಗೂ ಅಕ್ಟೋಬರ್‌ನಲ್ಲಿ 97 ದಶಲಕ್ಷ ಡಾಲರ್ (ಸುಮಾರು ₹821 ಕೋಟಿ) ಪಾವತಿಸಲಾಗಿದೆ.

ಜನವರಿ 1ರಿಂದ ಔಡಿ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಜರ್ಮನಿಯ ವಾಹನ ತಯಾರಿಕಾ ಕಂಪನಿ ಔಡಿ, ತನ್ನ ಎಲ್ಲ ಮಾದರಿ ವಾಹನಗಳ ಬೆಲೆಯನ್ನು ಶೇ 3ರ ವರೆಗೆ ಹೆಚ್ಚಿಸಲು ನಿರ್ಧರಿಸಿದೆ.

ಹೊಸ ದರವು ಜನವರಿ 1ರಿಂದ ಜಾರಿಗೆ ಬರಲಿದೆ. ತಯಾರಿಕೆ ಮತ್ತು ಸಾಗಣೆ ವೆಚ್ಚ ಹೆಚ್ಚಳವನ್ನು ಸರಿದೂಗಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಕಂಪನಿ ಸೋಮವಾರ ತಿಳಿಸಿದೆ.

ಬಿಎಂಡಬ್ಲ್ಯು ಇಂಡಿಯಾ, ಮರ್ಸಿಡೀಸ್ ಬೆಂಜ್ ಇಂಡಿಯಾ ಸಹ ಜನವರಿ 1ರಿಂದ ವಾಹನಗಳ ದರವನ್ನು ಶೇ 3ರವರೆಗೆ ಏರಿಕೆ ಮಾಡುವುದಾಗಿ ತಿಳಿಸಿವೆ.

ಗಲ್ಫ್ ವಿಮಾನದಲ್ಲಿ ತಾಂತ್ರಿಕ ದೋಷ; ಕುವೈತ್‌ನಲ್ಲಿ ತುರ್ತು ಭೂಸ್ಪರ್ಶ

ಭಾರತದ ಪ್ರಯಾಣಿಕರಿಗೆ 20 ಗಂಟೆ ಸಂಕಷ್ಟ

ಕುವೈತ್ ಸಿಟಿ (ಪಿಟಿಐ): ಮ್ಯಾಂಚೆಸ್ಟರ್‌ಗೆ ತೆರಳುತ್ತಿದ್ದ ಗಲ್ಫ್ ಏರ್‌ಲೈನ್ಸ್‌ನ ವಿಮಾನವೊಂದು ಕುವೈತ್ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದ್ದರಿಂದ ಅದರಲ್ಲಿದ್ದ ಭಾರತದ ಪ್ರಯಾಣಿಕರು ಸೋಮವಾರ 20 ತಾಸು ಸಂಕಷ್ಟಕ್ಕೆ ಸಿಲುಕಿದರು.

ಬಹರೇನ್‌ನಿಂದ ಗಲ್ಫ್ ಏರ್– ಜಿಎಫ್5 ವಿಮಾನವು ಡಿ.1ರಂದು ಬೆಳಿಗ್ಗೆ 2.05 ನಿಮಿಷಕ್ಕೆ ಮ್ಯಾಂಚೆಸ್ಟರ್‌ಗೆ ಹೊರಟಿತ್ತು. ತಾಂತ್ರಿಕ ದೋಷದಿಂದಾಗಿ ಬೆಳಿಗ್ಗೆ 4.01ರ ವೇಳೆ ಕುವೈತ್‌ನಲ್ಲಿ ಇಳಿಸಲಾಗಿತ್ತು ಎಂದು ವರದಿಗಳು ತಿಳಿಸಿವೆ.

'ಹಲವು ಗಂಟೆಗಳಿಂದ ವಿಮಾನವು ನಿಲ್ದಾಣದಲ್ಲಿಯೇ ಇದೆ. ಅಗತ್ಯ ವ್ಯವಸ್ಥೆ ಮಾಡಿಲ್ಲ. ಭಾರತದ ರಾಯಭಾರ ಕಚೇರಿಯು ಕೂಡಲೇ ನೆರವಿಗೆ ಧಾವಿಸಬೇಕು' ಎಂದು ಭಾರತೀಯ ಪ್ರಯಾಣಿಕರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮೂಲಕ ಮನವಿ ಮಾಡಿದ್ದರು.

'ತಕ್ಷಣವೇ ಎಚ್ಚೆತ್ತ ರಾಯಭಾರ ಕಚೇರಿಯ ಸಿಬ್ಬಂದಿ ವಿಮಾನ ನಿಲ್ದಾಣಕ್ಕೆ ತೆರಳಿ ಪ್ರಯಾಣಿಕರಿಗೆ ಸಹಾಯ ಮಾಡುವ ಜೊತೆಗೆ ವಿಮಾನಯಾನ ಸಿಬ್ಬಂದಿಯೊಡನೆ ಸಮನ್ವಯ ಸಾಧಿಸಿದರು. ನಿಲ್ದಾಣದಲ್ಲಿದ್ದ ಎರಡು ಲಾಂಜ್‌ಗಳಲ್ಲಿ ಆಹಾರ ಹಾಗೂ ನೀರಿನ ವ್ಯವಸ್ಥೆ ಮಾಡಲಾಯಿತು' ಎಂದು ಇಲ್ಲಿನ ರಾಯಭಾರ ಕಚೇರಿಯಯು 'ಎಕ್ಸ್'ನಲ್ಲಿ ತಿಳಿಸಿದೆ.

ವಿಮಾನವು ಸೋಮವಾರ ಬೆಳಿಗ್ಗೆ 4.30ರ ವೇಳೆಗೆ ಮ್ಯಾಂಚೆಸ್ಟರ್‌ಗೆ ತೆರಳಿತು. ವಿಮಾನ ಹೊರಡುವವರೆಗೆ ರಾಯಭಾರ ಕಚೇರಿಯ ಸಿಬ್ಬಂದಿಯು ಅಲ್ಲಿಯೇ ನಿಂತು, ನೆರವು ನೀಡಿದರು ಎಂದು ರಾಯಭಾರ ಕಚೇರಿ ಸ್ಪಷ್ಟಪಡಿಸಿದೆ.

ಕುವೈತ್ ವಿಮಾನ ನಿಲ್ದಾಣದಲ್ಲಿ ಸಿಲುಕಿದ್ದ ಭಾರತೀಯ ಪ್ರಯಾಣಿಕರ ಜೊತೆ ಭಾರತೀಯ ರಾಯಭಾರ ಕಚೇರಿ ಸಿಬ್ಬಂದಿ ಮಾತುಕತೆ ನಡೆಸಿದರು – 'ಎಕ್ಸ್' ಚಿತ್ರ

ಆಗಿದ್ದೇನು?

'ಕುವೈತ್‌ನಲ್ಲಿ ವಿಮಾನವು ಕೆಳಗಿಳಿದ ವೇಳೆ ಭಾರತದ ಪ್ರಯಾಣಿಕರನ್ನು ಹೊರತುಪಡಿಸಿ, ಉಳಿದವರಿಗೆ ಅಗತ್ಯ ನೆರವು ನೀಡಲಾಯಿತು. ಲಾಂಜ್ ಪ್ರವೇಶಕ್ಕೂ ಅವಕಾಶ ನೀಡಿರಲಿಲ್ಲ' ಎಂದು ಸಂಕಷ್ಟಕ್ಕೆ ಸಿಲುಕಿದ್ದ ಭಾರತದ ಪ್ರಯಾಣಿಕರೊಬ್ಬರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದರು.

'ಭಾರತ ಹಾಗೂ ಪಾಕಿಸ್ತಾನೀಯರು ಟ್ರಾನ್ಸಿಟ್ ವೀಸಾ ಹೊಂದಿದ್ದರೆ ಮಾತ್ರ ಹೋಟೆಲ್‌ನ ಒಳಗೆ ಪ್ರವೇಶ ನೀಡಲಾಗುವುದು ಎಂದು ತಿಳಿಸಿದರು. ದಾಖಲೆಗಳ ಸಮೇತ ಅವರ ಹಿಂದೆ ಎರಡು ಗಂಟೆ ತಿರುಗಾಡಿದದ ಮೇಲೆ ಲಾಂಜ್ ಪ್ರವೇಶಿಸಲು ಅವಕಾಶ ನೀಡಿದರು. ಮೊದಲ ನಾಲ್ಕು ಗಂಟೆ ಕುಡಿಯುವ ನೀರು ಕೂಡ ನೀಡಿರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದರು.

ಶೇ 98.08ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ಶೇ 98.08ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ. ಜನರ ಬಳಿ ₹6,839 ಕೋಟಿ ಮೌಲ್ಯದ ನೋಟುಗಳಷ್ಟೇ ಇವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.

₹2 ಸಾವಿರ ಮುಖಬೆಲೆಯ ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು. 25.12.2024 ಕ್ರಿಸ್ಮಸ್ ರಜೆಯಲ್ಲಿ ಅಹೋಬಲ ನವನರಸಿಂಹ ಶ್ರೀಶೈಲ ಮಂತ್ರಾಲಯ 14 ಕ್ಷೇತ್ರಗಳು 9000. 21.01.2025 ಗುಜರಾತ್ ಮಧ್ಯಪ್ರದೇಶ. ಉಜ್ಜಯಿನಿ,ದ್ವಾರಕಾ,ನಿಷ್ಕಳಂಕ ಮಹಾದೇವ 4 ಜ್ಯೋತಿರ್ಲಿಂಗಗಳು 26000. 9448390735 9449721678

21.01.2025 ಕುಂಭಮೇಳ ಪ್ರಯುಕ್ತ ರಿಯಾಯಿತಿ ದರದಲ್ಲಿ 6 ದಿನ ವಿಮಾನದಲ್ಲಿ ಅಲಹಾಬಾದ್ ಕಾಶಿ ಗಯಾ ಅಯೋಧ್ಯಾ. ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Royal Package "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಭವಿಷ್ಯ

Astrology

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಕ್ಕಾಗಿ

BOOK YOUR JOB ADS IN PRAJAVANI ALL KARNATAKA ON WEDNESDAY + SUNDAY

www.dhclassifieds.com BOOK NOW

@500/-* PER SQCM

SINGLE / DOUBLE / MULTIPLE COLUMN

*Conditions apply

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9901641752 | +91 9845114560 | +91 9900428036

ಪುತ್ರನಿಗೆ ಕ್ಷಮಾದಾನ ನೀಡಿದ ಬೈಡನ್

> ಇದು ಕಾನೂನಿನ ದುರ್ಬಳಕೆ. ಬೈಡನ್ ನೀಡಿರುವ ಕ್ಷಮಾದಾನವು ಜೆ6 ಒತ್ತೆಯಾಳುಗಳಿಗೂ ಅನ್ವಯವಾಗುವುದೇ?
>
> **ಡೊನಾಲ್ಡ್ ಟ್ರಂಪ್,** ಅಮೆರಿಕದ ನಿಯೋಜಿತ ಅಧ್ಯಕ್ಷ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಲಿರುವ ಜೋ ಬೈಡನ್ ಅವರು ತಮ್ಮ ಪುತ್ರ ಹಂಟರ್ ಬೈಡನ್ ಅವರಿಗೆ ಭಾನುವಾರ ಬೇಷರತ್ ಕ್ಷಮಾದಾನ ನೀಡಿದ್ದಾರೆ.

ಅಕ್ರಮವಾಗಿ ಬಂದೂಕು ಇಟ್ಟುಕೊಂಡಿದ್ದ ಹಾಗೂ ತೆರಿಗೆ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಇದೇ ವರ್ಷದ ಆರಂಭದಲ್ಲಿ ಹಂಟರ್ ಅವರನ್ನು ದೋಷಿ ಎಂದು ಫೆಡರಲ್ ನ್ಯಾಯಾಲಯ ತೀರ್ಪು ನೀಡಿತ್ತು. ಅವರಿಗೆ ಕ್ಷಮಾದಾನ ನೀಡುವ ತಮ್ಮ ಅಧಿಕಾರವನ್ನು ಬೈಡನ್ ಇದೀಗ ಬಳಸಿಕೊಂಡಿದ್ದಾರೆ.

'ನನ್ನ ಇಡೀ ರಾಜಕೀಯ ಬದುಕಿನಲ್ಲಿ ಜನರಿಗೆ ಸದಾ ಸತ್ಯ ಹೇಳಬೇಕು ಎಂಬ ತತ್ತ್ವ ರೂಢಿಸಿಕೊಂಡು ಬಂದಿದ್ದೆ. ನ್ಯಾಯಾಂಗ ವ್ಯವಸ್ಥೆಯನ್ನು ನಂಬಿದ್ದೆ. ಆದರೂ ಮಗನ ಪ್ರಕರಣದ ವಿಷಯದಲ್ಲಿ ರಾಜಕೀಯ ಪ್ರೇರಿತವಾಗಿ ಕ್ರಮ ಕೈಗೊಳ್ಳಲಾಯಿತು. ಇದರಿಂದಾಗಿಯೇ ಮಗ ಅನಗತ್ಯವಾಗಿ ತೊಂದರೆ ಅನುಭವಿಸಬೇಕಾಯಿತು. ಹೀಗಾಗಿ ಕ್ಷಮಾದಾನ ನೀಡಿದ್ದೇನೆ' ಎಂದು ಬೈಡನ್ ಹೇಳಿದರು.

ಈ ಹಿಂದೆ, ತಮ್ಮ ಮಗನಿಗೆ ಕ್ಷಮಾದಾನ ನೀಡುವುದಿಲ್ಲ ಎಂದು ಬೈಡನ್ ಹೇಳಿದ್ದರು.

'ವ್ಯಸನಗಳಿಗೆ ತುತ್ತಾದವರು ತೆರಿಗೆ ಪಾವತಿಸುವಲ್ಲಿ ವಿಳಂಬವಾಗುತ್ತದೆ. ಹಂಟರ್ ಕೂಡ ಇದೇ ಕಾರಣಕ್ಕೆ ದಂಡದ ಸಮೇತ ತೆರಿಗೆ ಪಾವತಿಸಿದ್ದ. ಹೀಗೆ ಪಾವತಿ ಮಾಡಿದವರಿಗೆ ಶಿಕ್ಷೆಯಿಂದ ವಿನಾಯಿತಿ ನೀಡುವ ಅವಕಾಶವಿದೆ. ಆದರೆ, ನನ್ನ ಮಗನ ವಿಷಯದಲ್ಲಿ ಬೇರೆಯದೇ ರೀತಿ ವರ್ತಿಸಲಾಯಿತು' ಎಂದು ಅವರು ತಮ್ಮ ನಿರ್ಧಾರಕ್ಕೆ ಸಮರ್ಥನೆ ನೀಡಿದರು.

ಸಂಕ್ಷಿಪ್ತ ಸುದ್ದಿ

ಮುಂದಿನ ವರ್ಷ ಭಾರತಕ್ಕೆ ಪುಟಿನ್ ಭೇಟಿ

ಮಾಸ್ಕೋ (ರಾಯಿಟರ್ಸ್): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಲು ಸಿದ್ಧತೆಗಳು ನಡೆಯುತ್ತಿದ್ದು, ಭೇಟಿಯ ದಿನಾಂಕವು ನಿಗದಿಯಾಗಿಲ್ಲ ಎಂದು ಸರ್ಕಾರಿ ಕಚೇರಿಗಳ ಸಮುಚ್ಚಯ 'ಕ್ರೆಮ್ಲಿನ್' ಸೋಮವಾರ ತಿಳಿಸಿದೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಆಹ್ವಾನದ ಮೇರೆಗೆ ಪುಟಿನ್ ಅವರು 2025 ರ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂಬ ಕ್ರೆಮ್ಲಿನ್ ಹೇಳಿಕೆ ಉಲ್ಲೇಖಿಸಿ ಸಿಎನ್‌ಎನ್18 ವರದಿ ಮಾಡಿದೆ.

ಹವಾಮಾನ ಬದಲಾವಣೆ ಪ್ರಕರಣ; ವಿಚಾರಣೆ ಆರಂಭ

ದಿ ಹೇಗ್, ನೆದರ್‌ಲೆಂಡ್ (ಎಪಿ): ಹವಾಮಾನ ಬದಲಾವಣೆಯಿಂದ ಆಗುತ್ತಿರುವ ಪರಿಣಾಮಗಳನ್ನು ನಿಯಂತ್ರಿಸಲು ಹಾಗೂ ವಿನಾಶಕಾರಿ ಪರಿಣಾಮ ಎದುರಿಸುತ್ತಿರುವ ದುರ್ಬಲ ರಾಷ್ಟ್ರಗಳಿಗೆ ಆರ್ಥಿಕ ನೆರವು ಒದಗಿಸಲು ಕಾನೂನಾತ್ಮಕವಾಗಿ ಏನು ಮಾಡಬೇಕು ಎಂಬ ಪ್ರಕರಣದ ವಿಚಾರಣೆಯನ್ನು ಅಂತರರಾಷ್ಟ್ರೀಯ ನ್ಯಾಯಾಲಯವು ಪ್ರಾರಂಭಿಸಿದೆ. ಈ ನ್ಯಾಯಾಲಯದ ಇತಿಹಾಸದಲ್ಲೇ ಅತ್ಯಂತ ಮಹತ್ವದ ಪ್ರಕರಣ ಇದಾಗಿದ್ದು, ಎರಡು ವಾರ ವಿಚಾರಣೆ ನಡೆಯಲಿದೆ.

ಸಮುದ್ರದ ನೀರಿನ ಮಟ್ಟ ಏರಿಕೆಯಾದರೆ, ದ್ವೀಪರಾಷ್ಟ್ರಗಳು ಕಣ್ಮರೆಯಾಗುವ ಆತಂಕವಿದೆ. ಹೀಗಾಗಿ ಪ್ರಕರಣದ ವಿಚಾರಣೆಯನ್ನು ತುರ್ತಾಗಿ ನಡೆಸಬೇಕು ಎಂದು ದ್ವೀಪರಾಷ್ಟ್ರಗಳು ಒತ್ತಾಯಿಸಿದ್ದವು. ಇದಾದ ಬಳಿಕ, ವಿಶ್ವಸಂಸ್ಥೆಯು 'ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ರಾಜ್ಯಗಳ ಬಾಧ್ಯತೆ' ಕುರಿತಂತೆ ಅಭಿಪ್ರಾಯ ಸಂಗ್ರಹಿಸಬೇಕು ಎಂದು ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಸೂಚಿಸಿತ್ತು.

ಹೂಥಿ ಕ್ಷಿಪಣಿ ಹೊಡೆದುರುಳಿಸಿದ ಅಮೆರಿಕ

ದುಬೈ (ಎಪಿ): ಯೆಮನ್‌ನ ಹೂಥಿ ಬಂಡುಕೋರರು ಯುದ್ಧನೌಕೆಗಳತ್ತ ಉಡಾಯಿಸಿದ್ದ ಏಳು ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಅಮೆರಿಕ ನೌಕಾಪಡೆಯು ಹೊಡೆದುರುಳಿಸಿದೆ. ಅಮೆರಿಕದ ಮೂರು ವ್ಯಾಪಾರ ಹಡಗುಗಳಿಗೆ ಗಲ್ಫ್ ಆಫ್ ಆ್ಯಡೆನ್ ಉದ್ದಕ್ಕೂ ಕಾವಲು ನಿಯೋಜಿಸಲಾಗಿದೆ. ಘಟನೆಯಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ.

ಇಮ್ರಾನ್ ಖಾನ್‌ಗೆ 14 ದಿನ ನ್ಯಾಯಾಂಗ ಬಂಧನ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಪಕ್ಷವು ಇತ್ತೀಚಿಗೆ ಆಯೋಜಿಸಿದ್ದ ಪ್ರತಿಭಟನೆಗೆ ಸಂಬಂಧಿಸಿದ ಏಳು ಪ್ರಕರಣಗಳ ಕಾರಣಕ್ಕೆ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಭಯೋತ್ಪಾದನಾ ನಿಗ್ರಹ ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.



ಇಮ್ರಾನ್ ಖಾನ್

ಅದಿಯಾಲ ಜೈಲಿನಲ್ಲಿ ಬಂಧಿತರಾಗಿರುವ ಇಮ್ರಾನ್ ಖಾನ್ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಅಮ್ಜದ್ ಅಲಿ ಅವರು ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣ ಸೇರಿದಂತೆ ಇತರೆ ಆರು ಪ್ರಕರಣಗಳಲ್ಲಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಖುರ್ರಂ ಜಿಲ್ಲೆಯಲ್ಲಿ ಕದನ ವಿರಾಮ

ಪೇಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರದೇಶದಲ್ಲಿ ಸಂಘರ್ಷದಲ್ಲಿ ತೊಡಗಿದ್ದ ಎರಡು ಬುಡಕಟ್ಟು ಸಮುದಾಯಗಳ ನಡುವೆ ಕದನ ವಿರಾಮ ಒಪ್ಪಂದ ಮೂಡಿದೆ.

ಖುರ್ರಂ ಜಿಲ್ಲೆಯಲ್ಲಿ ಅಲಿಜಾಯ್ ಮತ್ತು ಬಾಗನ್ ಬುಡಕಟ್ಟುಗಳ ನಡುವೆ ನಡೆದ ಸಂಘರ್ಷದಲ್ಲಿ 130ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಶಾಂತಿ ಸ್ಥಾಪನೆ ಆಗಿದೆ ಎಂಬುದನ್ನು ಖುರ್ರಂ ಜಿಲ್ಲಾಧಿಕಾರಿ ಜಾವೆದುಲ್ಲಾ ಮೆಹ್ಸುದ್ ಖಚಿತಪಡಿಸಿದ್ದಾರೆ. ನವೆಂಬರ್ 22ರಂದು ಪ್ರಯಾಣಿಕ ವಾಹನಗಳ ಮೇಲೆ ದಾಳಿ ನಡೆಯುವುದರೊಂದಿಗೆ ಸಂಘರ್ಷ ಆರಂಭವಾಗಿತ್ತು. ಈ ದಾಳಿಯಲ್ಲಿ 47 ಮಂದಿ ಜೀವ ಕಳೆದುಕೊಂಡಿದ್ದರು.

ಸತತ ಹನ್ನೊಂದು ದಿನಗಳವರೆಗೆ ಮುಂದುವರಿದ ಸಂಘರ್ಷವು 130 ಮಂದಿಯ ಪ್ರಾಣಹಾನಿಗೆ ಕಾರಣವಾಯಿತು. 186 ಮಂದಿ ಈ ಸಂಘರ್ಷದ ಕಾರಣದಿಂದಾಗಿ ಗಾಯಗೊಂಡಿದ್ದಾರೆ.

ಬಾಂಬ್ ಸ್ಫೋಟ: ಮೂವರು ಮಕ್ಕಳು ಮೃತ

ಪೇಶಾವರ (ಪಿಟಿಐ): ಪಾಕಿಸ್ತಾನದ ವಾಯವ್ಯ ಭಾಗದಲ್ಲಿರುವ ಖೈಬರ್ ಪಖ್ತುಂಖ್ವಾ ಪ್ರದೇಶದಲ್ಲಿ ಬಾಂಬ್ ಸ್ಫೋಟಗೊಂಡಿದ್ದರಿಂದ ಮೂವರು ಮಕ್ಕಳು ಮೃತಪಟ್ಟಿದ್ದಾರೆ.

ಮಕ್ಕಳು ಮದರಸಾದಿಂದ ಮನೆಗೆ ಮರಳುತ್ತಿದ್ದಾಗ ಸ್ಫೋಟ ಸಂಭವಿಸಿದೆ. ಮೃತ ಮೂವರು ಮಕ್ಕಳ ಪೈಕಿ ಇಬ್ಬರು ಸಹೋದರರು ಎಂದು ಸ್ಥಳೀಯ ಮೂಲಗಳು ಹೇಳಿವೆ.

ಈ ಬಾಂಬ್ ಯಾರೂ ಇಲ್ಲದ ಸ್ಥಳದಲ್ಲಿ ಬಿದ್ದಿತ್ತು. ಅದನ್ನು ಆಟಿಕೆ ಎಂದು ಭಾವಿಸಿದ ಮಕ್ಕಳು ಎತ್ತಿಕೊಂಡಾಗ ಭಾರಿ ಸ್ಫೋಟ ಸಂಭವಿಸಿತು.

ಪಾಕಿಸ್ತಾನದ ವಾಯವ್ಯ ಭಾಗದಲ್ಲಿ ಇದುವರೆಗೆ ಹಲವು ಮಕ್ಕಳು ಆಟಿಕೆಯಂತೆ ಕಾಣುವ ಇಂತಹ ಸ್ಫೋಟಕಗಳನ್ನು ಎತ್ತಿಕೊಳ್ಳಲು ಮುಂದಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಬಾಂಬ್‌ಗಳನ್ನು 1980ರ ದಶಕದಲ್ಲಿ ಸೋವಿಯತ್ ಸೇನೆಯು ತನ್ನನ್ನು ವಿರೋಧಿಸಿದವರನ್ನು ಗುರಿಯಾಗಿಸಿಕೊಂಡು ನೆರೆಯ ಅಫ್ಗಾನಿಸ್ತಾನದಲ್ಲಿ ಬಳಸಿತ್ತು. ಇವುಗಳನ್ನು ವಿಮಾನದಿಂದ ಕೆಳಕ್ಕೆ ಎಸೆಯಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಅವಹೇಳನಕಾರಿ ಹೇಳಿಕೆ: ಬಿಜೆಪಿಯ ರಾಜಾಗೆ ಜೈಲು

ಚೆನ್ನೈ: ಪೆರಿಯಾರ್ ಪ್ರತಿಮೆ ಧ್ವಂಸಕ್ಕೆ ಸಂಬಂಧಿಸಿದಂತೆ ಮತ್ತು ಡಿಎಂಕೆ ಸಂಸದೆ ಕನಿಮೊಳಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಪ್ರಕರಣಗಳಲ್ಲಿ ಬಿಜೆಪಿ ನಾಯಕ ಎಚ್. ರಾಜಾ ಅವರನ್ನು ಇಲ್ಲಿನ ನ್ಯಾಯಾಲಯ ದೋಷಿ ಎಂದು ಹೇಳಿದ್ದು, ಶಿಕ್ಷೆ ವಿಧಿಸಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿಯೂ ಆಗಿರುವ ರಾಜಾ ಅವರಿಗೆ ಎರಡೂ ಪ್ರಕರಣಗಳಲ್ಲಿ ಆರು ತಿಂಗಳ ಸಾದಾ ಜೈಲು ಮತ್ತು ಒಟ್ಟು ₹6 ಸಾವಿರ ದಂಡ ವಿಧಿಸಿ ಸೋಮವಾರ ತೀರ್ಪು ನೀಡಿದೆ.

ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಸಾಧ್ಯವಾಗುವಂತೆ ನ್ಯಾಯಾಲಯವು ಶಿಕ್ಷೆಯನ್ನು 30 ದಿನಗಳವರೆಗೆ ಅಮಾನತಿನಲ್ಲಿರಿಸಿದೆ.

2018ರಲ್ಲಿ ತ್ರಿಪುರದಲ್ಲಿ ಲೆನಿನ್ ಅವರ ಪ್ರತಿಮೆಯನ್ನು ಉರುಳಿಸಲಾಗಿತ್ತು. ಅದರ ಬೆನ್ನಲ್ಲೇ, ರಾಜಾ ಅವರು 'ತಮಿಳುನಾಡಿನಲ್ಲಿರುವ ಪೆರಿಯಾರ್ ಪ್ರತಿಮೆಗೂ ಅದೇ ಗತಿ ಒದಗಲಿದೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು. ಈ ಸಂದೇಶ ವಿವಾದಕ್ಕೆ ಕಾರಣವಾಗಿತ್ತು. ಕನಿಮೊಳಿ ವಿರುದ್ಧ ಅವರು ಸಾಮಾಜಿಕ ಮಾಧ್ಯಮದಲ್ಲಿ ಅವಹೇಳನಕಾರಿ ಹೇಳಿಕೆ ನೀಡಿದ್ದರು.

'ಪೆರಿಯಾರ್' ಪ್ರತಿಮೆ ಧ್ವಂಸ ಕುರಿತು ನೀಡಿದ್ದ ಹೇಳಿಕೆಗೆ ಸಂಬಂಧಿಸಿದಂತೆ ನ್ಯಾಯಾಲಯವು, 'ಇಂತಹ ದ್ವೇಷದ ಸಂದೇಶಗಳನ್ನು ನಮ್ಮ ಸಮಾಜದಲ್ಲಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿದೆ.

ಅವಧ್ ಓಝಾ ಎಎಪಿ ಸೇರ್ಪಡೆ

ನವದೆಹಲಿ (ಪಿಟಿಐ): ಯುಪಿಎಸ್‌ಸಿ ಪರೀಕ್ಷೆ ತರಬೇತುದಾರ ಹಾಗೂ ಸ್ಫೂರ್ತಿದಾಯಕ ಭಾಷಣಕಾರ ಅವಧ್ ಓಝಾ ಅವರು ಸೋಮವಾರ ಎಎಪಿ ಸೇರಿದರು. ಕಾರ್ಯಕ್ರಮದಲ್ಲಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಹಾಗೂ ಹಿರಿಯ ನಾಯಕ ಮನೀಷ್ ಸಿಸೋಡಿಯಾ ಇದ್ದರು.

'ಶಿಕ್ಷಣದ ಅಭಿವೃದ್ಧಿಯೇ ನನ್ನ ಮಹತ್ವಾಕಾಂಕ್ಷೆಯಾಗಿದೆ. ಮಕ್ಕಳ ಭವಿಷ್ಯವನ್ನು ಕೇಂದ್ರೀಕರಿಸಿರುವ ಪಕ್ಷದ ಸಿದ್ಧಾಂತದೊಂದಿಗೆ ನಾನು ಕೈಜೋಡಿಸಿದ್ದೇನೆ. ನನಗೆ ಅವಕಾಶ ನೀಡಿದ್ದಕ್ಕಾಗಿ ಕೇಜ್ರಿವಾಲ್‌ಗೆ ಧನ್ಯವಾದ' ಎಂದು ಓಝಾ ಹೇಳಿದರು.

ಲೋಕಸಭೆ, ರಾಜ್ಯಸಭೆಯಲ್ಲಿ ಇಂದಿನಿಂದ ಸುಗಮ ಕಲಾಪ ಸಾಧ್ಯತೆ

ಸಂವಿಧಾನ: ಚರ್ಚೆಗೆ ಸರ್ಕಾರ ಸಮ್ಮತಿ

ಪ್ರಜಾವಾಣಿ ವಾರ್ತೆ/ ಪಿಟಿಐ

ದಿನದ ಬೆಳವಣಿಗೆ...
- ಗದ್ದಲ; ಸೋಮವಾರವೂ ನಡೆಯದ ಸಂಸತ್ ಕಲಾಪ
- ವಿರೋಧ ಪಕ್ಷಗಳ ನಾಯಕರೊಂದಿಗೆ ಸ್ಪೀಕರ್ ಓಂ ಬಿರ್ಲಾ ಸಭೆ
- ಆಡಳಿತ– ವಿಪಕ್ಷಗಳ ನಡುವೆ ಒಮ್ಮತ
- ಲೋಕಸಭೆಯಲ್ಲಿ ಡಿಸೆಂಬರ್ 13, 14 ರಂದು ಸಂವಿಧಾನ ಕುರಿತ ಚರ್ಚೆ

ನವದೆಹಲಿ: ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸಂವಿಧಾನದ ಕುರಿತು ಎರಡು ದಿನಗಳ ಚರ್ಚೆ ನಡೆಸಬೇಕು ಮತ್ತು ಬಾಂಗ್ಲಾದೇಶದ ಪರಿಸ್ಥಿತಿ, ಸಂಭಲ್ ಹಿಂಸಾಚಾರದಂತಹ ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕು ಎಂಬ ಪ್ರತಿಪಕ್ಷಗಳ ಬೇಡಿಕೆಗೆ ಸರ್ಕಾರ ಸೋಮವಾರ ಸಮ್ಮತಿಸಿದೆ. ಇದರೊಂದಿಗೆ, ಸಂಸತ್ ಕಲಾಪಕ್ಕೆ ಸಂಬಂಧಿಸಿದಂತೆ ಎದ್ದಿದ್ದ 'ಅನಿಶ್ಚಿತತೆ'ಗೆ ತೆರೆ ಬಿದ್ದಿದೆ.

ಭಾರತದ ಸಂವಿಧಾನವನ್ನು ಅಳವಡಿಸಿಕೊಂಡ 75ನೇ ವರ್ಷಾಚರಣೆ ಅಂಗವಾಗಿ ಲೋಕಸಭೆಯಲ್ಲಿ ಡಿಸೆಂಬರ್ 13 ಮತ್ತು 14ರಂದು ಹಾಗೂ ರಾಜ್ಯಸಭೆಯಲ್ಲಿ ಡಿಸೆಂಬರ್ 16 ಮತ್ತು 17ರಂದು ಸಂವಿಧಾನದ ಕುರಿತ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಗುವುದು. ಸ್ಪೀಕರ್ ಓಂ ಬಿರ್ಲಾ ಅವರು ವಿವಿಧ ಪಕ್ಷಗಳ ನಾಯಕರೊಂದಿಗೆ ನಡೆಸಿದ ಸಭೆಯಲ್ಲಿ ಈ ಮಹತ್ವದ ಬೆಳವಣಿಗೆ ನಡೆದಿದೆ.

ಚರ್ಚೆಯ ದಿನಾಂಕಗಳನ್ನು ಪ್ರಕಟಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಮಂಗಳವಾರದಿಂದ ಸಂಸತ್ ಕಲಾಪ ಸುಗಮವಾಗಿ ನಡೆಯುವ ವಿಶ್ವಾಸ ವ್ಯಕ್ತಪಡಿಸಿದರು.

ಸಂಭಲ್ ಹಿಂಸಾಚಾರ ಮತ್ತು ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಕುರಿತ ಚರ್ಚೆಗೆ ಶೂನ್ಯ ವೇಳೆಯಲ್ಲಿ ಅವಕಾಶ ನೀಡುವ ಸಾಧ್ಯತೆಯಿದೆ. ಆದರೆ, ಉದ್ಯಮಿ ಗೌತಮ್ ಅದಾನಿ ಲಂಚ ಪ್ರಕರಣದ ವಿಚಾರಣೆ ಅಮೆರಿಕದ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕಾರಣ ಆ ವಿಷಯದ ಚರ್ಚೆಗೆ ಅವಕಾಶ ನೀಡುವ ಸಾಧ್ಯತೆ ಇಲ್ಲ. ಮಣಿಪುರ ಗಲಭೆ, ಸಂಭಲ್ ಹಿಂಸಾಚಾರ ಪ್ರಕರಣ ಒಳಗೊಂಡಂತೆ ಇತರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲು ವಿಪಕ್ಷಗಳು ಪಟ್ಟು ಹಿಡಿದಿರುವ ಕುರಿತ ಪ್ರಶ್ನೆಗೆ ರಿಜಿಜು, 'ನಿಯಮಗಳಿಗೆ ಅನುಸಾರವಾಗಿ ಆ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ' ಎಂದರು.

ಅದಾನಿ ಲಂಚ ಹಗರಣದ ಬಗ್ಗೆ ಚರ್ಚೆ ನಡೆಯಬೇಕು ಎಂದು ಕಾಂಗ್ರೆಸ್ ಪಟ್ಟು ಹಿಡಿದರೆ, ಇತರ ವಿಪಕ್ಷಗಳು ಮಣಿಪುರ ಮತ್ತು ಸಂಭಲ್ ಹಿಂಸಾಚಾರ ವಿಷಯದ ಚರ್ಚೆಗೆ ಒತ್ತಾಯಿಸಿವೆ. ಇದರಿಂದ ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ವಾರ ಯಾವುದೇ ಕಲಾಪ ನಡೆದಿರಲಿಲ್ಲ. ಸೋಮವಾರ ಕೂಡಾ ವಿರೋಧ ಪಕ್ಷಗಳು ಗದ್ದಲ ಎಬ್ಬಿಸಿದ ಕಾರಣ ಕಲಾಪ ನಡೆಯಲಿಲ್ಲ.

ಆದರೆ, ಕೆಲವು ವಿರೋಧ ಪಕ್ಷಗಳು ಅದರಲ್ಲೂ ಮುಖ್ಯವಾಗಿ ತೃಣಮೂಲ ಕಾಂಗ್ರೆಸ್ (ಟಿಎಂಸಿ), ಅದಾನಿ ಲಂಚ ಹಗರಣದ ಕುರಿತ ಚರ್ಚೆಗೆ ಹೆಚ್ಚಿನ ಒತ್ತು ನೀಡಿಲ್ಲ. ನಿರುದ್ಯೋಗ, ಅಗತ್ಯ ವಸ್ತುಗಳ ಬೆಲೆಯೇರಿಕೆ ಮತ್ತು ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ಅನುದಾನ ಹಂಚಿಕೆಯಲ್ಲಿ ಕೇಂದ್ರದ ತಾರತಮ್ಯ ಸೇರಿದಂತೆ ಇತರ ವಿಷಯಗಳ ಬಗ್ಗೆ ಚರ್ಚೆ ನಡೆಯಬೇಕು ಎಂದು ಟಿಎಂಸಿ ಬಯಸಿದೆ.

ಚಳಿಗಾಲದ ಅಧಿವೇಶನದಲ್ಲಿ 'ಇಂಡಿಯಾ' ಮೈತ್ರಿಕೂಟದ ಜಂಟಿ ಕಾರ್ಯತಂತ್ರವನ್ನು ರೂಪಿಸಲು ಕರೆದಿದ್ದ ಸಭೆಯಲ್ಲೂ ಟಿಎಂಸಿ ಪಾಲ್ಗೊಳ್ಳಲಿಲ್ಲ. 'ಕಾಂಗ್ರೆಸ್‌ನ ಕಾರ್ಯಸೂಚಿಗೆ ಒಪ್ಪಿಗೆ ನೀಡುವ ಕೆಲಸಕ್ಕಾಗಿ ನಮಗೆ ಅಲ್ಲಿರಲು ಸಾಧ್ಯವಿಲ್ಲ' ಎಂದು ಟಿಎಂಸಿ ಮೂಲಗಳು ಹೇಳಿವೆ.

ಕಲಾಪಕ್ಕೆ ಅಡ್ಡಿಪಡಿಸಬಾರದು ಎಂಬ ಮನವಿಗೆ ಎಲ್ಲ ಸಂಸದರು ಸಮ್ಮತಿಸಿದ್ದಾರೆ. ಸಂವಿಧಾನ ಕುರಿತ ಎರಡು ದಿನಗಳ ಚರ್ಚೆಗೆ ಸರ್ಕಾರ ಒಪ್ಪಿಗೆ ಸೂಚಿಸಿದೆ

ಕಿರಣ್ ರಿಜಿಜು, ಸಂಸದೀಯ ವ್ಯವಹಾರಗಳ ಸಚಿವ

ಮೋದಿ ಸರ್ಕಾರವು ಖರ್ಗೆ ಮತ್ತು ರಾಹುಲ್ ಮನವಿಯನ್ನು 6 ದಿನಗಳ ಬಳಿಕ ಒಪ್ಪಿದ್ದು, ಸುಗಮ ಕಲಾಪಕ್ಕೆ ಅನುವು ಮಾಡಿಕೊಡುವ ವಿಶ್ವಾಸವಿದೆ

ಜೈರಾಮ್ ರಮೇಶ್, ರಾಜ್ಯ ಸಭೆಯಲ್ಲಿ ಕಾಂಗ್ರೆಸ್‌ನ ಮುಖ್ಯ ಸಚೇತಕ

'ಇಂಡಿಯಾ' ಸಭೆ

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ನಾಯಕರ ಜತೆ ಸಭೆ ನಡೆಸಿದರು —ಪಿಟಿಐ ಚಿತ್ರ

ಅದಾನಿ ಲಂಚ ಹಗರಣ, ಮಣಿಪುರ ಗಲಭೆ ಮತ್ತು ಸಂಭಲ್ ಹಿಂಸಾಚಾರದಂತಹ ವಿಷಯಗಳ ಕುರಿತು ತಮ್ಮ ಪ್ರತಿಭಟನೆಯನ್ನು ವಾಪಸ್ ಪಡೆಯದೆಯೇ ಸಂಸತ್ತಿನ ಸುಗಮ ಕಲಾಪಕ್ಕೆ ಅವಕಾಶ ಮಾಡಿಕೊಡುವ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು 'ಇಂಡಿಯಾ' ಮೈತ್ರಿಕೂಟದ ನಾಯಕರು ಸೋಮವಾರ ಸಭೆ ನಡೆಸಿದರು.

ಕಲಾಪಕ್ಕೆ ಅಡ್ಡಿಪಡಿಸುವುದನ್ನು ಮುಂದುವರಿಸಿದರೆ ಅದು ತಮಗೆ ತಿರುಗುಬಾಣವಾಗಬಹುದು ಎಂಬ ಅಭಿಪ್ರಾಯವನ್ನು ಕೆಲವು ಪಕ್ಷಗಳ ನಾಯಕರು ವ್ಯಕ್ತಪಡಿಸಿದರು. ಮಲ್ಲಿಕಾರ್ಜುನ ಖರ್ಗೆ ಅವರ ಅನುಪಸ್ಥಿತಿಯಲ್ಲಿ ಸಭೆಯ ನೇತೃತ್ವ ವಹಿಸಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಅದಾನಿ ವಿಷಯವನ್ನು ಸಂಪೂರ್ಣವಾಗಿ ಕೈಬಿಡಲು ಸಾಧ್ಯವಿಲ್ಲ ಎಂಬ ಸೂಚನೆಯನ್ನು ನೀಡಿದರು. ಅದಾನಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಗಮನ ಸೆಳೆಯಲು ಕಾಂಗ್ರೆಸ್ ಪಕ್ಷವು ಬುಧವಾರ ಬೆಳಿಗ್ಗೆ ಸಂಸತ್ ಭವನದ 'ಮಕರ ದ್ವಾರ'ದ ಬಳಿ ಪ್ರತಿಭಟನೆ ನಡೆಸಲಿದೆ.

ಮುಖ್ಯ ಕಾರ್ಯದರ್ಶಿಗಳ ಹಾಜರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರ ರಾಜಧಾನಿ ಪ್ರದೇಶದ ರಾಜ್ಯಗಳು 'ಬಹುಹಂತಗಳ ಪ್ರತಿಸ್ಪಂದನ ಕ್ರಿಯಾಯೋಜನೆ'ಯಿಂದ (ಜಿಆರ್‌ಎಪಿ–4) ತೊಂದರೆಗೆ ಒಳಗಾದ ದಿನಗೂಲಿ ಕಾರ್ಮಿಕರಿಗೆ ಜೀವನ ನಿರ್ವಹಣೆಗೆ ನೆರವು ಒದಗಿಸದೆ ಇರುವುದರ ಬಗ್ಗೆ ಸುಪ್ರೀಂ ಕೋರ್ಟ್ ಸೋಮವಾರ ಅಸಮಾಧಾನ ವ್ಯಕ್ತಪಡಿಸಿದೆ.

ದೆಹಲಿ, ರಾಜಸ್ಥಾನ, ಪಂಜಾಬ್ ಮತ್ತು ಉತ್ತರ ಪ್ರದೇಶ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ತನ್ನ ಮುಂದೆ ವರ್ಚುವಲ್ ಆಗಿ ಹಾಜರಿರಬೇಕು ಎಂದು ಕೋರ್ಟ್ ಸೂಚನೆ ನೀಡಿದೆ. ದೆಹಲಿಯ ವಾಯುಮಾಲಿನ್ಯ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳಿಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು, ವಾಯುಮಾಲಿನ್ಯ ನಿಯಂತ್ರಿಸುವ ಉದ್ದೇಶದಿಂದ ಜಾರಿಗೆ ತಂದಿರುವ ಜಿಆರ್‌ಎಪಿ–4 ನಿರ್ಬಂಧಗಳನ್ನು ಸಡಿಲಿಸಲು ನಿರಾಕರಿಸಿತು.

ನಿರ್ಬಂಧಗಳನ್ನು ಸಡಿಲಿಸಲು ವಾಯು ಗುಣಮಟ್ಟ ನಿರ್ವಹಣಾ ಆಯೋಗ (ಸಿಎಕ್ಯೂಎಂ) ಮಾಡಿರುವ ಪ್ರಸ್ತಾವಗಳನ್ನು ತಾನು ವಾಯು ಗುಣಮಟ್ಟ ಸೂಚ್ಯಂಕವನ್ನು ಗಮನಿಸಿ, ಗುರುವಾರ ಪರಿಶೀಲಿಸುವುದಾಗಿ ಪೀಠವು ಹೇಳಿದೆ.

ರಾಜ್ಯಗಳು ದಿನಗೂಲಿ ಕಾರ್ಮಿಕರಿಗೆ, ಕಾರ್ಮಿಕ ಸೆಸ್ ಮೂಲಕ ಸಂಗ್ರಹಿಸಿದ ನಿಧಿಯಿಂದ ಜೀವನ ನಿರ್ವಹಣೆಗೆ ನೆರವು ಒದಗಿಸದೆ ಇರುವುದರ ಬಗ್ಗೆ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿತು. ಜಿಆರ್‌ಎಪಿ–4 ಕ್ರಮದ ಭಾಗವಾಗಿ ಕಟ್ಟಡ ನಿರ್ಮಾಣ ಕಾರ್ಯಗಳ ಮೇಲೆ ನಿಷೇಧ ಹೇರಿದ ಪರಿಣಾಮವಾಗಿ ದಿನಗೂಲಿ ಕಾರ್ಮಿಕರು ತೊಂದರೆಗೆ ಒಳಗಾಗಿದ್ದರು. ಹೀಗಾಗಿ ಇವರಿಗೆ ನೆರವು ಒದಗಿಸಬೇಕು ಎಂದು ಪೀಠವು ಸೂಚನೆ ನೀಡಿತ್ತು.

'ದೆಹಲಿ, ರಾಜಸ್ಥಾನ, ಪಂಜಾಬ್ ಮತ್ತು ಉತ್ತರ ಪ್ರದೇಶ ಸರ್ಕಾರಗಳು ಜೀವನ ನಿರ್ವಹಣೆಗೆ ನೆರವು ನೀಡಬೇಕು ಎಂಬ ನಮ್ಮ ಆದೇಶವನ್ನು ಪಾಲಿಸಿರುವ ಬಗ್ಗೆ ಅನುಪಾಲನಾ ವರದಿಯನ್ನು ನೀಡಿಲ್ಲ' ಎಂದು ಪೀಠವು ಅಸಮಾಧಾನ ವ್ಯಕ್ತಪಡಿಸಿತು.

ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಹಣವನ್ನು ಪಾವತಿ ಮಾಡುವ ವಿಚಾರದಲ್ಲಿ ಆದೇಶದ ಪಾಲನೆಯು ಗಣನೀಯ ಮಟ್ಟದಲ್ಲಿ ಆಗದೆ ಇದ್ದರೆ ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಕಾನೂನಿನ ಅಡಿಯಲ್ಲಿ ಕ್ರಮ ಜರುಗಿಸುವ ಬಗ್ಗೆ ಪರಿಶೀಲಿಸಬೇಕಾಗುತ್ತದೆ ಎಂದು ಪೀಠವು ಎಚ್ಚರಿಕೆ ನೀಡಿದೆ.

ಸಹೋದರನಿಂದ ಮಹಿಳಾ ಕಾನ್‌ಸ್ಟೆಬಲ್ ಹತ್ಯೆ

ಹೈದರಾಬಾದ್: ತೆಲಂಗಾಣ ಪೊಲೀಸ್ ಇಲಾಖೆಯ ಮಹಿಳಾ ಕಾನ್‌ಸ್ಟೆಬಲ್ ಒಬ್ಬರನ್ನು ಆಕೆಯ ಸಹೋದರನೇ ಹತ್ಯೆ ಮಾಡಿದ ಪ್ರಕರಣ ಇಲ್ಲಿನ ರಂಗಾರೆಡ್ಡಿ ಜಿಲ್ಲೆಯ ಇಬ್ರಾಹಿಂಪಟ್ಟಣಂನಲ್ಲಿ ನಡೆದಿದ್ದು, ಇದು ಮರ್ಯಾದೆಗೇಡು ಹತ್ಯೆ ಎಂದು ಶಂಕಿಸಲಾಗಿದೆ.

ರಾಯ್‌ಪೋಲ್ ನಿವಾಸಿ ಕೊಂಗಾರ ನಾಗಮಣಿ (27) ಹತ್ಯೆಯಾದವರು. ಹಿಂದುಳಿದ ವರ್ಗದ ನಾಗಮಣಿ ಅವರು ಕಳೆದ ತಿಂಗಳು ಕುಟುಂಬದ ಇಚ್ಚೆಗೆ ವಿರುದ್ಧವಾಗಿ ಪರಿಶಿಷ್ಟ ಜಾತಿಯ ಭಂಡಾರಿ ಶ್ರೀಕಾಂತ್ (28) ಅವರನ್ನು ಮದುವೆಯಾಗಿದ್ದರು.

ಹಯಾತ್‌ನಗರದಲ್ಲಿ ಪತಿಯೊಂದಿಗೆ ವಾಸಿಸುತ್ತಿದ್ದ ನಾಗಮಣಿ, ಇಲ್ಲಿನ ಹಯಾತ್‌ನಗರ ಠಾಣೆಯಲ್ಲೇ ಕೆಲಸ ಮಾಡುತ್ತಿದ್ದರು. ಹತ್ತು ವರ್ಷದ ಹಿಂದೆಯೇ ಮೊದಲ ಮದುವೆಯಾಗಿದ್ದ ನಾಗಮಣಿ, ಪತಿ ಜೊತೆಗಿನ ಮನಸ್ತಾಪದ ಬಳಿಕ 2022ರಲ್ಲಿ ವಿಚ್ಛೇದನ ಪಡೆದಿದ್ದರು.

ಭಾನುವಾರ ತಮ್ಮ ಹುಟ್ಟೂರಾದ ರಾಯ್‌ಪೋಲ್‌ಗೆ ತೆರಳಿದ್ದ ಅವರು ಸೋಮವಾರ ಬೆಳಿಗ್ಗೆ ಕೆಲಸಕ್ಕೆ ಹಾಜರಾಗಲು ಹೊರಟಿದ್ದರು. ಮಾರ್ಗಮಧ್ಯದಲ್ಲಿ ಸಹೋದರ ಪರಮೇಶ್ ಬೈಕ್‌ನಿಂದ ಡಿಕ್ಕಿ ಹೊಡೆದು, ಚಾಕುವಿನಿಂದ ತಿವಿದಿದ್ದಾನೆ. ಇದರಿಂದ ನಾಗಮಣಿ ಅವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ ಎಂದು ಶಂಕಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದಾರೆ.

ಬಾಲಾಜಿಗೆ ಸಚಿವ ಸ್ಥಾನ, ಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಉದ್ಯೋಗಕ್ಕಾಗಿ ಹಣ' ಹಗರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಡಿಎಂಕೆ ನಾಯಕ ವಿ. ಸೆಂಥಿಲ್ ಬಾಲಾಜಿ ಅವರಿಗೆ ಜಾಮೀನು ಮಂಜೂರಾದ ಕೆಲವೇ ದಿನಗಳಲ್ಲಿ ಅವರನ್ನು ತಮಿಳುನಾಡಿನ ಸಚಿವರನ್ನಾಗಿ ನೇಮಿಸಿದ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಈ ಪ್ರಕರಣದ ಸಾಕ್ಷಿಗಳು ಎಷ್ಟರ ಮಟ್ಟಿಗೆ ಸ್ವತಂತ್ರರಿರುತ್ತಾರೆ ಎಂಬ ಆತಂಕವನ್ನು ವ್ಯಕ್ತಪಡಿಸಿರುವ ಅರ್ಜಿಯ ಪರಿಶೀಲನೆಗೆ ಒಪ್ಪಿದೆ. ಆದರೆ, ಬಾಲಾಜಿ ಅವರಿಗೆ ಜಾಮೀನು ಮಂಜೂರು ಮಾಡಿ ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 26ರಂದು ನೀಡಿದ ಆದೇಶದಲ್ಲಿ ಮಧ್ಯಪ್ರವೇಶ ಮಾಡಲು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ನಿರಾಕರಿಸಿದೆ.

'ನಾವು ನಿಮಗೆ ಜಾಮೀನು ನೀಡಿದೆವು. ಅದಾದ ಕೆಲವೇ ದಿನಗಳಲ್ಲಿ ನೀವು ಸಚಿವರಾದಿರಿ. ಇದು ನಿಲ್ಲಬೇಕು. ಈಗ ನೀವು ಸಂಪುಟದ ಹಿರಿಯ ಸಚಿವರಾಗಿರುವ ಕಾರಣ ಸಾಕ್ಷಿಗಳು ಒತ್ತಡಕ್ಕೆ ಸಿಲುಕುತ್ತಾರೆ ಎಂಬ ಭಾವನೆ ಯಾರಲ್ಲಾದರೂ ಮೂಡುತ್ತದೆ. ಇಲ್ಲಿ ಏನು ನಡೆಯುತ್ತಿದೆ' ಎಂದು ಬಾಲಾಜಿ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರನ್ನು ಉದ್ದೇಶಿಸಿ ಪೀಠವು ಪ್ರಶ್ನಿಸಿತು.

ಈ ವಿಚಾರವಾಗಿ ನ್ಯಾಯಾಲಯವು ನೋಟಿಸ್ ಜಾರಿ ಮಾಡುವುದಿಲ್ಲ. ಪ್ರಕರಣದಲ್ಲಿ ಸಾಕ್ಷಿಗಳು 'ಒತ್ತಡದಲ್ಲಿ ಇರುತ್ತಾರೆಯೇ' ಎಂಬುದಕ್ಕೆ ವಿಚಾರಣೆಯನ್ನು ಸೀಮಿತಗೊಳಿಸಲಾಗುತ್ತದೆ ಎಂದು ಪೀಠವು ಸ್ಪಷ್ಟಪಡಿಸಿತು. ವಿಚಾರಣೆಯನ್ನು ಡಿ. 13ಕ್ಕೆ ನಿಗದಿ ಮಾಡಲಾಗಿದೆ. ದೂರುದಾರರ ಪೈಕಿ ಒಬ್ಬರಾದ ಕೆ. ವಿದ್ಯಾ ಕುಮಾರ್ ಅವರು ಸಲ್ಲಿಸಿರುವ ಅರ್ಜಿಯು, ಜಾಮೀನು ಮಂಜೂರಾದ ತಕ್ಷಣ ಬಾಲಾಜಿ ಅವರು ಸಂಪುಟ ದರ್ಜೆಯ ಸಚಿವರಾಗಿ ನೇಮಕ ಆಗಿದ್ದಾರೆ ಎಂಬ ಆತಂಕವನ್ನು ಆಧರಿಸಿದೆ ಎಂದು ಪೀಠವು ಹೇಳಿದೆ.

ಬಾಲಾಜಿ ಸೆ.29ರಂದು ಸಂಪುಟ ದರ್ಜೆಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸಂಪುಟದಲ್ಲಿ ಬಾಲಾಜಿ ಅವರಿಗೆ ಮೊದಲು ನೀಡಿದ್ದ ಖಾತೆಗಳನ್ನೇ ಮತ್ತೆ ನೀಡಲಾಗಿದೆ.

'1,500ಕ್ಕೂ ಅಧಿಕ ಜನರಿಗೆ ಒಂದು ಮತಗಟ್ಟೆ: ಪ್ರಮಾಣಪತ್ರ ಸಲ್ಲಿಸಿ'

ನವದೆಹಲಿ (ಪಿಟಿಐ): '1,200 ಜನರಿಗೆ ಒಂದು ಮತಗಟ್ಟೆ ಸ್ಥಾಪಿಸಬೇಕು ಎಂಬ ನಿಯಮವಿದೆ. ಆದರೆ, ದೇಶದಲ್ಲಿ ಈಗ 1,500ಕ್ಕೂ ಹೆಚ್ಚು ಜನರಿಗೆ ಒಂದು ಮತಗಟ್ಟೆಯನ್ನು ಚುನಾವಣಾ ಆಯೋಗ ಸ್ಥಾಪಿಸುತ್ತದೆ. ಇದು ಕಳವಳಕಾರಿ' ಎಂದು ಆಕ್ಷೇಪಿಸಿ ಸಲ್ಲಿಸಲಾಗಿದ್ದ ಅರ್ಜಿಯ ಕುರಿತು ಪ್ರಮಾಣಪತ್ರವನ್ನು ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಆಯೋಗಕ್ಕೆ ಸೋಮವಾರ ಸೂಚಿಸಿದೆ.

'ಮತಗಟ್ಟೆ ವ್ಯಾಪ್ತಿಯಲ್ಲಿ ಮತದಾರರ ಸಂಖ್ಯೆಯನ್ನು ಹೆಚ್ಚಳ ಮಾಡಿದ ನಿರ್ಧಾರದ ಕುರಿತು ಸಂಕ್ಷಿಪ್ತವಾಗಿ ವಿವರಿಸಿ ಪ್ರಮಾಣಪತ್ರವನ್ನು ಸಲ್ಲಿಸಿ' ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರಿದ್ದ ನ್ಯಾಯಪೀಠ ಹೇಳಿತು. ಮುಂದಿನ ವಿಚಾರಣೆಯನ್ನು 2025ರ ಜನವರಿ 27ಕ್ಕೆ ಮುಂದೂಡಲಾಯಿತು.

'ದೆಹಲಿ ಚಲೋ': ಗಡಿಯಲ್ಲಿ ರೈತರಿಗೆ ತಡೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ನೊಯಿಡಾ: ಸರ್ಕಾರ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಉತ್ತರ ಪ್ರದೇಶದ ಸುಮಾರು 20 ಜಿಲ್ಲೆಗಳ ರೈತರು ನೊಯಿಡಾದ ಮಹಾಮಾಯಾ ಮೇಲ್ಸೇತುವೆಯಿಂದ ದೆಹಲಿ ಯತ್ತ ಸೋಮವಾರ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿದಾಗ ದೆಹಲಿ ಗಡಿಯಲ್ಲಿ ತಡೆಯಲಾಯಿತು. ಇಲ್ಲಿಯೇ ರೈತರು ಧರಣಿ ಆರಂಭಿಸಿದ್ದಾರೆ.

ರೈತರು ದೆಹಲಿ ಪ್ರವೇಶಿಸುವುದನ್ನು ತಡೆಯಲು ದೆಹಲಿ–ನೊಯಿಡಾ ಗಡಿಯಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಸಂಯುಕ್ತ ಕಿಸಾನ್ ಮೋರ್ಚಾದ (ಗೌತಮ್ ಬುದ್ಧ ನಗರ ವಿಭಾಗ) ಬೆಂಬಲದೊಂದಿಗೆ 12 ರೈತ ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು.

'ಬೋಲ್ ಕಿಸಾನ್, ಹಲ್ಲಾ ಬೋಲ್' (ಮಾತನಾಡಿರೈತರೇ, ಧ್ವನಿಎತ್ತಿ) ಎಂಬಘೋಷಣೆಗಳನ್ನು ಕೂಗುತ್ತಾ ನೊಯಿಡಾ ಗಡಿಯಲ್ಲಿ ಅಳವಡಿಸಲಾಗಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿಕೊಂಡು ರೈತರು ದೆಹಲಿಯತ್ತ ಸಾಗಿದರು. ಮಧ್ಯಾಹ್ನ 1ರ ಸುಮಾರಿಗೆ ದೆಹಲಿಯ ಚಿಲ್ಲಾ ಗಡಿ ಹತ್ತಿರದ ದಲಿತ್ ಪ್ರೇರಣ್ ಸ್ಥಲ್ ಪ್ರದೇಶದಲ್ಲಿ ರೈತರನ್ನು ಪೊಲೀಸರು ತಡೆದು ನಿಲ್ಲಿಸಿದರು.

ಸಂಚಾರ ದಟ್ಟಣೆ: ಚಿಲ್ಲಾ ಗಡಿ, ಡಿಎನ್‌ಡಿ ಮೇಲ್ಸೇತುವೆ, ದೆಹಲಿ ಗೇಟ್ ಹಾಗೂ ಕಲಿಂದೀ ಕುಂಜ್ ಪ್ರದೇಶಗಳಲ್ಲಿ ಗಂಟೆಗಟ್ಟಲೆ ಸಂಚಾರ ದಟ್ಟಣೆ ಉಂಟಾಗಿತ್ತು.

ನೊಯಿಡಾದ ಗಡಿಯಲ್ಲಿ ಅಳವಡಿಸಲಾಗಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿಕೊಂಡು ರೈತರು ಪ್ರತಿಭಟನಾ ರ್‍ಯಾಲಿಯಲ್ಲಿ ಮುನ್ನುಗ್ಗಿದ ಕ್ಷಣ —ಪಿಟಿಐ ಚಿತ್ರ

ರೈತರ ಬೇಡಿಕೆಗಳೇನು?

- 2013ರ ಭೂ ಸ್ವಾಧೀನ ಕಾಯ್ದೆ ಅನ್ವಯ ರೈತರಿಗೆ ನೀಡಬೇಕಿರುವ ಪರಿಹಾರ ಮೊತ್ತವನ್ನು ತಕ್ಷಣವೇ ಪಾವತಿ ಮಾಡಬೇಕು. ಒಟ್ಟು ಪರಿಹಾರ ಮೊತ್ತದಲ್ಲಿ ರೈತರಿಗೆ ಶೇ 33.3ರಷ್ಟು ಮೊತ್ತವನ್ನು ಮಾತ್ರವೇ ನೀಡಲಾಗುತ್ತಿದೆ
- ಅಭಿವೃದ್ಧಿಪಡಿಸಿದ ಪ್ರದೇಶದಲ್ಲಿ ಶೇ 10ರಷ್ಟು ಜಾಗವನ್ನು ಜಮೀನು ನೀಡಿದ ರೈತನಿಗೆ ನೀಡಬೇಕು ಎಂದು ಕಾಯ್ದೆ ಹೇಳುತ್ತದೆ. ಆದರೆ, ಸರ್ಕಾರ ಇದನ್ನು ನೆರವೇರಿಸಿಲ್ಲ. ಕಾಯ್ದೆಯ ಈ ಅಂಶವನ್ನು ಜಾರಿ ಮಾಡಬೇಕು
- ಸ್ವಾಧೀನಪಡಿಸಿಕೊಂಡ ಜಮೀನಿಗೆ ಸೂಕ್ತ ಬೆಲೆ ನಿಗದಿಪಡಿಸಬೇಕು, ಭೂಮಿ ಕಳೆದುಕೊಂಡ ರೈತರ ಕುಟುಂಬಕ್ಕೆ ಉದ್ಯೋಗ ನೀಡಬೇಕು

ನಿರ್ಮಲಾ, ರೂಪಾನಿ ವೀಕ್ಷಕರಾಗಿ ನೇಮಕ • ಫಡಣವೀಸ್‌ಗೆ ಸಿ.ಎಂ ಪಟ್ಟ?

ನಾಳೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ

ಪ್ರಜಾವಾಣಿ ವಾರ್ತೆ/ಪಿಟಿಐ

ನಿರ್ಮಲಾ ಸೀತಾರಾಮನ್

ವಿಜಯ್ ರೂಪಾನಿ

ಮುಂಬೈ: ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಬುಧವಾರ (ಡಿ.4) ನಡೆಯಲಿದ್ದು ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಕುತೂಹಲಕ್ಕೆ ತೆರೆಬೀಳಲಿದೆ.

ಎರಡು ಬಾರಿ ಮುಖ್ಯಮಂತ್ರಿ, ಒಂದು ಬಾರಿ ಉಪಮುಖ್ಯಮಂತ್ರಿ ಮತ್ತು ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ ಅನುಭವವಿರುವ ಬಿಜೆಪಿಯ ದೇವೇಂದ್ರ ಫಡಣವೀಸ್ ಅವರು ಮಹಾಯುತಿಯ ನೇತೃತ್ವ ವಹಿಸುವ ಸುಳಿವು ಸಿಕ್ಕಿದೆ.

ವೀಕ್ಷಕರ ನೇಮಕ: ಬಿಜೆಪಿ ಕೇಂದ್ರ ಚುನಾವಣಾ ಸಮಿತಿಯು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಗುಜರಾತಿನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರನ್ನು ಶಾಸಕಾಂಗ ಪಕ್ಷದ ಸಭೆಗೆ ಕೇಂದ್ರ ವೀಕ್ಷಕರನ್ನಾಗಿ ನೇಮಿಸಿದೆ.

ವೀಕ್ಷಕರು ಮಂಗಳವಾರ ಮುಂಬೈಗೆ ಬರಲಿದ್ದು, ಪಕ್ಷದ ನಾಯಕರ ಜತೆಗೆ ಅನೌಪಚಾರಿಕವಾಗಿ ಸಭೆ ನಡೆಸಲಿದ್ದಾರೆ. ಬಳಿಕ ಬುಧವಾರ ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಪಕ್ಷದ ಶಾಸಕರು ಹೊಸ ನಾಯಕನನ್ನು ಆಯ್ಕೆ ಮಾಡಲಿದ್ದಾರೆ. ಆಯ್ಕೆಯಾದ ನಾಯಕನ ಹೆಸರನ್ನು ದೆಹಲಿಯ ಹಿರಿಯ ನಾಯಕರಿಗೆ ತಿಳಿಸಲಾಗುತ್ತದೆ. ಅವರ ಒಪ್ಪಿಗೆ ಮೇರೆಗೆ ವೀಕ್ಷಕರು ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಹೆಸರನ್ನು ಪ್ರಕಟಿಸುತ್ತಾರೆ. ಶಾಸಕಾಂಗ ಪಕ್ಷದ ನಾಯಕ ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಹಿರಿಯ ನಾಯಕರೊಬ್ಬರು ಮಾಹಿತಿ ನೀಡಿದರು.

5ರಂದು ಪ್ರಮಾಣವಚನ: ಮುಂಬೈನ ಆಜಾದ್ ಮೈದಾನದಲ್ಲಿ ಇದೇ 5ರಂದು (ಗುರುವಾರ) ಹೊಸ ಮುಖ್ಯಮಂತ್ರಿಯ ಪ್ರಮಾಣವಚನ ಕಾರ್ಯಕ್ರಮ ನಡೆಯಲಿದೆ. ಅದರಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಇತರ ನಾಯಕರು ಭಾಗಿಯಾಗುತ್ತಾರೆ ಎಂದು ಈಗಾಗಲೇ ಬಿಜೆಪಿ ಪ್ರಕಟಿಸಿದೆ.

'ಭಿನ್ನಾಭಿಪ್ರಾಯ ಇಲ್ಲ'

'ಮಹಾಯುತಿಯಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಯಾರಿಗೂ ಬೇಸರ ಆಗಿಲ್ಲ. ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದ್ದು, ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬುದು ಶೀಘ್ರದಲ್ಲೇ ಗೊತ್ತಾಗುತ್ತದೆ' ಎಂದು ಬಿಜೆಪಿ ಶಾಸಕ ಪ್ರವೀಣ್ ದಾರೆಕರ್ ಸುದ್ದಿಗಾರರಿಗೆ ತಿಳಿಸಿದರು.

ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಪ್ರಶ್ನೆಗೆ, 'ಬಿಜೆಪಿ ಶಿಸ್ತಿನ ಪಕ್ಷ. ಮಹಾರಾಷ್ಟ್ರದ ಜನ ಬಯಸಿದವರು ಮುಂದಿನ ಮುಖ್ಯಮಂತ್ರಿ ಆಗಲಿದ್ದಾರೆ. ಜನರು ಫಡಣವೀಸ್ ಅವರನ್ನು ಬಯಸಿದ್ದರೆ, ಅವರು ಮುಖ್ಯಮಂತ್ರಿ ಆಗುತ್ತಾರೆ. ಅದು ಶೀಘ್ರವೇ ಪ್ರಕಟವಾಗಲಿದೆ' ಎಂದರು.

ಶಿಂದೆ ಮನದಲ್ಲಿ ಬೇಸರ?

ಹಂಗಾಮಿ ಮುಖ್ಯಮಂತ್ರಿ ಶಿಂದೆ ಅವರು ಅನಾರೋಗ್ಯದ ಕಾರಣ ತಮ್ಮ ಎಲ್ಲ ಕಾರ್ಯಕ್ರಮಗಳನ್ನು ರದ್ದುಪಡಿಸಿ, ಠಾಣೆಯ ತಮ್ಮ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಮುಖ್ಯಮಂತ್ರಿ ಸ್ಥಾನದ ವಿಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ನಿರ್ಧಾರವನ್ನು ಒಪ್ಪುವುದಾಗಿ ಶಿಂದೆ ಈ ಹಿಂದೆ ಎರಡು ಬಾರಿ ಸ್ಪಷ್ಟಪಡಿಸಿದ್ದರೂ, ಅವರ ಮನದಲ್ಲಿ ಬೇಸರ ಇದೆ ಎಂದು ಮೂಲಗಳು ತಿಳಿಸಿವೆ.

'ಶಿಂದೆ ಅವರಲ್ಲಿ ಅಸಮಾಧಾನ ಇಲ್ಲ. ಹಿಂದುತ್ವದ ಮಾರ್ಗದಲ್ಲಿ ನಡೆದು, ಶ್ರಮಿಸಿದ ಅವರನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕು' ಎಂದು ಶಿವಸೇನಾ ವಕ್ತಾರ ದೀಪಕ್ ಕೇಸರಕರ್ ತಿಳಿಸಿದರು. 'ಶಿಂದೆ ಅವರು ಸರ್ಕಾರದಲ್ಲಿ ಭಾಗಿಯಾಗಬೇಕು ಮತ್ತು ನಮಗೆಲ್ಲ ಮಾರ್ಗದರ್ಶನ ನೀಡಬೇಕು ಎಂದು ಬಯಸುತ್ತೇವೆ' ಎಂಬುದಾಗಿ ಶಿವಸೇನಾ ಶಾಸಕ ಉದಯ್ ಸಮಂತ್ ಪ್ರತಿಕ್ರಿಯಿಸಿದರು. ಈ ಬೆಳವಣಿಗೆಗಳ ಬೆನ್ನಲ್ಲೇ ಅಜಿತ್ ಪವಾರ್ ಅವರು ಅಮಿತ್ ಶಾ ಅವರನ್ನು ಭೇಟಿಯಾಗಲು ದೆಹಲಿಗೆ ತೆರಳಿದ್ದಾರೆ.

ಭಾಗವತ್ ಹೇಳಿಕೆ: ವಿರೋಧ– ಸ್ವಾಗತ

ನವದೆಹಲಿ (ಪಿಟಿಐ): ಜನಸಂಖ್ಯೆ ಕುರಿತಂತೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ನೀಡಿರುವ ಹೇಳಿಕೆಗೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರೆ, ಬಿಜೆಪಿಯ ಹಲವು ನಾಯಕರು ಸಹಮತ ವ್ಯಕ್ತಪಡಿಸಿದ್ದಾರೆ.

'ಭಾರತದಲ್ಲಿ ಫಲವತ್ತತೆ ದರವು ಕುಸಿಯತೊಡಗಿದೆ. ಇದು ಹೀಗೇ ಮುಂದುವರಿದರೆ ನಮ್ಮ ಸಮಾಜವು ನಶಿಸಿಹೋಗುತ್ತದೆ. ಆದ್ದರಿಂದ ಪ್ರತಿಯೊಂದು ದಂಪತಿಗೆ ಕನಿಷ್ಠ ಮೂವರು ಮಕ್ಕಳು ಇರಬೇಕು' ಎಂದು ಭಾಗವತ್ ಭಾನುವಾರ ಹೇಳಿದ್ದರು.

'ಈಗ ಇರುವವರಿಗೇ ಉದ್ಯೋಗ ದೊರೆಯುತ್ತಿಲ್ಲ, ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರಿದೆ. ಮೂವರು ಮಕ್ಕಳನ್ನು ಹೆತ್ತರೆ ದೇಶದ ಜನಸಂಖ್ಯೆಯು ಏರಿಕೆಯಾಗಲಿದೆ. ಮುಂದೆ ಜನಿಸುವ ಮಕ್ಕಳಿಗೆ ಎಲ್ಲಿಂದ ಮೂಲಸೌಕರ್ಯಗಳನ್ನು ಒದಗಿಸುತ್ತೀರಿ' ಎಂದು ವಿರೋಧ ಪಕ್ಷಗಳ ನಾಯಕರು ಸೋಮವಾರ ಪ್ರಶ್ನಿಸಿದ್ದಾರೆ.

'ರಾಜಕೀಯ ಕಾರ್ಯಸೂಚಿಗಾಗಿ ಇಂಥ ಹೇಳಿಕೆ ನೀಡಲಾಗುತ್ತದೆ. ಇದಕ್ಕೆಲ್ಲ ಸಾಮಾನ್ಯ ಜನರು ಬೆಲೆ ತೆರಬೇಕಾಗುತ್ತದೆ. ಸೂಕ್ತ ರೀತಿಯಲ್ಲಿ ಜನಸಂಖ್ಯೆಯನ್ನು ನಿರ್ವಹಿಸಿದರೆ, ದೇಶಕ್ಕೆ ಆಸ್ತಿಯಾಗಲಿದೆ. ಆದರೆ, ಹಾಗೆ ಮಾಡಲಾಗುತ್ತಿಲ್ಲ. ದೇಶದಲ್ಲಿ ಉತ್ಪಾದನೆಯನ್ನು ಆರಂಭಿಸಬೇಕು, ಆಗ ಜನರಿಗೆ ಉದ್ಯೋಗ ದೊರೆಯುತ್ತದೆ. ಆದರೆ, ಕೇಂದ್ರ ಸರ್ಕಾರ ಇದನ್ನು ಮಾಡುತ್ತಿಲ್ಲ' ಎಂದು ಆಜಾದ್ ಸಮಾಜ್ ಪಕ್ಷದ (ಕಾನ್ಶಿರಾಮ್) ಸಂಸದ ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

'ಜನಸಂಖ್ಯೆ ವಿಚಾರದಲ್ಲಿ ಭಾಗವತ್ ಅವರ ಹೇಳಿಕೆಗೆ ವ್ಯತಿರಿಕ್ತವಾದ ಹೇಳಿಕೆಗಳನ್ನು ಬಿಜೆಪಿ ನಾಯಕರು ಈ ಹಿಂದೆ ನೀಡಿದ್ದಾರೆ. ದೇಶದ ಜನಸಂಖ್ಯೆಯನ್ನು ನಿಯಂತ್ರಿಸಬೇಕು ಎಂದು ಹಲವರು ಹೇಳಿದ್ದರು. ಈ ವಿರೋಧಾಭಾಸಗಳನ್ನು ಸರಿಪಡಿಸಿಕೊಂಡು ಕೇಂದ್ರ ಸರ್ಕಾರವು ನೀತಿ ರೂಪಿಸಬೇಕು' ಎಂದು ಕಾಂಗ್ರೆಸ್ ಸಂಸದ ತಾರಿಕ್ ಅನ್ವರ್ ಹೇಳಿದ್ದಾರೆ.

ಭಾಗವತ್ ಮಾತು ರಾಷ್ಟ್ರೀಯ ನೀತಿಗೆ ವಿರುದ್ಧ (ಬೆಂಗಳೂರು ವರದಿ): 'ಮೋಹನ್ ಭಾಗವತ್ ಅವರ ಹೇಳಿಕೆ ರಾಷ್ಟ್ರೀಯ ನೀತಿಗೆ ವಿರುದ್ಧವಾದುದು' ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

'ದೇಶದ ಜನರು ಸಮಾನವಾದ ಘನತೆಯ ಬದುಕು ನಡೆಸಲು ಜನಸಂಖ್ಯಾ ಸ್ಫೋಟವೇ ಅಡ್ಡಿ. ಹೀಗಿರುವಾಗ, ಮೋಹನ್ ಭಾಗವತ್ ಅವರು ಜವಾಬ್ದಾರಿ ಅರಿತು ಮಾತನಾಡಬೇಕು' ಎಂದಿದ್ದಾರೆ.

ಭಾಗವತ್ ಅವರನ್ನು ಗೌರವಿಸುತ್ತೇನೆ, ಆದರೆ ಮಕ್ಕಳನ್ನು ಸಲಹುವುದರ ಕುರಿತು ಅವರಿಗೆ ಏನು ತಿಳಿದಿದೆ? ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗಿದೆ, ಉದ್ಯೋಗ ಇಲ್ಲ, ಯಾತಕ್ಕಾಗಿ ಹೆಚ್ಚಿನ ಮಕ್ಕಳನ್ನು ಹೊಂದಿರಬೇಕು

ರೇಣುಕಾ ಚೌಧರಿ, ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯೆ

ಆರ್‌ಎಸ್‌ಎಸ್ ಒಂದು ದೇಶಭಕ್ತ ಸಂಸ್ಥೆ. ಮೋಹನ್ ಭಾಗವತ್ ಅವರು ಏನೋ ಒಂದು ಹೇಳುತ್ತಿದ್ದಾರೆ ಅಂದರೆ ಅದು ರಾಷ್ಟ್ರೀಯ ಹಿತಕ್ಕಾಗಿಯೇ ಆಗಿರುತ್ತದೆ. ಇದನ್ನು ಸಕಾರಾತ್ಮಕವಾಗಿ ಗ್ರಹಿಸಬೇಕು

ಮನೋಜ್ ತಿವಾರಿ, ಬಿಜೆಪಿ ಸಂಸದ

ಅವರ ವಿಚಾರಗಳು ದೇಶದ ಹಿತಕ್ಕಾಗಿ ಇರುತ್ತವೆ. ಅವರೊಬ್ಬ ಮಾಗಿದ ವ್ಯಕ್ತಿ. ಅವರು ಇಂಥ ಹೇಳಿಕೆ ನೀಡಿದ್ದಾರೆ ಎಂದರೆ ಅದು ದೇಶಕ್ಕೆ ಒಳ್ಳೆಯದೇ ಆಗಿರುತ್ತದೆ. ಅವರು ಸರಿಯಾಗಿದ್ದನ್ನೇ ಹೇಳಿರುತ್ತಾರೆ

ಅರುಣ್ ಗೋವಿಲ್, ಬಿಜೆಪಿ ಸಂಸದ

ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಬಂಧನ ಪ್ರಕರಣ

ಭಾರತ–ಬಾಂಗ್ಲಾ ಗಡಿಯಲ್ಲಿ ಸಂತರ ಪ್ರತಿಭಟನೆ

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲಿನ ದಾಳಿ ಖಂಡಿಸಿ ಮತ್ತು ಹಿಂದೂ ಮುಖಂಡ ಚಿನ್ಮಯಿ ಕೃಷ್ಣದಾಸ್ ಅವರ ಬಿಡುಗಡೆಗೆ ಆಗ್ರಹಿಸಿ ಸುಮಾರು 1,000 ಸಾಧುಗಳು ಪಶ್ಚಿಮ ಬಂಗಾಳದ ದಕ್ಷಿಣ ಪರಗಣ 24 ಜಿಲ್ಲೆಯ ಪೆಟ್ರಾಪೋಲ್ ಗಡಿಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಅಖಿಲ ಭಾರತೀಯ ಸಂತ ಸಮಿತಿ ಬ್ಯಾನರ್ ಅಡಿಯಲ್ಲಿ ಸಾಧುಗಳು ಪ್ರತಿಭಟನೆ ನಡೆಸಿದರು.

'ಹಿಂದೂಗಳು ಮತ್ತು ದೇಗುಲಗಳ ಮೇಲಿನ ದಾಳಿ ತಡೆಗೆ ಬಾಂಗ್ಲಾ ಸರ್ಕಾರ ಕ್ರಮ ಕೈಗೊಳ್ಳುವರೆಗೂ ಪ್ರತಿಭಟನೆ ಮುಂದುವರಿಸುತ್ತೇವೆ' ಎಂದು ಅಖಿಲ ಭಾರತೀಯ ಸಂತ ಸಮಿತಿಯ ಬಂಗಾಳ ಘಟಕದ ಅಧ್ಯಕ್ಷ ಸ್ವಾಮಿ ಪರಮಾತ್ಮಾನಂದ ಅವರು ಹೇಳಿದರು.

ಪಶ್ಚಿಮ ಬಂಗಾಳ ಬಿಜೆಪಿ ನಾಯಕ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಇದೇ ವಿಚಾರವಾಗಿ ಬುಧವಾರ ಪ್ರತಿಭಟನೆಗೆ ಕರೆ ನೀಡಿದ್ದಾರೆ. ಈ ಪ್ರತಿಭಟನೆಯಲ್ಲಿ ಹಿಂದೂ ಜಾಗರಣ್ ಮಂಚ್ ಸೇರಿದಂತೆ ವಿವಿಧ ಹಿಂದೂ ಸಂಘಟನೆಗಳು ಪಾಲ್ಗೊಳ್ಳುವ ಸಾಧ್ಯತೆ ಇದೆ.

ಆಗಸ್ಟ್ 5ರಂದು ಶೇಖ್ ಹಸೀನಾ ಅವರ ನೇತೃತ್ವದ ಸರ್ಕಾರ ಪತನವಾದ ಬಳಿಕ ಹಿಂದೂಗಳ ಮೇಲೆ 50 ಜಿಲ್ಲೆಗಳಲ್ಲಿ 200ಕ್ಕೂ ಹೆಚ್ಚು ದಾಳಿಗಳು ನಡೆದಿವೆ.

ವಿಎಚ್‌ಪಿ ಪ್ರತಿಭಟನೆ (ನವದೆಹಲಿ ವರದಿ): ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿ ಖಂಡಿಸಿ ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) ದೆಹಲಿ ಘಟಕವು ಸೋಮವಾರ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿತು.

ಪ್ರತಿಭಟನಕಾರರು ಹಿಂದೂಗಳಿಗೆ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿ ಘೋಷಣೆ ಕೂಗಿದರು.

ತನಿಖೆಗೆ ಬಾಂಗ್ಲಾ ಆಗ್ರಹ (ಢಾಕಾ ವರದಿ): ಅಗರ್ತಲಾದ ಅಸಿಸ್ಟೆಂಟ್ ಹೈ ಕಮಿಷನ್ ಮೇಲೆ ಗುಂಪೊಂದು ನಡೆಸಿದ ಹಿಂಸಾತ್ಮಕ ದಾಳಿಯನ್ನು ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಸೋಮವಾರ ಖಂಡಿಸಿದ್ದು, ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸಿದೆ.

'ಪ್ರತಿಭಟನಕಾರರು ಒಳಗೆ ನುಗ್ಗಿ, ಅಸಿಸ್ಟೆಂಟ್ ಹೈ ಕಮಿಷನ್ ಕಚೇರಿಯ ಗೇಟ್ ಮುರಿದುಹಾಕಿದರು. ಧ್ವಜಸ್ತಂಭ ಹಾಳು ಮಾಡಿ, ಬಾಂಗ್ಲಾದೇಶದ ಧ್ವಜವನ್ನು ವಿರೂಪಗೊಳಿಸಿದರು. ಪೂರ್ವಯೋಜಿತ ರೀತಿಯಲ್ಲಿ ನಡೆದ ಈ ಕೃತ್ಯವನ್ನು ಹತ್ತಿಕ್ಕುವಲ್ಲಿ ಸ್ಥಳೀಯ ಭದ್ರತಾ ಸಿಬ್ಬಂದಿ ವಿಫಲರಾದರು. ಈ ಪ್ರಕರಣದ ಸಮಗ್ರ ತನಿಖೆ ನಡೆಸಬೇಕು' ಎಂದು ಬಾಂಗ್ಲಾದೇಶದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಪ್ರಕಟಣೆಯ ಮೂಲಕ ತಿಳಿಸಿದೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯವನ್ನು ಖಂಡಿಸಿ ಪಶ್ಚಿಮ ಬಂಗಾಳದ ದಕ್ಷಿಣ ಪರಗಣ 24 ಜಿಲ್ಲೆಯಲ್ಲಿ ಸಂತರು ನಡೆಸಿದ ಪ್ರತಿಭಟನೆಯಲ್ಲಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಶಾಂತಿಪಾಲನಾ ಪಡೆ ನಿಯೋಜನೆಗೆ ಮನವಿ ಮಾಡಿ: ಮಮತಾ

ಬಾಂಗ್ಲಾದೇಶದಲ್ಲಿ ಶಾಂತಿಪಾಲನಾ ಪಡೆ ನಿಯೋಜಿಸು ವಂತೆ ವಿಶ್ವಸಂಸ್ಥೆಗೆ ಮನವಿ ಮಾಡಿ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೇಂದ್ರ ಸರ್ಕಾರವನ್ನು ಸೋಮವಾರ ಒತ್ತಾಯಿಸಿದರು.

ವಿದೇಶದ ನೆಲದಲ್ಲಿ ಕಿರುಕುಳಕ್ಕೆ ಒಳಗಾದವರನ್ನು ವಾಪಸ್ ತವರಿಗೆ ಕರೆತರುವ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಿದರು. ವಿಧಾನಸಭೆಯ ಕಲಾಪದಲ್ಲಿ ಮಾತನಾಡಿದ ಅವರು, 'ಎರಡು ದೇಶಗಳ ನಡುವೆ ದ್ವಿಪಕ್ಷೀಯ ವಿಚಾರವಾಗಿ ಮಾತನಾಡುವುದು ನನ್ನ ವ್ಯಾಪ್ತಿ ಮೀರಿದ್ದು. ಆದರೂ ಇತ್ತೀಚಿನ ಬೆಳವಣಿಗೆಗಳು ಮತ್ತು ಜನರ ಅನುಭವದ ಮಾತಿನ ಆಧಾರದಲ್ಲಿ ಈ ಹೇಳಿಕೆ ನೀಡುತ್ತಿದ್ದೇನೆ' ಎಂದರು.

ಸ್ಪರ್ಧಾವಾಣಿ ಮಾಸಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ಖರೀದಿಸುವ ಅವಕಾಶ ತಪ್ಪಿ ಹೋಯಿತೇ?
ಪ್ರಜಾವಾಣಿ ಸ್ಪರ್ಧಾವಾಣಿ MASTERMIND
ಆರ್ಡರ್ ಮಾಡಲು QR ಸ್ಕ್ಯಾನ್ ಮಾಡಿ, ನಿಮ್ಮ ವಿವರಗಳನ್ನು ಭರ್ತಿ ಮಾಡಿ.
ಕೇವಲ ₹220 ರಿಂದ ಪ್ರಾರಂಭ
* ಷರತ್ತುಗಳು ಅನ್ವಯ

ಹರಭಜನ್ ಸಿಂಗ್ ಅಭಿಮತ • ಪರ್ತ್ ಟೆಸ್ಟ್‌ನಲ್ಲಿ ದಾಖಲೆ ಬರೆದಿದ್ದ ರಾಹುಲ್–ಜೈಸ್ವಾಲ್ ಜೋಡಿ

ರೋಹಿತ್ ಅಗ್ರಕ್ರಮಾಂಕದಲಿ ಬ್ಯಾಟಿಂಗ್?

ನವದೆಹಲಿ (ಪಿಟಿಐ): ಅಡಿಲೇಡ್ ಟೆಸ್ಟ್‌ನಲ್ಲಿ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರು ಐದು ಅಥವಾ ಆರನೇ ಕ್ರಮಾಂಕದಲ್ಲಿ ಆಡುವ ಸಾಧ್ಯತೆ ಇಲ್ಲ. ಅವರು ಆರಂಭಿಕ ಬ್ಯಾಟರ್ ಆಗಿ ಅಥವಾ ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬರಬಹುದು ಎಂದು ವೀಕ್ಷಕ ವಿವರಣೆಗಾರ ಹರಭಜನ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಈಚೆಗೆ ಪರ್ತ್‌ನಲ್ಲಿ ನಡೆದಿದ್ದ ಸರಣಿಯ ಮೊದಲ ಟೆಸ್ಟ್‌ನಲ್ಲಿ ರೋಹಿತ್ ಆಡಿರಲಿಲ್ಲ. ಆ ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ ಮತ್ತು ಕೆ.ಎಲ್. ರಾಹುಲ್ ಅವರು ಇನಿಂಗ್ಸ್ ಆರಂಭಿಸಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ದ್ವಿಶತಕದ ಜೊತೆ ಯಾಟವಾಡಿದ್ದರು. ಇದೀಗ ಎರಡನೇ ಪಂದ್ಯಕ್ಕೆ ರೋಹಿತ್ ಮರಳಿದ್ದಾರೆ. ಆದ್ದರಿಂದ ಅವರು ಮತ್ತೆ ಇನಿಂಗ್ಸ್ ಆರಂಭಿಸುವರೋ ಅಥವಾ ಕ್ರಮಾಂಕ ಬದಲಿಸಿಕೊಂಡು ಯಶಸ್ವಿ ಮತ್ತು ರಾಹುಲ್ ಅವರಿಗೆ ಅವಕಾಶ ಕೊಡುವರೇ ಎಂಬ ಚರ್ಚೆಗಳು ನಡೆಯುತ್ತಿವೆ.

'ರೋಹಿತ್ ಅವರು ಯಶಸ್ವಿ ಜೊತೆಗೆ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಹೆಚ್ಚು. ಇದರಿಂದಾಗಿ ಕೆ.ಎಲ್. ರಾಹುಲ್ ಮೂರನೇ ಕ್ರಮಾಂಕದಲ್ಲಿ ಆಡಬಹುದು. ಇಲ್ಲದಿದ್ದರೆ ರೋಹಿತ್ ಮೂರನೇ ಕ್ರಮಾಂಕಕ್ಕೂ ಬರಬಹುದು. ಅದಕ್ಕಿಂತ ಕೆಳಗಿನ ಕ್ರಮಾಂಕದಲ್ಲಿ ಅವರು ಆಡುವುದಿಲ್ಲ' ಎಂದು ವಿಶ್ವ ಟೆನಿಸ್ ಲೀಗ್ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಿದ್ದ ಮಾಜಿ ಆಫ್‌ಸ್ಪಿನ್ನರ್ ಹರಭಜನ್ ಹೇಳಿದ್ದಾರೆ.

'ರೋಹಿತ್ ಆರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬರುವುದು ತಂಡದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಪರಿಣತ ಮತ್ತು ಅನುಭವಿ ಬ್ಯಾಟರ್ ಅಗ್ರ ನಾಲ್ಕರಲ್ಲಿ ಇರುವುದು ಒಳಿತು. ಮೊದಲ ನಾಲ್ವರು ಬ್ಯಾಟರ್‌ಗಳು ತಂಡದ ಆಧಾರಸ್ತಂಭವಾಗಿರುತ್ತಾರೆ' ಎಂದರು.

ಕ್ಯಾನಬೆರಾದ ಮನುಕಾ ಓವಲ್‌ನಲ್ಲಿ ಅಭಿಮಾನಿಗಳಿಗೆ ಹಸ್ತಾಕ್ಷರ ನೀಡಿದ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ (ಎಡಚಿತ್ರ). ಭಾರತದ ಕೆ.ಎಲ್. ರಾಹುಲ್ ಮತ್ತು ಯಶಸ್ವಿ ಜೈಸ್ವಾಲ್–ಎಎಫ್‌ಪಿ ಚಿತ್ರಗಳು

ರೋಹಿತ್ ಅಭಿಮಾನಿಯ ದಶಕದ ಕನಸು ನನಸು

ಕ್ಯಾನ್‌ಬೆರಾ(ಪಿಟಿಐ): ಮನುಕಾ ಓವೆಲ್ ಕ್ರೀಡಾಂಗಣದಲ್ಲಿದ್ದ ಆ ವ್ಯಕ್ತಿಯ ಸಂತಸ ಮುಗಿಲುಮುಟ್ಟಿತ್ತು. ಸುಮಾರು ಒಂದು ದಶಕದ ಕನಸು ನನಸಾದ ಸಂಭ್ರಮದಲ್ಲಿ ಆ ಕ್ರಿಕೆಟ್‌ಪ್ರೇಮಿ ತೇಲಾಡುತ್ತಿದ್ದರು.

ತಮ್ಮ ನೆಚ್ಚಿನ ಆಟಗಾರ 'ಮುಂಬೈ ಚಾ ರಾಜ'ನ ಹಸ್ತಾಕ್ಷರ ಪಡೆಯಲು 10 ವರ್ಷದಿಂದ ಕಾದಿದ್ದು ಭಾನುವಾರ ಫಲ ನೀಡಿತು.

'ರೋಹಿತ್ ಭಾಯ್ ಹತ್ತು ವರ್ಷಗಳು ಕಳೆದು ಹೋದವು. ರೋಹಿತ್ ಭಾಯ್ ಮುಂಬೈ ಚಾ ರಾಜ' ಎಂದು ಕೂಗುತ್ತ ನಿಂತಿದ್ದ ಆ ವ್ಯಕ್ತಿ ಕಡೆಗೂ ಭಾರತ ತಂಡದ ನಾಯಕ ರೋಹಿತ್ ಶರ್ಮಾರಿಂದ ಹಸ್ತಾಕ್ಷರ ಪಡೆದರು. ರೋಹಿತ್ ಅಭಿಮಾನಿಗಳಿಗೆ ನಗು ನಗುತ್ತ ಹಸ್ತಾಕ್ಷರ ನೀಡಿದ ವಿಡಿಯೊ ತುಣಕನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ.

'ಒಂದು ದಶಕದ ಕಾಯುವಿಕೆ ಅಂತೂ ಇಂತೂ ಕೊನೆಯಾಯಿತು. ರೋಹಿತ್ ಗಾಗಿ ಅಭಿಮಾನಿಯೊಬ್ಬ ಒಂದು ದಶಕದಿಂದ ಕಾದಿದ್ದರು. ಅವರಿಗೆ ಇಂದು ಆಟೋಗ್ರಾಫ್ ಲಭಿಸಿದೆ. ನಿನ್ನೆ (ಭಾನುವಾರ) ಅವರಿಗೆ ಅದೃಷ್ಟದ ದಿನವಾಗಿದೆ' ಎಂದು ಬಿಸಿಸಿಐ ಉಲ್ಲೇಖಿಸಿದೆ.

ಭಾರತ ತಂಡವು ಪ್ರಧಾನಮಂತ್ರಿ ಇಲೆವನ್ ವಿರುದ್ಧದ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಜಯಿಸಿತು. ಅದರ ನಂತರ ರೋಹಿತ್ ಅವರು ಅಭಿಮಾನಿಗಳಿಗೆ ಹಸ್ತಾಕ್ಷರ ನೀಡಿದರು.

ರೋಹಿತ್ ಶರ್ಮಾ ಅವರು ಪಿತೃತ್ವ ರಜೆಯಲ್ಲಿದ್ದ ಕಾರಣ ಆಸ್ಟ್ರೇಲಿಯಾ ಎದುರಿನ ಸರಣಿಯ ಮೊದಲ ಪಂದ್ಯದಲ್ಲಿ (ಪರ್ತ್) ಆಡಿರಲಿಲ್ಲ. ಅಡಿಲೆಡ್‌ನಲ್ಲಿ ಇದೇ 6ರಿಂದ ನಡೆಯುವ ಎರಡನೇ ಟೆಸ್ಟ್‌ನಲ್ಲಿ ಅವರು ಭಾರತ ತಂಡವನ್ನು ಮುನ್ನಡೆಸುವರು.

ಮೊದಲ ಟೆಸ್ಟ್‌ನಲ್ಲಿ ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರಿಗೆ ವಿಶ್ರಾಂತಿ ನೀಡಿ ವಾಷಿಂಗ್ಟನ್ ಸುಂದರ್ ಅವರನ್ನು ಆಡಿಸಿದ್ದ ಕುರಿತು ಹರಭಜನ್ ಪ್ರತಿಕ್ರಿಯಿಸಿದರು.

'ನ್ಯೂಜಿಲೆಂಡ್ ಸರಣಿಯಲ್ಲಿ ವಾಷಿಂಗ್ಟನ್ ತಮ್ಮ ಸಾಮರ್ಥ್ಯ ತೋರಿದ್ದರು. ಅಶ್ವಿನ್ ಅವರ ಸ್ಥಾನವನ್ನು ತುಂಬಲು ತಾವು ಸಿದ್ಧ ಎಂಬ ಸಂದೇಶವನ್ನೂ ನೀಡಿದ್ದರು. ಅದರಿಂದಾಗಿ ಅವರಿಗೆ ಇಲ್ಲಿ ಅವಕಾಶ ನೀಡಿರಬಹುದು' ಎಂದು ಹರಭಜನ್ ಸಮರ್ಥಿಸಿಕೊಂಡರು.

ಅಶ್ವಿನ್ ವಯಸ್ಸಿನ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಅವರಿಗೆ 38 ವರ್ಷವಷ್ಟೇ. ಅದೇನೂ ಬಹಳ ಅಲ್ಲ. ಅವರೇನೂ 58 ವರ್ಷದವರಲ್ಲ. ಬಹಳಷ್ಟು ವರ್ಷಗಳಿಂದ ಆಡಿದ್ದರಿಂದ ಭುಜದ ಸ್ನಾಯುಗಳಲ್ಲಿ ಒಂದಿಷ್ಟು ಗಾಯ, ಸೆಳೆತಗಳೂ ಆಗಿರುವ ಸಂಭವ ವಿದೆ. ಅದೆಲ್ಲವೂ ಸಹಜ' ಎಂದರು.

ಅಡಿಲೇಡ್‌ಗೆ ಇಂದು ಗಂಭೀರ್

ಅಡಿಲೇಡ್ (ಪಿಟಿಐ): ವೈಯಕ್ತಿಕ ಕಾರಣಗಳಿಂದಾಗಿ ದೆಹಲಿಗೆ ಮರಳಿದ್ದ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಮಂಗಳವಾರ ಅಡಿಲೇಡ್‌ಗೆ ಮರಳುವರು.

ಪರ್ತ್ ಟೆಸ್ಟ್ ನಂತರ ಗಂಭೀರ್ ಅವರು ದೆಹಲಿಗೆ ಮರಳಿದ್ದರು. ಆಸ್ಟ್ರೇಲಿಯಾ ಪ್ರಧಾನ ಮಂತ್ರಿ ಎಲೆವನ್ ಮತ್ತು ಭಾರತ ನಡುವಣ ಅಭ್ಯಾಸ ಪಂದ್ಯದ ಸಂದರ್ಭದಲ್ಲಿಯೂ ಅವರು ಗೈರಾಗಿದ್ದರು.

ಇದೇ 6ರಿಂದ ಅಡಿಲೇಡ್‌ನಲ್ಲಿ ನಡೆಯಲಿರುವ ಪಿಂಕ್ ಬಾಲ್ ಟೆಸ್ಟ್ ಆರಂಭಕ್ಕೆ ಎರಡು ದಿನಗಳ ಮುನ್ನ ಗಂಭೀರ್ ಅವರು ತಂಡವನ್ನು ಸೇರಿಕೊಳ್ಳಲಿದ್ದಾರೆ.

ನಿರ್ಣಾಯಕ ಫಲಿತಾಂಶಕ್ಕೆ ಪೈಪೋಟಿ

ವಿಶ್ವ ಚೆಸ್ ಚಾಂಪಿಯನ್‌ಷಿಪ್: ಇಂದು ಏಳನೇ ಸುತ್ತು

ಡಿಂಗ್ ಲಿರೆನ್ ಮತ್ತು ಡಿ.ಗುಕೇಶ್

ಸಿಂಗಪುರ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಮತ್ತು ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ನಡುವಣ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಕೊನೆಯ ಮೂರು ಸುತ್ತಿನ ಪಂದ್ಯಗಳು ಡ್ರಾ ಆಗಿವೆ. ಸೋಮವಾರ ವಿರಾಮ ದಿನದ ನಂತರ ಮಂಗಳವಾರ ಏಳನೇ ಸುತ್ತಿನ ಸೆಣಸಾಟ ನಡೆಯಲಿದೆ.

14 ಪಂದ್ಯಗಳ ಫೈನಲ್ ಪಂದ್ಯ ಅರ್ಧ ಹಾದಿ ಕ್ರಮಿಸಿದ್ದು ಇನ್ನು ಮುಂದಿನ ಪಂದ್ಯಗಳಲ್ಲಿ ನಿರ್ಣಾಯಕ ಫಲಿತಾಂಶಕ್ಕಾಗಿ ಇಬ್ಬರೂ ಪ್ರಯತ್ನಿಸುವುದು ಖಚಿತ.

ಚಾಲೆಂಜರ್ ಆಗಿರುವ 18 ವರ್ಷ ವಯಸ್ಸಿನ ಗುಕೇಶ್ ಮತ್ತು ಚೀನಾದ 32 ವರ್ಷ ವಯಸ್ಸಿನ ಲಿರೆನ್ ಈಗ 3–3 ರಲ್ಲಿ ಸಮಮಾಡಿಕೊಂಡಿದ್ದಾರೆ. ಇದುವರೆಗಿನ ಆರು ಪಂದ್ಯಗಳಲ್ಲಿ ಇಬ್ಬರೂ ಒಂದೊಂದು ಗೆದ್ದಿದ್ದು, ಉಳಿದ ನಾಲ್ಕು ಡ್ರಾ ಆಗಿವೆ. ಮಂಗಳವಾರದ ಪಂದ್ಯದಲ್ಲಿ ಗುಕೇಶ್ ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ.

ಫೈನಲ್ ಆರಂಭಕ್ಕೆ ಮೊದಲು ಗುಕೇಶ್, ಪ್ರಶಸ್ತಿಗೆ ನೆಚ್ಚಿನ ಆಟಗಾರ ಎನಿಸಿದ್ದರು. ಸೆಪ್ಟೆಂಬರ್‌ನಲ್ಲಿ ನಡೆದ ಚೆಸ್ ಒಲಿಂಪಿಯಾಡ್‌ನಲ್ಲೂ ಅವರ ಪ್ರದರ್ಶನ ಅಮೋಘವಾಗಿತ್ತು. ಫಿಡೆ ಕ್ರಮಾಂಕ ಪಟ್ಟಿಯಲ್ಲಿ ಅವರು ಐದನೇ ಸ್ಥಾನಕ್ಕೇರಿದ್ದರು ಕೂಡ. ಇನ್ನೊಂದೆಡೆ ಲಿರೆನ್ ಅಂಥ ಲಯದಲ್ಲೇನೂ ಇರಲಿಲ್ಲ. ಆದರೆ ಫೈನಲ್‌ನಲ್ಲಿ ಚೆನ್ನೈ ಆಟಗಾರನಿಂದ ನಿರೀಕ್ಷಿತ ಸಾಮರ್ಥ್ಯ ಕಂಡುಬಂದಿಲ್ಲ.

ಮೊದಲ ಪಂದ್ಯದಲ್ಲಿ ಲಿರೆನ್ ಜಯಶಾಲಿಯಾಗಿದ್ದರು. ಆದರೆ ಮೂರನೇ ಪಂದ್ಯದಲ್ಲಿ ಗುಕೇಶ್ ವಿಜಯಿಯಾದರು.ಆಪಂದ್ಯದಲ್ಲಿಲಿರೆನ್‌ಲೆಕ್ಕಾಚಾರದಲ್ಲಿ ಎಡವಿ ಸಮಯದ ಒತ್ತಡಕ್ಕೆ ಸಿಲುಕಿದ್ದರು. ಆದರೆ ನಂತರದ ಪಂದ್ಯಗಳಲ್ಲಿ ಚೀನಾದ ಆಟಗಾರ ಹೆಚ್ಚಿನ ಸಾಹಸಕ್ಕೆ ಹೋಗಿಲ್ಲ. ಸುರಕ್ಷಿತ ಆಟಕ್ಕೆ ಒಲವು ತೋರಿದ್ದು ಪಂದ್ಯಗಳು ಡ್ರಾ ಆಗುತ್ತಿವೆ. ಗುಕೇಶ್ ತಪ್ಪು ಮಾಡಬಹುದೆಂದು ಅವರು ಕಾಯುತ್ತಿದ್ದಾರೆ.

ಮಂಗಳವಾರದ ಪಂದ್ಯ ಆರಂಭ: ಮಧ್ಯಾಹ್ನ 2.30

ಫಿಡೆ ಚೆಸ್: ಕಣದಲ್ಲಿ ಪ್ರಜ್ಞಾನಂದ, ಅರ್ಜುನ್

ಲೂಸಾನ್(ಪಿಟಿಐ): ಆರ್.ಪ್ರಜ್ಞಾನಂದ, ಅರ್ಜುನ್ ಇರಿಗೆಶಿ ಮತ್ತು ಆರ್. ವೈಶಾಲಿ ಸೇರಿದಂತೆ ಭಾರತದ ಐವರು ಚೆಸ್ ಆಟಗಾರರು ಮುಂಬರುವ 2024ರ ಫಿಡೆ ವಿಶ್ವ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಅಂತರರಾಷ್ಟ್ರೀಯ ಚೆಸ್ ಫೆಡರೇಶನ್ (ಫಿಡೆ) ತಿಳಿಸಿದೆ.

ಈ ಟೂರ್ನಿ ಇದೇ 26ರಿಂದ 31ರವರೆಗೆ ನ್ಯೂಯಾರ್ಕ್‌ನಲ್ಲಿ ನಡೆಯಲಿದೆ. ಇದೇ ಮೊದಲ ಬಾರಿಗೆ ಉತ್ತರ ಅಮೆರಿಕದಲ್ಲಿ ಆಯೋಜನೆಯಾಗುತ್ತಿದೆ. ಕೊನೆರು ಹಂಪಿ ಮತ್ತು ದ್ರೋಣವಲ್ಲಿ ಹಾರಿಕಾ ಅವರೂ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಲಿದ್ದಾರೆ. ವಿಶ್ವ ಚೆಸ್‌ನಲ್ಲಿ ಅತ್ಯಂತ ಸ್ಪರ್ಧಾತ್ಮಕ ಆವೃತ್ತಿ ಇದಾಗಿದೆ. ವಿಶ್ವದ ನಂ.3 ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಹಿಕಾರು ನಕಾಮುರಾ ಸೇರಿದಂತೆ ಸುಮಾರು 300 ಚೆಸ್ ಪಟುಗಳು ಆಡಲಿದ್ದಾರೆ.

ತುಮಕೂರು ತಾಲ್ಲೂಕಿನ ಪಿ.ಗೊಲ್ಲಹಳ್ಳಿ ಸಮೀಪ ಸೋಮವಾರ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಬ್ಯಾಟಿಂಗ್ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ, ಸಹಕಾರ ಸಚಿವ ಕೆ.ಎನ್. ರಾಜಣ್ಣ, ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಪಾಲ್ಗೊಂಡಿದ್ದರು

ಸಂಕ್ಷಿಪ್ತ ಸುದ್ದಿ

ಡಿ.22ರಂದು ಸಿಂಧು ಮದುವೆ

ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ, ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು ಇದೇ 22ರಂದು ಉದಯಪುರದಲ್ಲಿ ಹಸೆಮಣೆಯೇರಲಿದ್ದಾರೆ.

29 ವರ್ಷ ವಯಸ್ಸಿನ ಸಿಂಧು ಅವರು ಪೊಸಿಡೆಕ್ಸ್ ಟೆಕ್ನಾಲಜೀಸ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿರುವ ಹೈದರಾಬಾದ್‌ನ ವೆಂಕಟದತ್ತ ಸಾಯಿ ಅವರನ್ನು ವರಿಸಲಿದ್ದಾರೆ. ಮದುವೆಗೆ ಸಂಬಂಧಿಸಿದ ಶಾಸ್ತ್ರಗಳು ಇದೇ 20ರಿಂದಲೇ ಆರಂಭವಾಗಲಿದೆ.

'ಎರಡೂ ಕುಟುಂಬಗಳು ಮೊದಲೇ ಪರಿಚಯವಿತ್ತು. ತಿಂಗಳ ಹಿಂದೆಯಷ್ಟೇ ಮದುವೆ ಮಾತುಕತೆಯನ್ನು ಅಂತಿಮಗೊಳಿಸಲಾಗಿದೆ. ಡಿ.22ರಂದು ಉದಯಪುರದಲ್ಲಿ ಮದುವೆ, 24ರಂದು ಹೈದರಾಬಾದ್‌ನಲ್ಲಿ ಆರತಕ್ಷತೆ ನಡೆಯಲಿದೆ' ಎಂದು ಸಿಂಧು ತಂದೆ ಪಿ.ವಿ.ರಮಣ ಅವರು ತಿಳಿಸಿದ್ದಾರೆ.

ಕೆಲ ಸಮಯಗಳಿಂದ ಪ್ರಶಸ್ತಿ ಬರವನ್ನು ಎದುರಿಸುತ್ತಿದ್ದ ಸಿಂಧು ಅವರು ಭಾನುವಾರವಷ್ಟೇ ಲಖನೌದಲ್ಲಿ ಸೈಯದ್ ಮೋದಿ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡಿದ್ದರು.

ಮ್ಯಾಚ್ ಫಿಕ್ಸಿಂಗ್: ಕ್ರಿಕೆಟಿಗರ ಬಂಧನ

ಜೊಹಾನೆಸ್‌ಬರ್ಗ್ (ಎಪಿ): ದಕ್ಷಿಣ ಆಫ್ರಿಕಾದ ಟೆಸ್ಟ್ ಕ್ರಿಕೆಟ್ ತಂಡದ ಮಾಜಿ ಆಟಗಾರರಾದ ಥಾಮಿ ಸೊಲೆಕಿಲೆ ಮತ್ತು ಲೊನ್ವಾಬೊ ಸೊಸೊಬೆ ಅವರನ್ನು ಮೋಸದಾಟದಲ್ಲಿ ಭಾಗಿಯಾದ ಆರೋಪದಲ್ಲಿ ಬಂಧಿಸಲಾಗಿದೆ. ಒಂದೊಮ್ಮೆ ಆರೋಪಗಳು ಸಾಬೀತಾದರೆ ಅವರಿಬ್ಬರೂ ದೀರ್ಘ ಅವಧಿಯ ಜೈಲು ಶಿಕ್ಷೆ ಅನುಭವಿಸುವ ಸಾಧ್ಯತೆಗಳಿವೆ.

ಮ್ಯಾಚ್ ಫಿಕ್ಸಿಂಗ್ ಮತ್ತು ಭ್ರಷ್ಟಾಚಾರ ಪ್ರಕರಣಗಳನ್ನು ತನಿಖಾ ಸಂಸ್ಥೆ ಕಳೆದ ಹಲವು ದಿನಗಳಿಂದ ವಿಚಾರಣೆ ನಡೆಸಿತ್ತು. 2015ರಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾದ ದೇಶಿ ಟೂರ್ನಿಯೊಂದರಲ್ಲಿ ನಡೆದಿದ್ದ ಮ್ಯಾಚ್ ಫಿಕ್ಸಿಂಗ್‌ನಲ್ಲಿ ಇವರಿಬ್ಬರೂ ಭಾಗಿಯಾಗಿದ್ದರು. ಇಬ್ಬರನ್ನೂ ಹೋದ ತಿಂಗಳು ಬಂಧಿಸಲಾಗಿತ್ತು.

ಕಳೆದ ಶುಕ್ರವಾರ ಪ್ರಿಟೋರಿಯಾದಲ್ಲಿ ದಕ್ಷಿಣ ಆಫ್ರಿಕಾ ಭ್ರಷ್ಟಾಚಾರ ನಿಗ್ರಹ ಕಾನೂನಿನಡಿಯಲ್ಲಿ ಅವರನ್ನು ವಾಣಿಜ್ಯಕ ಅಪರಾಧಗಳ ವಿಶೇಷ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು.

ಥಾಮಿ ಅವರು 20 ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾ ತಂಡದಲ್ಲಿ ಆಡಿದ್ದರು. ಅವರಿಗೆ ಈಗ 44 ವರ್ಷ ವಯಸ್ಸಾಗಿದೆ. ಸೊಸೊಬೆ ಅವರು 2009 ರಿಂದ 2014ರವರೆಗೆ ರಾಷ್ಟ್ರೀಯ ತಂಡಕ್ಕೆ ಆಡಿದ್ದರು.

19 ವರ್ಷದೊಳಗಿನವರ ಏಷ್ಯಾ ಕಪ್ ಏಕದಿನ ಕ್ರಿಕೆಟ್: ಜಪಾನ್‌ಗೆ ಸೋಲು

ಅಮನ್ ಶತಕ: ಭಾರತಕ್ಕೆ ಗೆಲುವು

ಮೊಹಮ್ಮದ್ ಅಮನ್

ಶಾರ್ಜಾ (ಪಿಟಿಐ): ನಾಯಕ ಮೊಹಮ್ಮದ್ ಅಮನ್ (ಔಟಾಗದೇ 122; 118ಎ, 4x7) ಅವರ ಶತಕದ ನೆರವಿನಿಂದ ಭಾರತ, 19 ವರ್ಷದೊಳಗಿನವರ ಏಷ್ಯಾ ಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ 211 ರನ್‌ಗಳಿಂದ ಜಪಾನ್ ತಂಡವನ್ನು ಸುಲಭವಾಗಿ ಮಣಿಸಿತು.

ಟಾಸ್ ಗೆದ್ದ ಜಪಾನ್ ತಂಡವು ಭಾರತವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಆಯುಷ್ ಮ್ಹಾತ್ರೆ (54;29ಎ) ಮತ್ತು ವೈಭವ್ ಸೂರ್ಯವಂಶಿ (23;23ಎ) ಅವರು ಮೊದಲ ವಿಕೆಟ್‌ಗೆ 65 ರನ್ ಸೇರಿಸಿ ಭಾರತಕ್ಕೆ ಉತ್ತಮ ಆರಂಭ ಒದಗಿಸಿದರು. ನಂತರದಲ್ಲಿ ಅಮನ್, ಸಿ. ಆಂಡ್ರೆ ಸಿದ್ದಾರ್ಥ್ (35;48ಎ) ಮತ್ತು ಕೆ.ಪಿ. ಕಾರ್ತಿಕೇಯ (57;49ಎ) ತಂಡದ ಮೊತ್ತವನ್ನು ಹಿಗ್ಗಿಸಿದರು.

ಕೊನೆಯ ಹಂತದಲ್ಲಿ ಹಾರ್ದಿಕ್ ರಾಜ್ 12 ಎಸೆತಗಳಲ್ಲಿ ಒಂದು ಬೌಂಡರಿ ಮತ್ತು ಎರಡು ಸಿಕ್ಸರ್ ಸೇರಿದಂತೆ ಅಜೇಯ 25 ರನ್ ಗಳಿಸಿ ಅಬ್ಬರಿಸಿದರು. ಹೀಗಾಗಿ, ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗೆ 339 ರನ್ ಗಳಿಸಿತು.

ಕಠಿಣ ಗುರಿ ಬೆನ್ನತ್ತಿದ ಜಪಾನ್ ಉತ್ತಮ ಆರಂಭ ಪಡೆಯಿತು. ಆರಂಭಿಕ ಆಟಗಾರ ಹ್ಯೂಗೊ ಕೆಲ್ಲಿ (50; 111ಎ) ಮತ್ತು ನಿಹಾರ್ ಪರ್ಮಾರ್ (14) ಮೊದಲ ವಿಕೆಟ್‌ಗೆ 50 ರನ್ ಗಳಿಸಿದರು. ನಂತರ ಭಾರತದ ಬೌಲರ್‌ಗಳು ನಿಯಮಿತ ದಾಳಿ ನಡೆಸಿ ರನ್‌ಗೆ ಕಡಿವಾಣ ಹಾಕಿದರು. ತಂಡವು ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 128 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಭಾರತದ ಚೇತನ್ ಶರ್ಮಾ, ಹಾರ್ದಿಕ್ ರಾಜ್ ಮತ್ತು ಕೆ.ಪಿ. ಕಾರ್ತಿಕೇಯ ತಲಾ ಮೂರು ವಿಕೆಟ್ ಪಡೆದರು.

'ಎ' ಗುಂಪಿನಲ್ಲಿರುವ ಭಾರತಕ್ಕೆ ಟೂರ್ನಿಯಲ್ಲಿ ಇದು ಮೊದಲ ಗೆಲುವಾಗಿದೆ. ಆರಂಭಿಕ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ 43 ರನ್‌ಗಳಿಂದ ಸೋಲು ಅನುಭವಿಸಿತ್ತು. ಆಡಿರುವ ಎರಡೂ ಪಂದ್ಯ ಗೆದ್ದಿರುವ ಪಾಕ್ (4 ಅಂಕ) ಗುಂಪಿನಲ್ಲಿ ಅಗ್ರಸ್ಥಾನದಲ್ಲಿದ್ದರೆ, ಯುಎಇ (2), ಭಾರತ (2) ನಂತರದ ಸ್ಥಾನದಲ್ಲಿದೆ. ಎರಡೂ ಪಂದ್ಯ ಸೋತಿರುವ ಜಪಾನ್ ಕೊನೆಯಲ್ಲಿದೆ.

ಭಾರತವು ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಬುಧವಾರ ಯುಎಇ ತಂಡವನ್ನು ಎದುರಿಸಲಿದೆ. ಸೆಮಿಫೈನಲ್‌ಗೆ ಅರ್ಹತೆ ಪಡೆಯಲು ಈ ಪಂದ್ಯವನ್ನು ಭಾರತ ಗೆಲ್ಲಲೇಬೇಕಿದೆ.

ಸಂಕ್ಷಿಪ್ತ ಸ್ಕೋರ್: 19 ವರ್ಷದೊಳಗಿನವರ ಭಾರತ: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 339 (ಮೊಹಮ್ಮದ್ ಅಮನ್ ಔಟಾಗದೇ 122, ಕೆ.ಪಿ. ಕಾರ್ತಿಕೇಯ 57, ಆಯುಷ್ ಮ್ಹಾತ್ರೆ 54, ಹ್ಯೂಗೊ ಕೆಲ್ಲಿ 42ಕ್ಕೆ 2). 19 ವರ್ಷದೊಳಗಿನವರ ಜಪಾನ್: 50 ಓವರ್‌ಗಳಲ್ಲಿ 8 ವಿಕೆಟ್‌ಗೆ 128 (ಹ್ಯೂಗೊ ಕೆಲ್ಲಿ 50, ಹಾರ್ದಿಕ್ ರಾಜ್ 9ಕ್ಕೆ 2, ಚೇತನ್ ಶರ್ಮಾ 14ಕ್ಕೆ 2, ಕೆ.ಪಿ. ಕಾರ್ತಿಕೇಯ 21ಕ್ಕೆ 2). **ಫಲಿತಾಂಶ:** ಭಾರತಕ್ಕೆ 221 ರನ್‌ಗಳ ಜಯ. ಪಂದ್ಯದ ಆಟಗಾರ: ಮೊಹಮ್ಮದ್ ಅಮನ್

ಫುಟ್‌ಬಾಲ್ ಪಂದ್ಯದಲ್ಲಿ ಗಲಭೆ: 56 ಮಂದಿ ಸಾವು

ಕೊನಾಕ್ರೈ (ಎಎಫ್‌ಪಿ): ಗಿನಿಯಾದ ಜುಂಟಾ ಸಮುದಾಯದ ನಾಯಕ ಮೊಮೊಡಿ ದಂಬುಯಾ ಅವರ ಗೌರವಾರ್ಥವಾಗಿ ಆಯೋಜಿಸಲಾಗಿದ್ದ ಫುಟ್‌ಬಾಲ್ ಪಂದ್ಯದಲ್ಲಿ ರೆಫರಿ ಕೊಟ್ಟ ತೀರ್ಪಿನ ವಿರುದ್ಧ ಕೆಲವು ಪ್ರೇಕ್ಷಕರು ಆರಂಭಿಸಿದ ಪ್ರತಿಭಟನೆಯು ಹಿಂಚಾಚಾರಕ್ಕೆ ತಿರುಗಿತು. ಈ ಸಂದರ್ಭದಲ್ಲಿ ಉಂಟಾದ ನೂಕುನುಗ್ಗಲಿನಲ್ಲಿ 56 ಮಂದಿ ಮೃತಪಟ್ಟಿದ್ದಾರೆ.

ಭಾನುವಾರ ಪಂದ್ಯದಲ್ಲಿ ಸ್ಪರ್ಧಿಸಿದ್ದ ಸ್ಥಳೀಯ ತಂಡಗಳ ಅಭಿಮಾನಿಗಳು ರೆಫರಿ ನೀಡಿದ ಪೆನಾಲ್ಟಿ ತೀರ್ಪಿನ ವಿರುದ್ಧ ತಿರುಗಿಬಿದ್ದರು ಎಂದು ಸರ್ಕಾರದ ಮೂಲಗಳು ಬಹಿರಂಗಪಡಿಸಿವೆ.

ಈ ಪಂದ್ಯವನ್ನು ವೀಕ್ಷಿಸಲು ಬಂದಿದ್ದ ಇಬ್ಬರು ಸಚಿವರನ್ನು ಹೊರಹೋಗದಂತೆ ಗಲಭೆನಿರತರು ತಡೆದರು. ಕಲ್ಲುಗಳನ್ನು ಎಸೆದರು. ಗಲಾಟೆ ನಿಯಂತ್ರಿಸಲು ಭದ್ರತಾ ಸಿಬ್ಬಂದಿಯು ಅಶ್ರುವಾಯು ಪ್ರಯೋಗಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

'ಪರಿಸ್ಥಿತಿ ಪ್ರಕ್ಷುಬ್ಧಗೊಂಡಾಗ ಜನರು ಭಯಭೀತರಾಗಿ ಓಡತೊಡಗಿದರು. ಈ ಹಂತದಲ್ಲಿ ಉಂಟಾದ ನೂಕುನುಗ್ಗಲಿನಲ್ಲಿ ಬಹಳಷ್ಟು ಜನರು ಗಂಭೀರವಾಗಿ ಗಾಯಗೊಂಡರು' ಎಂದೂ ಮೂಲಗಳು ಹೇಳಿವೆ.

ತುಮಕೂರು ಸಮೀಪ ತಲೆಎತ್ತಲಿರುವ ಕ್ರೀಡಾಂಗಣ

ಕ್ರಿಕೆಟ್ ಮೈದಾನಕ್ಕೆ ಸಿಎಂ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಕೋರ ಹೋಬಳಿಯ ಪಿ.ಗೊಲ್ಲಹಳ್ಳಿ ಬಳಿ ಅಂದಾಜು ₹150 ಕೋಟಿ ವೆಚ್ಚದ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು.

ಸುಮಾರು 50 ಎಕರೆ ವಿಸ್ತೀರ್ಣದಲ್ಲಿ ಕ್ರೀಡಾಂಗಣ ತಲೆ ಎತ್ತಲಿದ್ದು, ಎರಡು ವರ್ಷದಲ್ಲಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ(ಕೆಎಸ್‌ಸಿಎ) ಈಗಾಗಲೇ ಭೂಮಿ ಹಸ್ತಾಂತರಿಸಲಾಗಿದೆ.

ಕ್ರೀಡಾಂಗಣಕ್ಕೆ ಭೂಮಿಪೂಜೆ ನೆರವೇರಿಸಿ ಸಿದ್ದರಾಮಯ್ಯ ಮಾತನಾಡಿ, 'ಮೈಸೂರಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಕೆಎಸ್‌ಸಿಎಗೆ ಅಗತ್ಯ ಭೂಮಿ ನೀಡಲಾಗುವುದು.

ಇದೇ ರೀತಿ ಅಲ್ಲಿಯೂ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದು' ಎಂದು ಹೇಳಿದರು.

ಬಿಟಿಎಂ, ರೂಟ್ಸ್ ಫೈನಲ್ ಪ್ರವೇಶ

ಬೆಂಗಳೂರು: ಬಿಟಿಎಂ ಎಫ್.ಸಿ ಮತ್ತು ರೂಟ್ಸ್ ಎಫ್.ಎಸ್ ತಂಡಗಳು ಇಲ್ಲಿನ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪ್ರಸನ್ನ ಕುಮಾರ್ ಸ್ಮಾರಕ ಫುಟ್‌ಬಾಲ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದವು. ಪ್ರಶಸ್ತಿ ಸುತ್ತಿನ ಪಂದ್ಯ ಬುಧವಾರ ನಡೆಯಲಿದೆ.

ಸೋಮವಾರ ನಡೆದ ಸೆಮಿಫೈನಲ್‌ನಲ್ಲಿ ಬಿಟಿಎಂ ತಂಡವು 4–0ಯಿಂದ ಆರ್‌ಡಬ್ಲ್ಯುಎಫ್ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ರೂಟ್ಸ್ ತಂಡವು ರೋಚಕ ಟೈ ಬ್ರೇಕರ್‌ನಲ್ಲಿ 6–5ರಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಸೋಲಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳ ಸ್ಕೋರ್ 1–1 ಸಮನಾಗಿತ್ತು.

ರೆಯಾನ್ ಹ್ಯಾಟ್ರಿಕ್: ಮೊಹಮ್ಮದ್ ರೆಯಾನ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ರಿವೀವ್ ಎಫ್.ಸಿ ತಂಡವು ಬಿಡಿಎಫ್‌ಎ 'ಬಿ' ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್ ಷಿಪ್‌ನ ಪಂದ್ಯದಲ್ಲಿ 5–1 ಗೋಲುಗಳಿಂದ ಬೆಂಗಳೂರು ಗನ್ನರ್ಸ್ ತಂಡವನ್ನು ಸೋಲಿಸಿತು.

ಸಾಯ್ ಮೈದಾನದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ವೆಹಿಕಲ್ಸ್ ಎಫ್‌ಸಿ 3–1ರಿಂದ ಮೊಹಮ್ಮದನ್ ಸ್ಪೋರ್ಟಿಂಗ್ ಎಫ್‌ಸಿ ತಂಡವನ್ನು ಸೋಲಿಸಿತು. ಇನ್ನೊಂದು ಪಂದ್ಯದಲ್ಲಿ ಜುನೊ ಎಫ್‌ಸಿ ತಂಡವು ಅಂಚೆ ಇಲಾಖೆಯೊಂದಿಗೆ ಗೋಲುರಹಿತವಾಗಿ ಡ್ರಾ ಸಾಧಿಸಿತು.

ಸೆಮಿಫೈನಲ್ ಹಣಾಹಣಿಯಲ್ಲಿ ಬಿಟಿಎಂ ತಂಡದ ಆಯುಷ್ ಡೇವಿಡ್ (ಎಡ) ಮತ್ತು ಆರ್‌ಡಬ್ಲ್ಯುಎಫ್ ತಂಡದ ಆಕಾಶ್ ಎ. ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ವಿಮಾನಪುರ ತಂಡಕ್ಕೆ ರೋಚಕ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಶಾಂತ್ ಮತ್ತು ರಕ್ಷಣ್ ಅವರ ಆಟದ ಬಲದಿಂದ ವಿಮಾನಪುರ ಎಸ್.ಸಿ ತಂಡವು ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಕಪ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಪಂದ್ಯದಲ್ಲಿ 81–78ರಿಂದ ಸಿಜೆಸಿ ತಂಡವನ್ನು ಮಣಿಸಿತು.

ಇಲ್ಲಿನ ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮಧ್ಯಂತರದ ವೇಳೆಗೆ ವಿಮಾನಪುರ (31-43) 12 ಅಂಕಗಳಿಂದ ಹಿನ್ನಡೆಯಲ್ಲಿತ್ತು. ಉತ್ತರಾರ್ಧದಲ್ಲಿ ಚುರುಕಿನ ಆಟವಾಡಿ ರೋಚಕ ಗೆಲುವು ದಾಖಲಿಸಿತು. ನಿಶಾಂತ್ ಮತ್ತು ರಕ್ಷಣ್ ಕ್ರಮವಾಗಿ 29 ಮತ್ತು 24 ಅಂಕ ಸಂಪಾದಿಸಿದರು.

ಮಹಿಳೆಯರ ವಿಭಾಗದ ಪಂದ್ಯದಲ್ಲಿ ಜನ್ಯಾ (30) ಅವರ ಆಟದ ನೆರವಿನಿಂದ ಯಂಗ್ ಓರಿಯನ್ಸ್ ಎಸ್.ಸಿ ತಂಡವನ್ನು 61–32ರಿಂದ ಧಾರವಾಡ ಜಿಲ್ಲೆ 'ಎ' ತಂಡವನ್ನು ಸೋಲಿಸಿತು.

ನಾಲ್ಕನೇ ದಿನದ ಫಲಿತಾಂಶ: ಪುರುಷರು: ವಿಮಾನಪುರ ಎಸ್.ಸಿ 81–78ರಿಂದ ಸಿಜೆಸಿ ವಿರುದ್ಧ; ಬೀಗಲ್ಸ್ ಬಿ.ಸಿ 89–70ರಿಂದ ಚಿಕ್ಕಮಗಳೂರು ಜಿಲ್ಲೆ ವಿರುದ್ಧ; ಬೆಂಗಳೂರು ವ್ಯಾನ್ಗಾರ್ಡ್ಸ್ 75–66ರಿಂದ ರಾಜ್‌ಮಹಲ್ ಬಿ.ಸಿ ವಿರುದ್ಧ; ಐ.ಬಿ.ಬಿ.ಸಿ 67–32ರಿಂದ ದೇವಾಂಗ ಯೂನಿಯನ್ ವಿರುದ್ಧ; ಜೆ.ಎಸ್.ಸಿ 65–59ರಿಂದ ವಿವೇಕ್ಸ್ ಎಸ್.ಸಿ ವಿರುದ್ಧ; ಭಾರತ್ ಎಸ್.ಯು 98–61ರಿಂದ ಕೋಲಾರ ಜಿಲ್ಲೆ ವಿರುದ್ಧ; ಎಂ.ಎನ್.ಕೆ ರಾವ್ ಪಾರ್ಕ್ ಬಿ.ಸಿ 90–64ರಿಂದ ಚಿಕ್ಕಮಗಳೂರು ಜಿಲ್ಲೆ ವಿರುದ್ಧ ಜಯ ಸಾಧಿಸಿತು. **ಮಹಿಳೆಯರ ವಿಭಾಗ:** ಯಂಗ್ ಓರಿಯನ್ಸ್ ಎಸ್.ಸಿ 61–32ರಿಂದ ಧಾರವಾಡ ಜಿಲ್ಲೆ 'ಎ' ಎದುರು; ನೈರುತ್ಯ ರೈಲ್ವೆ 76–41ರಿಂದ ಎಚ್‌ಬಿಆರ್ ಬಿ.ಸಿ ಎದುರು ಗೆಲುವು ದಾಖಲಿಸಿತು.

ಬೀಗಲ್ಸ್ ಬಿ.ಸಿ ತಂಡದ ಪುನೀತ್ (ಎಡ) ಮತ್ತು ಚಿಕ್ಕಮಗಳೂರು ಜಿಲ್ಲಾ ತಂಡದ ಅಶ್ವಿನ್ (ಬಲ) ಸೆಣಸಾಟ ನಡೆಸಿದರು – ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಟೆಸ್ಟ್ ಕ್ರಿಕೆಟ್: ವೆಸ್ಟ್ ಇಂಡೀಸ್ ದಾಳಿಗೆ ನಲುಗಿದ ಬಾಂಗ್ಲಾ

ಬೌಲಿಂಗ್‌ನಲ್ಲಿ ಜೈಡನ್ ಸೀಲ್ಸ್ ದಾಖಲೆ

ಕಿಂಗ್‌ಸ್ಟನ್, ಜಮೈಕಾ (ಎಪಿ): ವೆಸ್ಟ್ ಇಂಡೀಸ್ ತಂಡದ ವೇಗಿ ಜೈಡನ್ ಸೀಲ್ಸ್ ಅತ್ಯಂತ ಕಡಿಮೆ ರನ್‌ಗಳನ್ನು ನೀಡಿದ ಬೌಲರ್ ಎಂಬ ದಾಖಲೆ ಬರೆದರು.

ಬಾಂಗ್ಲಾದೇಶ ಎದುರಿನ ದ್ವಿತೀಯ ಟೆಸ್ಟ್ ಪಂದ್ಯದ ಎರಡನೇ ದಿನದಾಟದಲ್ಲಿ ಸೀಲ್ಸ್ ಅವರು 16 ಓವರ್‌ಗಳಲ್ಲಿ ಕೇವಲ 5 ರನ್ ಕೊಟ್ಟರು. 4 ವಿಕೆಟ್ ಗಳಿಸಿದರು. ಅದರಲ್ಲಿ 10 ಓವರ್ ಮೇಡನ್ ಮಾಡಿದರು.

ಇದರಿಂದಾಗಿ ಬಾಂಗ್ಲಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 71.5 ಓವರ್‌ಗಳಲ್ಲಿ 164 ರನ್‌ಗಳಿಗೆ ಆಲೌಟ್ ಆಯಿತು. ಇದಕ್ಕುತ್ತರವಾಗಿ ವಿಂಡೀಸ್ ತಂಡವು ಎರಡನೇ ದಿನದಾಟದ ಅಂತ್ಯಕ್ಕೆ 1 ವಿಕೆಟ್‌ಗೆ 70 ರನ್ ಗಳಿಸಿದೆ. ಸಬಿನಾ ಪಾರ್ಕ್‌ನಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನದಂದು ಕೇವಲ 30 ಓವರ್‌ಗಳ ಆಟ ನಡೆದಿತ್ತು.

ಮಳೆಯಿಂದಾಗಿ ಮೈದಾನ ತೇವಗೊಂಡಿದ್ದ ಕಾರಣ ದಿನದಾಟದಲ್ಲಿ ಪೂರ್ಣಪ್ರಮಾಣದ ಆಟ ನಡೆದಿರಲಿಲ್ಲ.

ವೆಸ್ಟ್ ಇಂಡೀಸ್ ತಂಡದ ಜೈಡನ್ ಸೀಲ್ಸ್ ವಿಕೆಟ್ ಗಳಿಸಿ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಬಾಂಗ್ಲಾ ತಂಡವು ಆ ದಿನ 2 ವಿಕೆಟ್‌ಗಳಿಗೆ 69 ರನ್ ಗಳಿಸಿತ್ತು.

ಎರಡನೇ ದಿನದಾಟದಲ್ಲಿ ಬಾಂಗ್ಲಾದ ಬ್ಯಾಟರ್‌ಗಳಿಗೆ ಕೇವಲ 95 ರನ್ ಸೇರಿಸಲು ಮಾತ್ರ ಸಾಧ್ಯವಾಯಿತು.

ಒಂದು ಕಡೆ ಸೀಲ್ಸ್ ಬಿರುಗಾಳಿ ವೇಗಕ್ಕೆ ಬ್ಯಾಟರ್‌ಗಳು ನಲುಗಿದರೆ, ಇನ್ನೊಂದೆಡೆ ಶೇಮರ್ ಜೋಸೆಫ್ (49ಕ್ಕೆ3) ಅವರ ದಾಳಿಯೂ ರಂಗೇರಿತು.

ಇದರ ನಡುವೆಯೂ ಬಾಂಗ್ಲಾ ತಂಡದ ಶಾದ್ಮನ್ ಇಸ್ಲಾಂ (64 ರನ್) ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 71.5 ಓವರ್‌ಗಳಲ್ಲಿ 164 (ಶಾದ್ಮನ್ ಇಸ್ಲಾಂ 64, ಶಹಾದತ್ ಹುಸೇನ್ 22, ಮೆಹದಿ ಹಸನ್ ಮಿರಾಜ್ 36, ಕೆಮರ್ ರೋಚ್ 45ಕ್ಕೆ2, ಜೈಡನ್ ಸೀಲ್ಸ್ 5ಕ್ಕೆ4, ಶೆಮರ್ ಜೋಸೆಫ್ 49ಕ್ಕೆ3). ವೆಸ್ಟ್ ಇಂಡೀಸ್: 37 ಓವರ್‌ಗಳಲ್ಲಿ 1 ವಿಕೆಟ್‌ಗೆ 70 (ಕ್ರೇಗ್ ಬ್ರೆತ್‌ವೇಟ್ ಔಟಾಗದೇ 33, ಕೇಸಿ ಕಾರ್ಟಿ ಔಟಾಗದೇ 19, ನಹೀದ್ ರಾಣಾ 28ಕ್ಕೆ1)